ಬುಧವಾರ, ಫೆಬ್ರುವರಿ 21, 2024 | ₹ 7.00


www.prajavani.net

prajavani.net prajavani prajavani prajavani

ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ


ನಗು
ಮುಂಬೈನಲ್ಲಿ ನಡೆದ 'ದಾದಾ ಸಾಹೇಬ್ ಫಾಲ್ಕೆ' ಅಂತರರಾಷ್ಟ್ರೀಯ ಸಿನಿಮೋತ್ಸವ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಬಾಲಿವುಡ್ ನಟಿ ನಯನತಾರಾ



SAMSUNG

Galaxy S24 | S24+

Circle it, find it



Own now at ₹ 3334/month*

Zero down payment | 24 months no cost EMI#

Up to ₹ 17000 upgrade bonus** | Samsung Upgrade | HDFC BANK | BAJAJ FINSERV | Samsung Finance+™

samsung.com

Please dispose of e-waste and plastic waste responsibly. Customers can WhatsApp on 1800 5 7267864 for information on e-waste/plastic pick up.

Image simulated for representational purpose, actual may vary. Circle to Search results may vary depending on visual matches. Google is a trademark of Google LLC. Compatible devices and internet connection required. Works on compatible apps and surfaces. Results may vary depending on visual matches. Users may need to update Android to the latest version. Product functionality may be dependent on your app and device settings. Some functions may not be compatible with certain apps. Availability of the service varies by country and language. Accuracy of results is not guaranteed. T&C apply. *EMI computed on zero down payment, 24 months no cost EMI on the price of ₹ 79999 for1 Unit of Galaxy S24 8GB | 256GB. Final price at sole discretion of dealer. #Eligibility for EMI at the sole discretion of the financiers including those listed on Samsung Finance+ (Financier T&C applies).**Upgrade bonus offer as per Samsung Upgrade program, provided by brand/dealer at their sole discretion upon exchange of select devices. Upgrade bonus varies model wise and EMI offer taken by the customer. Up to ₹ 17000 upgrade bonus applicable on Galaxy S24+ and up to ₹ 10000 upgrade bonus applicable on Galaxy S24 only when 24 months no cost EMI offer is not availed. If 24 months no cost EMI offer is availed, then upgrade bonus shall be up to ₹ 9000 on Galaxy S24+ and up to ₹ 5000 on Galaxy S24. Reach out to dealer for more information. Offers may be revised or withdrawn without prior notice. All third party logos/brands are trademarks/registered trademarks of the respective brand/company. Samsung promotes responsible use of Artificial Intelligence (AI) features.

Scan and experience Galaxy AI

Or WhatsApp "Hi" to 9870 494949 to buy at Samsung Exclusive Store

Cheil-19146/24

ಬುಧವಾರ, ಫೆಬ್ರುವರಿ 21, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 52 | ಪುಟ 20
www.prajavani.net
prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ತಂತ್ರಜ್ಞಾನ
ವಸ್ತುಗಳು ಅಸಲಿಯೋ ನಕಲಿಯೋ ಎಂದು ಪತ್ತೆಮಾಡುವ 'ಐಡೆಂಟಿಫಿಕೇಷನ್ ಟ್ಯಾಗ್' ಅಭಿವೃದ್ಧಿಗೊಂಡಿದೆಯಂತೆ!

ಮಾರ್ಗಸೂಚಿ ದರ, ನಿರ್ಮಾಣ ವೆಚ್ಚ ಆಧರಿಸಿ ಆಸ್ತಿ ತೆರಿಗೆ ನಿಗದಿ 6
'ಕೇಂದ್ರದ ಬಳಿ ನ್ಯಾಯ ಕೇಳುವುದು ತಪ್ಪಾ?' 10

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
73,057	22,196	₹63,920 (ಬೆಂಗಳೂರು)	₹72,900 (ಬೆಂಗಳೂರು)	82.97

ಚಂಡೀಗಢ ಮೇಯರ್ ಚುನಾವಣೆ: ಎಎಪಿ–ಕಾಂಗ್ರೆಸ್ ಮೈತ್ರಿ ಅಭ್ಯರ್ಥಿ ವಿಜಯಿ ಎಂದ 'ಸುಪ್ರೀಂ'

ಮರು ಎಣಿಕೆ: ಬಿಜೆಪಿಗೆ ಮುಖಭಂಗ

ಪ್ರಜಾವಾಣಿ ವಾರ್ತೆ

ನವದೆಹಲಿ: ಎಎಪಿಯ ಕಾರ್ಪೊರೇಟರ್ ಕುಲದೀಪ್ ಕುಮಾರ್ ಅವರು ಚಂಡೀಗಢ ಮೇಯರ್ ಹುದ್ದೆಗೆ ಆಯ್ಕೆ ಆಗಿದ್ದಾರೆ ಎಂದು ಸುಪ್ರೀಂ ಕೋರ್ಟ್ ಮಂಗಳವಾರ ಘೋಷಿಸಿದೆ.

ಚುನಾವಣಾಧಿಕಾರಿಯಾಗಿದ್ದ ಅನಿಲ್ ಮಸೀಹ್ ಅವರು ಎಂಟು ಮತಪತ್ರಗಳನ್ನು ಉದ್ದೇಶಪೂರ್ವಕವಾಗಿ ವಿರೂಪಗೊಳಿಸಿದ್ದಾರೆ ಎಂದು ಕೋರ್ಟ್ ಹೇಳಿದೆ.

ಚುನಾವಣಾ ಪ್ರಜಾ ತಂತ್ರದ ಮೂಲಭೂತ ಜನಾದೇಶವು ಜಾರಿಯಾಗುವಂತೆ ನೋಡಿಕೊಳ್ಳಲು ಇಂತಹ ಅಸಾಧಾರಣ ಸನ್ನಿವೇಶಗಳಲ್ಲಿ ನ್ಯಾಯಾಲಯದ ಮಧ್ಯಪ್ರವೇಶ ಅಗತ್ಯ ಎಂದು ನ್ಯಾಯಪೀಠ ಅಭಿಪ್ರಾಯ ಪಟ್ಟಿದೆ.

ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್, ನ್ಯಾಯಮೂರ್ತಿಗಳಾದ ಜೆ.ಬಿ.ಪಾರ್ದೀವಾಲಾ ಮತ್ತು ಮನೋಜ್ ಮಿಶ್ರಾ ಅವರಿದ್ದ ಪೀಠವು ಸಂವಿಧಾನವು 142ನೇ ವಿಧಿಯ ಅಡಿಯಲ್ಲಿ ನೀಡಿರುವ ಪರಮಾಧಿಕಾರವನ್ನು ಬಳಸಿಕೊಂಡಿದೆ. ಮೇಯರ್ ಚುನಾವಣೆಯ ಫಲಿತಾಂಶವನ್ನು ರದ್ದುಪಡಿಸಿದೆ.

11ನೇ ಪುಟ ನೋಡಿ



ಚಂಡೀಗಢ ಮೇಯರ್ ಚುನಾವಣೆಯಲ್ಲಿ ವಿಜಯಿಯಾಗಿದ್ದಾರೆ ಎಂದು ಸುಪ್ರೀಂ ಕೋರ್ಟ್ ಘೋಷಿಸಿದ ಬಳಿಕ ಎಎಪಿ ಅಭ್ಯರ್ಥಿ ಕುಲದೀಪ್ ಕುಮಾರ್ ಅವರಿಗೆ ಸಿಹಿ ತಿನ್ನಿಸಿ ಸಂಭ್ರಮ ಆಚರಿಸಲಾಯಿತು —ಪಿಟಿಐ ಚಿತ್ರ



ಪ್ರಜಾಸತ್ತಾತ್ಮಕ ತತ್ವಗಳನ್ನು ಸಂರಕ್ಷಿಸುವುದು ಮತ್ತು ಚುನಾವಣಾ ಪ್ರಜಾತಂತ್ರವನ್ನು ಹಿಮ್ಮೆಟ್ಟಿಸುವ ಪ್ರಯತ್ನ ನಡೆದಾಗ ಅದನ್ನು ತಡೆಯುವುದು ನ್ಯಾಯಾಲಯದ ಕರ್ತವ್ಯವಾಗಿದೆ
ಸುಪ್ರೀಂ ಕೋರ್ಟ್ ನ್ಯಾಯಪೀಠ

ಎರಡನೇ ಹಿನ್ನಡೆ

ಈ ಬೆಳವಣಿಗೆಯು ಕೇಂದ್ರದ ಆಡಳಿತಾರೂಢ ಬಿಜೆಪಿಗೆ ಹಿನ್ನಡೆ ಎಂದು ಹೇಳಲಾಗಿದೆ. ಅಲ್ಲದೆ, ವಿರೋಧಪಕ್ಷಗಳ ಮೈತ್ರಿಕೂಟ 'ಇಂಡಿಯಾ'ಕ್ಕೆ ಇದು ಮೊದಲ ಚುನಾವಣಾ ಗೆಲುವು ಆಗಿದೆ. ಕಳೆದ ವಾರ ಸುಪ್ರೀಂ ಕೋರ್ಟ್‌ನ ಐವರು ಸದಸ್ಯರ ಪೀಠವು, ಪಕ್ಷಗಳು ದೇಣಿಗೆ ಪಡೆಯಲು ನೆರವಾಗುವ ಚುನಾವಣಾ ಬಾಂಡ್‌ಗಳನ್ನು ರದ್ದುಪಡಿಸಿ ತೀರ್ಪು ನೀಡಿತ್ತು.



ಸುಪ್ರೀಂ ಕೋರ್ಟ್‌ನ ಈ ತೀರ್ಪು ಚುನಾವಣಾ ಅಕ್ರಮದಲ್ಲಿ ತೊಡಗಿರುವ 'ನಿರಂಕುಶ ಪ್ರಭುತ್ವ'ದ ಬಿಜೆಪಿಯಿಂದ ಪ್ರಜಾಪ್ರಭುತ್ವವನ್ನು ರಕ್ಷಿಸಿದೆ. ಚಂಡೀಗಢ ಮೇಯರ್ ಆಯ್ಕೆ ಚುನಾವಣೆಯು ಪ್ರಜಾಪ್ರಭುತ್ವವನ್ನು ನಾಶಪಡಿಸುವ ಮೋದಿ–ಶಾ ಅವರ ಸಂಚಿನ ತುಣುಕಷ್ಟೆ. ಪ್ರಜಾಪ್ರಭುತ್ವ ಕವಲುದಾರಿಯಲ್ಲಿದೆ. ಸಂವಿಧಾನವನ್ನು ರಕ್ಷಿಸಲು ಎಲ್ಲರೂ ಒಟ್ಟಾಗಿ ಹೋರಾಡಬೇಕಿದೆ
ಮಲ್ಲಿಕಾರ್ಜುನ ಖರ್ಗೆ, ಎಐಸಿಸಿ ಅಧ್ಯಕ್ಷ



'ಸಂಕಷ್ಟದ ಸಂದರ್ಭ'ದಲ್ಲಿ ಸುಪ್ರಿಂ ಕೋರ್ಟ್ ಪ್ರಜಾಪ್ರಭುತ್ವವನ್ನು ರಕ್ಷಿಸಿದೆ. ಇದೊಂದು ಐತಿಹಾಸಿಕ ತೀರ್ಪು. ವಿರೋಧ ಪಕ್ಷಗಳ ಮೈತ್ರಿಕೂಟ 'ಇಂಡಿಯಾ'ಕ್ಕೆ ದೊರೆತ ಅತಿದೊಡ್ಡ ಗೆಲುವು. 'ಇಂಡಿಯಾ' ಮಿತ್ರ ಪಕ್ಷಗಳು ಒಟ್ಟಾಗಿದ್ದು, ಚುನಾವಣೆ ಎದುರಿಸಿದರೆ ಬಿಜೆಪಿಯನ್ನು ಸೋಲಿಸಬಹುದು ಎಂಬ ಸಂದೇಶವನ್ನು ಈ ಚುನಾವಣೆಯು ಸಾರಿದೆ
ಅರವಿಂದ ಕೇಜ್ರಿವಾಲ್, ಎಎಪಿ ಸಂಚಾಲಕ, ದೆಹಲಿ ಮುಖ್ಯಮಂತ್ರಿ


ಸತ್ಯಕ್ಕೆ ಕಡೆಗೂ ಗೆಲುವು ಲಭಿಸಿದೆ. ಈ ತೀರ್ಪು ಪ್ರಜಾಪ್ರಭುತ್ವ ಹಾಗೂ ಚಂಡೀಗಢ ನಿವಾಸಿಗಳಿಗೆ ದೊರೆತಿರುವ ಗೆಲುವಾಗಿದೆ
ಕುಲದೀಪ್ ಕುಮಾರ್, ಮೇಯರ್ ಆಗಿ ಘೋಷಿಸಲಾದ ಎಎಪಿ ಅಭ್ಯರ್ಥಿ

ಲಿಂಗ ತಾರತಮ್ಯದ ಪ್ರದರ್ಶನ: 'ಸುಪ್ರೀಂ'

ಸೇನೆಯ ನರ್ಸಿಂಗ್ ಸೇವೆಯಲ್ಲಿ ಕಾಯಂ ಉದ್ಯೋಗಿಯಾಗಿದ್ದ ಮಹಿಳಾ ಅಧಿಕಾರಿಯೊಬ್ಬರು ಮದುವೆ ಮಾಡಿಕೊಂಡರು ಎಂಬ ಕಾರಣಕ್ಕೆ ಅವರನ್ನು ಕೆಲಸದಿಂದ ತೆಗೆದು ಹಾಕಲಾಗಿದೆ. ಈ ಕ್ರಮವು 'ಸ್ವೇಚ್ಛೆ' ಹಾಗೂ 'ಲಿಂಗ ತಾರತಮ್ಯ ಹಾಗೂ ಅಸಮಾನತೆ'ಯನ್ನು ಢಾಳಾಗಿ ತೋರಿಸಿದೆ ಎಂದು ಸುಪ್ರೀಂ ಕೋರ್ಟ್ ಹೇಳಿದೆ. ಪುರಾತನ ನಿಯಮವೊಂದನ್ನು ಉಲ್ಲೇಖಿಸಿ ಅಧಿಕಾರಿಯನ್ನು ವಜಾ ಮಾಡಲಾಗಿತ್ತು.

ವಿವರ 11

ಶಿಕ್ಷಕರ ಕ್ಷೇತ್ರ ಪುಟ್ಟಣ್ಣ ಗೆಲುವು



ಪುಟ್ಟಣ್ಣ

ಬೆಂಗಳೂರು: ವಿಧಾನ ಪರಿಷತ್‌ನ ಬೆಂಗಳೂರು ಶಿಕ್ಷಕರ ಕ್ಷೇತ್ರದ ಉಪ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ಪುಟ್ಟಣ್ಣ ಗೆಲುವು ಸಾಧಿಸಿದ್ದಾರೆ.
ಶಿಕ್ಷಕರೇ ಮತದಾರರಾಗಿರುವ ಈ ಚುನಾವಣೆಯಲ್ಲಿ, ಚಲಾಯಿತ 16,541 ಮತಗಳ ಪೈಕಿ 1,239 ಮತಗಳು ತಿರಸ್ಕೃತವಾಗಿವೆ.

ಬಿಜೆಪಿ– ಜೆಡಿಎಸ್ ಜಂಟಿಯಾಗಿ ಈ ಚುನಾವಣೆ ಎದುರಿಸಿದ್ದು, ಮೈತ್ರಿ ಬಳಿಕ ನಡೆದ ಮೊದಲ ಚುನಾವಣೆಯಲ್ಲಿ ಮೈತ್ರಿಕೂಟಕ್ಕೆ ಸೋಲಾಗಿದೆ. ಎ.ಪಿ. ರಂಗನಾಥ್ ಅವರನ್ನು 1,507 ಮತಗಳ ಅಂತರದಿಂದ ಪುಟ್ಟಣ್ಣ ಸೋಲಿಸಿದ್ದಾರೆ.

ಪುಟ್ಟಣ್ಣ 8,260 ಮತಗಳನ್ನು ಪಡೆದರೆ, ರಂಗನಾಥ್ 6,753 ಮತಗಳನ್ನು ಗಳಿಸಿದ್ದಾರೆ. ಬೆಂಗಳೂರು ಶಿಕ್ಷಕರ ಕ್ಷೇತ್ರ ಉಪ ಚುನಾವಣೆಗೆ ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ ಹಾಗೂ ರಾಮನಗರ ಜಿಲ್ಲೆ ವ್ಯಾಪ್ತಿಯ ಮತದಾರರು ಫೆ.16ರಂದು ಮತದಾನ ಮಾಡಿದ್ದರು.

10ನೇ ಪುಟ ನೋಡಿ

ಪಿಎಸ್‌ಐ ಅಕ್ರಮ: ನ್ಯಾ.ಬಿ.ವೀರಪ್ಪ ವರದಿ ಆಧಾರದ ಟಿಪ್ಪಣಿ

'ಭದ್ರತಾ ಕೊಠಡಿಯಲ್ಲೇ ತಿದ್ದುಪಡಿ'

• ರಾಜೇಶ್ ರೈ ಚಟ್ಲ

ಬೆಂಗಳೂರು: 'ಪೊಲೀಸ್ ಸಬ್ ಇನ್‌ಸ್ಪೆಕ್ಟರ್ (ಪಿಎಸ್‌ಐ) 545 ಹುದ್ದೆಗಳ ನೇಮಕಾತಿಯಲ್ಲಿ ಒಎಂಆರ್ ಉತ್ತರ ಪತ್ರಿಕೆಗಳನ್ನು ಸಿಐಡಿ ಕಚೇರಿಯ ಭದ್ರತಾ ಕೊಠಡಿಯಲ್ಲಿಯೇ (ಸ್ಟ್ರಾಂಗ್ ರೂಮ್) ತಿದ್ದಿರುವುದು ಸಾಕ್ಷಿಗಳಿಂದ ದೃಢಪಟ್ಟಿದೆ' ಎಂದು ನಿವೃತ್ತ ನ್ಯಾಯಮೂರ್ತಿ ಬಿ. ವೀರಪ್ಪ ನೇತೃತ್ವದ ಏಕ ಸದಸ್ಯ ತನಿಖಾ ಆಯೋಗ ಹೇಳಿದೆ.

'ಸಿಐಡಿ ಕಚೇರಿಯ ಅಧಿಕಾರಿ, ಸಿಬ್ಬಂದಿ ಕೆಲವು ಅಭ್ಯರ್ಥಿಗಳಿಂದ ₹30 ಲಕ್ಷದಿಂದ ₹80 ಲಕ್ಷದವರೆಗೆ ಹಣ ಪಡೆದು, ಅಭ್ಯರ್ಥಿಗಳು ಪರೀಕ್ಷೆಯಲ್ಲಿ ಬಳಸಿದ ಪೆನ್ನು ಮತ್ತು ಒಎಂಆರ್ ಪ್ರತಿ ಪಡೆದುಕೊಂಡು, ಭದ್ರತಾ ಕೊಠಡಿಯಲ್ಲಿ ಇರಿಸಿದ್ದ ಮೂಲ ಒಎಂಆರ್ ಶೀಟ್‌ಗಳನ್ನು ತಿದ್ದಿದ್ದಾರೆ' ಎಂದೂ ಆಯೋಗದ ವರದಿ ಉಲ್ಲೇಖಿಸಿದೆ.

ಆಯೋಗದ ವರದಿಯನ್ನು ವಿಧಾನ ಮಂಡಲದ ಉಭಯ ಸದನಗಳಲ್ಲಿ ಮಂಡಿಸಲು ಸರ್ಕಾರ ತಯಾರಿ ನಡೆಸಿದೆ. ಅದಕ್ಕೆ ಮೊದಲು ಸಚಿವ ಸಂಪುಟ ಸಭೆಯ ಅನುಮೋದನೆಗಾಗಿ ವರದಿಯ ಮುಖ್ಯಾಂಶಗಳ ಟಿಪ್ಪಣಿಯನ್ನು ಗೃಹ ಇಲಾಖೆ ಸಿದ್ಧಪಡಿಸಿದೆ. ಈ ರಹಸ್ಯ ಟಿಪ್ಪಣಿಯು 'ಪ್ರಜಾವಾಣಿ'ಗೆ ಲಭ್ಯವಾಗಿದೆ.

'ಪಿಎಸ್‌ಐ ನೇಮಕಾತಿಗೆ ಎಡಿಜಿಪಿ (ನೇಮಕಾತಿ) ಅಧ್ಯಕ್ಷತೆಯಲ್ಲಿ ಆಯ್ಕೆ ಸಮಿತಿ ರಚಿಸಲಾಗಿತ್ತು. ಆ ಸಮಿತಿಯಲ್ಲಿ ಡಿಜಿ ನಾಮನಿರ್ದೇಶನ ಮಾಡಿದ ಎಡಿಜಿಪಿ ಮತ್ತು ಐಜಿಪಿ, ಅಧ್ಯಕ್ಷರು ನಾಮನಿರ್ದೇಶನ ಮಾಡುವ ರೀಡರ್ (ಸಹ ಪ್ರಾಧ್ಯಾಪಕರ ದರ್ಜೆಯ ಸಾಮಾಜಿಕ ಮನೋವಿಜ್ಞಾನ ತಜ್ಞರು) ಸೇರಿದಂತೆ ಐವರು ಸದಸ್ಯರಿದ್ದರೂ, ನೇಮಕಾತಿಯ ಸಂಪೂರ್ಣ ಪ್ರಕ್ರಿಯೆ ಯನ್ನು ಎಡಿಜಿಪಿ (ನೇಮಕಾತಿ) ಕೈಗೊಂಡಿದ್ದಾರೆ. ಒಎಂಆರ್ ಶೀಟ್‌ಗಳನ್ನು ತಿದ್ದಿರುವುದು ವಿಧಿ ವಿಜ್ಞಾನ ಪರೀಕ್ಷೆಯಿಂದ ದೃಢಪಟ್ಟಿದೆ. ಒಂದು ಬಾರಿ ಮಾತ್ರ ಬಳಸಬೇಕಾದ ಬೀಗಗಳ ಬಳಕೆಯಲ್ಲಿಯೂ ದುರುಪಯೋಗ ಆಗಿದೆ' ಎಂದು ವರದಿಯಲ್ಲಿದೆ.

9ನೇ ಪುಟ ನೋಡಿ

ಆಯೋಗದ ಶಿಫಾರಸು

ಪೊಲೀಸ್ ಇಲಾಖೆಯ ಪರೀಕ್ಷೆಗಳನ್ನು ಪಾರದರ್ಶಕವಾಗಿ ಮತ್ತು ಕಟ್ಟುನಿಟ್ಟಾಗಿ ನಡೆಸಲು ಕರ್ನಾಟಕ ರಾಜ್ಯ ಪೊಲೀಸ್ ನಿಯಮಗಳಿಗೆ ಸೂಕ್ತ ತಿದ್ದುಪಡಿ ಮಾಡಿ ಪ್ರಾಧಿಕಾರ ಮತ್ತು ಸಮಿತಿ ರಚಿಸಬೇಕು ಎಂದು ಆಯೋಗ ಶಿಫಾರಸು ಮಾಡಿದೆ.

- ಆಯ್ಕೆ ಪ್ರಾಧಿಕಾರ/ಪ್ರಶ್ನೆಪತ್ರಿಕೆ ಸಮಿತಿ/ಮೇಲ್ವಿಚಾರಣೆ ಸಮಿತಿ (ಡಿಜಿ ಅಧ್ಯಕ್ಷ, ಕಾನೂನು ಇಲಾಖೆ ಪ್ರಧಾನ ಕಾರ್ಯದರ್ಶಿ ಸದಸ್ಯ ಕಾರ್ಯದರ್ಶಿ, ಗೃಹ ಇಲಾಖೆಯ ಪ್ರಧಾನ ಕಾರ್ಯದರ್ಶಿ, ಡಿಜಿಪಿ (ನೇಮಕಾತಿ), ಡಿಐಜಿ (ನೇಮಕಾತಿ) ಸದಸ್ಯರು)
- ಸ್ಕ್ರೀನಿಂಗ್ ಮತ್ತು ಮೌಲ್ಯಮಾಪನ ಸಮಿತಿ (ಡಿಜಿಪಿ (ನೇಮಕಾತಿ) ಅಧ್ಯಕ್ಷರು, ಕಾನೂನು ಇಲಾಖೆಯ ಹೆಚ್ಚುವರಿ ಕಾರ್ಯದರ್ಶಿ ಸದಸ್ಯ ಕಾರ್ಯದರ್ಶಿ, ಮೂವರು ಸದಸ್ಯರು)
- ಜಿಲ್ಲಾ ಸಮಿತಿ (ಪ್ರಧಾನ ಜಿಲ್ಲಾ ನ್ಯಾಯಾಧೀಶರು ಅಧ್ಯಕ್ಷರು, ಜಿಲ್ಲಾಧಿಕಾರಿ ಮತ್ತು ಎಸ್‌ಪಿ ಸದಸ್ಯರು)
- ದೈಹಿಕ ಸಾಮರ್ಥ್ಯದ ಪರೀಕ್ಷೆ ಪಾಸಾದವರಿಗೆ ಎರಡು ಪರೀಕ್ಷೆಗಳನ್ನು ಮಾಡಬೇಕು. 100 ಅಂಕಗಳ ಮೊದಲ ಪರೀಕ್ಷೆಯಲ್ಲಿ ಕನಿಷ್ಠ 40 ಅಂಕ ಗಳಿಸಿದ ಎಸ್‌ಸಿ, ಎಸ್‌ಟಿ ಅಭ್ಯರ್ಥಿಗಳು, 50 ಅಂಕ ಗಳಿಸಿದ ಇತರ ಅಭ್ಯರ್ಥಿಗಳು ಬಹುಆಯ್ಕೆಯ 100 ಅಂಕಗಳ ಎರಡನೇ ಪರೀಕ್ಷೆಗೆ ಅರ್ಹರಾಗುತ್ತಾರೆ. ಎರಡನೇ ಪರೀಕ್ಷೆಯಲ್ಲೂ ಎಸ್‌ಸಿ, ಎಸ್‌ಟಿ ಅಭ್ಯರ್ಥಿಗಳು ಕನಿಷ್ಠ 40, ಇತರ ಅಭ್ಯರ್ಥಿಗಳು 50 ಅಂಕ ಗಳಿಸಿದರೆ ಅರ್ಹರಾಗುತ್ತಾರೆ. ಎರಡೂ ಪರೀಕ್ಷೆಗಳ ಅಂಕಗಳನ್ನು ಆಧರಿಸಿ ಆಯ್ಕೆ ಪಟ್ಟಿ ತಯಾರಿಸಬೇಕು.
- ಪರೀಕ್ಷೆಯ ದಿನವೇ ಪ್ರಶ್ನೆಪತ್ರಿಕೆಯ ಸರಿ ಉತ್ತರ ಪ್ರಕಟಿಸಬೇಕು. 3 ದಿನಗಳ ಒಳಗೆ ಅಭ್ಯರ್ಥಿಗಳು ಗಳಿಸಿದ ಅಂಕ ಪ್ರಕಟಿಸಬೇಕು

ಅಕ್ರಮದಲ್ಲಿ ಭಾಗಿಯಾದ ಆರೋಪ ಹೊತ್ತವರು

ನೇಮಕಾತಿ ವಿಭಾಗದ ಅಧಿಕಾರಿಗಳು
1. ಅಮ್ರಿತ್ ಪೌಲ್, ಎಡಿಜಿಪಿ
2. ಶಾಂತಕುಮಾರ್, ಡಿವೈಎಸ್‌ಪಿ
3. ಟಿ.ಸಿ. ಶ್ರೀನಿವಾಸ್, ಪೊಲೀಸ್ ಸಿಬ್ಬಂದಿ
4. ಶ್ರೀಧರ್ ಎಚ್. ಪೊಲೀಸ್
5. ಡಿ. ಹರ್ಷ, ಎಫ್‌ಡಿಎ, ಎಡಿಜಿಪಿ (ನೇಮಕಾತಿ) ಕಚೇರಿ

53 ಮಂದಿ ಅಭ್ಯರ್ಥಿಗಳು
27 ಮಂದಿ ವಂಚಕರು
15 ಮಂದಿ ಮಧ್ಯವರ್ತಿಗಳಾಗಿದ್ದ ಪೊಲೀಸ್ ಅಧಿಕಾರಿಗಳು
9 ಮಂದಿ ಮಧ್ಯವರ್ತಿಗಳಾಗಿದ್ದ ಸರ್ಕಾರಿ ನೌಕರರು

ರಾಹುಲ್ ಸಲಹೆ ಮೇರೆಗೆ ಪರಿಹಾರ: ಬಿಜೆಪಿ ಆಕ್ರೋಶ

ಆನೆ ತುಳಿತ: ಕೇರಳದ ಕುಟುಂಬಕ್ಕೆ ₹15 ಲಕ್ಷ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೇರಳದ ವಯನಾಡ್‌ನಲ್ಲಿ 'ಕರ್ನಾಟಕದ ಆನೆ'ಯ ತುಳಿತದಿಂದ ಅಜೀಶ್ ಮೃತಪಟ್ಟಿದ್ದು, ಸಂತ್ರಸ್ತ ಕುಟುಂಬಕ್ಕೆ ರಾಜ್ಯ ಸರ್ಕಾರದಿಂದ ₹15 ಲಕ್ಷ ಪರಿಹಾರ ನೀಡಲಾಗಿದೆ' ಎಂಬ ವಿಷಯ ವಿವಾದಕ್ಕೆ ತಿರುಗಿದ್ದು, ಸರ್ಕಾರದ ನಡೆಗೆ ಬಿಜೆಪಿ ಕಿಡಿಕಾರಿದೆ.

ಅರಣ್ಯ ಸಚಿವ ಈಶ್ವರ ಖಂಡ್ರೆ ಅವರು ವಯನಾಡ್ ಸಂಸದ ರಾಹುಲ್ ಗಾಂಧಿ ಅವರಿಗೆ ಪರಿಹಾರದ ಕುರಿತು ಬರೆದ ಪತ್ರ ತಕರಾರಿನ ಮೂಲ. ಕರ್ನಾಟಕದ ಆನೆ ತುಳಿದಿದ್ದರಿಂದಾಗಿ, ಪರಿಹಾರ ಕೊಡುವಂತೆ ಅಲ್ಲಿನ ಸರ್ಕಾರ, ಕರ್ನಾಟಕದ ಅರಣ್ಯ ಇಲಾಖೆಯನ್ನು ಕೋರಿತ್ತು. ಅದನ್ನು ಸರ್ಕಾರ ನಿರಾಕರಿಸಿತ್ತು. ಆದರೆ, ಆನೆಗೆ ಅಳವಡಿಸಲಾಗಿದ್ದ ರೇಡಿಯೊ ಕಾಲರ್ ನೀಡಿದ್ದ ಮಾಹಿತಿ ಆನೆಯು ಕರ್ನಾಟಕ ಮೂಲದ್ದೆಂದು ಹೇಳಿತ್ತು. ಹೀಗಾಗಿ, ಪರಿಹಾರ ಕೊಡುವ ಅನಿವಾರ್ಯ ಸೃಷ್ಟಿಯಾಯಿತು ಎಂದೂ ಹೇಳಲಾಗುತ್ತಿದೆ.

'ನಿಮ್ಮ ಸೂಚನೆಯ ಮೇರೆಗೆ ಕೆ.ಸಿ. ವೇಣುಗೋಪಾಲ್ ನನಗೆ ದೂರವಾಣಿ ಕರೆ ಮಾಡಿದ್ದಾರೆ. ಕರ್ನಾಟಕ ಸರ್ಕಾರದಿಂದ ಪರಿಹಾರ ನೀಡಬೇಕು ಎಂದು ನೀವು ಹೇಳಿದ್ದೀರಿ ಎಂಬುದನ್ನು ನನ್ನ ಗಮನಕ್ಕೆ ತಂದರು. ಮುಖ್ಯಮಂತ್ರಿ ಸಿದ್ದರಾಮಯ್ಯ ಜತೆ ಚರ್ಚಿಸಿ ಸಂತ್ರಸ್ತ ಕುಟುಂಬಕ್ಕೆ ₹15 ಲಕ್ಷ ಪರಿಹಾರ ಘೋಷಿಸಿದ್ದೇವೆ' ಎಂದು ಈಶ್ವರ ಖಂಡ್ರೆ ಅವರು ರಾಹುಲ್‌ಗೆ ಬರೆದ ಪತ್ರದಲ್ಲಿ ವಿವರಿಸಿದ್ದಾರೆ.

'ಈ ಸಲಗವನ್ನು ಹಾಸನ ಜಿಲ್ಲೆ ಬೇಲೂರು ಬಳಿ ಸೆರೆ ಹಿಡಿಯಲಾಗಿತ್ತು. ಆ ಬಳಿಕ 2023ರ ನವೆಂಬರ್‌ನಲ್ಲಿ ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶಕ್ಕೆ ಬಿಡಲಾಗಿತ್ತು. ಅದಕ್ಕೆ ರೇಡಿಯೊ ಕಾಲರ್ ಕೂಡ ಅಳವಡಿಸಲಾಗಿತ್ತು. ಇದಾಗಿ ಎರಡು ತಿಂಗಳ ಬಳಿಕ ಆನೆಯು ಕೇರಳದ ವಯನಾಡ್ ಪ್ರದೇಶದಲ್ಲಿ ಕಾಣಿಸಿಕೊಂಡಿದ್ದೂ ಅಲ್ಲದೆ, ಅಜೀಶ್ ಮೇಲೆ ದಾಳಿ ಮಾಡಿತ್ತು. ಅದರಿಂದ ಅಜೀಶ್ ಮೃತಪಟ್ಟಿದ್ದರು' ಎಂದಿದ್ದಾರೆ.

9ನೇ ಪುಟ ನೋಡಿ

ತೆರಿಗೆದಾರರ ಹಣ ದುರುಪಯೋಗ: ವಿಜಯೇಂದ್ರ

'ರಾಹುಲ್ ಗಾಂಧಿ ಸಲಹೆ ಮೇರೆಗೆ ಕೇರಳದಲ್ಲಿ ವ್ಯಕ್ತಿಯ ಕುಟುಂಬಕ್ಕೆ ಸರ್ಕಾರದ ಬೊಕ್ಕಸದಿಂದ ₹15 ಲಕ್ಷ ಪರಿಹಾರ ನೀಡಿದ್ದು ಸರಿಯಲ್ಲ. ಮಾನವೀಯ ನೆಲೆಯಲ್ಲಿ ನೀಡುವುದಾಗಿದ್ದರೆ ಕಾಂಗ್ರೆಸ್ ವತಿಯಿಂದಲೇ ನೀಡಬೇಕಿತ್ತು' ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಹೇಳಿದರು.

'ರಾಜ್ಯದ ತೆರಿಗೆದಾರರ ಹಣವನ್ನು ದುರುಪಯೋಗ ಪಡಿಸಿಕೊಂಡಿರುವುದು ಅವಮಾನಕರ. ಇದು ಕರ್ನಾಟಕದ ಜನರಿಗೆ ಮಾಡಿದ ದ್ರೋಹ' ಎಂದು ಹೇಳಿದರು.

'ಕಾಡಾನೆಗಳಿಗೂ ರಾಜ್ಯಗಳ ಗಡಿಗಳನ್ನು ಅನ್ವಯ ಮಾಡಿ, ಯಾರದ್ದೋ ರಾಜಕೀಯ ಲಾಭಕ್ಕೆ ಸರ್ಕಾರದ ಖಜಾನೆ ಹಣ ಬಳಸುತ್ತಿರುವುದು, ಸದನ ನಡೆಯುತ್ತಿರುವಾಗ ಪಕ್ಷದ ಹೈಕಮಾಂಡ್ ಸೂಚನೆಯಂತೆ ನಡೆದುಕೊಳ್ಳುವುದು ಮತ್ತು ಹೊರ ರಾಜ್ಯದವರಿಗೆ ಸರ್ಕಾರದ ವತಿಯಿಂದ ಪರಿಹಾರ ನೀಡುತ್ತಿರುವುದು ಇದೇ ಮೊದಲು' ಎಂದರು.

ಚಿನಕುರಳಿ

ಪ್ರಕಾಶ್ ಶೆಟ್ಟಿ




ನಮ್ಮ ಸಂಸ್ಥಾಪಕರಾದ
ಕೊತ್ತ ಕೃಷ್ಣಯ್ಯ ಚೆಟ್ಟಿ
ರವರ ಸವಿನೆನಪಿನಲ್ಲಿ
ಪ್ರಸ್ತುತಪಡಿಸುತ್ತಿದ್ದೇವೆ
ದಿ ಗ್ರ್ಯಾಂಡ್
1869 ಮಾರಾಟ®
ಫೆಬ್ರವರಿ 29, 2024 ರವರೆಗೆ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Teachers/ Professors

REQUIRES
•PRINCIPAL •FACULTIES
For Following Colleges
- Physiotherapy with MPT
- Pharmacy with Ph.D. / M.Pharma/B.Pharma
- Nursing with M.Sc/B.Sc(N)
- PUC+NEET & High School With M.Sc./M.A./B.Ed.-M.Ed

HOSPITAL & COLLEGES STAFF
- Librarian
- Computer Operator,
- Fresh Pharmacist with D.Pharma
- Ayurveda Therapist Trainees & Therapists
- Student Councilor for PUC+ NEET Admission District wise & Taluk wise
- Marketing Executives
- Hostel Warden,Drivers
- Lab, X-Ray Technician
- Staff Nurses

K.T.G & Anuradha College and Hospital
Hegganahalli Cross, Bangalore-91
9845051023 , 9880453539
ktgcolleges@gmail.com

Swamy Vivekananda Rural Education Society®1963
Chandapura, Anekal Taluk,Bengaluru-560099
www.svres.org email: hrsvres1963@gmail.com
Mob : 9606009890

INVITES APPLICATIONS FOR RECRUITMENT TO THE FOLLOWING POSTS

HEADMASTER: Master degree with atleast 5 years of experience, B.Ed
PE TEACHER for Primary School (State Board): B.PEd
ASSISTANT TEACHERS for High School *(ICSE/State Board):*
MSc,B.Ed in Botany/Zoology, Physics
BA/MA,B.Ed in English
LIBRARIAN: B.Lib.Sc/M.Lib.Sc
LECTURERS for Pre University College **MSc B.Ed** in Physics
LECTURERS for First Grade college **MCA/MSc** in Computer Science (NET preferable)
CLERKS: M.Com/B.Com with knowledge of Computers and Good Communication Skills

Interested and eligible candidates with relevant experience are requested to send Bio data addressed to the Secretary, SVRES with copies of relevant documents through mail or post to reach us on or before 27/02/2024.

Sd/- Secretary

THE MYSORE EDUCATION SOCIETY
"Brahmi", KISHORA KENDRA, 10th MAIN, 15th CROSS, MALLESWARAM, BANGALORE – 560 003
Website: www.mesinstitutions.in

Invites applications for the following posts:

A. Assistant Teachers for Pre-Primary School: Pay Scale: 11650-32950/-
Qualification: Graduate with a minimum of 55% marks from a recognized university and NTT or Montessori Training or Certificate in foundational stage(inducing ECCE). **Desirable:** Passion to teach children with care.

B. Teachers (English Medium) Pay Scale: 18050-45500/-
a) For Primary School:- Subjects: Science, Social Science, EVS, Mathematics, English, Kannada, Hindi.
Essential Qualification: Graduate with a minimum of 55 % marks from a recognized university and B.Ed., with teaching methods in relevant subject(s).
b) For High School :- Subjects: English/ Social Science/Geography & Science. **Essential Qualification:** Post Graduate with a minimum of 55 % marks from a recognized university and B.Ed., with teaching methods in relevant subject(s)

C. Computer Teacher: Pay Scale: 14750-39850/-
Essential Qualification: Bachelor's Degree in Computer Science/Computer Applications from a recognized University with a minimum of 55 % marks with one year Teaching Experience at school level and experience in usage of Technology/ICT in Teaching

D. Dance & Music Teacher: Pay Scale: 14750-39850/-
Essential Qualification: Bachelor's Degree in Performing Arts with a minimum of 55 % marks with one year Teaching experience at school level

E. Drama Teacher: Pay Scale: 14750-39850/-
Essential Qualification: Any Bachelor's Degree with a minimum of 55% marks with one-year Theatre Teaching experience
Desirable : Diploma in Theatre / Certificate in Theatre

F. Lecturers for PU Colleges: Pay Scale: 23450-56750/-
Subjects: Kannada/Hindi/English/Physics/Chemistry/Mathematics/Computer Science
Essential Qualification: Post-Graduate in relevant subject from a recognized university with a minimum of 55% Marks and B.Ed., with teaching methods in relevant subject(s).

G. Lecturer in Physical Education for PU College: Pay Scale: 23450-56750/-
Essential Qualification: Post-Graduate in Physical Education (Two years course) or Masters Degree in Sport Science from a recognized university with a minimum of 55% marks and Record of having represented the University / College at the Inter-University/ Inter-Collegiate Competitions or State and / or National Championship. Passed the Physical Fitness test
Desirable: Previous Experience at similar level in College(s). Knowledge of computer applications

H. Assistant Professors for P.G. Mathematics at Degree College: Pay Scale: 27550-56750/-
Essential Qualification: Post-Graduation in relevant subject from a recognized university with a minimum of 55% Marks PhD. (with course work included as part of the doctoral programme). **Desirable:** Post-doctoral experience & Research Publications

I. Computer Technician: Pay Scale: 12850-36850/-
Essential Qualification: Bachelor's Degree in Computer Science /Computer Applications from a recognized university with a minimum of 55% Marks or Bachelor's Degree from a recognized university with a minimum of 55 % marks and Diploma in Hardware Maintenance / Computer . **Desirable:** i) previous experience of working in computer lab/hardware maintenance in educational institution(s) ii) knowledge of software applications

J. Office Assistants (Admin): Pay Scale: 11650-32950/-
Essential Qualification: Bachelor's Degree with knowledge of Computer Applications and proficient in MS Office. Previous experience in office procedure & accounting and correspondence in Kannada and English.
Desirable: Previous experience in office administration / correspondence in Kannada/English in education institution(s)

K. Counsellor: Consolidated Pay of Rs.35000/-
Essential Qualification: Master's Degree in Counseling Psychology / Clinical Psychology from a recognized university with a minimum of 55% Marks. **Desirable:** Basic Computer Skills.

L. Support staff: Pay Scale: 9600 - 26600/-
Essential Qualification: Pass in SSLC/PUC and Knowledge of computer applications. **Desirable:** i. Previous Experience in an office in educational institution(s), ii. Maintenance of audio/video equipment and auditorium/control room in educational institution(s)

1) The posts carry scales of pay and allowances such as HRA at 25%, Interim allowance 60%. Besides this, contribution towards PF and Gratuity as terminal benefit.
2) Applications with BIO-DATA and copies of certificates of their qualifications and experience etc., **should reach the Chief Executive, MES at the above address on or before 15.03.2024** duly superscribing the envelope with **"Application for the post of ______________________"**.
3) Candidates with experience are preferred.
4) Competency in ICT enabled teaching is desirable.
5) All posts are tenable in any of the MES Institutions and are transferable.
6) Decision of the selection committee is final.
7) Resorting to any sort of influence will be deemed as a disqualification of the candidature.
8. **Download the application form from the MES website: https://mesinstitutions.in**

Advt. No. MES/19/ADM-1/2024 Dated 21.02.2024

CHIEF EXECUTIVE

Engg/ Production Technical

TOOL ROOM DESIGN ENGINEERS WANTED BY LEADING TOOL ROOM NEAR TUMKUR, KARNATAKA. DME/ BE CANDIDATES WITH 3-5 YEARS CAD EXPERIENCE ON NX/ CREO /SOLIDWORKS/ AUTOCAD IN HPDC MOULD DESIGN. Apply Immediately With Full Details Including Salary Drawn/ Expected to: hr@toolsourceindia.com

AEROSPACE COMPONENTS Manufacturing Company at Peenya requires PRODUCTION ENGINEER, QUALITY CONTROLLER , VMC OPERATOR & SETTER- B.E/ Diploma/ ITI. Contact 8310411192

Wanted

WANTED FIELD Verification Executives for Banking and NBFC Customer Verification. Contact: 9886021470

ADMISSION CORNER

ಜನಸೇವಾ ವಿದ್ಯಾಕೇಂದ್ರ
ಬಾಲಕರ ನಿಲಯ ಶಾಲೆಗಳು
ಚನ್ನೇನಹಳ್ಳಿ ಮಾಗಡಿ ರಸ್ತೆ, ಬೆಂಗಳೂರು ನಗರ ಜಿಲ್ಲೆ–562130
ದೂರವಾಣಿ: 9241216119, 9480609078
email: 123jsvkhighschool@gmail.com

2024–25ನೇ ಸಾಲಿನ ಪ್ರವೇಶಗಳಿಗೆ ಕರೆ

5, 6, 7ನೇ ತರಗತಿಗಳು:	ಉತ್ತಮ ಇಂಗ್ಲೀಷ್ ಭಾಷಾ ಕಲಿಕೆಯೊಂದಿಗೆ ಕನ್ನಡ ಮಾಧ್ಯಮ (ಸ್ಥಳೀಯ ವಿದ್ಯಾರ್ಥಿಗಳಿಗೆ ಕೂಡ ಅವಕಾಶವಿದೆ)
8ನೇ ತರಗತಿ:	ಇಂಗ್ಲಿಷ್ ಮತ್ತು ಕನ್ನಡ ಮಾಧ್ಯಮ ಪ್ರಥಮ ಭಾಷೆ ಕನ್ನಡ/ಸಂಸ್ಕೃತ
9ನೇ ತರಗತಿ:	ಇಂಗ್ಲೀಷ್ ಮತ್ತು ಕನ್ನಡ ಮಾಧ್ಯಮ

ಎಲ್ಲಾ ವಿವರಗಳುಳ್ಳ ಪರಿಚಾಯಿಕೆಗೆ ರೂ.250/– ಮಾತ್ರ ಯಾವುದೇ ಬ್ಯಾಂಕಿನ ಆನ್‌ಲೈನ್ ಅಥವಾ ನಗದು ಮೂಲಕ ಪಡೆಯಬಹುದು
Contact: 9241216119, 9480609078/080-23901415
ಮೊದಲನೇ ಹಂತದ ಪರಿಚಾಯಿಕೆ ಪಡೆಯಲು ಕೊನೆಯ ದಿನಾಂಕ 15.03.2024

ಪ್ರವೇಶ ಪರೀಕ್ಷೆಗಳು

5, 6, 7 ಮತ್ತು 9ನೇ ತರಗತಿಗಳು	20.03.2024 ಬುಧವಾರ	ಪರೀಕ್ಷೆಯ ಸಮಯ ಬೆಳಿಗ್ಗೆ 11.00 ಘಂಟೆಗೆ
8ನೇ ತರಗತಿ ಎಲ್ಲಾ ಜಿಲ್ಲೆಯವರಿಗೆ	21.03.2024 ಗುರುವಾರ	ಪರೀಕ್ಷೆಯ ಸಮಯ ಬೆಳಿಗ್ಗೆ 11.00 ಘಂಟೆಗೆ

(ಅವಕಾಶವಿದ್ದಲ್ಲಿ ಪರಿಚಾಯಿಕೆ ನೀಡಿ ಎರಡನೇ ಹಂತದ ಪ್ರವೇಶ ಪರೀಕ್ಷೆ ನಡೆಸಲಾಗುವುದು)
ಗೌರವ ಕಾರ್ಯದರ್ಶಿ

JANASEVA P.U.COLLEGE
Residential for Boys
Channenahalli,20th K.M.Magadi Main Road,Bangalore-562130
Email:janasevapuc@gmail.com, 123jsvkhighschool@gmail.com
ADMISSIONS OPEN FOR THE ACADEMIC YEAR 2024-25
First Year PUC Science (PCMB/PCMCs) Commerce (SEBA & CEBA)
Excellent coaching by experienced and highly qualified faculty members, Very Good Hostel Facility in natural environment.
Local Students (Boys & Girls) may also apply
Application forms are available in the college Office between 10 a.m. to 5 p.m.
Mob: 080-23901414 / 9148275341
-Hon Secretary

ADELIE INTERNATIONAL PRESCHOOL, Requires 1. FEMALE ACADEMIC HEAD/ CO-ORDINATOR For Pre-Primary. Young dynamic profile with minimum 4 years of leadership experience. Age <40 Yrs. Qualification: NTT/ MTT/ ECCE with Post graduation. 2. FEMALE TEACHERS Qualification- NTT/ MTT/ ECCE With any Degree. Age <40 Yrs. 3. FEMALE TEACHERS Art & Craft Yoga Music Social Media Designer- Graphic Photography Website & creative skills. 4. FEMALE FRONT OFFICE EXECUTIVE With pleasing personality Graduate/ Diploma with good communication & computer skills. Age <35 Yrs 5. FEMALE ACCOUNTANT With B.Com. Experience in school. Age <35 Yrs. Salary is not a constraint for the deserving candidates. Walk-in-Interview: 21st to 23rd Feb Timings: 10 am- 4 pm. 24th Feb Timings: 10 am- 1 pm. Submit resume with recent photograph. ADELIE INTERNATIONAL PRE SCHOOL Opp. to Swami Vivekananda Circle 1st Phase Girinagar Banashankari 3rd Stage Bengaluru-85. Phone: 9591622353, 9845030600, 080-26724522. E-Mail: hrdsgps@gmail.com; facebook/Adelieinternational

GOPALAN FOUNDATION IS HIRING

GOPALAN INTERNATIONAL SCHOOL, WHITEFIELD
REQUIRES TRAINED AND EXPERIENCED TEACHERS
for Pre Primary to Higher Secondary School in ICSE and IGCSE. All subjects including languages, Physical Education, Yoga, Dance, Indian Music & Curriculum Head.
Call: 080 42184340/40936034 or
E-mail: gisrecruitment@gopalanschool.com

GOPALAN NATIONAL SCHOOL, BROOKEFIELD
REQUIRES TEACHERS FOR ALL GRADES
English, Mathematics, Hindi, Science, Geography, History, Physical Education, School Counsellor
Qualification: Trained Graduate/Post-Graduate with good Academic records and fluency in English.
SYSTEM ADMINISTRATOR
Well versed in System Troubleshooting, Server Maintenance, Expert in Social Media, Outlook, Photoshop, Good Typing Speed and Sound Knowledge in English.
Call: 080-41554091 E-mail: gns@gopalanschool.com

GOPALAN TWINKLERS SCHOOL, KANAKAPURA ROAD
REQUIRES EXPERIENCED TEACHERS
High School English & Pre- Primary Teachers
Graduate/Post Graduate with B.Ed. Montessori trained or NTT with minimum 5 years experience
Call: +91 90088 53376 or
E-mail: admints@gopalanschool.com

GOPALAN NATIONAL SCHOOL - SOUTH,KUMBALGODU
REQUIRES TEACHERS
Pre-Primary Teachers, English, Science - Primary, English Teacher for High School, P.E Teacher Graduates, NTT with Minimum 3 years of experience
Call: 9606959332/9986404824.
E-Mail: admingnssouth@gopalanschool.com

GOPALAN NATIONAL SCHOOL - NORTH, YELAHANKA
REQUIRED TEACHERS
for Kindergarten, Primary and Middle School.
All subjects, PE, Library and Art & Craft
Required part time Teachers for Taekwondo, Music and Dance.
Call: +91 9741089091
Email - principal@gopalannationalschoolnorth.com, hr@gopalanschool.com

Salary as per Industry Standards
Apply within 15 days of the advertisement

SHANTHINIKETHAN A ENGLISH SCHOOL- GIRINAGAR Requires 1) FEMALE VICE PRINCIPAL/ COORDINATOR Young dynamic profile with minimum 4 years ofleadership experience. Qualification Post graduate with B.Ed. AGE <40 Yrs 2. FEMALE ACADEMIC HEAD/ INCHARGE Any graduate with NTT/ MTT/ ECCE withminimum 5 years experience. AGE <40 Yrs. 3. FEMALE NURSERY TEACHERS Anygraduate with NTT/ MTT/ ECCE AGE <40 Yrs 4. PRIMARY & HIGH SCHOOL FEMALE TEACHERS For Maths Physics Chemistry Biology English Social Studies EVS Hindi-Trained Freshers experienced. AGE <40 Yrs. 5. FEMALE FRONT OFFICE EXECUTIVE With pleasing personality Graduate/ Diploma with good communication & computerskills. AGE <35 Yrs. 6. FEMALE ACCOUNTANT With B.Com. Experience in school AGE <35 Yrs. 7. OTHERS: Art & Craft Librarian Music Yoga P.E Creative Graphic Designer, Digital Marketing Management (FEMALE- AGE <35 Yrs). Salary is not a constraint forthe deserving candidates. Walk-in- Interview: 21st to 23rd Feb- Timings 10 am- 4 pm. 24th Feb– Timings 10 am- 1 pm. Submit resume with recent photograph. SHANTHINIKETHANA SCHOOL, 1341/A 8th 'C' Cross 8th Main Girinagar 2nd Phase Bengaluru-85. Phone: 7760202693, 7676068929, 080-26721334, 26420794. E-mail: hrdsgps@gmail.com; www.shanthinikethana.in Facebook/ shanthinikethanaschool.

EAST WEST INSTITUTIONS
BENGALURU - MYSURU
TEACHERS REQUIRED
PGTs, TGTs and Nursery Teachers
Post Graduates / Graduates with B.Ed., Nursery and Montessori Trained
Physical Education, Music & Dance Teacher
With Excellent communication skills and teaching experience in CBSE SCHOOLS
Eligible candidates may apply with your updated Resume within 7days
Mail us : eastwestacademy@gmail.com

EAST WEST ACADEMY
(Affiliated to CBSE, New Delhi - Aff. No. 831063)
3, 64th Cross, 5th Block, RAJAJINAGAR, B-10.
Call : 080-23404446 / 73495 77565

ರಾ ವೈ ಪ್ರ ನೌಕರರ ಸಹಕಾರ ಸಂಘ(ನಿ)
ಬೆಂಗಳೂರು 560 017
ಇ ಮೈಲ್: nalecs@nal.res.in ದೂರವಾಣಿ: 080–25086159

ಈ ಮೇಲ್ಕಂಡ ಸಹಕಾರ ಸಂಘದಲ್ಲಿ ಟ್ರೈನಿ ಅಕೌಂಟೆಂಟ್–1 ಹುದ್ದೆಗೆ 2 (ಎರಡು) ವರ್ಷಗಳ ಅವಧಿಗಾಗಿ ಗುತ್ತಿಗೆ ಆಧಾರದ ಮೇಲೆ ತೊಡಗಿಸಿ ಕೊಳ್ಳಲಾಗುವುದು. ಆಸಕ್ತ ಅಭ್ಯರ್ಥಿಗಳು ಸ್ಪೀಡ್ ಪೋಸ್ಟ್ ಮೂಲಕ ಅಥವಾ ಅರ್ಜಿಯನ್ನು ನೇರವಾಗಿ ಸಂಘದ ಕಛೇರಿಗೆ ಸಲ್ಲಿಸಬಹುದು. ಹೆಚ್ಚಿನ ವಿವರಗಳಿಗಾಗಿ ಮತ್ತು ಅರ್ಜಿ ನಮೂನೆ ಪಡೆಯಲು ಈ ಕೆಳಗಿನ ವೆಬ್‌ಸೈಟ್‌ಗೆ ಭೇಟಿ ನೀಡಿ http://publuu.com/flip-book/400721/907552

ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 18–03–2024

ದಿನಾಂಕ: 21–02–2024 ಸಹಿ/– ಅಧ್ಯಕ್ಷರು

RAJAJINAGAR PARENTS' EDUCATION SOCIETY
CA-2, 5TH BLOCK, RAJAJINAGAR, BANGALORE – 560010
PHONE – 08023353594, 08023502813

Applications are invited for the following teaching posts in different institutions run by the society. Please mail your resumes to the Email address noted against each institution on or before **29.02.2024**

RPES JNANA SARASWATHI PUBLIC SCHOOL
(AFFILIATED TO CBSE NEW DELHI)
email: rpes.cbse@gmail.com

Subject	Qualification	No. of Posts
English	BA, B.Ed	01
Hindi	BA, B.Ed	01
Social Studies	BA, B.Ed	02
Nursery	Graduate with NTT/MTT	02
Computer	B.Sc, B.Ed (Computer)	02
PE Teacher (Preferably Female)	B.PEd.	01
Music	BA/Diploma in Music	01
Office Assistant	Graduation with Computer knowledge	01

RPA FIRST GRADE COLLEGE
email: rpacollege@rediffmail.com

Department	Qualification Ph.D,NET,KSET is preferred	No. of Posts
Computer Sc.	MCA/M.Sc (IT,CS)/B.E/M.Tech	02
Hindi	M.A	01
Sanskrit	M.A	01

RPES JNANA VIKASA HIGH SCHOOL (STATE BOARD)
email: rpajvhs@gmail.com

Subject	Qualification	No. of posts
Mathematics who can also handle Physics	B.Sc,B.Ed (5 yrs teaching experience)	01
Computer Teacher with office administration	B.Com/BCA	01

President, RPES, Rajajinagar, Bangalore

CAMLIN HIGH SCHOOL
State Board Nursery to X
6th 'C' Main, 4th Cross, Near 7th Main Bus Stop
Hampinagar, Vijayanagar 2nd Stage, Bengaluru-560104
Phone : 080-23301363
ESTD. 1981
REQUIRED
TRAINED HEADMISTRESS / PRINCIPAL
10 Years of Teaching Experience.
HIGH SCHOOL, MIDDLE & PRIMARY TRAINED TEACHERS
to Teach English, Kannada, Hindi, Maths, Science, Social Studies, Drawing, Yoga, Music, P.E.
Hand Written Application along with resume with recent passport size photo to be submitted to Secretary by post / in person or
E-mail to : camlin_school@rediffmail.com

HOLY ANGEL'S High School Hampinagar, Vijayanagar, Bengaluru-560104. Phone:23404465/ 23202042 holyangels.highschoolrpclayout@gmail.com Requires Experienced Trained Teachers for the Academic year 2024-2025 for Nursery, Primary, High-School, Music Teacher & P.E.Teacher. STATE & ICSE. Qualification: B.A./B.Sc.,B.Ed. M.A/M.Sc.,M.Ed, N.T.T, CP.Ed. Only English medium candidates need to apply.

General

EMPLOYEE NEEDED! Business Development Office for property developer company No investment, age above 30 years experienced required. Earning Rs. 50,000/- per month Retired persons are eligible. Contact:- 9845334751.

Part-Time Jobs

TOP MNC Com. Licensed By Central Govt. Retired/ VRS Persons 2nd Career Opportunity Age Above 45 Years 35000/- To 40000/- 7019215243/ 9886641282

Multiple Vacancy

CHERISH HAPPY HOME PVT LTD
WE ARE HIRING

S.N	Openings	Exp.	Education
1	Site Engineer	2-8 Years	B.E- Civil Engineer
2	Quantity surveyor	2-8 Years	B.E-Civil Engineer
3	Procurement Executive	2-8 Years	Graduate
4	Architect	2-8 Years	B.Arch
5	Interior Designer	2-5 Years	B.Sc in interior
6	Planning Engineer	2-3 Years	B.E-Civil Engineer
7	Civil Project Manager	8+ Years	B.E-Civil Engineer

Send your Resume to hr@cherishhappyhome.com
T S Sunil raj : 8123783716 | Jaya Krishna : 9606920927

BMS EDUCATIONAL TRUST, BENGALURU
BMS SCHOOL OF ARCHITECTURE
(Approved By COA, AFFILIATED TO VTU, BELAGAVI)
Application in prescribed format are invited from the eligible candidates for the following Non-Teaching Positions:

POSITION	DESIRABLE
Administrative Officer	Graduate less than 60 years worked for Govt./Private sectors in any Administrative role (Preferably education sector).
Skill Lab Instructor	ITI/Diploma in Mechanical with 1+ years of experience and having knowledge on Latest Machinery tools.

For More details login to our website https://www.bmssa.ac.in/careers
Updated resumes along with copies of credentials to be emailed within 7 days to director@bmssa.ac.in
THE DIRECTOR, BMS SCHOOL OF ARCHITECTURE
BMSIT CAMPUS, DODDABALLAPURA MAIN ROAD, YELAHANKA, BENGALURU- 560064

Hospital & Medical Jobs

REQUIRED: 1) OCCUPATIONAL THERAPIST(OT) Experienced with ASD CHILD. 2) SPEECH THERAPIST Experienced with ASD CHILD. Contact: 7338467557.

Accounts & Finance

ACCOUNTANT REQUIRED having knowledge of Tally GST, TDS, PF, ESI etc. Contact: Rathod Build Mart Pvt Ltd, Near ISKCON Temple, Yeshwanthpur. Ph: 9448992214 Mail ID: info@buildmart.co.in

WANTED FEMALE Office Assistant Knowing Accounts with Tally Having Fluency In English & Hindi In & Around Rajajinagar Contact: 9108458798/ 23384085

Drivers

WANTED EXPERIENCED DRIVERS for Water Tankers in Bangalore South. Contact Immediately. Call 9448171416

WANTED HIGH SCHOOL ENGLISH, Social Science, Maths and Kannada Teachers. Primary School Maths and English Teachers. Principal with min 5 years of Experience. Kuvempu Adarsha Public School Sanjaynagar Contact:9663776004 Send resume to: ganapriya.kaps@gmail.com

SRI AHAM AATHMA VIDYALAYA- [ICSE/ State] Nagasandra post Bangalore-73 requires Teachers for the academic year 2024-25 (1) Computer Science- BCA/MCA/B.Sc, M.Sc B.Ed (2) Teachers for all the subjects. Nursery/ Primary/Middle/High-school. (3)Office Staff/ Receptionist/ Data/DTP Operator with Tally, IT System Admin (4) Lab-Assistant, Librarian, PT Teacher, Academic Co-Ordinator. Offers Attractive Salary. Transportation will be considered Contact 9880200172, 9663778869 sriaavapplic@gmail.com

Prakriya Green Wisdom School
Campus: Off Sarjapur Road
Has openings for the following positions:
PGT - History and Civics
TGT - English, Special Educator (English & Math), Kannada
PRT- All subjects
Learner facilitator for the Nursery section.
Admin - Librarian
Admin Assistant
The candidate needs to be an enthusiastic professional and passionate learner.
We provide a vibrant work culture.
Apply to jobs@prakriyaschool.edu.in

ST. CHARLES HIGH SCHOOL (ICSE)
Kammanahalli, Bengaluru
REQUIRES
Trained Graduate / Post Graduate/ (T.C.H. / D. Ed. / B. Ed.)- English/ Hindi / Kannada/ History, Civics, Geography / Science - Physics, Chemistry, Biology/ Mathematics / P. E. Teachers/ Music, Student Counsellor, Librarian, Lab Attender, Admin Staff, Technician for Primary/ Middle / High School Section.
Apply with C.V. to
The Secretary, Allard Education Society,
St. Charles High School (ICSE), Kammanahalli Main Road, Bengaluru-84.

REAL ESTATE SELLING

Commerical

Koramangala

1748 SQUARE feet warehouse for sale near Passport office. 31 by 56.4 343, 4 Cross, Koramangala 8 Block. Contact 6366245645

Industrial & Factory

Tumkur Road

10 ACRES Sale/ Rent, Built to suit, Industrial Land near Hotel Namasthe, Bangalore. NAIK: 9141326819

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

BUSINESS

Business to Business

Business

WANTED BUSINESS PARTNERS For Saree Business 10 Lakhs Investment Monthly Income 4 Lakhs: 8892501007/ 9606701007

Business Offers

Finance

WE ARRANGE Housing /Mortgage, Construction loan from Financial Institutions. Location Bangalore, Chikkaballapur, Anekal, Chandapura, Devanahalli, Bidadi, Kolar, KGF, Hoskote. Jyothi 8971377299, 9353410567.

Business For Sale

BUSINESS FOR Sale Earn Upto 10L PM Manufacturer of MS Nails Capacity: 175 MTPM Run Rate Sale:10CR Price 75L Contact: 9916335356

PERSONAL

Change of Name

CHANGE OF NAME
WE, **CHANDRA SHEKAR R** & **CHAITRA M,** Residing at No.58, Kaivalya Nilaya, 3rd Cross, Papaiah Layout,Near Devamatha School, Horamavu, Bangalore-560043, have changed our minor son's name from **NEERAJ TEJA C** (old name) to **SRIYAN KISHOR C.** (new name) (DOB 05.09.2019) vide affidavit dated 13.2.2024 before notary Y.R. Chandrasekar, Bengaluru.

I, SOLOMON J (DOB: 14-07-1987) S/o Mr.Joseph, Resident of: No.100, Flat No. S31, Pyramid Bilberry, Chokkanahalli, Yelahanka Bangalore-560064 have changed my name from SOLOMON J to ARVIND KUMAR vide Affidavit Dated 19-02-2024 sworn to before Notary Public G.P.CHAYA, Bangalore

CHANGE OF NAME
I, **ASHARANI SETRU NEELAPPA** R/a 242, 14th A Cross, A Sector, 1st Stage, Yelahanka New Town, Bangalore-64, Karnataka, have changed my name to **ASHA RANI SHETRU C NEELAPPA** vide affidavit dated 17-02-2024 before notary Ashok Raj Gowda, Bellary. Henceforth I shall be called **ASHA RANI SHETRU NEELAPPA** only.

RAMESHWAR DASS, Father/o, 6498221Y, SEP, PRAMOD KUMAR, Vill – Khorra, Matanhail, Jhajjar, Haryana changed name RAMESHWAR DASS to RAMESHWAR, 19/02/2024 Notary K.V. Mani Bangalore

SHANTI, MOTHER/O, 14869346M, HAV, BALRAM SINGH, R/o- Gorota, Hodal, Palwal, Haryana changed name SHANTI to RAM SHRI, 20/02/2024, Notary K.V. Mani, Bangalore

ಜಲಮಂಡಳಿ ವಿರುದ್ಧ ಸ್ವಯಂ ಪ್ರೇರಿತ ದೂರು ದಾಖಲಿಸಿಕೊಂಡಿದ್ದ ಮಾನವ ಹಕ್ಕು ಆಯೋಗ

‘ಪರಿಹಾರಕ್ಕಾಗಿ ಕೋರ್ಟ್ ಮೊರೆ ಹೋಗಿ’


ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಪಘಾತ ಪ್ರಕರಣವೊಂದರಲ್ಲಿ ರಾಜ್ಯ ಮಾನವ ಹಕ್ಕುಗಳ ಆಯೋಗ ದಾಖಲಿಸಿಕೊಂಡಿದ್ದ ಸ್ವಯಂ ಪ್ರೇರಿತ ದೂರನ್ನು ಮುಕ್ತಾಯಗೊಳಿಸಿದ್ದು, ಪರಿಹಾರಕ್ಕಾಗಿ ಬೆಂಗಳೂರು ನೀರು ಸರಬರಾಜು ಹಾಗೂ ಒಳಚರಂಡಿ ಮಂಡಳಿ(ಬಿಡಬ್ಲ್ಯುಎಸ್‌ಎಸ್‌ಬಿ) ವಿರುದ್ಧ ನ್ಯಾಯಾಲಯದ ಮೊರೆ ಹೋಗುವಂತೆ ಆಯೋಗವು ಸೂಚಿಸಿದೆ.

ಕಾಮಾಕ್ಷಿಪಾಳ್ಯ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯ ಮಂಗನಹಳ್ಳಿ ಮುಖ್ಯ-ರಸ್ತೆಯಲ್ಲಿ ಅನುಮತಿ ಪಡೆಯದೇ ಬಿಡಬ್ಲ್ಯುಎಸ್‌ಎಸ್‌ಬಿ ಕಾಮಗಾರಿ ನಡೆಸಿತ್ತು. ಕಾಮಗಾರಿ ನಡೆಸಿದ ಮೇಲೆ ರಸ್ತೆಯನ್ನು ಸರಿಪಡಿಸದೆ ಹಾಗೆಯೇ ಬಿಡಲಾಗಿತ್ತು. ಇದರಿಂದ ರಸ್ತೆ ಸಂಪೂರ್ಣ ಹಾಳಾಗಿತ್ತು. ಅದೇ ಮಾರ್ಗದಲ್ಲಿ ರಾತ್ರಿ ವೇಳೆ ವಿಶೇಷ ಸ್ಕೂಟರ್‌ನಲ್ಲಿ (ಮೂರು ಗಾಲಿ ಚಕ್ರ) ತೆರಳುತ್ತಿದ್ದ ವೃದ್ಧರೊಬ್ಬರು ಆಯತಪ್ಪಿ ಬಿದ್ದು ಸ್ಥಳದಲ್ಲಿಯೇ ಮೃತಪಟ್ಟಿದ್ದರು. ಈ ಸಂಬಂಧ ಆಯೋಗ ಸ್ವಯಂ ಪ್ರೇರಿತ ಪ್ರಕರಣ ದಾಖಲು ಮಾಡಿಕೊಂಡಿತ್ತು.

ಕಾಮಾಕ್ಷಿಪಾಳ್ಯ ಸಂಚಾರ ಠಾಣೆಯಲ್ಲೂ ಪ್ರಕರಣ ದಾಖಲಾಗಿತ್ತು. ಅನುಮತಿ ಪಡೆಯದೆ ರಸ್ತೆಯ ಮಧ್ಯ-ಭಾಗದಲ್ಲಿ ಕಾಮಗಾರಿ ನಡೆಸಿ ರಸ್ತೆಯನ್ನು ಸರಿಪಡಿಸದೆ ಅಪಘಾತಕ್ಕೆ ಕಾರಣರಾದ ಜಲ ಮಂಡಳಿ ಅಧಿಕಾರಿಗಳ ವಿರುದ್ಧ ದೋಷಾರೋಪಪಟ್ಟಿ ಸಲ್ಲಿಕೆ ಆಗಿತ್ತು.

‘ಕಾಮಗಾರಿ ನಡೆಸಿದ ನಂತರ ರಸ್ತೆಯನ್ನು ಮರು ನಿರ್ಮಾಣ ಮಾಡಿರಲಿಲ್ಲ. ಅವೈಜ್ಞಾನಿಕ ಕಾಮಗಾರಿ ನಡೆಸಿದವರನ್ನೇ ಹೊಣೆಗಾರರನ್ನಾಗಿ ಮಾಡುವುದಕ್ಕೆ ಈ ಪ್ರಕರಣ ಎಚ್ಚರಿಕೆ ಗಂಟೆ’ ಎಂದು ಸಂಚಾರ (ಪಶ್ಚಿಮ) ವಿಭಾಗದ ಡಿಸಿಪಿ ಅನಿತಾ ಬಿ. ಹದ್ದಣ್ಣನವರ ತಿಳಿಸಿದ್ದಾರೆ.



ಸಂಚಾರ ಪೊಲೀಸರು ಜಪ್ತಿ ಮಾಡಿಕೊಂಡಿರುವ ಬಿಲ್ ಬೋರ್ಡ್‌ಗಳು.

200 ಬಿಲ್ ಬೋರ್ಡ್ ಜಪ್ತಿ

ಪಾದಚಾರಿ ಮಾರ್ಗದಲ್ಲಿ ಇಟ್ಟದ್ದ 200ಕ್ಕೂ ಹೆಚ್ಚು ಬಿಲ್ ಬೋರ್ಡ್‌ಗಳನ್ನು ಸಂಚಾರ ವಿಭಾಗದ ಪೊಲೀಸರು ಜಪ್ತಿ ಮಾಡಿದ್ದಾರೆ.

ಮಳಿಗೆಗಳ ಎದುರಿನ ಪಾದಚಾರಿ ಮಾರ್ಗದಲ್ಲಿ ಬಿಲ್ ಬೋರ್ಡ್ ಇಡಲಾಗಿತ್ತು. ಇದರಿಂದ ಸಾರ್ವಜನಿಕರ ಓಡಾಟಕ್ಕೆ ತೊಂದರೆ ಆಗಿತ್ತು. ಸುಗಮ ಸಂಚಾರಕ್ಕೆ ಅನುವು ಮಾಡಿಕೊಡಲು ವಿಶೇಷ ಕಾರ್ಯಾಚರಣೆ ನಡೆಸಲಾಯಿತು ಎಂದು ಪೊಲೀಸರು ಹೇಳಿದರು.

ಪದೇ ಪದೇ ನಿಯಮ ಉಲ್ಲಂಘಿಸಿದ ಅಂಗಡಿ ಮಾಲೀಕರ ವಿರುದ್ಧ ಕಲಂ 283 ಐಪಿಸಿ ಅಡಿಯಲ್ಲಿ ಒಟ್ಟು 23 ಪ್ರಕರಣ, ಕೆಪಿ ಆ್ಯಕ್ಟ್ ಅಡಿ ಒಟ್ಟು 5 ಪ್ರಕರಣ ದಾಖಲು ಮಾಡಿಕೊಳ್ಳಲಾಗಿದೆ ಎಂದು ಪೊಲೀಸರು ಹೇಳಿದರು.

ವ್ಹೀಲಿಂಗ್–ಪ್ರಕರಣ ದಾಖಲು

ಜಯನಗರ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯ ಸೌತ್ ಎಂಡ್ ಸರ್ಕಲ್ ಬಳಿಯ ಬೈಕ್‌ನಲ್ಲಿ ವ್ಹೀಲಿಂಗ್ ಮಾಡುತ್ತಿದ್ದ ಸವಾರ ಜಮೀರ್ ವಿರುದ್ಧ ಎಫ್‌ಐಆರ್ ದಾಖಲಾಗಿದೆ.

ಸಾರ್ವಜನಿಕರ ಸುಗಮ ಸಂಚಾರಕ್ಕೆ ಅಡ್ಡಿ ಉಂಟು ಮಾಡುವಂತೆ ಸವಾರ ಬೈಕ್‌ನಲ್ಲಿ ವ್ಹೀಲಿಂಗ್ ಮಾಡುತ್ತಿದ್ದ. ಬೈಕ್ ಜಪ್ತಿ ಮಾಡಿಕೊಳ್ಳಲಾಗಿದೆ ಎಂದು ಸಂಚಾರ ಪೊಲೀಸರು ಹೇಳಿದರು.

ವ್ಯತ್ಯಯದ ತೆರಿಗೆಗೆ ಬಲವಂತ ಬೇಡ: ಹೈಕೋರ್ಟ್ ಆದೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಕಾಯ್ದೆ-2020ರ ಕಲಂ 144 (15) (ಇ) ಅಡಿ ಆದೇಶ ಹೊರಡಿಸುವ ಮುನ್ನವೇ, ನಿಗದಿಗಿಂತಲೂ ಕಡಿಮೆ ತೆರಿಗೆಯ ಅಂದಾಜು ಮಾಡಲಾಗಿದೆ ಎಂದು ವ್ಯತ್ಯಯದ ಶೇ 50ರಷ್ಟು ತೆರಿಗೆ ಪಾವತಿಸಲು ಬಲವಂತ ಮಾಡುವಂತಿಲ್ಲ’ ಎಂದು ಹೈಕೋರ್ಟ್ ಬಿಬಿಎಂಪಿಗೆ ಆದೇಶಿಸಿದೆ.

ಆಸ್ತಿ ತೆರಿಗೆ ಪಾವತಿಗೆ ಸಂಬಂಧಿಸಿದಂತೆ ಬಿಬಿಎಂಪಿ ನೀಡಿದ್ದ ನೋಟಿಸ್‌ಗಳನ್ನು ಪ್ರಶ್ನಿಸಿ ಗೋಪಾಲನ್ ಮಾಲ್ ಪರವಾಗಿ ಸಲ್ಲಿಸಲಾಗಿರುವ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಸ್. ಸುನಿಲ್ ದತ್ ಯಾದವ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದ್ದು, ಮಾಲ್‌ಗೆ ನೀಡಲಾಗಿದ್ದ ತೆರಿಗೆ ನೋಟಿಸ್‌ಗಳಿಗೆ ಮಧ್ಯಂತರ ತಡೆ ನೀಡಿದೆ.

ವಿಚಾರಣೆ ವೇಳೆ ಅರ್ಜಿದಾರರ ಪರ ವಕೀಲರು, ‘ವಲಯ ಜಂಟಿ ಆಯುಕ್ತರು 2015ರ ಮಾರ್ಚ್ 20ರಂದು ಸ್ಥಳ ಪರಿಶೀಲನೆ ನಡೆಸಿ ಆಸ್ತಿ ತೆರಿಗೆ ನಿಗದಿಪಡಿಸಿದ್ದರು. ಅದರಂತೆ ತೆರಿಗೆ ಪಾವತಿಸಲಾಗುತ್ತಿತ್ತು. ಆದರೆ, ಆಸ್ತಿ ತೆರಿಗೆಯನ್ನು ಮರು ನಿಗದಿ ಮಾಡುವ ಅವಶ್ಯಕತೆ ಇರಲಿಲ್ಲ. ಆದರೂ ಮರು ನಿಗದಿ ಮಾಡಿ ವ್ಯತ್ಯಯವಾಗಿದೆ ಎನ್ನಲಾದ ತೆರಿಗೆ ಮೊತ್ತಕ್ಕೆ ಬೇಡಿಕೆ ಇಟ್ಟಿರುವುದು ಕಾನೂನು ಬಾಹಿರ. ಜತೆಗೆ ಬಿಬಿಎಂಪಿ ತೆರಿಗೆ ಪಾವತಿಸಿದ ಐದು ವರ್ಷಗಳ ನಂತರ ಮತ್ತೆ ಮರು ನಿಗದಿಗೆ ಅವಕಾಶವಿಲ್ಲ’ ಎಂದು ನ್ಯಾಯಪೀಠಕ್ಕೆ ಪ್ರತಿಪಾದಿಸಿದರು.

ವಾದ-ಪ್ರತಿವಾದ ಆಲಿಸಿದ ನ್ಯಾಯಪೀಠ, ‘ಬಿಬಿಎಂಪಿ ತಾನು ಹೊರಡಿಸುವ ಮಾರ್ಗಸೂಚಿ (ಎಸ್‌ಒಪಿ) ಅನ್ವಯ ಶೇ 50ರಷ್ಟು ತೆರಿಗೆ ಮೊತ್ತಕ್ಕೆ ಮಾಲೀಕರಿಗೆ ಬಲವಂತ ಮಾಡುತ್ತಿರುವುದು ಕೋರ್ಟ್ ಗಮನಕ್ಕೆ ಬಂದಿದೆ. ಮಾಲೀಕರು ಅಂತಹ ತೆರಿಗೆ ಬೇಡಿಕೆ ನೋಟಿಸ್ ಉತ್ತರ ನೀಡಲಿಲ್ಲ ಎಂದಾಗ ಶೇ 50 ರಷ್ಟು ಪಾವತಿಗೆ ಒತ್ತಾಯ ಹೇರಬಹುದು. ಆದರೆ ಅದಕ್ಕೂ ಮುನ್ನವೇ ಬಲವಂತ ಮಾಡುವಂತಿಲ್ಲ’ ಎಂದು ನುಡಿಯಿತು.

ಪ್ರಕರಣವೇನು?: 2008-09ರಿಂದ 2022-23ರ ಅವಧಿಯವರೆಗಿನ ವ್ಯತ್ಯಯದ ₹ 19.7 ಕೋಟಿ ಆಸ್ತಿ ತೆರಿಗೆ ಪಾವತಿಸುವಂತೆ ಬಿಬಿಎಂಪಿ 2023ರ ಅಕ್ಟೋಬರ್ 3ರಂದು ನೀಡಿದ್ದ ನೋಟಿಸ್ ಅನ್ನು ಗೋಪಾಲನ್ ಮಾಲ್ ಪ್ರಶ್ನಿಸಿದೆ. ಅಂತೆಯೇ 2024ರ ಜನವರಿ 22ರಂದು ಮತ್ತೊಂದು ನೋಟಿಸ್ ನೀಡಿದ್ದ ಪಾಲಿಕೆ, ಇದೇ ಅವಧಿಗೆ ₹ 29.5 ಕೋಟಿ ತೆರಿಗೆ ಪಾವತಿಸಲು ಸೂಚಿಸಿತ್ತು. ಇದನ್ನೂ ಅರ್ಜಿದಾರರು ಪ್ರಶ್ನಿಸಿದ್ದಾರೆ.

‘ತೆರಿಗೆ ನೋಟಿಸ್‌ಗೆ ಉತ್ತರಿಸಲು ಬಿಬಿಎಂಪಿ ಕಾಯ್ದೆಯ ಕಲಂ 144 (15) (ಇ) ಅಡಿ 30 ದಿನ ಸಮಯ ಕೇಳಿದ್ದರೂ ಪುನಃ ನೋಟಿಸ್ ನೀಡಲಾಗಿದೆ. ಹಾಗಾಗಿ, ತಡೆ ನೀಡಬೇಕು’ ಎಂದು ಅರ್ಜಿದಾರರು ಕೋರಿದ್ದಾರೆ.

ಹುಲಿ ಉಗುರು ವಾಪಸ್: ಮಧ್ಯಂತರ ತಡೆ

ಪ್ರಜಾವಾಣಿ ವಾರ್ತೆ

ಹೈಕೋರ್ಟ್ ಸುದ್ದಿ

ಬೆಂಗಳೂರು: ‘ವನ್ಯಜೀವಿಗಳ ದೇಹದ ಯಾವುದೇ ಭಾಗ ಅಥವಾ ವಸ್ತುಗಳ ಸಂಗ್ರಹ ಕಾನೂನುಬಾಹಿರವಾಗಿದ್ದು ಅಂತಹ ವಸ್ತುಗಳು ಇದ್ದಲ್ಲಿ ಅವುಗಳನ್ನು ಸ್ಥಳೀಯ ಅರಣ್ಯಾಧಿಕಾರಿಗಳ ವಶಕ್ಕೆ ಒಪ್ಪಿಸಬೇಕು’ ಎಂದು ಘೋಷಿಸಿ ರಾಜ್ಯ ಸರ್ಕಾರ ಹೊರಡಿಸಿದ್ದ ಅಧಿಸೂಚನೆ ಹಾಗೂ ಈ ಸಂಬಂಧ ಅರಣ್ಯಾಧಿಕಾರಿಗಳು ಅರ್ಜಿದಾರರಿಗೆ ನೀಡಿದ್ದ ನೋಟಿಸ್‌ಗೆ ಹೈಕೋರ್ಟ್ ಮಧ್ಯಂತರ ತಡೆ ನೀಡಿದೆ.

ಅಧಿಸೂಚನೆ ಮತ್ತು ನೋಟಿಸ್ ಪ್ರಶ್ನಿಸಿ ಕೊಡಗು ಜಿಲ್ಲೆ ವಿರಾಜಪೇಟೆಯ ಪಿ.ಎ.ರಂಜಿ ಪೂಣಚ್ಚ ಮತ್ತು ನಾಪೋಕ್ಲುವಿನ ಕೆ.ಎ.ಕುಟ್ಟಪ್ಪ ಸಲ್ಲಿಸಿದ್ದ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ವಿಚಾರಣೆ ನಡೆಸಿ ಈ ಕುರಿತಂತೆ ಆದೇಶಿಸಿದೆ.

ಅರಣ್ಯ ಇಲಾಖೆ ಪ್ರಧಾನ ಕಾರ್ಯದರ್ಶಿ ಸೇರಿದಂತೆ ಒಟ್ಟು ಏಳು ಜನ ಪ್ರತಿವಾದಿಗಳಿಗೆ ನೋಟಿಸ್ ಜಾರಿಗೆ ಆದೇಶಿಸಿರುವ ನ್ಯಾಯಪೀಠ ವಿಚಾರಣೆಯನ್ನು ಮಾರ್ಚ್ 18ಕ್ಕೆ ಮುಂದೂಡಿದೆ.

‘ರಸ್ತೆ ಅಭಿವೃದ್ಧಿ: ವಿವರ ಸಲ್ಲಿಸಿ’

‘ದಾಸರಹಳ್ಳಿ ವಿಧಾನಸಭಾ ಕ್ಷೇತ್ರದ ಏಳು ವಾರ್ಡ್‌ಗಳಲ್ಲಿ ಹಾಳಾಗಿರುವ ರಸ್ತೆಗಳ ಅಭಿವೃದ್ಧಿ ಹಾಗೂ ಡಾಂಬರೀಕರಣ ಕಾರ್ಯ ಪೂರ್ಣಗೊಳಿಸುವ ಕಾಲ ಮಿತಿಯ ವಿವರವನ್ನು ಒಂದು ವಾರದಲ್ಲಿ ಸಲ್ಲಿಸಿ’ ಎಂದು ಬಿಬಿಎಂಪಿಗೆ ಹೈಕೋರ್ಟ್ ನಿರ್ದೇಶಿಸಿದೆ.

‘ದಾಸರಹಳ್ಳಿ ವಿಧಾನಸಭಾ ಕ್ಷೇತ್ರದ ವಾರ್ಡ್‌ಗಳಲ್ಲಿನ ರಸ್ತೆಗಳು ಹಾಳಾಗಿದ್ದರೂ ದುರಸ್ತಿ ಕಾಮಗಾರಿ ನಡೆಯುತ್ತಿಲ್ಲ’ ಎಂದು ಆರೋಪಿಸಿ ವಕೀಲ ಅಶ್ವತ್ಥ್ ನಾರಾಯಣ ಚೌಧರಿ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಪಿ.ಎಸ್.ದಿನೇಶ್ ಕುಮಾರ್ ನೇತೃತ್ವದ ವಿಭಾಗೀಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಅರ್ಜಿದಾರರ ಪರ ವಕೀಲ ಜಿ.ಆರ್.ಮೋಹನ್, ‘ಈ ಅರ್ಜಿಯನ್ನು 2021ರಲ್ಲಿ ಸಲ್ಲಿಸಲಾಗಿದೆ. ಕ್ಷೇತ್ರದ ಏಳು ವಾರ್ಡ್‌ಗಳಲ್ಲಿನ ರಸ್ತೆಗಳ ಪರಿಸ್ಥಿತಿ ಆಗ ಹೇಗಿತ್ತೊ, ಈಗಲೂ ಅದೇ ಪರಿಸ್ಥಿತಿ ಇದೆ’ ಎಂದರು.

‘ರಸ್ತೆಗಳ ಅಭಿವೃದ್ಧಿಗೆ ₹ 110 ಕೋಟಿ ಬಿಡುಗಡೆ ಮಾಡಿರುವುದಾಗಿ ಸರ್ಕಾರ ಹಾಗೂ ಬಿಬಿಎಂಪಿ 2022ರ ಮಾರ್ಚ್ 23ರಂದು ಹೈಕೋರ್ಟ್‌ಗೆ ತಿಳಿಸಿದ್ದವು. ಈ ಹೇಳಿಕೆಯನ್ನು ನ್ಯಾಯಪೀಠ ದಾಖಲಿಸಿಕೊಂಡಿತ್ತು. ಆದರೆ, ಮಂಜೂರು ಮಾಡಿದ್ದ ₹ 110 ಕೋಟಿ ಹಣವನ್ನು ವಾಪಸ್ ಪಡೆದುಕೊಳ್ಳಲಾಗಿದೆ’ ಎಂದು ಆರೋಪಿಸಿದರು.

ಇದಕ್ಕೆ ಬಿಬಿಎಂಪಿ ಪರ ವಕೀಲ ಎನ್.ಕೆ.ರಮೇಶ್, ‘ಹಣ ಮಂಜೂರಾಗಿದ್ದು, ರಸ್ತೆಗಳ ಡಾಂಬರೀಕರಣಕ್ಕೆ ಅನುಮತಿಸಲಾಗಿದೆ. ಡಾಂಬರೀಕರಣ ಕಾರ್ಯ ಪೂರ್ಣಗೊಳಿಸುವ ಕಾಲಮಿತಿ ಕುರಿತ ವಿವರವನ್ನು ಒಂದೆರಡು ದಿನಗಳಲ್ಲಿ ನ್ಯಾಯಪೀಠಕ್ಕೆ ಒದಗಿಸಲಾಗುವುದು’ ಎಂದು ತಿಳಿಸಿದರು.

ಸುಧಾ, ಮಯೂರ ಓದಿರಿ

ನಾಳೆ ವಕೀಲರಿಂದ ವಿಧಾನಸೌಧ ಚಲೋ: ಮುಂದುವರಿದ ಅಹೋರಾತ್ರಿ ಧರಣಿ

ಶಕ್ತಿ ಪ್ರದರ್ಶನಕ್ಕೆ ಸಜ್ಜಾದ ವಕೀಲರು

ಪ್ರಜಾವಾಣಿ ವಾರ್ತೆ

ರಾಮನಗರ: ನಲವತ್ತು ವಕೀಲರ ವಿರುದ್ಧ ಪ್ರಕರಣ ದಾಖಲಿಸಿದ ಐಜೂರು ಪೊಲೀಸ್ ಠಾಣೆಯ ಪಿಎಸ್ಐ ಸಯ್ಯದ್ ತನ್ವೀರ್ ಹುಸೇನ್ ಅಮಾನತಿಗೆ ಆಗ್ರಹಿಸಿ ಒಂಬತ್ತು ದಿನಗಳಿಂದ ಧರಣಿ ನಡೆಸುತ್ತಿರುವ ವಕೀಲರು ಹೋರಾಟವನ್ನು ರಾಜ್ಯಮಟ್ಟಕ್ಕೆ ಕೊಂಡೊಯ್ಯಲು ನಿರ್ಧರಿಸಿದ್ದಾರೆ.

ಬೆಂಗಳೂರಿನಲ್ಲಿ ಫೆ. 22ರಂದು ಬೃಹತ್ ಪ್ರತಿಭಟನಾ ರ‍್ಯಾಲಿ ಮತ್ತು ವಿಧಾನಸೌಧ ಚಲೋ ಹಮ್ಮಿಕೊಂಡಿದ್ದು ರಾಜಧಾನಿಯಲ್ಲಿ ಶಕ್ತಿ ಪ್ರದರ್ಶನಕ್ಕೆ ಮುಂದಾಗಿದ್ದಾರೆ. ಜಿಲ್ಲಾಧಿಕಾರಿ ಕಚೇರಿ ಎದುರು ನಡೆಯುತ್ತಿರುವ ಅಹೋರಾತ್ರಿ ಧರಣಿ ಮಂಗಳವಾರ ಎರಡು ದಿನ ಪೂರೈಸಿದೆ. ರಾತ್ರಿ ಡಿ.ಸಿ ಕಚೇರಿ ಎದುರು ಮಲಗಿದ್ದ ವಕೀಲರು, ಬೆಳಿಗ್ಗೆ ಎಂದಿನಂತೆ ತಮ್ಮ ಧರಣಿ ಆರಂಭಿಸಿದರು. 10 ಗಂಟೆ ಹೊತ್ತಿಗೆ ಮಹಿಳಾ ವಕೀಲರು ಸೇರಿದಂತೆ ಅಕ್ಕಪಕ್ಕದ ತಾಲ್ಲೂಕುಗಳ ವಕೀಲರು ಸಹ ಧರಣಿಯಲ್ಲಿ ಸೇರಿಕೊಂಡರು. ಪಿಎಸ್ಐ ಅಮಾನತಿಗೆ ಆಗ್ರಹಿಸುವ ಜೊತೆಗೆ, ಜಿಲ್ಲಾಧಿಕಾರಿ, ಪೊಲೀಸ್ ವರಿಷ್ಠಾಧಿಕಾರಿ ಹಾಗೂ ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಅಕ್ಕಪಕ್ಕದ ಜಿಲ್ಲೆ ಮತ್ತು ತಾಲ್ಲೂಕುಗಳಿಂದ ಬಂದಿದ್ದ ವಕೀಲರ ಸಂಘದ ಪದಾಧಿಕಾರಿಗಳು ಧರಣಿ ಬೆಂಬಲಿಸಿ ಮಾತನಾಡಿದರು. ಧರಣಿ ನಿರತ ಸ್ಥಳಕ್ಕೆ ಬಿಜೆಪಿಯ ವಿಧಾನ ಪರಿಷತ್ ಸದಸ್ಯ ಸಿ.ಪಿ. ಯೋಗೇಶ್ವರ್, ಮುಖಂಡ ಗೌತಮ್ ಗೌಡ ಹಾಗೂ ಸ್ಥಳೀಯ ಬಿಜೆಪಿ ಮುಖಂಡರು ಭೇಟಿ ನೀಡಿ ಹೋರಾಟಕ್ಕೆ ಬೆಂಬಲ ವ್ಯಕ್ತಪಡಿಸಿದರು. ವಕೀಲರನ್ನು ಉದ್ದೇಶಿಸಿ ಮಾತನಾಡಿದ ಮುಖಂಡರು, ಸಮಸ್ಯೆ ಪರಿಹರಿಸದ ಜಿಲ್ಲಾಡಳಿತ, ಸರ್ಕಾರದ ವಿರುದ್ಧ ಬೇಸರ ವ್ಯಕ್ತಪಡಿಸಿದರು.

ಡಿಸಿಎಂ ಉದ್ಧಟತನ: 'ವಕೀಲರ ಪ್ರತಿಭಟನೆಗೆ ಸಂಬಂಧಿಸಿದಂತೆ ನನ್ನನ್ನು ಯಾರೂ ಸಂಪರ್ಕಿಸಿಲ್ಲವೆಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಉದ್ಧಟತನದ ಮಾತನಾಡಿದ್ದಾರೆ' ಎಂದು ರಾಜ್ಯ ವಕೀಲರ ಪರಿಷತ್ತು ಅಧ್ಯಕ್ಷ ವಿಶಾಲ್ ರಘು ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಜಿಲ್ಲಾ ಕೇಂದ್ರದಲ್ಲಿ 9 ದಿನಗಳಿಂದ ನಡೆಯುತ್ತಿರುವ ಹೋರಾಟದ ಬಗ್ಗೆ ಮಾಧ್ಯಮಗಳಲ್ಲಿ ನಿತ್ಯ ವರದಿಯಾಗುತ್ತಿದೆ. ಹೀಗಿದ್ದರೂ ನಾವು ನಿಮ್ಮ ಬಳಿ ಬರಬೇಕಾ? ಹೋರಾಟದ ಕುರಿತು ಜಿಲ್ಲಾಡಳಿತ ಹಾಗೂ ನಿಮ್ಮ ಪಕ್ಷದ ಸ್ಥಳೀಯ ಶಾಸಕರು ನಿಮಗೆ ಮಾಹಿತಿ ನೀಡಿಲ್ಲವೇ?' ಎಂದು ಪ್ರಶ್ನಿಸಿದರು.

'ಪಿಎಸ್ಐ ಅಮಾನತು ಮಾಡಿದರೆ ನನ್ನ ಮರ್ಯಾದೆ ಹೋಗುತ್ತದೆ ಎಂದು ಸ್ಥಳೀಯ ಶಾಸಕರು ಹೇಳಿದ್ದಾರೆ. ಜಿಲ್ಲಾಧಿಕಾರಿ, ಪೊಲೀಸ್ ವರಿಷ್ಠಾಧಿಕಾರಿ ಸೇರಿದಂತೆ ಇಡೀ ಜಿಲ್ಲಾಡಳಿತ ಡಿ.ಕೆ ಸಹೋದರರ ಕೈಗೊಂಬೆಯಾಗಿದೆ. ಹೀಗಿದ್ದರೂ, ಡಿಸಿಎಂ ಅವರು ಹೋರಾಟ ರಾಜಕೀಯ ಪ್ರೇರಿತ ಎಂದಿರುವುದು ನಾಚಿಕೆಗೇಡು' ಎಂದರು.

'ನಾವು ಗಾಂಧೀಜಿ ಭಾವಚಿತ್ರದೊಂದಿಗೆ ಶಾಂತಿಯುತ ಹೋರಾಟ ಮಾಡುತ್ತಿದ್ದೇವೆ. ಹಿಂದೆ ವಕೀಲರ ಸಮ್ಮೇಳನ ಕುರಿತು ನಿಮ್ಮನ್ನು ಸಂಪರ್ಕಿಸಿದಾಗ ನೀವು ಹೇಗೆ ನಡೆದುಕೊಂಡಿರಿ ಎಂಬುದು ಗೊತ್ತಿದೆ. ಇನ್ನು ಮುಂದೆ ನಾವು ಯಾರನ್ನೂ ಭೇಟಿ ಮಾಡುವುದಿಲ್ಲ. ಅವರೇ ಬಂದು ಭೇಟಿ ಮಾಡಬೇಕು. ನಮ್ಮ ಹೋರಾಟ ಮುಂದುವರಿಯಲಿದೆ' ಎಂದು ಹೇಳಿದರು



ರಾಮನಗರ ಜಿಲ್ಲಾಧಿಕಾರಿ ಕಚೇರಿ ಬಳಿ ವಕೀಲರು ಮಂಗಳವಾರ ಧರಣಿ ಮುಂದುವರಿಸಿದರು

ಮುಖ್ಯಾಂಶಗಳು

- ನಲವತ್ತು ವಕೀಲರ ವಿರುದ್ಧ ಪ್ರಕರಣ
- ಪಿಎಸ್ಐ ಸಯ್ಯದ್ ತನ್ವೀರ್ ಹುಸೇನ್ ಅಮಾನತಿಗೆ ಆಗ್ರಹ

ಪಿಎಸ್ಐ ಅಮಾನತಿಗೆ ವಿಪಕ್ಷ ಸದಸ್ಯರ ಪಟ್ಟು

ಬೆಂಗಳೂರು: ಜಿಲ್ಲಾ ವಕೀಲರ ಸಂಘದ 40 ವಕೀಲರ ಮೇಲೆ ಎಫ್ಐಆರ್ ದಾಖಲಿಸಿರುವ ಪೊಲೀಸರ ಕ್ರಮ ಖಂಡಿಸಿ ರಾಮನಗರದಲ್ಲಿ ನಡೆಯುತ್ತಿರುವ ಪ್ರತಿಭಟನೆ ವಿಧಾನಸಭೆಯಲ್ಲಿಯೂ ಮಂಗಳವಾರ ಪ್ರತಿಧ್ವನಿಸಿತು.

ಪ್ರಕರಣ ದಾಖಲಿಸಿದ ಐಜೂರು ಪೊಲೀಸ್ ಠಾಣೆಯ ಪಿಎಸ್ಐ ಅವರನ್ನು ಅಮಾನತು ಮಾಡಬೇಕು, ವಕೀಲ ಚಾಂದ್‌ಪಾಷಾನನ್ನು ಗಡಿಪಾರು ಮಾಡಬೇಕು ಎಂದು ಪಟ್ಟುಹಿಡಿದು ಬಿಜೆಪಿ ಮತ್ತು ಜೆಡಿಎಸ್ ಸದಸ್ಯರು ಸಭಾಧ್ಯಕ್ಷರ ಪೀಠದ ಎದುರು ಧರಣಿ ನಡೆಸಿದರು. ಈ ವೇಳೆ ಆಡಳಿತ– ಬಿಜೆಪಿ ಸದಸ್ಯರ ಮಧ್ಯೆ ವಾಗ್ವಾದವೂ ನಡೆಯಿತು.

ಶೂನ್ಯವೇಳೆಯಲ್ಲಿ ವಿರೋಧ ಪಕ್ಷದ ನಾಯಕ ಆರ್. ಅಶೋಕ ವಿಷಯ ಪ್ರಸ್ತಾಪಿಸಿದರು. ಗೃಹ ಸಚಿವ ಜಿ. ಪರಮೇಶ್ವರ ನೀಡಿದ ಉತ್ತರಕ್ಕೆ ಸಮಾಧಾನಗೊಳ್ಳದ ಬಿಜೆಪಿ– ಜೆಡಿಎಸ್ ಸದಸ್ಯರು, ಸರ್ಕಾರದ ವಿರುದ್ಧ ಘೋಷಣೆ ಕೂಗಿದರು.

ಸದನ ಮುಂದೂಡಿದ ಸಭಾಧ್ಯಕ್ಷ ಯು.ಟಿ. ಖಾದರ್, ಆಡಳಿತ– ವಿರೋಧ ಪಕ್ಷದ ಸದಸ್ಯರನ್ನು ತಮ್ಮ ಕೊಠಡಿಗೆ ಕರೆಯಿಸಿ ಸಂಧಾನ ನಡೆಸಿದರು. ಮತ್ತೆ ಕಲಾಪ ಆರಂಭವಾದಾಗ, ಈ ಪ್ರಕರಣಕ್ಕೆ ಕುರಿತಂತೆ ಬುಧವಾರ ಮತ್ತೊಮ್ಮೆ ಉತ್ತರ ನೀಡುವುದಾಗಿ ಪರಮೇಶ್ವರ ಭರವಸೆ ನೀಡಿದ್ದರಿಂದ ಧರಣಿ ಕೈಬಿಡಲಾಯಿತು.

ರಾಮಗರದ ಐಜೂರಿನಲ್ಲಿ ನಡೆದ ಪ್ರಕರಣವನ್ನು ಬಿಚ್ಚಿಟ್ಟ ಆರ್. ಅಶೋಕ, 'ವಕೀಲ ಚಾಂದ್‌ಪಾಷಾ ಅವಾಚ್ಯ ಶಬ್ದಗಳಿಂದ ಸಾಮಾಜಿಕ ಜಾಲತಾಣದಲ್ಲಿ ನಿಂದಿಸಿದ್ದಾನೆ. ಆತನ ಬೆಂಬಲಿಗರು ವಕೀಲರ ಸಭೆ ನಡೆಸುತ್ತಿದ್ದ ವೇಳೆ ದಾಂಧಲೆ ನಡೆಸಿರುವ ಬಗ್ಗೆ ದೂರು ನೀಡಿದರೂ ಪೊಲೀಸರು ಪ್ರಕರಣ ದಾಖಲಿಸಿಕೊಂಡಿಲ್ಲ. ಆದರೆ, ಚಾಂದ್‌ಪಾಷಾ ಬೆಂಬಲಿಗರು ನೀಡಿದ ದೂರಿನ ಮೇರೆಗೆ 40 ವಕೀಲರ ವಿರುದ್ಧ ಎಫ್ಐಆರ್ ದಾಖಲಿಸಲಾಗಿದೆ' ಎಂದು ಕಿಡಿಕಾರಿದರು.

ಅದಕ್ಕೆ ಉತ್ತರಿಸಿದ ಪರಮೇಶ್ವರ, 'ಚಾಂದ್‌ಪಾಷಾ ವಿರುದ್ಧ ಕಾನೂನು ಕ್ರಮ ತೆಗೆದುಕೊಳ್ಳಲಾಗಿದೆ. ಪಿಎಸ್ಐ ತಮ್ಮ ಕರ್ತವ್ಯ ನಿಭಾಯಿಸಿದ್ದಾರೆ. ಆದರೂ, ತನಿಖೆ ನಡೆಸಿ ವರದಿ ನೀಡುವಂತೆ ಚನ್ನಪಟ್ಟಣ ಡಿವೈಎಸ್‌ಪಿಗೆ ಸೂಚಿಸಲಾಗಿದೆ. ವರದಿ ಬಂದ ಬಳಿಕ ಕಾನೂನು ಕ್ರಮ ಜರುಗಿಸಲಾಗುವುದು' ಎಂದರು.

ಸಚಿವರ ಉತ್ತರಕ್ಕೆ ತೀವ್ರ ಆಕ್ಷೇಪ ವ್ಯಕ್ತಪಡಿಸಿದ ಬಿಜೆಪಿಯ ಬಸವರಾಜ ಬೊಮ್ಮಾಯಿ, ಬಸನಗೌಡ ಪಾಟೀಲ ಯತ್ನಾಳ ಅವರು ಪಿಎಸ್ಐ ಅಮಾನತಿಗೆ ಆಗ್ರಹಿಸಿದರು.

ಈ ಮಧ್ಯೆಯೇ, ಕೆಲವು ಮಸೂದೆಗಳ ಮಂಡನೆಗೆ ಮತ್ತು ಅಂಗೀಕಾರಕ್ಕೆ ಸಭಾಧ್ಯಕ್ಷರು ಅವಕಾಶ ಮಾಡಿಕೊಟ್ಟರು. ಸಭಾಧ್ಯಕ್ಷರ ಈ ನಡೆಗೆ ಆರ್. ಅಶೋಕ ಮತ್ತು ಇತರ ಸದಸ್ಯರು ತೀವ್ರ ಆಕ್ಷೇಪ ವ್ಯಕ್ತಪಡಿಸಿದರು.


ಪಿಎಸ್ಐ ಅಮಾನತು ಮಾಡುವವರೆಗೂ ಹೋರಾಟ ನಿಲ್ಲುವುದಿಲ್ಲ. ಪ್ರತಿಭಟನೆ, ಅಹೋರಾತ್ರಿ ಧರಣಿಗೂ ಜಿಲ್ಲಾಡಳಿತ ಸ್ಪಂದಿಸಿಲ್ಲ. ಹಾಗಾಗಿ ನ್ಯಾಯಕ್ಕಾಗಿ ಬೆಂಗಳೂರು ಚಲೋ ಹಮ್ಮಿಕೊಂಡಿದ್ದೇವೆ

ವಿಶಾಲ್ ರಘು, ಅಧ್ಯಕ್ಷ, ರಾಜ್ಯ ವಕೀಲರ ಪರಿಷತ್ತು

ರಾಜ್ಯದಾದ್ಯಂತ ವಕೀಲರನ್ನು ಸಂಘಟಿಸಿ, ನ್ಯಾಯಕ್ಕಾಗಿ ಎಲ್ಲರೂ ರಾಜಧಾನಿಗೆ ಬರುವಂತೆ ಮಾಡುವ ದೃಷ್ಟಿಯಿಂದ ಬೆಂಗಳೂರು ಚಲೋ ಹೋರಾಟವನ್ನು ಫೆ. 21ರ ಬದಲು 22ಕ್ಕೆ ನಿಗದಿ ಮಾಡಲಾಗಿದೆ

ತಿಮ್ಮೇಗೌಡ, ಕಾರ್ಯದರ್ಶಿ, ರಾಮನಗರ ಜಿಲ್ಲಾ ವಕೀಲರ ಸಂಘ

'ಸಿ.ಎಂ ಮಧ್ಯ ಪ್ರವೇಶಿಸಬೇಕು'



ಸಿ.ಪಿ. ಯೋಗೇಶ್ವರ್

'ವಕೀಲರ ಹೋರಾಟದ ವಿಷಯದಲ್ಲಿ ವಕೀಲರಾಗಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮಧ್ಯ ಪ್ರವೇಶಿಸಬೇಕು. ಡಿ.ಕೆ. ಸಹೋದರರಿಗೆ ಬುದ್ಧಿ ಹೇಳಿ ಪರಿಹರಿಸಬೇಕು. ಇಷ್ಟು ದಿನವಾದರೂ ಸಮಸ್ಯೆ ಬಗೆಹರಿಯದಿರುವುದನ್ನು ನೋಡಿದರೆ, ಮುಖ್ಯಮಂತ್ರಿ ಸೇರಿದಂತೆ ಎಲ್ಲರೂ ಸಹೋದರರಿಗೆ ಭಯಪಡುತ್ತಾರೆ. ಅದಕ್ಕಾಗಿಯೇ, ಯಾರೂ ವಕೀಲರ ಸಮಸ್ಯೆ ಪರಿಹರಿಸಲು ಮುಂದಾಗುತ್ತಿಲ್ಲ' ಎಂದು ವಿಧಾನ ಪರಿಷತ್ ಸದಸ್ಯ ಸಿ.ಪಿ. ಯೋಗೇಶ್ವರ್ ಹೇಳಿದರು.

ವಕೀಲರನ್ನು ಭೇಟಿ ಮಾಡಿದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಜಿಲ್ಲೆಯ ಅಧಿಕಾರಿಗಳು ಡಿ.ಕೆ ಸಹೋದರರ ಕೈಗೊಂಬೆಯಾಗಿದ್ದಾರೆ. ಇಲ್ಲಿ ಕೆಲಸ ಮಾಡುವುದೇ ಕಷ್ಟವಾಗಿದೆ. ಹಾಗಾಗಿ, ಜಿಲ್ಲೆಗೆ ಬರಲು ಅಧಿಕಾರಿಗಳು ಭಯಪಡುತ್ತಾರೆ. ಬಂದರೂ, ಅವರು ಹೇಳಿದಂತೆ ಕೇಳಿಕೊಂಡು ಹೋಗುತ್ತಾರೆ. ಜಿಲ್ಲಾಡಳಿತ ಸಂಪೂರ್ಣ ಕುಸಿದಿದೆ. ತನ್ನ ಶಿಷ್ಯನಾಗಿರುವ ರಾಮನಗರ ಶಾಸಕರನ್ನು ರಕ್ಷಿಸಲು ಸಂಸದ ಡಿ.ಕೆ. ಸುರೇಶ್ ಸುಮ್ಮನಿದ್ದಾರೆ. ಅವರ ದುರಹಂಕಾರಕ್ಕೆ ಜನ ತಕ್ಕ ಪಾಠ ಕಲಿಸುತ್ತಾರೆ' ಎಂದು ಹೇಳಿದರು

ಬಿಬಿಎಂಪಿಯಿಂದ ಕರಡು ಅಧಿಸೂಚನೆ ಪ್ರಕಟ

ಮಾರ್ಗಸೂಚಿ ದರ, ನಿರ್ಮಾಣ ವೆಚ್ಚ ಆಧರಿಸಿ ಆಸ್ತಿ ತೆರಿಗೆ ನಿಗದಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಿವೇಶನದ ಮಾರ್ಗಸೂಚಿ ದರ ಹಾಗೂ ಕಟ್ಟಡ ನಿರ್ಮಾಣ ವೆಚ್ಚದ ಮೇಲೆ ಆಸ್ತಿ ತೆರಿಗೆಯನ್ನು ನಿಗದಿ ಮಾಡಲು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ನಿರ್ಧರಿಸಿದೆ.

ನಿವೇಶನ, ಕಟ್ಟಡ, ವಾಣಿಜ್ಯ ಹಾಗೂ ಇತರೆ ಬಳಕೆಗೆ ಆಸ್ತಿ ತೆರಿಗೆಯ ಪ್ರಮಾಣವನ್ನು ನಿಗದಿ ಮಾಡಿ, ಕರಡು ಅಧಿಸೂಚನೆ ಹೊರಡಿಸಿದ್ದು ಆಕ್ಷೇಪಣೆಗೆ 15 ದಿನಗಳ ಅವಕಾಶ ನೀಡಲಾಗಿದೆ.

ಎಲ್ಲಿ ಎಷ್ಟು ಆಸ್ತಿ ತೆರಿಗೆ?: ವಸತಿ ನಿವೇಶನ/ ಭೂಮಿ ಮತ್ತು ವಸತಿ ಖಾಲಿ ಪ್ರದೇಶಗಳನ್ನು ಎರಡು ವರ್ಗಗಳಾಗಿ ವಿಂಗಡಿಸಲಾಗಿದೆ.

ಅಪಾರ್ಟ್‌ಮೆಂಟ್/ ಫ್ಲ್ಯಾಟ್ ಸೇರಿದಂತೆ ಭೂಮಿ/ ನಿವೇಶನಗಳನ್ನು ಬಾಡಿಗೆಗೆ ನೀಡಿದ್ದರೆ, ವರ್ಷಕ್ಕೆ ಪ್ರತಿ ಅಡಿಗೆ ಕರ್ನಾಟಕ ಸ್ಟ್ಯಾಂಪ್ ಕಾಯ್ದೆಯಲ್ಲಿ ನಮೂದಾಗಿರುವ ಮಾರ್ಗಸೂಚಿ ದರ ಶೇ 0.2 ರಷ್ಟು ಆಸ್ತಿ ತೆರಿಗೆ ಪಾವತಿಸಬೇಕು. ಇದೇ ರೀತಿಯ ಸ್ವತ್ತು ಮಾಲೀಕರೇ ಉಪಯೋಗಿಸುತ್ತಿದ್ದರೆ ಮಾರ್ಗಸೂಚಿ ದರದ ಶೇ 0.1ರಷ್ಟು ತೆರಿಗೆ ಅನ್ವಯವಾಗಲಿದೆ. ಆಸ್ತಿ ಸಂಪೂರ್ಣ ಖಾಲಿ ಪ್ರದೇಶವಾಗಿದ್ದರೆ ಶೇ 0.025ರಷ್ಟು ತೆರಿಗೆ ಪಾವತಿಸಬೇಕು.

ನಿವೇಶನದಲ್ಲಿ ಕಟ್ಟಡವಿದ್ದು ಅದನ್ನು ಬಾಡಿಗೆಗೆ ನೀಡಿದ್ದರೆ ಕಟ್ಟಡ ನಿರ್ಮಾಣ ವೆಚ್ಚದ ಶೇ 0.2 ರಷ್ಟು, ಸ್ವಂತ ಬಳಕೆಯಲ್ಲಿದ್ದರೆ ಶೇ 0.1 ರಷ್ಟು ಆಸ್ತಿ ತೆರಿಗೆ ಪಾವತಿಸಬೇಕು. ಕಟ್ಟಡದ ಮೌಲ್ಯ ಪ್ರತಿವರ್ಷ ಶೇ 3ರಷ್ಟು ಕಡಿಮೆಯಾಗುತ್ತದೆ. ವಸತಿ ಕಟ್ಟಡದ ನಿರ್ಮಾಣ ವೆಚ್ಚವನ್ನು ಪ್ರತಿ ಚದರ ಅಡಿಗೆ ₹1,500 ಎಂದು ನಿಗದಿಪಡಿಸಲಾಗಿದೆ.

ಈ ಮೇಲಿನ ಮಾಹಿತಿಯಂತೆ ಆಸ್ತಿ ತೆರಿಗೆಯನ್ನು ನಿರ್ಧರಿಸಲಾಗುತ್ತದೆ. ಖಾಲಿ ನಿವೇಶನ ಮತ್ತು ಕಟ್ಟಡ ಆಸ್ತಿ ತೆರಿಗೆ ಎರಡನ್ನೂ ಸೇರಿಸಿ ಒಟ್ಟು ಆಸ್ತಿ ತೆರಿಗೆ ನಿಗದಿ ಮಾಡಲಾಗುತ್ತದೆ.

ವಸತಿಯೇತರ ಭೂಮಿ/ ನಿವೇಶನ ಮತ್ತು ಖಾಲಿ ನಿವೇಶನಗಳನ್ನು ಕೂಡ ಎರಡು ವರ್ಗವಾಗಿಸಿ, ನಿವೇಶನ ಬಾಡಿಗೆ ನೀಡಿದ್ದರೆ ಪ್ರತಿ ಚದರ ಅಡಿಗೆ ಮಾರ್ಗಸೂಚಿ ದರದಲ್ಲಿ ಶೇ 0.5ರಷ್ಟು, ಸ್ವಂತ ಬಳಕೆಯಲ್ಲಿದ್ದರೆ ಶೇ 0.25ರಷ್ಟು, ಕಟ್ಟಡಕ್ಕೆ ಶೇ 0.5 ರಷ್ಟು ತೆರಿಗೆ ನಿಗದಿ ಮಾಡಲಾಗಿದೆ. ವಸತಿಯೇತರ ಕಟ್ಟಡಗಳ ನಿರ್ಮಾಣ ವೆಚ್ಚವನ್ನು ಪ್ರತಿ ಚದರ ಅಡಿಗೆ ₹ 2,000 ಎಂದು ನಿಗದಿಪಡಿಸಲಾಗಿದೆ.

ಸ್ಟಾರ್ ಹೋಟೆಲ್‌ಗಳ ನಿವೇಶನಗಳಿಗೆ ಪ್ರತಿ ಚದರ ಅಡಿಗೆ ಮಾರ್ಗಸೂಚಿ ದರದಲ್ಲಿ ಶೇ 0.75ರಷ್ಟು, ಕಟ್ಟಡಕ್ಕೆ ಶೇ 0.75 ರಷ್ಟು ತೆರಿಗೆ ನಿಗದಿ ಮಾಡಲಾಗಿದೆ. ಸ್ಟಾರ್ ಹೋಟೆಲ್‌ಗಳ ನಿರ್ಮಾಣ ವೆಚ್ಚವನ್ನು ಪ್ರತಿ ಚದರ ಅಡಿಗೆ ₹4,000 ಎಂದು ನಿಗದಿಪಡಿಸಲಾಗಿದೆ. ಕೈಗಾರಿಕೆಗಳ ನಿವೇಶನಗಳನ್ನು ಬಾಡಿಗೆಗೆ ನೀಡಿದ್ದರೆ ಪ್ರತಿ ಚದರ ಅಡಿಗೆ ಮಾರ್ಗಸೂಚಿ ದರದಲ್ಲಿ ಶೇ 0.3ಷ್ಟು, ಸ್ವಂತ ಬಳಕೆಯಲ್ಲಿದ್ದರೆ ಶೇ 0.025ರಷ್ಟು, ಕಟ್ಟಡಕ್ಕೆ ಶೇ 0.3 ರಷ್ಟು ತೆರಿಗೆ ನಿಗದಿ ಮಾಡಲಾಗಿದೆ. ಕೈಗಾರಿಕಾ ಕಟ್ಟಡಗಳ ನಿರ್ಮಾಣ ವೆಚ್ಚವನ್ನು ಪ್ರತಿ ಚದರ ಅಡಿಗೆ ₹2,000 ಎಂದು ನಿಗದಿಪಡಿಸಲಾಗಿದೆ. ಸರ್ಕಾರ ಬಡವರಿಗೆ ನೀಡುವ ಮನೆಗಳು, ಕೊಳೆಗೇರಿ ಅಭಿವೃದ್ಧಿ ಮಂಡಳಿ ಅಥವಾ ಬಿಬಿಎಂಪಿ ನೀಡುವ 300 ಚದರ ಅಡಿ ಒಳಗಿನ ಸ್ವಂತ ಬಳಕೆಯಲ್ಲಿರುವ ಕಟ್ಟಡಗಳಿಗೆ ವಾರ್ಷಿಕವಾಗಿ ₹300 ಮತ್ತು ಸೆಸ್ ಚಾರ್ಜ್ ಅನ್ವಯವಾಗಲಿದೆ.

ಕಟ್ಟಡಗಳ ಮೇಲೆ ಅಳವಡಿಸುವ ದೂರಸಂಪರ್ಕ ಟವರ್, ಹೋರ್ಡಿಂಗ್ಸ್, ಬಿಲ್ ಬೋರ್ಡ್ಸ್ ಅಥವಾ ಎಲೆಕ್ಟ್ರಾನಿಕ್ ಸಾಧನಗಳಿಗೆ ವಾರ್ಷಿಕ ₹20,000 ಮತ್ತು ಸೆಸ್ ಪಾವತಿಸಬೇಕು.

ಹೊಸ ಅಧಿಸೂಚನೆಯಂತೆ ಆಸ್ತಿ ತೆರಿಗೆ ಜಾರಿಯಾಗಿ ಈಗಿರುವ ತೆರಿಗೆಗಿಂತ ಕಡಿಮೆ ನಿಗದಿಯಾದರೆ, ಈಗ ಪಾವತಿಸುತ್ತಿರುವುದನ್ನೇ ಮುಂದುವರಿಸಬೇಕು. ಪ್ರತಿ ವರ್ಷ ಶೇಕಡ 5 ರಷ್ಟು ಆಸ್ತಿ ತೆರಿಗೆ ಹೆಚ್ಚಿಸಲಾಗುತ್ತದೆ ಎಂದೂ ತಿಳಿಸಲಾಗಿದೆ.

ನಾಗರಿಕರು ಆಕ್ಷೇಪಣೆಗಳಿದ್ದರೆ 15 ದಿನದೊಳಗೆ ಬಿಬಿಎಂಪಿ ಮುಖ್ಯ ಆಯುಕ್ತರಿಗೆ ಸಲ್ಲಿಸಬಹುದು. spcomm-rev@bbmp.gov.inಗೆ ಇಮೇಲ್ ಮಾಡಬಹುದು ಎಂದು ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ತಿಳಿಸಿದ್ದಾರೆ.

ಲೆಕ್ಕಾಚಾರ ಹೇಗೆ?

ಮಾರ್ಗಸೂಚಿ ದರ ಪ್ರತಿ ಚದರ ಅಡಿಗೆ ₹2000 ಇರುವ 30X40 ಅಡಿ ನಿವೇಶನ ಬಾಡಿಗೆಗೆ ನೀಡಿದ್ದರೆ ಅದರ ಆಸ್ತಿ ತೆರಿಗೆ ₹4800. ಇದೇ ನಿವೇಶನದಲ್ಲಿ 20 ಲಕ್ಷ ವೆಚ್ಚ ಮಾಡಿ ಕಟ್ಟಡ ನಿರ್ಮಿಸಿ ಬಾಡಿಗೆಗೆ ನೀಡಿದ್ದರೆ ಆಸ್ತಿ ತೆರಿಗೆ ₹4000. ಒಟ್ಟು ₹8,800 ಆಸ್ತಿ ತೆರಿಗೆ ಪಾವತಿ ಸಬೇಕಾಗುತ್ತದೆ. ಸ್ವಂತ ಬಳಕೆಯಲ್ಲಿದ್ದರೆ ₹2400 + ₹2000 ಸೇರಿ ₹4,400 ಆಗುತ್ತದೆ.

ನಗರದಲ್ಲಿ ಇಂದು

ಸೀಳುತುಟಿ ಚಿಕಿತ್ಸಾ ಕ್ಲಿನಿಕ್‌ನ ಉದ್ಘಾಟನೆ: ದಿನೇಶ್ ಗುಂಡೂರಾವ್, ಮಮತಾ ಕ್ಯಾರೊಲ್, ಆಯೋಜನೆ ಮತ್ತು ಸ್ಥಳ: ಭಗವಾನ್ ಮಹಾವೀರ ಜೈನ್ ಆಸ್ಪತ್ರೆ, ವಸಂತನಗರ, ಬೆಳಿಗ್ಗೆ 9.30

'ನಂದಿನಿ ಉಪಾಹಾರ' ಕ್ಯಾಂಟೀನ್ ಉದ್ಘಾಟನೆ: ಪಿ.ಎಸ್. ದಿನೇಶ್ ಕುಮಾರ್, ಅತಿಥಿಗಳು: ಕೆ. ಸೋಮಶೇಖರ್, ಕೃಷ್ಣ ಎಸ್. ದೀಕ್ಷಿತ್, ಆರ್. ದೇವದಾಸ್, ಮೊಹಮ್ಮದ್ ನವಾಜ್, ಶಶಿಕಿರಣ ಶೆಟ್ಟಿ, ವಿಶಾಲ್ ರಘು ಎಚ್.ಎಲ್., ವಿವೇಕ್ ಸುಬ್ಬಾರೆಡ್ಡಿ, ಟಿ.ಜಿ. ರವಿ, ಹರೀಶ್ ಎಂ.ಟಿ., ಜಗದೀಶ್ ಜಿ. ಕುಂಬಾರ್, ಸ್ಥಳ: ಹೈಕೋರ್ಟ್ ಆವರಣ, ಮಧ್ಯಾಹ್ನ 1.45

'ವಸುಧೈವ ಕುಟುಂಬಕಂ' ನಾಟಕ ಪ್ರದರ್ಶನ: ಆಯೋಜನೆ: ಕಲಾರಂಗಲೋಕ, ಸ್ಥಳ: ಸಂಪದ ಸಭಾಂಗಣ, ತ್ಯಾಗರಾಜನಗರ, ಸಂಜೆ 4

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ nagaradalli_indu@prajavani.co.in

ನೃತ್ಯ ಸಂಭ್ರಮ: ಉದ್ಘಾಟನೆ: ರಾಮಸ್ವಾಮಿ ಪಿ., ಅಧ್ಯಕ್ಷತೆ: ಸುಮಂಗಲ, ಅತಿಥಿಗಳು: ಬನಶಂಕರಿ ಅಂಗಡಿ, ರಾಜಪ್ಪ ದಳವಾಯಿ, ದರ್ಶಿನಿ ಮಂಜುನಾಥ್, ಜೋಗಿಲ ಸಿದ್ಧರಾಜು, ಭಾಸ್ಕರ್ ಶಿವಮೊಗ್ಗ, ಆಯೋಜನೆ: ಶಾರದ ಕಲ್ಚರಲ್ ಮತ್ತು ಸೋಷಿಯಲ್ ಟ್ರಸ್ಟ್, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ. ರಸ್ತೆ, ಸಂಜೆ 5.30

ಕರ್ನಾಟಕ ಜಾನಪದ ಉತ್ಸವ: ಕರ್ನಾಟಕ ಜಾನಪದ ಗಾಯನ: ಡಿ. ದೇವರಾಜ್, ಅತಿಥಿಗಳು: ಮಂಜುನಾಥ್ ಕೆ.ಎಸ್. ಮತ್ತು ತಂಡ, ಶಂಕರ ಭಾರತಿಪುರ ಮತ್ತು ತಂಡ, ಸಮಾರೋಪ ನುಡಿ: ಅಪ್ಪಗೆರೆ ತಿಮ್ಮರಾಜು, ಅಧ್ಯಕ್ಷತೆ: ಆನಂದ ಮಾದಲಗೆರೆ, ಆಯೋಜನೆ: ಪದ, ಸ್ಥಳ: ಕಲಾಗ್ರಾಮ, ಮಲ್ಲತ್ತಹಳ್ಳಿ, ಸಂಜೆ 6.30

ಯಕ್ಷಗಾನ ಕೇಂದ್ರಿತ 'ಏಕವ್ಯಕ್ತಿ' ರಂಗ ಪ್ರದರ್ಶನ: ನಟನೆ: ಸಹನಾ ಟಿರಕಿ, 'ನಯಾ ಸಫರ್' ಏಕವ್ಯಕ್ತಿ ಪ್ರದರ್ಶನ: ನಟನೆ, ನಿರ್ದೇಶನ: ದುರ್ಗಾ ಪ್ರಸಾದ್ ಚಿಕ್ಕಮ್, ಆಯೋಜನೆ: ರಾಷ್ಟ್ರೀಯ ನಾಟಕ ಶಾಲೆ, ಬೆಂಗಳೂರು, ಸ್ಥಳ: ಕಲಾಗ್ರಾಮ ಮಲ್ಲತ್ತಹಳ್ಳಿ, ಸಂಜೆ 7

'ಕೈ' ಗೆಲುವು; 'ಮೈತ್ರಿ'ಗೆ ಸೋಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಜೆಪಿ, ಜೆಡಿಎಸ್ ಮೈತ್ರಿ ಮಾಡಿಕೊಂಡ ಬಳಿಕ ರಾಜ್ಯದಲ್ಲಿ ನಡೆದ ಮೊದಲ ಚುನಾವಣೆಯಲ್ಲಿ ಕಾಂಗ್ರೆಸ್ ಗೆಲುವು ಸಾಧಿಸಿದೆ.

ವಿಧಾನಸಭೆ ಚುನಾವಣೆ ನಂತರ ಬಿಜೆಪಿಯತ್ತ ಒಲಿದಿದ್ದ ಜೆಡಿಎಸ್ ನಾಯಕರು, ಎನ್‌ಡಿಎ ಮೈತ್ರಿಕೂಟದ ಜತೆ ಸೇರುವ ತೀರ್ಮಾನಕ್ಕೆ ಬಂದಿದ್ದರು. ಮುಂದೆ ನಡೆಯಬಹುದಾದ ಚುನಾವಣೆಗಳು ಹಾಗೂ ರಾಜ್ಯದಲ್ಲಿನ ಕಾಂಗ್ರೆಸ್ ಸರ್ಕಾರದ ವಿರುದ್ಧ ಜಂಟಿ ಹೋರಾಟ ನಡೆಸುವ ತೀರ್ಮಾನವನ್ನೂ ಕೈಗೊಂಡಿದ್ದರು.

ಬೆಂಗಳೂರು ಶಿಕ್ಷಕರ ಕ್ಷೇತ್ರದಿಂದ ಹಿಂದೆ ಬಿಜೆಪಿಯಿಂದ ಗೆದ್ದಿದ್ದ ಪುಟ್ಟಣ್ಣ ಅವರು ವಿಧಾನಸಭೆ ಚುನಾವಣೆ ಹೊತ್ತಿಗೆ, ಸದಸ್ಯತ್ವಕ್ಕೆ ರಾಜೀನಾಮೆ ನೀಡಿದ್ದರು. ಈ ಕಾರಣದಿಂದ ತೆರವಾಗಿದ್ದ ಕ್ಷೇತ್ರಕ್ಕೆ ಉಪಚುನಾವಣೆ ನಡೆದಿತ್ತು. ಮೂರು ಬಾರಿ ಜೆಡಿಎಸ್, ಒಂದು ಬಾರಿ ಬಿಜೆಪಿಯಿಂದ ಗೆದ್ದಿದ್ದ ಪುಟ್ಟಣ್ಣ, ಉಪಚುನಾವಣೆಯಲ್ಲಿ 'ಹಸ್ತ' ಹಿಡಿದಿದ್ದರು.

ಮೈತ್ರಿ ಅಭ್ಯರ್ಥಿ ತೀರ್ಮಾನವಾಗುವ ಮೊದಲೇ, ಸಭೆ ನಡೆಸಿದ್ದ ಜೆಡಿಎಸ್ ನಾಯಕರು ವಕೀಲರೂ ಆದ ಎ.ಪಿ. ರಂಗನಾಥ್ ಅವರು ಕಣಕ್ಕೆ ಇಳಿಯಲಿದ್ದಾರೆ ಎಂದು ಘೋಷಿಸಿದ್ದರು. ಇದಕ್ಕೆ, ಕೆಲ ಬಿಜೆಪಿ ನಾಯಕರು ಅಪಸ್ವರ ಎತ್ತಿದ್ದರು. ನಂತರ ನಡೆದ ಮಾತುಕತೆಯ ಬಳಿಕ, ರಂಗನಾಥ್ ಅವರೇ ಮೈತ್ರಿಕೂಟದ ಅಭ್ಯರ್ಥಿ ಎಂದು ಘೋಷಿಸಿದ್ದರು.

ಬೆಂಗಳೂರು ನಗರ, ಗ್ರಾಮಾಂತರ ಹಾಗೂ ರಾಮನಗರ ಜಿಲ್ಲೆಗಳ ಶಿಕ್ಷಕರಷ್ಟೇ ಮತದಾರರಾಗಿರುವ ಕ್ಷೇತ್ರದಲ್ಲಿ ಪಕ್ಷಕ್ಕಿಂತ ಪುಟ್ಟಣ್ಣ ಅವರ ಜನಪ್ರಿಯತೆ ಮತ್ತು 'ಕಾರ್ಯತಂತ್ರ'ಗಳೇ ನಿರ್ಣಾಯಕವಾಗಿರುವುದು ರಹಸ್ಯವೇನಲ್ಲ. 2002ರಿಂದ ನಡೆದ ಚುನಾವಣೆಗಳಲ್ಲಿ ಅವರೇ ಗೆಲ್ಲುತ್ತಾ ಬಂದಿದ್ದಾರೆ. ಹಿಂದಿನ ಚುನಾವಣೆಗಳಲ್ಲಿ ಕಾಂಗ್ರೆಸ್ ಅವರಿಗೆ ಪೈಪೋಟಿ ನೀಡಿತ್ತು. ಈ ಚುನಾವಣೆಯಲ್ಲಿ ಪಕ್ಷಗಳ ಸೋಲು–ಗೆಲುವಿಗಿಂತ ಪುಟ್ಟಣ್ಣ 'ಪ್ರಾಬಲ್ಯ'ವೇ ಹೆಚ್ಚೆಂಬುದನ್ನು ಅಲ್ಲಗಳೆಯಲಾಗದು.

ಆದರೂ, ಜೆಡಿಎಸ್ ಹಾಗೂ ಬಿಜೆಪಿಗೆ ನೆಲೆ ಇರುವ ಈ ಕ್ಷೇತ್ರದಲ್ಲಿ ಮೈತ್ರಿಕೂಟದ ಅಭ್ಯರ್ಥಿ ಕಣಕ್ಕೆ ಇಳಿಸಿರುವುದು ಕುತೂಹಲಕ್ಕೆ ಕಾರಣವಾಗಿತ್ತು. ಈ ಫಲಿತಾಂಶವು ಕಾಂಗ್ರೆಸ್ ನಾಯಕರಿಗೆ ತಮ್ಮ ಎದುರಾಳಿಗಳನ್ನು ತಿವಿಯುವ ಅವಕಾಶವನ್ನಂತೂ ಸೃಷ್ಟಿಯಾಗಿದೆ.

'ಕೋಮುವಾದಿ ಅವತಾರಕ್ಕೆ ಕಪಾಳ ಮೋಕ್ಷ'



ಸಿದ್ದರಾಮಯ್ಯ

ಬಿಜೆಪಿ ಮತ್ತು ಜೆಡಿಎಸ್ ನಾಯಕರ ನಡುವೆ ಆಗಿರುವ ಮೈತ್ರಿಗೆ ಮತದಾರರ ಒಪ್ಪಿಗೆ ಇಲ್ಲ ಎಂಬುದನ್ನು ವಿಧಾನ ಪರಿಷತ್ ಉಪಚುನಾವಣೆ ಫಲಿತಾಂಶ ಸ್ಪಷ್ಟಪಡಿಸಿದೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರತಿಕ್ರಿಯಿಸಿದ್ದಾರೆ.

'ಎಚ್.ಡಿ ದೇವೇಗೌಡ, ಎಚ್.ಡಿ. ಕುಮಾರಸ್ವಾಮಿ ಹಾಗೂ ಪ್ರಧಾನಿ ನರೇಂದ್ರ ಮೋದಿ, ಗೃಹ ಸಚಿವ ಅಮಿತ್ ಶಾ ಅವರ ನಡುವಿನ ಮೈತ್ರಿಯೇ ಹೊರತು ಎರಡೂ ಪಕ್ಷಗಳ ಮತದಾರರ ನಡುವಿನ ಮೈತ್ರಿಯಲ್ಲ ಇದು' ಎಂದು ತಿಳಿಸಿರುವ ಅವರು, 'ಬಿಜೆಪಿ ಜೊತೆ ಮೈತ್ರಿ ಮಾಡಿಕೊಂಡಿರುವ ಜೆಡಿಎಸ್‌ನ ಕೋಮುವಾದಿ ಅವತಾರಕ್ಕೆ ಮತದಾರ ಕಪಾಳಮೋಕ್ಷ ಮಾಡಿದ್ದಾನೆ' ಎಂದು ಎಂದು ಹೇಳಿದ್ದಾರೆ.

'ಮುಂದಿನ ಲೋಕಸಭೆ ಚುನಾವಣೆಯಲ್ಲಿ ಜನರ ಮನಃಸ್ಥಿತಿ ಏನು ಎಂಬುದಕ್ಕೆ ಈ ಫಲಿತಾಂಶ ಸಾಕ್ಷಿ' ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು. 'ಬಿಜೆಪಿಯ ಕ್ಷೇತ್ರ ಇದಾಗಿತ್ತು. ಈ ಚುನಾವಣೆಯನ್ನು ರಾಜ್ಯ ರಾಜಕೀಯದ, ಮುಂದಿನ ಲೋಕಸಭೆ ಚುನಾವಣೆಯ ದಿಕ್ಸೂಚಿ ಎಂದು ಬಿಜೆಪಿ ಹಾಗೂ ಜೆಡಿಎಸ್ ನಾಯಕರು ಬಣ್ಣಿಸುತ್ತಿದ್ದರು. ಇದಕ್ಕೆ ಉತ್ತರ ಸಿಕ್ಕಿದೆ' ಎಂದು ಬಣ್ಣಿಸಿದರು.

ಭಾರತ ನಕ್ಷೆಯಲ್ಲಿ ಪ್ರಚೋದನಕಾರಿ ಬರಹ

ಗೋಕಾಕ (ಬೆಳಗಾವಿ ಜಿಲ್ಲೆ): 'ಗೋಕಾಕ ಮುಸ್ಲಿಂ' ಎಂಬ ಇನ್‌ಸ್ಟಾಗ್ರಾಂ ಪೇಜ್‌ನಲ್ಲಿ ಭಾರತ ನಕಾಶೆಗೆ ಅವಮಾನ ಮಾಡಲಾಗಿದೆ. ಮತೀಯ ಗಲಭೆ ಉಂಟುಮಾಡುವಂಥ ಬರಹ ಬರೆದು ವಿಡಿಯೊ ಹರಿಬಿಡಲಾಗಿದೆ ಎಂದು ಶಹರ ಪೊಲೀಸ್ ಠಾಣೆಯಲ್ಲಿ ಮಂಗಳವಾರ ಪ್ರಕರಣ ದಾಖಲಿಸಿಕೊಳ್ಳಲಾಗಿದೆ.

'ಈ ಸಾಮಾಜಿಕ ಜಾಲತಾಣದ ಪುಟದಲ್ಲಿ ಅಕ್ಕಪಕ್ಕ ಎರಡು ಭಾರತ ನಕಾಶೆ ಬಿಡಿಸಿದ ಪಟವಿದೆ. ಒಂದಕ್ಕೆ ಕೇಸರಿ ಬಣ್ಣ ತುಂಬಿ, ಅದರಲ್ಲಿ 'ಹಿಂದೂ ರಾಷ್ಟ್ರದ ಕನಸು ಕಾಣುವುದು ಬಿಡಿ' ಎಂದು ಅಶ್ಲೀಲ ಪದ ಬಳಸಲಾಗಿದೆ. ಇನ್ನೊಂದು ಪಟದಲ್ಲಿ ಹಸಿರು ಬಣ್ಣ ತುಂಬಿ 'ಅಲ್ಲಾಹು ಅಕ್ಬರ್. ಹಮಾರಿ ಹುಕೂಮತ್ ರಹೇಗಿ ಇನ್‌ಶಾಅಲ್ಲಾಹ್ (ದೇವರ ಇಚ್ಛೆಯಂತೆ ನಮ್ಮ ಆಡಳಿತವೇ ಇರಲಿದೆ)' ಎಂದು ಬರೆಯಲಾಗಿದೆ. ಇದರ ವಿಡಿಯೊ ಮಾಡಿ ಹರಿಬಿಡಲಾಗಿದೆ' ಎಂದು ಎಫ್‌ಐಆರ್‌ನಲ್ಲಿ ಬರೆಯಲಾಗಿದೆ.

ಜಾಲತಾಣಗಳಲ್ಲಿ ಈ ವಿಡಿಯೊ ನೋಡಿದ ಕೆಲವರು ಗೋಕಾಕ ಪೊಲೀಸರಿಗೆ ಮಾಹಿತಿ ನೀಡಿದರು. ಕಾರ್ಯಪ್ರವೃತ್ತರಾದ ಪೊಲೀಸರು ಇನ್‌ಸ್ಟಾಗ್ರಾಂ ಪೇಜ್ ಮೇಲೆ ಪ್ರಕರಣ ದಾಖಲಿಸಿದರು. ಮತೀಯ ಗಲಭೆ, ಸಾಮಾಜಿಕ ಶಾಂತಿ ಕದಡುವ ಉದ್ದೇಶದಿಂದ ಈ ಪೋಸ್ಟ್ ಮಾಡ ಲಾಗಿದೆ ಎಂದು ಎಫ್‌ಐಆರ್ ದಾಖಲಿಸಿದರು.

ಮಣಿಪಾಲ ಆಸ್ಪತ್ರೆಗೆ 'ಸುಪ್ರೀಂ' ನಿರ್ದೇಶನ

ರೋಗಿ ಕುಟುಂಬಸ್ಥರಿಗೆ ₹10 ಲಕ್ಷ ಪರಿಹಾರ

ಪ್ರಜಾವಾಣಿ ವಾರ್ತೆ

ನವದೆಹಲಿ: ಶ್ವಾಸಕೋಶ ಶಸ್ತ್ರಚಿಕಿತ್ಸೆಗೆ ಒಳಗಾಗಿದ್ದ ರೋಗಿಯು ನಂತರ ಮಾತನಾಡುವ ಶಕ್ತಿಯನ್ನು ಕಳೆದುಕೊಂಡಿದ್ದು, ಸೇವಾ ನ್ಯೂನತೆಯನ್ನು ತೋರುತ್ತದೆ ಎಂದು ಹೇಳಿರುವ ಸುಪ್ರೀಂ ಕೋರ್ಟ್, ಮೃತಪಟ್ಟಿರುವ ರೋಗಿಯ ಕುಟುಂಬಕ್ಕೆ ₹ 10 ಲಕ್ಷ ಪರಿಹಾರ ನೀಡುವಂತೆ ಬೆಂಗಳೂರಿನ ಮಣಿಪಾಲ ಆಸ್ಪತ್ರೆಗೆ ಆದೇಶಿಸಿದೆ.

ನ್ಯಾಯಮೂರ್ತಿಗಳಾದ ಹಿಮಾ ಕೊಹ್ಲಿ ಹಾಗೂ ಅಹ್ಸಾನುದ್ದೀನ್ ಅಮಾನುಲ್ಲಾ ಅವರಿದ್ದ ನ್ಯಾಯಪೀಠ ಈ ಆದೇಶ ಹೊರಡಿಸಿದೆ.

ಪ್ರಕರಣದ ವಿವರ: ಜೆ.ಡಗ್ಲಾಸ್ ಲೂಯಿಸ್ ಎಂಬುವವರು 2003ರಲ್ಲಿ ಶಸ್ತ್ರಚಿಕಿತ್ಸೆಗೆ ಒಳಗಾಗಿದ್ದರು. ಶಸ್ತ್ರಚಿಕಿತ್ಸೆ ನಂತರ, ಲೂಯಿಸ್ ಅವರು ಮಾತನಾಡುವಶಕ್ತಿಕಳೆದುಕೊಂಡಿದ್ದರು.

ಸೇವಾ ನ್ಯೂನತೆಗಾಗಿ ಪರಿಹಾರ ನೀಡುವಂತೆ ಕೋರಿ ಲೂಯಿಸ್ ಅವರು ಬೆಂಗಳೂರು ಜಿಲ್ಲಾ ಗ್ರಾಹಕರ ವೇದಿಕೆ ಮೊರೆಹೋಗಿದ್ದರು. ವೇದಿಕೆಯು ₹ 5 ಲಕ್ಷ ಪರಿಹಾರ ನೀಡುವಂತೆ ಆದೇಶಿಸಿತ್ತು.



ನಂತರ, ಅವರು ರಾಷ್ಟ್ರೀಯ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗಕ್ಕೆ ಅರ್ಜಿ ಸಲ್ಲಿಸಿದ್ದರು. ಅರ್ಜಿ ವಿಚಾರಣೆ ನಡೆಯುತ್ತಿದ್ದಾಗ, 2015ರಲ್ಲಿ ಲೂಯಿಸ್ ಮೃತಪಟ್ಟರು.

ನಂತರ, ಲೂಯಿಸ್ ಪತ್ನಿ, ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ್ದರು. ಅರ್ಜಿ ವಿಚಾರಣೆ ನಡೆಸಿದ ನ್ಯಾಯಪೀಠ, 'ಶಸ್ತ್ರಚಿಕಿತ್ಸೆ ಸಂದರ್ಭದಲ್ಲಿ ರೋಗಿಗೆ ಅರಿವಳಿಕೆ ವಿಭಾಗದ ಮುಖ್ಯಸ್ಥರ ಬದಲು, ಹೃದ್ರೋಗ ಅರಿವಳಿಕೆ ವಿಭಾಗದಲ್ಲಿ ತರಬೇತಿ ಪಡೆಯುತ್ತಿದ್ದ ವೈದ್ಯರೊಬ್ಬರು ಅರಿವಳಿಕೆ ಚುಚ್ಚುಮದ್ದು ನೀಡಿದ್ದರು. ನ್ಯಾಯಯುತ ಪರಿಹಾರ ಘೋಷಿಸುವುದಕ್ಕಾಗಿ ಜಿಲ್ಲಾ ಗ್ರಾಹಕರ ವೇದಿಕೆಯು ಈ ಎಲ್ಲ ಅಂಶಗಳನ್ನು ಪರಿಗಣಿಸಬೇಕಿತ್ತು. ಈ ಪ್ರಕರಣದಲ್ಲಿ ಹಾಗೆ ಆಗಿಲ್ಲ' ಎಂದು ಹೇಳಿದೆ.

'ರಾಷ್ಟ್ರೀಯ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗದಲ್ಲಿ ಅರ್ಜಿಯ ವಿಚಾರಣೆ ನಡೆಯುತ್ತಿದ್ದ ಸಂದರ್ಭದಲ್ಲಿ ರೋಗಿ ಮೃತಪಟ್ಟಿದ್ದಾರೆ. ಹೀಗಾಗಿ, ಸಾಕ್ಷ್ಯಗಳ ಮರುಪರಿಶೀಲನೆಗೆ ನಿರ್ದೇಶನ ನೀಡುವುದರಲ್ಲಿ ಯಾವುದೇ ಅರ್ಥ ಇಲ್ಲ' ಎಂದೂ ಪೀಠ ಹೇಳಿದೆ.

'ಈ ಪ್ರಕರಣದಲ್ಲಿ, ತಜ್ಞವೈದ್ಯರು ನ್ಯಾಯಾಲಯದಲ್ಲಿ ನೀಡಿದ ಹೇಳಿಕೆಗಳಿಗೆ ಮಣಿಪಾಲ ಆಸ್ಪತ್ರೆ ಆಕ್ಷೇಪ ವ್ಯಕ್ತಪಡಿಸಿಲ್ಲ ಹಾಗೂ ಈ ಪ್ರಕರಣ ಕುರಿತು ಅಭಿಪ್ರಾಯ ತಿಳಿಸುವುದಕ್ಕಾಗಿ ತಜ್ಞರನ್ನು ನೇಮಕ ಮಾಡುವಂತೆ ಜಿಲ್ಲಾ ಗ್ರಾಹಕರ ವೇದಿಕೆಗೆ ಅರ್ಜಿಯನ್ನೂ ಸಲ್ಲಿಸಿಲ್ಲ' ಎಂದು ನ್ಯಾಯಪೀಠ ಹೇಳಿದೆ.

'ಲೂಯಿಸ್ ಅವರು ಖಾಸಗಿ ಕಂಪನಿಯೊಂದರಲ್ಲಿ ಕ್ಷೇತ್ರೀಯ ಮಾರಾಟ ವ್ಯವಸ್ಥಾಪಕರಾಗಿದ್ದರು. ಶಸ್ತ್ರಚಿಕಿತ್ಸೆ ನಂತರ ಧ್ವನಿ ಪೆಟ್ಟಿಗೆಗೆ ಹಾನಿಯಾಗಿ, ಮಾತನಾಡುವ ಶಕ್ತಿ ಕಳೆದುಕೊಂಡಿದ್ದರಿಂದ ಯಾವುದೇ ಬಡ್ತಿ ಇಲ್ಲದೇ ಹಲವು ವರ್ಷಗಳ ಕಾಲ ಒಂದೇ ಹುದ್ದೆಯಲ್ಲಿ ಇದ್ದರು. 2015ರಲ್ಲಿ ಮೃತಪಟ್ಟರು' ಎಂದು ಲೂಯಿಸ್ ಪರ ವಾದ ಮಂಡಿಸಿದ ವಕೀಲರು ನ್ಯಾಯಪೀಠಕ್ಕೆ ತಿಳಿಸಿದರು.

'ಆಸ್ಪತ್ರೆಯಿಂದ ಸೇವಾ ನ್ಯೂನತೆ ಆಗಿದ್ದು ಗೊತ್ತಾದ ನಂತರವೂ, ಜಿಲ್ಲಾ ಗ್ರಾಹಕರ ವೇದಿಕೆಯು ₹ 5 ಲಕ್ಷ ಪರಿಹಾರ ಪ್ರಕಟಿಸಿದೆ. ನನ್ನ ಕಕ್ಷಿದಾರರಿಗೆ ₹ 18 ಲಕ್ಷ ಪರಿಹಾರ ನೀಡಬೇಕು' ಎಂದು ಮನವಿ ಮಾಡಿದರು.

ಆಗ, ಪರಿಹಾರ ಮೊತ್ತವನ್ನು ದ್ವಿಗುಣಗೊಳಿಸಿ (₹10 ಲಕ್ಷ) ನ್ಯಾಯಪೀಠ ಆದೇಶಿಸಿತು.

ಮುಂಬೈನಲ್ಲಿ ಆರೋಪಿ ಬಂಧಿಸಿದ ವಿಶೇಷ ಪೊಲೀಸ್ ತಂಡ

ಸಾಲ ವಸೂಲಿಗೆ ಸುಪಾರಿ, ಹಲ್ಲೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾಲ ವಸೂಲಿಗೆ ಸುಪಾರಿ ಪಡೆದು ಮಹಿಳೆ ಮೇಲೆ ಮಾರಕಾಸ್ತ್ರಗಳಿಂದ ಹಲ್ಲೆ ನಡೆಸಿ, ಪರಾರಿಯಾಗಿದ್ದ ಆರೋಪಿಯನ್ನು ಗೋವಿಂದಪುರ ಠಾಣೆ ಪೊಲೀಸರು ಮುಂಬೈನಲ್ಲಿ ಬಂಧಿಸಲು ಯಶಸ್ವಿಯಾಗಿದ್ದಾರೆ.



ನಸ್ರುಲ್ಲಾ

ಗೋವಿಂದಪುರ ರೌಡಿಶೀಟರ್ ನಸ್ರುಲ್ಲಾ ಅಲಿಯಾಸ್ ನಸ್ರು(42) ಬಂಧಿತ ಆರೋಪಿ.

2023ರ ನ.26ರಂದು ಸಾನಿಯಾ ಬಾನು ಎಂಬುವರ ಮೇಲೆ ನಸ್ರುಲ್ಲಾ ಹಲ್ಲೆ ನಡೆಸಿದ್ದ. ಇದರೊಂದಿಗೆ ಈತನ ವಿರುದ್ಧ ನಗರದ ವಿವಿಧ ಠಾಣೆಗಳಲ್ಲಿ ದಾಖಲಾಗಿದ್ದ 13 ಪ್ರಕರಣಗಳಲ್ಲಿ ಕೋರ್ಟ್‌ಗೆ ಹಾಜರಾಗದೆ ವರ್ಷದಿಂದ ತಲೆಮರೆಸಿಕೊಂಡಿದ್ದ. ಕೋರ್ಟ್ ಈತನ ವಿರುದ್ಧ 10 ಬಾರಿ ಜಾಮೀನು ರಹಿತ ವಾರಂಟ್ ಹಾಗೂ ಒಂದು ಬಾರಿ ಪ್ರೊಕ್ಲಮೇಷನ್ ಜಾರಿ ಮಾಡಿತ್ತು ಎಂದು ಮೂಲಗಳು ತಿಳಿಸಿವೆ.

'ಆರೋಪಿ ಪತ್ತೆಗಾಗಿ ವಿಶೇಷ ಪೊಲೀಸ್ ತಂಡ ರಚಿಸಲಾಗಿತ್ತು. ಈ ತಂಡವು ತಮಿಳುನಾಡು, ಆಂಧ್ರಪ್ರದೇಶ ಹಾಗೂ ಇತರೆಡೆ ಶೋಧ ನಡೆಸಿತ್ತು. ಆದರೂ ಸುಳಿವು ಪತ್ತೆ ಆಗಿರಲಿಲ್ಲ. ಮುಂಬೈನಲ್ಲಿ ತಲೆಮರೆಸಿಕೊಂಡಿದ್ದ ಮಾಹಿತಿ ಮೇರೆಗೆ ಅಲ್ಲಿಗೆ ತೆರಳಿದ್ದ ತಂಡ ಆರೋಪಿಯನ್ನು ಬಂಧಿಸಿ ಕರೆ ತಂದಿದ್ದಾರೆ' ಎಂದು ತಿಳಿಸಿವೆ.

ಏನಿದು ಪ್ರಕರಣ?: ಗೋವಿಂದಪುರ ನಿವಾಸಿ ಸಾನಿಯಾ ಬಾನು ಎಂಬಾಕೆ ಪತಿ ಇಮ್ರಾನ್ ಖಾನ್, ಡಿ.ಜೆ.ಹಳ್ಳಿ ನಿವಾಸಿ ಮುನ್ನಾ ಎಂಬಾತನಿಂದ ಸಾಲ ಪಡೆದುಕೊಂಡಿದ್ದರು. ಆರ್ಥಿಕ ಸಮಸ್ಯೆಯಿಂದ ಹಣ ಮರಳಿಸಿರಲಿಲ್ಲ. ಹೀಗಾಗಿ ಮುನ್ನಾ, ಸಾಲ ವಸೂಲಿ ಮಾಡಿಕೊಡುವಂತೆ ರೌಡಿಶೀಟರ್ ನಸ್ರುಲ್ಲಾಗೆ ಸುಪಾರಿ ನೀಡಿದ್ದ ಎಂದು ಪೊಲೀಸರು ಹೇಳಿದರು.

'2023ರ ನ.26ರಂದು ನಡೆದು ಹೋಗುತ್ತಿದ್ದ ಮಹಿಳೆಯನ್ನು ಆರೋಪಿ ಅಡ್ಡಗಟ್ಟಿ ಹಣ ಕೇಳಿದ್ದ. ಆಗ ಸದ್ಯಕ್ಕೆ ಹಣ ವಾಪಸ್ ಕೊಡಲು ಸಾಧ್ಯವಿಲ್ಲ. ಆರ್ಥಿಕವಾಗಿ ಸಮಸ್ಯೆಯಿದೆ ಎಂದು ಹೇಳಿಕೊಂಡಿದ್ದರು. ಸಮಯ ಕೊಡಿ, ವಾಪಸ್ ಕೊಡುತ್ತೇವೆ ಎಂದೂ ಸಾನಿಯಾ ಬಾನು ಹೇಳಿದ್ದರು. ಇದಕ್ಕೆ ಒಪ್ಪದ ಆರೋಪಿ, ಮಾರಕಾಸ್ತ್ರಗಳಿಂದ ಆಕೆಯ ಮೇಲೆ ಹಲ್ಲೆ ನಡೆಸಿದ್ದ' ಎಂದು ತಿಳಿಸಿದರು.

'ರೌಡಿಶೀಟರ್ ನಸ್ರುಲ್ಲಾ ಇದೇ ರೀತಿ ಸುಪಾರಿ ಪಡೆದು ಹಣ ವಸೂಲಿ ಮಾಡುವುದನ್ನು ದಂಧೆ ಮಾಡಿಕೊಂಡಿದ್ದ. ಜತೆಗೆ, ದರೋಡೆ, ಡಕಾಯಿತಿ ಸೇರಿ 13 ಪ್ರಕರಣಗಳು ನಗರದ ವಿವಿಧ ಪೊಲೀಸ್ ಠಾಣೆಗಳಲ್ಲಿ ದಾಖಲಾಗಿದ್ದವು' ಎಂದು ಮಾಹಿತಿ ನೀಡಿದರು.

ಉದ್ಯೋಗದ ಆಮಿಷ–ವಂಚನೆ: ದಂಪತಿ ಬಂಧನ

ಬೆಂಗಳೂರು: ಉದ್ಯೋಗ ಕೊಡಿಸುವುದಾಗಿ ನಂಬಿಸಿ ಯುವಕರಿಂದ ಹಣ ಪಡೆದು ವಂಚಿಸುತ್ತಿದ್ದ ದಂಪತಿಯನ್ನು ಈಶಾನ್ಯ ವಿಭಾಗದ ವಿದ್ಯಾರಣ್ಯಪುರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ದೊಡ್ಡಬೊಮ್ಮಸಂದ್ರದ ಪ್ರಕಾಶ್ ಹಾಗೂ ಮಧು ಬಂಧಿತ ದಂಪತಿ.

'ಬಂಧಿತರಿಂದ ₹2 ಲಕ್ಷ ನಗದು, ವಿವಿಧ ಕಂಪನಿಯ ನಾಲ್ಕು ಮೊಬೈಲ್, ಒಂದು ಬೈಕ್, 6 ಬ್ಯಾಂಕ್ ಖಾತೆಗಳಿಗೆ ಸೇರಿದ 15 ಕ್ರೆಡಿಟ್/ಡೆಬಿಟ್ ಕಾರ್ಡ್‌ಗಳು ಹಾಗೂ ಚೆಕ್ ಬುಕ್‌ಗಳು, 11 ವಿವಿಧ ಕಂಪನಿಯ ಕ್ರೈಯಾಡರ್, ಸಿಮ್ ಕಾರ್ಡ್‌ಗಳನ್ನು ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

'ಸರ್ಕಾರಿ ಸ್ವಾಮ್ಯದ ಪ್ರತಿಷ್ಠಿತ ಸಂಸ್ಥೆಯಲ್ಲಿ ಕೆಲಸ ಕೊಡಿಸುವುದಾಗಿ ನಂಬಿಸಿ ಯುವಕರಿಂದ ₹6 ಲಕ್ಷ ಪಡೆದುಕೊಂಡಿದ್ದರು. ಕೆಲಸ ಕೊಡಿಸದೆ, ಹಣವನ್ನೂ ವಾಪಸ್ ನೀಡದೆ ಮೋಸ ಎಸಗಿದ್ದಾರೆ ಎಂದು ದೂರು ನೀಡಲಾಗಿತ್ತು. ದೂರು ಆಧರಿಸಿ ವಿಶೇಷ ತಂಡ ರಚಿಸಿ ಆರೋಪಿಗಳನ್ನು ಬಂಧಿಸಲಾಗಿದೆ' ಎಂದು ಪೊಲೀಸರು ಹೇಳಿದರು.

'ರಾಜಕಾರಣಿಗಳು, ವಿವಿಧ ಇಲಾಖೆಯ ಅಧಿಕಾರಿಗಳ ಪರಿಚಯವಿದೆ. ಅವರ ಕಡೆಯಿಂದ ಸರ್ಕಾರಿ ಸ್ವಾಮ್ಯದ ಸಂಸ್ಥೆಗಳಲ್ಲಿ ಕೆಲಸ ಕೊಡಿಸುತ್ತೇವೆ ಎಂದು ಹಣ ಪಡೆದುಕೊಂಡಿದ್ದಾರೆ. ವಿದ್ಯಾರಣ್ಯಪುರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲೇ ಮೂರು ಪ್ರಕರಣಗಳು ಪತ್ತೆಯಾಗಿವೆ. ಅಲ್ಲದೇ ನಗರದ ಹಲವು ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಯುವಕರಿಗೆ ವಂಚಿಸಿರುವುದು ವಿಚಾರಣೆಯಿಂದ ಗೊತ್ತಾಗಿದೆ' ಎಂದು ಪೊಲೀಸರು ಹೇಳಿದರು.

ಅಪರಾಧ ಸುದ್ದಿ

ಪತ್ನಿ ಮೇಲೆ ಹಲ್ಲೆ: ಪತಿ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪತ್ನಿ ಮೇಲೆ ಮಾರಕಾಸ್ತ್ರಗಳಿಂದ ಹಲ್ಲೆ ನಡೆಸಿದ್ದ ಪತಿಯನ್ನು ಜೀವನ್‌ಬಿಮಾನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಶೇಕ್ ಮುಜೀಬ್(35) ಬಂಧಿತ ಆರೋಪಿ. ಆರ್.ಟಿ.ನಗರದ ನಿಗರ್(28) ಹಲ್ಲೆಗೆ ಒಳಗಾದವರು. ಸೋಮವಾರ ರಾತ್ರಿ 7 ಗಂಟೆ ಸುಮಾರಿಗೆ ಮುರಗೇಶಪಾಳ್ಯದ ವಿಂಡ್ ಟನಲ್ ರಸ್ತೆಯ ಒಮೆಗಾ ಹೆಲ್ತ್ ಕೇರ್ ಹಿಂಭಾಗ ಈ ಘಟನೆ ನಡೆದಿದೆ.

'ಆರೋಪಿ ಶೇಕ್ ಮುಜೀಬ್ ಮತ್ತು ನಿಗರ್ ದಂಪತಿ ಆರು ವರ್ಷಗಳ ಹಿಂದೆ ಮದುವೆಯಾಗಿದ್ದರು. ಆರ್.ಟಿ.ನಗರದ ಬಾಡಿಗೆ ಮನೆಯಲ್ಲಿ ನೆಲೆಸಿದ್ದರು. ಶೇಕ್ ಮುಜೀಬ್ ಚಾಲಕ ವೃತ್ತಿ ಮಾಡುತ್ತಿದ್ದರು. ದಂಪತಿ ಮಧ್ಯೆ ಭಿನ್ನಾಭಿಪ್ರಾಯ ಉಂಟಾಗಿ ಗಲಾಟೆ ನಡೆಯುತ್ತಿತ್ತು. ಪತ್ನಿ ನಿಗರ್ ಪತಿಯಿಂದ ಪ್ರತ್ಯೇಕಗೊಂಡು ಆರು ತಿಂಗಳಿಂದ ಪಿಜಿಯಲ್ಲಿ ನೆಲೆಸಿದ್ದರು. ಉಬರ್ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದರು' ಎಂದು ಪೊಲೀಸರು ಹೇಳಿದರು.

'ನಿಗರ್ ವಾಸ್ತವ್ಯ ಮಾಡಿದ್ದ ಪಿಜಿ ಬಳಿಗೆ ಸೋಮವಾರ ರಾತ್ರಿ ಬಂದಿದ್ದ ಆರೋಪಿ, ಹೊರಗೆ ಕಾದು ಕುಳಿತಿದ್ದ. ಸಂಜೆ 7 ಗಂಟೆ ಸುಮಾರಿಗೆ ಪತ್ನಿ ನಿಗರ್ ಬಂದಾಗ ಹಲ್ಲೆ ನಡೆಸಿದ್ದಾನೆ. ಹಲ್ಲೆಯಿಂದ ತೀವ್ರವಾಗಿ ಗಾಯಗೊಂಡಿದ್ದ ನಿಗರ್ ಅವರನ್ನು ಸ್ಥಳೀಯರೇ ಸಮೀಪದ ಆಸ್ಪತ್ರೆಗೆ ದಾಖಲಿಸಿದ್ದರು. ಕೊಲೆಗೆ ಯತ್ನ ಪ್ರಕರಣ ದಾಖಲಿಸಿಕೊಂಡು ಆರೋಪಿಯನ್ನು ಬಂಧಿಸಲಾಗಿದೆ' ಎಂದು ಮೂಲಗಳು ತಿಳಿಸಿವೆ.

ಗ್ರಾಹಕರ ಸೋಗು: ಮೊಬೈಲ್ ಕಳವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೊಬೈಲ್ ಶಾಪ್‌ಗೆ ಗ್ರಾಹಕರ ಸೋಗಿನಲ್ಲಿ ತೆರಳಿ, ಮಾಲೀಕರ ಗಮನ ಬೇರೆಡೆ ಸೆಳೆದು ಮೊಬೈಲ್ ಕಳವು ಹಾಗೂ ರಸ್ತೆ ಬದಿಯಲ್ಲಿ ನಿಲುಗಡೆ ಮಾಡುತ್ತಿದ್ದ ಬೈಕ್‌ಗಳ ಕಳವು ಮಾಡುತ್ತಿದ್ದ ಇಬ್ಬರು ಆರೋಪಿಗಳನ್ನು ಜ್ಞಾನಭಾರತಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಆನೇಕಲ್‌ನ ನವೀನ್ (32) ಹಾಗೂ ಬೇಗೂರಿನ ಶಿವರಾಜ್ (31) ಬಂಧಿತರು.

ಬಂಧಿತರಿಂದ ₹11 ಲಕ್ಷ ಮೌಲ್ಯದ 5 ಬೈಕ್ ಹಾಗೂ 41 ಮೊಬೈಲ್‌ಗಳನ್ನು ಜಪ್ತಿ ಮಾಡಿಕೊಳ್ಳಲಾಗಿದೆ ಎಂದು ನಗರ ಪೊಲೀಸ್ ಕಮಿಷನರ್ ಬಿ.ದಯಾನಂದ್ ಪತ್ರಿಕಾಗೋಷ್ಠಿಯಲ್ಲಿ ಮಂಗಳವಾರ ಮಾಹಿತಿ ನೀಡಿದರು.



ಆರೋಪಿಗಳಿಂದ ಜಪ್ತಿ ಮಾಡಿಕೊಂಡ ಚಿನ್ನಾಭರಣ ಹಾಗೂ ಮೊಬೈಲ್‌ಗಳು
– ಪ್ರಜಾವಾಣಿ ಚಿತ್ರ

ಜ್ಞಾನಭಾರತಿ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಡಿ.23ರಂದು ಮನೆಯೊಂದರ ಎದುರು ನಿಲುಗಡೆ ಮಾಡಿದ್ದ ಬೈಕ್ ಕಳವಾಗಿತ್ತು. ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಿದಾಗ, ಆರೋಪಿಗಳು ನಗರದ ವಿವಿಧೆಡೆ ಮೊಬೈಲ್‌ಗಳನ್ನು ಕಳ್ಳತನ ಮಾಡಿರುವುದು ತಿಳಿಯಿತು ಎಂದು ಮಾಹಿತಿ ನೀಡಿದರು.

ಬೈಕ್ ಹ್ಯಾಂಡಲ್‌ಗೆ ಹಾಕಲಾಗಿದ್ದ ಲಾಕ್ ತೆಗೆದು ಕಳವು ಮಾಡಿರುವುದಾಗಿ ಆರೋಪಿಗಳು ತಪ್ಪೊಪ್ಪಿಕೊಂಡಿದ್ದಾರೆ. ಬಂಧಿತರ ವಿರುದ್ಧ ಜ್ಞಾನಭಾರತಿ ಪೊಲೀಸ್ ಠಾಣೆಯಲ್ಲಿ ಎರಡು, ಕುಂಬಳಗೋಡು ಪೊಲೀಸ್ ಠಾಣೆ, ಬ್ಯಾಯಪ್ಪನಹಳ್ಳಿ ಹಾಗೂ ಬೇಗೂರು ಪೊಲೀಸ್ ಠಾಣೆಯಲ್ಲಿ ತಲಾ ಒಂದು ಪ್ರಕರಣ ದಾಖಲಾಗಿವೆ ಎಂದು ಹೇಳಿದರು.

ಆನ್‌ಲೈನ್ ಬೆಟ್ಟಿಂಗ್‌ಗೆ ಹಣ ಬಳಕೆ: ಮನೆಗಳ ಬೀಗ ಒಡೆದು ಚಿನ್ನಾಭರಣ ಕಳವು ಮಾಡುತ್ತಿದ್ದ ಆರೋಪಿಯನ್ನು ಮೈಕೊಲೇಔಟ್ ಠಾಣೆ ಪೊಲೀಸರು ಬಂಧಿಸಿದ್ದಾರೆ. ಬಿಟಿಎಂ ಲೇಔಟ್ 2ನೇ ಹಂತದ ನಿವಾಸಿ ಸುನಿಲ್ (31) ಬಂಧಿತ ಆರೋಪಿ.

ಬಂಧಿತ ಆರೋಪಿಯಿಂದ ₹30 ಲಕ್ಷ ಮೌಲ್ಯದ 525 ಗ್ರಾಂ ಚಿನ್ನಾಭರಣ, 550 ಗ್ರಾಂ ಬೆಳ್ಳಿ ಸಾಮಗ್ರಿ ಹಾಗೂ ಎರಡು ಮೊಬೈಲ್ ಜಪ್ತಿ ಮಾಡಲಾಗಿದೆ ಎಂದು ಪೊಲೀಸರು ಹೇಳಿದರು.

ಕಳವು ಮಾಡಿದ ಚಿನ್ನ ಹಾಗೂ ಬೆಳ್ಳಿ ಸಾಮಗ್ರಿಯನ್ನು ಆರೋಪಿ ಮಾರಾಟ ಮಾಡಿ, ಅದರಿಂದ ಬಂದ ಹಣವನ್ನು ದುಶ್ಚಟ ಹಾಗೂ ಆನ್‌ಲೈನ್ ಬೆಟ್ಟಿಂಗ್‌ಗೆ ಬಳಕೆ ಮಾಡುತ್ತಿದ್ದ. ಆರೋಪಿ ಬಂಧನದಿಂದ ಮೈಕೊಲೇಔಟ್ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ 11 ಪ್ರಕರಣಗಳು ಪತ್ತೆಯಾಗಿವೆ ಎಂದು ತಿಳಿಸಿದರು.

'ಅನಧಿಕೃತ ಜಾಹೀರಾತು: ಎಫ್‌ಐಆರ್'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ವ್ಯಾಪ್ತಿಯಲ್ಲಿ ಅನಧಿಕೃತವಾಗಿ ಜಾಹೀರಾತು ಹಾಗೂ ಫಲಕಗಳನ್ನು ಹಾಕಿದ ಸಾರ್ವಜನಿಕರ ವಿರುದ್ಧ ನಿರ್ದಾಕ್ಷಿಣ್ಯವಾಗಿ ಎಫ್‌ಐಆರ್ ದಾಖಲಿಸಿ ತನಿಖೆ ನಡೆಸಲಾಗುತ್ತಿದೆ' ಎಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಹೈಕೋರ್ಟ್‌ಗೆ ತಿಳಿಸಿದೆ.

'ಅನಧಿಕೃತ ಜಾಹೀರಾತು ಫಲಕಗಳ ಹಾವಳಿ ತಡೆಯಲು ಬಿಬಿಎಂಪಿಗೆ ನಿರ್ದೇಶಿಸಬೇಕು' ಎಂದು ಕೋರಿ ಸಾಮಾಜಿಕ ಕಾರ್ಯಕರ್ತ ಮಾಯಿಗೇಗೌಡ ಮತ್ತಿತರರು ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಪಿ.ಎಸ್.ದಿನೇಶ್ ಕುಮಾರ್ ನೇತೃತ್ವದ ವಿಭಾಗೀಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಬಿಬಿಎಂಪಿ ಪರ ವಕೀಲರು, 'ಪ್ರಸಕ್ತ ಸಾಲಿನಲ್ಲಿ ಬಿಬಿಎಂಪಿ ವ್ಯಾಪ್ತಿಯಲ್ಲಿ 402 ಜಾಹೀರಾತು ಹೋರ್ಡಿಂಗ್ಸ್ ಪತ್ತೆಯಾಗಿವೆ. ಇವುಗಳಲ್ಲಿ 150 ಅಧಿಕೃತ ಮತ್ತು 251 ಅನಧಿಕೃತ ಇವೆ. 73 ಫಲಕಗಳನ್ನು ಸ್ವಯಂ ತೆರವುಗೊಳಿಸಲಾಗಿದ್ದರೆ 123 ಅನ್ನು ಬಿಬಿಎಂಪಿ ತೆರವುಗೊಳಿಸಿದೆ. 203 ಪ್ರಕರಣಗಳಲ್ಲಿ ನೋಟಿಸ್ ಜಾರಿಗೊಳಿಸಲಾಗಿದೆ' ಎಂದು ವಿವರಿಸಿದರು. ಇದನ್ನು ದಾಖಲಿಸಿಕೊಂಡ ನ್ಯಾಯಪೀಠ ವಿಚಾರಣೆ ಮುಂದೂಡಿದೆ.

ಚಿನ್ನಾಭರಣ ವ್ಯಾಪಾರಿ ಕೊಲೆ ಇಬ್ಬರು ಆರೋಪಿಗಳ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರ್ತಪೇಟೆಯ ಚಿನ್ನಾಭರಣ ವ್ಯಾಪಾರಿಯೊಬ್ಬರನ್ನು ಕೊಲೆ ಮಾಡಿದ್ದ ಇಬ್ಬರು ಆರೋಪಿಗಳನ್ನು ಹಲಸೂರು ಗೇಟ್ ಠಾಣೆ ಪೊಲೀಸರು ಬಂಧಿಸಿದ್ದಾರೆ.

ನಗರ್ತಪೇಟೆಯ ಕೆ.ಎಸ್.ಲೇನ್ ನಿವಾಸಿ ಮೊಹಮ್ಮದ್ ಅಖ್ತರ್ ಅಲಿ (48) ಕೊಲೆಯಾದವರು. ಕೊಲೆ ನಡೆದ 24 ಗಂಟೆಯ ಒಳಗೆ ಆರೋಪಿ ಶಹನವಾಜ್ ಸೇರಿದಂತೆ ಇಬ್ಬರನ್ನು ಪೊಲೀಸರು ಬಂಧಿಸುವಲ್ಲಿ ಯಶಸ್ವಿ ಆಗಿದ್ದಾರೆ.

ಪಶ್ಚಿಮ ಬಂಗಾಳದ ಮೊಹಮ್ಮದ್ ಅಖ್ತರ್ ಅಲಿ, ತಮ್ಮ ಕುಟುಂಬ ಸದಸ್ಯರೊಂದಿಗೆ ನಗರದಲ್ಲಿ ನೆಲೆಸಿದ್ದರು. ಅವರು ಮನೆ ಸಮೀಪವೇ ಚಿನ್ನಾಭರಣ ಅಂಗಡಿ ನಡೆಸುತ್ತಿದ್ದರು.

'ಮೊಹಮ್ಮದ್ ಅಖ್ತರ್ ಅಲಿ ತಮ್ಮ ಮನೆ ಬಳಿಯ ಯುವತಿಯೊಂದಿಗೆ ಸ್ನೇಹ ಬೆಳೆಸಿದ್ದರು. ಈ ವಿಷಯ ತಿಳಿದಿದ್ದ ಯುವತಿಯ ಅಕ್ಕನ ಪತಿ, ಮೊಹಮ್ಮದ್ ಅಖ್ತರ್ ಅಲಿಯ ಕೊಲೆಗೆ ಸಹಚರನ ಜತೆ ಸೇರಿ ಸಂಚು ರೂಪಿಸಿದ್ದ. ಕಳೆದೊಂದು ತಿಂಗಳಿನಿಂದ ಕೊಲೆ ಮಾಡಲು ಹೊಂಚು ಹಾಕುತ್ತಿದ್ದ' ಎಂದು ಪೊಲೀಸರು ಹೇಳಿದರು.

'ಸೋಮವಾರ ಸಂಜೆ ಅಖ್ತರ್ ಅಲಿ ಅವರಿಗೆ ಕರೆ ಮಾಡಿದ್ದ ಆರೋಪಿಗಳು, ಕಡಿಮೆ ಬೆಲೆಗೆ ಚಿನ್ನದ ಗಟ್ಟಿ ಕೊಡಿಸುವುದಾಗಿ ಸುಳ್ಳು ಹೇಳಿ ಕಬ್ಬನ್‌ಪೇಟೆ ಮುಖ್ಯರಸ್ತೆಗೆ ಕರೆಸಿಕೊಂಡಿದ್ದ. ನಂತರ, ಚಿನ್ನದ ಗಟ್ಟಿ ಕೊಡುವ ವ್ಯಕ್ತಿ ವರ್ತೂರು ಬಳಿ ಕಾಯುತ್ತಿರುವುದಾಗಿ ನಂಬಿಸಿ ಕಾರಿನಲ್ಲಿ ಅಲ್ಲಿಗೆ ಕರೆದೊಯ್ಯಲಾಗಿತ್ತು' ಎಂದು ಪೊಲೀಸರು ಹೇಳಿದರು.

'ವರ್ತೂರು ಸಮೀಪದ ನಿರ್ಜನ ಪ್ರದೇಶದಲ್ಲಿ ಕಾರು ನಿಲ್ಲಿಸಿದ್ದ ಆರೋಪಿಗಳು ಅಲಿ ಅವರ ಕುತ್ತಿಗೆಗೆ ಹಗ್ಗ ಬಿಗಿದು ಉಸಿರುಗಟ್ಟಿಸಿ ಕೊಲೆ ಮಾಡಿದ್ದರು. ನಂತರ, ಹೊಟ್ಟೆಗೆ ನಾಲ್ಕು ಬಾರಿ ಇರಿದು ಕೊಲೆ ಮಾಡಿದ್ದಾರೆ' ಎಂದು ಹೇಳಿದರು.

ಆರೋಪಿಗಳು ಕೊಲೆ ಬಳಿಕ ಕಾರಿನಲ್ಲೇ ಶವ ಸಾಗಿಸಿಕೊಂಡು ಹೋಗಿ ನದಿಗೆ ಎಸೆದು ಅಲ್ಲಿಂದ ಪರಾರಿ ಆಗಿದ್ದರು. ಅಖ್ತರ್ ಮನೆಗೆ ಬಾರದಿದ್ದ ಕಾರಣಕ್ಕೆ ಆತಂಕಗೊಂಡ ಕುಟುಂಬದ ಸದಸ್ಯರು ಪೊಲೀಸರಿಗೆ ದೂರು ನೀಡಿದ್ದರು. ಮೊಬೈಲ್ ಲೊಕೇಷನ್ ಆಧರಿಸಿ ಆರೋಪಿಗಳನ್ನು ಪತ್ತೆ ಮಾಡಲಾಯಿತು ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

ಕಟ್ಟಡದಲ್ಲಿ ಯುವತಿ ಮೃತದೇಹ ಪತ್ತೆ

ಬೆಂಗಳೂರು: ಸಂಪಂಗಿರಾಮನಗರ ಪೊಲೀಸ್ ಠಾಣಾ ವ್ಯಾಪ್ತಿಯ ಡಬಲ್ ರೋಡ್ ಬಳಿಯ ನಿರ್ಮಾಣ ಹಂತದ ಕಟ್ಟಡದಲ್ಲಿ 25ರಿಂದ 26 ವರ್ಷದ ಯುವತಿಯೊಬ್ಬರ ಮೃತದೇಹ ಪತ್ತೆಯಾಗಿದೆ.

'ಕಾಮಗಾರಿ ಸ್ಥಗಿತಗೊಂಡಿದ್ದ ಕಟ್ಟಡದಲ್ಲಿ ಮೃತದೇಹ ಪತ್ತೆಯಾಗಿದೆ. ಯುವತಿಯ ತಲೆಯ ಭಾಗದಲ್ಲಿ ಗಾಯದ ಗುರುತುಗಳಿವೆ. ಮೇಲ್ನೋಟಕ್ಕೆ ಕಟ್ಟಡದಿಂದ ಬಿದ್ದು ಮೃತಪಟ್ಟಿರುವ ಶಂಕೆ ವ್ಯಕ್ತವಾಗಿದೆ. ಎಲ್ಲ ಆಯಾಮದಲ್ಲೂ ತನಿಖೆ ನಡೆಸಲಾಗುವುದು' ಎಂದು ಪೊಲೀಸರು ಹೇಳಿದರು.

'ಯುವತಿಯ ಕುಟುಂಬಸ್ಥರು ಪತ್ತೆಯಾದ ಮೇಲೆ ಮರಣೋತ್ತರ ಪರೀಕ್ಷೆ ನಡೆಸಲಾಗುವುದು. ಮರಣೋತ್ತರ ಪರೀಕ್ಷೆಯ ವರದಿ ಬಂದ ಬಳಿಕ ಘಟನೆಗೆ ಕಾರಣ ಗೊತ್ತಾಗಲಿದೆ' ಎಂದು ಪೊಲೀಸರು ಹೇಳಿದರು.

ತಪ್ಪಿತಸ್ಥರ ವಿರುದ್ಧ ಕ್ರಮಕ್ಕೆ ರಂಭಾಪುರಿ ಶ್ರೀಗಳ ಆಗ್ರಹ

ಶಿಗ್ಗಾವಿ (ಹಾವೇರಿ ಜಿಲ್ಲೆ): 'ಬಾಗಲಕೋಟೆ ಜಿಲ್ಲೆ ಕಲಾದಗಿ ಗ್ರಾಮದಲ್ಲಿ ನಡೆದ ಚಪ್ಪಲಿ ಎಸೆತ ಪ್ರಕರಣವು ಪೀಠಕ್ಕೆ ಅಷ್ಟೇ ಅಲ್ಲ, ಇಡೀ ನಾಡಿಗೆ ಕಪ್ಪುಚುಕ್ಕೆಯಾಗಿದೆ. ಸರ್ಕಾರ ತಕ್ಷಣವೇ ತಪ್ಪಿತಸ್ಥರ ವಿರುದ್ಧ ಕಠಿಣ ಕಾನೂನು ಕ್ರಮ ಜರುಗಿಸಬೇಕು' ಎಂದು ಬಾಳೆಹೊನ್ನೂರು ರಂಭಾಪುರಿ ಪೀಠದ ವೀರಸೋಮೇಶ್ವರ ಶಿವಾಚಾರ್ಯ ಸ್ವಾಮೀಜಿ ಒತ್ತಾಯಿಸಿದ್ದಾರೆ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ • ಆಸ್ತಿ ತೆರಿಗೆ ತಿದ್ದುಪಡಿ ಮಸೂದೆ ಅಂಗೀಕಾರ

ತೆರಿಗೆ ಬಾಕಿ: ಶೇ 50ರಷ್ಟು ದಂಡ ಇಳಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿ ಬಾಕಿ ಉಳಿಸಿಕೊಂಡಿರುವ ಆಸ್ತಿ ತೆರಿಗೆ ಮೇಲಿನ ದಂಡದ ಪ್ರಮಾಣ ಶೇ 50ರಷ್ಟು ಕಡಿತಗೊಳಿಸಲು ಅವಕಾಶ ಕಲ್ಪಿಸುವ 'ಬಿಬಿಎಂಪಿ (ತಿದ್ದುಪಡಿ) ಮಸೂದೆ–2024' ವಿಧಾನಸಭೆಯಲ್ಲಿ ಮಂಗಳವಾರ ಅಂಗೀಕಾರಗೊಂಡಿತು.

ಬೆಂಗಳೂರು ನಗರಾಭಿವೃದ್ಧಿ ಖಾತೆಯನ್ನೂ ಹೊಂದಿರುವ ಡಿಸಿಎಂ ಡಿ.ಕೆ. ಶಿವಕುಮಾರ್ ಮಸೂದೆ ಮಂಡಿಸಿದರು.

ಮಸೂದೆಯ ಕುರಿತು ವಿವರಣೆ ನೀಡಿದ ಶಿವಕುಮಾರ್, 'ಬಡ ಮತ್ತು ದುರ್ಬಲ ವರ್ಗದವರಿಗೆ ಇದರಿಂದ ಅನುಕೂಲ ಆಗಲಿದೆ. ಸರ್ಕಾರದ ವಸತಿ ಯೋಜನೆಯ ಆಸ್ತಿಗಳು ಹಾಗೂ ಕೊಳೆಗೇರಿ ಪ್ರದೇಶದ ಕಟ್ಟಡಗಳಿಗೆ ಬಡ್ಡಿ ಮೇಲೆ ದಂಡ ಇರುವುದಿಲ್ಲ. 1 ಸಾವಿರ ಚದರ ಅಡಿವರೆಗಿನ ಸ್ವಯಂ ಬಳಕೆ ಆಸ್ತಿದಾರರಿಗೆ ಸಂಪೂರ್ಣ ದಂಡ ವಿನಾಯಿತಿ ನೀಡಲಾಗಿದೆ' ಎಂದರು.

'ವಸತಿ ಮತ್ತು ಮಿಶ್ರ ಆಸ್ತಿದಾರರ (ವಸತಿ ಮತ್ತು ವಾಣಿಜ್ಯ) ಬಾಕಿಯನ್ನು ಎಷ್ಟೇ ವರ್ಷದಿಂದ ಉಳಿಸಿಕೊಂಡಿದ್ದರೂ ಹಿಂದಿನ 5 ವರ್ಷಕ್ಕೆ ಮಾತ್ರ ಲೆಕ್ಕಾಚಾರ ಹಾಕಲು ನಿರ್ಧರಿಸಲಾಗಿದೆ. 5 ವರ್ಷಕ್ಕಿಂತ ಹಿಂದಿನ ಅವಧಿಗೆ ಬಡ್ಡಿ ಮನ್ನಾ ಮಾಡಲಾಗಿದೆ. ಇದೊಂದು ಜನಸ್ನೇಹಿ ತಿದ್ದುಪಡಿ ಮಸೂದೆ. ಸರ್ಕಾರಕ್ಕೆ ನಷ್ಟವಾದರೂ ಪರವಾಗಿಲ್ಲ. ಜನರಿಗೆ ಅನುಕೂಲ ಆಗಲಿ ಎಂದು ಮಸೂದೆ ಮಂಡಿಸಲಾಗಿದೆ' ಎಂದೂ ತಿಳಿಸಿದರು.

ಈ ತಿದ್ದುಪಡಿ ಮಸೂದೆಯಿಂದ ಬೆಂಗಳೂರಿನ ನಾಗರಿಕರಿಗೆ ತೆರಿಗೆ ಬಾಬ್ತು, ದಂಡ ವಿನಾಯಿತಿ ಸೇರಿ ಸುಮಾರು ₹ 2,700 ಕೋಟಿ ಅನುಕೂಲ ಆಗಲಿದೆ. ಜತೆಗೆ ಪಾಲಿಕೆಗೆ ಸುಮಾರು ₹ 1 ಸಾವಿರ ಕೋಟಿಯಷ್ಟು ಆಸ್ತಿ ತೆರಿಗೆ ಬರಲಿದೆ. ಸುಮಾರು 5.51 ಲಕ್ಷ ತೆರಿಗೆ ಬಾಕಿದಾರರು, ಸುಮಾರು 5- 7 ಲಕ್ಷ ತೆರಿಗೆ ವ್ಯಾಪ್ತಿಗೆ ಬಾರದವರು ಹಾಗೂ 3 ಲಕ್ಷದಷ್ಟು ಮಂದಿ ಭಾಗಶಃ ತೆರಿಗೆ ಪಾವತಿದಾರರು ಸೇರಿ 13 ಲಕ್ಷದಿಂದ 15 ಲಕ್ಷ ಜನರಿಗೆ ಅನುಕೂಲವಾಗಲಿದೆ ಎಂದು ನಿರೀಕ್ಷಿಸಲಾಗಿದೆ.

ಸ್ಮಾರ್ಟ್‌ಸಿಟಿ: ₹4,557 ಕೋಟಿ ಖರ್ಚು

ಬೆಂಗಳೂರು: ರಾಜ್ಯದ 7 ಸ್ಮಾರ್ಟ್‌ಸಿಟಿಗಳಿಗೆ ಇದುವರೆಗೂ ₹4,557 ಕೋಟಿ ಖರ್ಚು ಮಾಡಲಾಗಿದೆ. ₹1,726 ಕೋಟಿ ಮೊತ್ತದ ಕಾಮಗಾರಿಗಳು ಪ್ರಗತಿಯಲ್ಲಿವೆ ಎಂದು ನಗರಾಭಿವೃದ್ಧಿ ಸಚಿವ ಬೈರತಿ ಸುರೇಶ್ ಹೇಳಿದರು.



ವಿಧಾನ ಮಂಡಲದಲ್ಲಿ

ಕಾಂಗ್ರೆಸ್‌ನ ಅಬ್ದುಲ್ ಜಬ್ಬಾರ್ ಪ್ರಶ್ನೆಗೆ ಉತ್ತರಿಸಿದ ಅವರು, ಈಗಾಗಲೇ ಶೇ 90ರಷ್ಟು ಕಾಮಗಾರಿ ಪೂರ್ಣಗೊಂಡಿವೆ. ಕೇಂದ್ರ ಸರ್ಕಾರ ಕಾಮಗಾರಿಗಳ ಅನುಷ್ಠಾನಕ್ಕೆ ಜೂನ್–2024ರವರೆಗೆ ಅವಕಾಶ ನೀಡಿದೆ. ಎಲ್ಲ ಕಾಮಗಾರಿಗಳನ್ನೂ ನಾಲ್ಕು ತಿಂಗಳ ಒಳಗೆ ಅನುಷ್ಠಾನಗೊಳಿಸಲಾಗುವುದು ಎಂದರು.

ಬರಗಾಲದಿಂದ ರಾಜ್ಯದಲ್ಲಿ 5.11 ಲಕ್ಷ ಎಕರೆ ತೋಟಗಾರಿಕಾ ಬೆಳೆ ಹಾನಿಯಾಗಿದೆ. 30.24 ಲಕ್ಷ ರೈತರಿಗೆ ₹573.28 ಕೋಟಿ ಪರಿಹಾರ ನೀಡಲಾಗಿದೆ ಎಂದು ತೋಟಗಾರಿಕಾ ಸಚಿವ ಎಸ್.ಎಸ್.ಮಲ್ಲಿಕಾರ್ಜುನ್ ಹೇಳಿದರು.

ಜೆಡಿಎಸ್‌ನ ಟಿ.ಎ. ಶರವಣ ಪ್ರಶ್ನೆಗೆ ಉತ್ತರಿಸಿದ ಅವರು, ಕೇಂದ್ರದ ನೆರವು ದೊರೆತ ನಂತರ ಮುಂದಿನ ಪರಿಹಾರ ವಿತರಿಸಲಾಗುವುದು ಎಂದರು.

ಕರ್ನಾಟಕ ಗಣಿ ಪರಿಸರ ಪುನಶ್ಚೇತನ ನಿಗಮದ ಬೈ-ಲಾಗಳಿಗೆ ತಿದ್ದುಪಡಿ ತರುವ ಪ್ರಸ್ತಾವ ಸರ್ಕಾರದ ಮುಂದೆ ಇಲ್ಲ ಎಂದು ಸಚಿವ ಮಲ್ಲಿಕಾರ್ಜುನ್ ಹೇಳಿದರು.

ಅನಿವಾಸಿ ಕನ್ನಡಿಗರಿಗೆ ಪ್ರತ್ಯೇಕ ಸಚಿವಾಲಯ

ಅನಿವಾಸಿ ಭಾರತೀಯ ಕನ್ನಡಿಗರ ಕಲ್ಯಾಣಕ್ಕಾಗಿ ಪ್ರತ್ಯೇಕ ಸಚಿವಾಲಯ ಸ್ಥಾಪಿಸಬೇಕು ಎಂದು ಜೆಡಿಎಸ್‌ನ ಬಿ.ಎಂ.ಫಾರೂಕ್ ಒತ್ತಾಯಿಸಿದರು.

ಎನ್‌ಆರ್‌ಐಗಳ ಕಲ್ಯಾಣಕ್ಕಾಗಿ ಮುಂದಿನ ಬಜೆಟ್‌ನಲ್ಲಿ ₹100 ಕೋಟಿ ಮೀಸಲಿಡಬೇಕು. ಗುರುತಿನ ಪತ್ರ ನೀಡಬೇಕು. ವೃತ್ತಿಪರ ಕೋರ್ಸ್‌ಗಳ ಪ್ರವೇಶ ಸರಳೀಕರಣಗೊಳಿಸಬೇಕು. ಅಧಿಕ ಶುಲ್ಕಕ್ಕೆ ಕಡಿವಾಣ ಹಾಕಬೇಕು. ತಮಿಳುನಾಡು, ಕೇರಳ, ತೆಲಂಗಾಣ ಮಾದರಿಯಲ್ಲಿ ಕರಡು ನೀತಿ ರೂಪಿಸಬೇಕು. ಮಂಗಳೂರಿನಲ್ಲಿ ವಿಎಫ್‌ಎಸ್ ಕೇಂದ್ರ ಆರಂಭಿಸಲು ಕೇಂದ್ರಕ್ಕೆ ಶಿಫಾರಸು ಮಾಡಬೇಕು ಎಂದು ಆಗ್ರಹಿಸಿದರು.

ಗಣಿಗಾರಿಕೆಯಿಂದ ಬಾಧಿತವಾದ ಬಳ್ಳಾರಿ, ಚಿತ್ರದುರ್ಗ, ತುಮಕೂರು, ವಿಜಯನಗರ ಜಿಲ್ಲೆಗಳ 466 ಗ್ರಾಮಗಳ ಅಭಿವೃದ್ಧಿಗೆ ₹7,634 ಕೋಟಿ ಮೊತ್ತಕ್ಕೆ ಕ್ರಿಯಾಯೋಜನೆ ರೂಪಿಸಲಾಗಿದೆ. ಹೊಸ ಹಳ್ಳಿಗಳ ಸೇರ್ಪಡೆ ಅಥವಾ ಹಣವನ್ನು ಇತರೆ ಭಾಗಕ್ಕೆ ಹಂಚಿಕೆ ಮಾಡಲು ಅವಕಾಶ ಇಲ್ಲ ಎಂದರು.

ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗಾಗಿ 150 ಹೊಸ ಹಾಸ್ಟೆಲ್‌ಗಳನ್ನು ಆರಂಭಿಸಲಾಗುವುದು ಎಂದು ಸಚಿವ ಶಿವರಾಜ್ ತಂಗಡಗಿ ಅವರು ಹೇಳಿದರು.

ಬಿಜೆಪಿಯ ಹಣಮಂತಪ್ಪ ನಿರಾಣಿ ಅವರ ಪ್ರಶ್ನೆಗೆ ಉತ್ತರಿಸಿದ ಅವರು, ವಾರ್ಡನ್‌ಗಳ ಕೊರತೆ ನೀಗಿಸಲು ಕ್ರಮ ಕೈಗೊಳ್ಳಲಾಗುವುದು. ಮೂಲ ಸೌಕರ್ಯಗಳಿಗೆ ಹೆಚ್ಚಿನ ಆದ್ಯತೆ ನೀಡಲಾಗುವುದು ಎಂದರು.

ಸುದ್ದಿ 2 ನಿಮಿಷ

ಹರಿದಾಸ ಉತ್ಸವ 23ರಿಂದ

ಬೆಂಗಳೂರು: ಸಂಗೀತ ಸಂಭ್ರಮ ಟ್ರಸ್ಟ್, ಕಾಡು ಮಲ್ಲೇಶ್ವರ ಗೆಳೆಯರ ಬಳಗ ಹಾಗೂ ಮಲ್ಲೇಶ್ವರ ಶ್ಯಾಮಲಾ ಕೃಷ್ಣ ಸಂಗೀತ ಸಭಾ ಇದೇ 23 ರಿಂದ 25ರವರೆಗೆ 'ಹರಿದಾಸ ಉತ್ಸವ' ಕಾರ್ಯಕ್ರಮವನ್ನು ಮಲ್ಲೇಶ್ವರದಲ್ಲಿರುವ ಕಾಡು ಮಲ್ಲೇಶ್ವರ ಬಯಲು ರಂಗ ಮಂಟಪದಲ್ಲಿ ನಡೆಯಲಿದೆ ಎಂದು ಬಿ.ಕೆ. ಶಿವರಾಂ ತಿಳಿಸಿದರು.

ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಹುಣ್ಣಿಮೆ ಹಾಡು 188ರ ಅಂಗವಾಗಿ ಈ ಉತ್ಸವವನ್ನು ಆಯೋಜಿಸಲಾಗುತ್ತಿದೆ. ಫೆ.23ರ ಸಂಜೆ 5ಕ್ಕೆ ಸಂಗೀತ ಶ್ರೀಕಿಷನ್ ಅವರು ಹಾಡಲಿದ್ದು, ಅವರಿಗೆ ಪಿಟೀಲು ವಾದಕ ಆದಿತ್ಯ ಮಣಿಕರ್ಣಿಕ, ಮೃದಂಗ ವಾದಕ ಪೃಥ್ವಿ ಕಷ್ಣ ಅವರು ಸಾಥ್ ನೀಡಲಿದ್ದಾರೆ. ಪದ್ಮ ರಘುನಂದನ್, ಗೋದಾ ಮನು ಅವರು ಯುಗಳ ಗಾಯನ ಪ್ರಸ್ತುತ ಪಡಿಸಲಿದ್ದು, ಪಿಟೀಲು ವಾದಕ ವೆಂಕಟೇಶ ಜೋಷಿಯರ್, ಮೃದಂಗ ವಾದಕ ಜಿ.ಎಸ್. ನಾಗರಾಜ್ ಸಾಥ್ ನೀಡಲಿದ್ದಾರೆ' ಎಂದು ಮಾಹಿತಿ ನೀಡಿದರು.

ಫೆ. 24ರಂದು ಸಂಜೆ 5ಕ್ಕೆ ಜೈನ್ ವಿಶ್ವವಿದ್ಯಾಲಯದ ಜೆ.ಕೆ. ಶ್ರೀಧರ್ ಅವರು ಪಿಟೀಲು ಹಾಗೂ ಸಾಕೇತ್ ಮೃದಂಗ ನುಡಿಸಲಿದ್ದಾರೆ. ಗಾಯಕ ಅದಿತಿ ಪ್ರಹ್ಲಾದ್ ಮತ್ತು ಪಿಟೀಲು ವಾದಕ ಎಂ.ಎಸ್. ಗೋವಿಂದಸ್ವಾಮಿ, ಮೃದಂಗ ವಾದಕ ಭಾಗವತ್ ಅವರು ಸಾಥ್ ನೀಡಲಿದ್ದು, ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಲಿವೆ' ಎಂದರು.

ಫೆ. 25ರಂದು ಸಂಜೆ 5ಕ್ಕೆ ಸಂಗೀತ ಸಂಭ್ರಮ ಶಿಷ್ಯ ತಂಡದಿಂದ ಹರಿದಾಸ ಕೃತಿಗಳ ಗಾಯನ, ಬೆನಕ ತಂಡವು ರಂಗಗೀತೆಗಳನ್ನು ಪ್ರಸ್ತುತ ಪಡಿಸಲಿದ್ದು, ಅನನ್ಯ ಭಟ್, ಲಾವಣ್ಯ ಕೃಷ್ಣಮೂರ್ತಿ, ಹರಿಣಿ ಶ್ರೀಧರ್, ನಾಗಮಣಿ ಶ್ರೀನಾಥ್ ಸಂಗೀತ ಕಛೇರಿಗಳನ್ನು ಪ್ರಸ್ತುತ ಪಡಿಸಲಿದ್ದಾರೆ ಎಂದು ತಿಳಿಸಿದರು.

ರಂಗಕರ್ಮಿ ಶ್ರೀನಿವಾಸ್ ಜಿ. ಕಪ್ಪಣ್ಣ, ರಮಾ ಪುಸ್ತಕಮ್, ರೇವತಿ ಕಾಮತ್, ವೀಣಾಮೂರ್ತಿ ವಿಜಯ್ ಭಾಗವಹಿಸಿದ್ದರು.

ಮಸಾಯಿ ವಿದ್ಯಾಸಂಸ್ಥೆಯ 100ನೇ ಬ್ಯಾಚ್ ಘಟಿಕೋತ್ಸವ



ಬೆಂಗಳೂರು: ಮಸಾಯಿ ವಿದ್ಯಾಸಂಸ್ಥೆಯ 100ನೇ ಬ್ಯಾಚ್‌ನ ಘಟಿಕೋತ್ಸವದಲ್ಲಿ 800 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಲಾಯಿತು.

'ಇಡಿ ಟೆಕ್ ವೇದಿಕೆ'ಯು ಇದೇ ಮೊದಲ ಬಾರಿಗೆ ಪ್ರತ್ಯೇಕವಾಗಿ ಘಟಿಕೋತ್ಸವ ಹಮ್ಮಿಕೊಂಡಿತು. ಮಸಾಯಿ ವಿದ್ಯಾಸಂಸ್ಥೆಯ ಸಂಸ್ಥಾಪಕ ಪ್ರತೀಕ್ ಶುಕ್ಲಾ ಮಾತನಾಡಿ, 'ಸಾಂಪ್ರದಾಯಿಕ ಶಿಕ್ಷಣ ಮತ್ತು ನಿರಂತರವಾಗಿ ವಿಕಸನಗೊಳ್ಳುತ್ತಿರುವ ಉದ್ಯಮದ ನಡುವಿನ ಅಂತರ ಕಡಿಮೆಗೊಳಿಸುವುದು ಮಸಾಯಿ ಶಾಲೆಯ ಮುಖ್ಯ ಗುರಿ' ಎಂದರು.

ಮೈಸೂರಿನ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಎಂಜಿನಿಯರಿಂಗ್ ನಿರ್ದೇಶಕ ಶ್ರೀನಾಥ್ ಬಟ್ನಿ ಮಾತನಾಡಿ, 'ಪ್ರಾಯೋಗಿಕ ಕೌಶಲಗಳು ಮತ್ತು ಉದ್ಯಮದ ಪ್ರಸ್ತುತತೆಯ ಮೇಲೆ ಗಮನವನ್ನು ಹೊಂದಿರುವ ಮಸಾಯಿ ವಿದ್ಯಾಸಂಸ್ಥೆಯ ನವೀನ ವಿಧಾನವು ಶಿಕ್ಷಣದಲ್ಲಿ ಹೊಸ ಗುಣಮಟ್ಟವನ್ನು ಸೃಷ್ಟಿಸಿದೆ' ಎಂದು ಶ್ಲಾಘಿಸಿದರು.

ಶಾಸಕರ ಖರೀದಿಗೆ ಯತ್ನ ಆರೋಪ ಕಾಂಗ್ರೆಸ್ ದೂರು

ಬೆಂಗಳೂರು: 'ರಾಜ್ಯಸಭೆ ಚುನಾವಣೆಯಲ್ಲಿ 5ನೇ ಅಭ್ಯರ್ಥಿಯಾಗಿ ಕಣದಲ್ಲಿರುವ ಡಿ. ಕುಪೇಂದ್ರ ರೆಡ್ಡಿ ಗೆಲುವಿಗಾಗಿ ಜೆಡಿಎಸ್, ಬಿಜೆಪಿ ನಾಯಕರು, ಪಕ್ಷದ ಶಾಸಕರ ಖರೀದಿಗೆ ಮುಂದಾಗಿದ್ದಾರೆ' ಎಂದು ಆರೋಪಿಸಿ ಪೊಲೀಸ್ ಕಮಿಷನರ್ ಬಿ. ದಯಾನಂದ ಅವರಿಗೆ ಕಾಂಗ್ರೆಸ್ ನಿಯೋಗ ದೂರು ನೀಡಿದೆ.

ಮುಖ್ಯಮಂತ್ರಿಯ ಕಾನೂನು ಸಲಹೆಗಾರರೂ ಆದ ಶಾಸಕರಾದ ಎ.ಎಸ್. ಪೊನ್ನಣ್ಣ, ಎನ್.ಎಚ್. ಕೋನರಡ್ಡಿ ನೇತೃತ್ವದ ಕಾಂಗ್ರೆಸ್ ನಿಯೋಗವು ಈ ದೂರು ನೀಡಿದ್ದು, ರಾಜ್ಯಸಭಾ ಚುನಾವಣೆಯನ್ನು ಪಾರದರ್ಶಕವಾಗಿ ನಡೆಸಲು ಕ್ರಮ ಕೈಗೊಳ್ಳಬೇಕು ಎಂದೂ ಒತ್ತಾಯಿಸಿದೆ.

ರಾಜ್ಯಸಭೆ ಚುನಾವಣೆಗೆ ಆಮಿಷ ನೀಡುತ್ತಿರುವ ಬಗ್ಗೆ ಕಾಂಗ್ರೆಸ್ ಶಾಸಕರು ದೂರು ನೀಡಿರುವ ಕುರಿತು ಪ್ರತಿಕ್ರಿಯಿಸಿದ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, 'ನನಗೂ ಈ ವಿಚಾರವಾಗಿ ಮಾಹಿತಿ ಬಂದಿವೆ. ತನಿಖಾ ತಂಡ ಈ ವಿಚಾರದ ಕುರಿತು ತನಿಖೆ ನಡೆಸಲಿದೆ' ಎಂದರು.

ವಿಧಾನಸಭೆಯಲ್ಲಿ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿಕೆ

'ಕೊಳವೆ ಬಾವಿ ಮರು ಕೊರೆಯಲು ಆದೇಶ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬೆಂಗಳೂರಿನಲ್ಲಿ ಕುಡಿಯುವ ನೀರಿನ ಸಮಸ್ಯೆ ಎದುರಿಸಲು ಬತ್ತಿ ಹೋಗಿರುವ, ನೀರಿನ ಪ್ರಮಾಣ ಕಡಿಮೆಯಾಗಿರುವ ಕೊಳವೆ ಬಾವಿಗಳನ್ನು ಮರು ಕೊರೆಯಲು (ರೀ ಡ್ರಿಲ್ಲಿಂಗ್) ಆದೇಶಿಸಲಾಗಿದೆ' ಎಂದು ಬೆಂಗಳೂರು ಅಭಿವೃದ್ಧಿ ಸಚಿವರೂ ಆಗಿರುವ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು.

ವಿಧಾನಸಭೆಯಲ್ಲಿ ಬಿಜೆಪಿಯ ಬೈರತಿ ಬಸವರಾಜು, ಮುನಿರಾಜು, ಎಸ್.ಟಿ. ಸೋಮಶೇಖರ್ ಅವರು ಕೇಳಿದ ಪ್ರಶ್ನೆಗಳಿಗೆ ಉತ್ತರಿಸಿದ ಅವರು, 'ಬಿಬಿಎಂಪಿ ವ್ಯಾಪ್ತಿಯ 110 ಹಳ್ಳಿಗಳಿಗೆ ಏಪ್ರಿಲ್-ಮೇ ವೇಳೆಗೆ ಕಾವೇರಿ 5ನೇ ಹಂತದ ಮೂಲಕ ನೀರು ಪೂರೈಕೆ ಆರಂಭಿಸಲಾಗುವುದು' ಎಂದರು.

'ಕಾವೇರಿ ನೀರನ್ನು ಫೆಬ್ರುವರಿಯಿಂದ ಜುಲೈವರೆಗೆ ಒಟ್ಟು 11.24 ಟಿಎಂಸಿ ಅಡಿ ನೀರನ್ನು ಜಲಾಶಯದಲ್ಲಿ ಶೇಖರಿಸಿ ಪೂರೈಸಲು ಕಾವೇರಿ ನೀರಾವರಿ ನಿಗಮವನ್ನು ಕೋರಲಾಗಿದೆ. ಬಿಬಿಎಂಪಿಗೆ ಹೊಸದಾಗಿ ಸೇರ್ಪಡೆಗೊಂಡ 110 ಹಳ್ಳಿಗಳಿಗೆ ಕಾವೇರಿ ಐದನೇ ಹಂತದ ಕಾಮಗಾರಿ ಹಾಗೂ ಲೆಕ್ಕಕ್ಕೆ ಸಿಗದ ನೀರಿನ ನಿಯಂತ್ರಣ ಯೋಜನೆ ಕಾಮಗಾರಿ ಬಹುತೇಕ ಪೂರ್ಣಗೊಂಡಿದೆ. ಈ ಪೈಕಿ, ನೀರಿನ ಲಭ್ಯತೆಯ ಆಧಾರದಲ್ಲಿ 51 ಹಳ್ಳಿಗಳಿಗೆ ಈಗಾಗಲೇ ಪೂರೈಸಲಾಗುತ್ತಿದೆ. ಉಳಿದ ಎಲ್ಲ ಹಳ್ಳಿಗಳಿಗೂ ಏಪ್ರಿಲ್-ಮೇ ತಿಂಗಳಿನಿಂದ ಕಾವೇರಿ ನೀರು ಪೂರೈಸಲಾಗುವುದು' ಎಂದರು.

'ಬೆಂಗಳೂರಿಗೆ ಶೇ 40ರಷ್ಟು ಮಳೆ ಕೊರತೆಯಾಗಿದೆ. ಹೀಗಾಗಿ, ಸುಮಾರು 11 ಸಾವಿರ ಕೊಳವೆ ಬಾವಿಗಳಲ್ಲಿ ಸಾಕಷ್ಟು ಅಂತರ್ಜಲ ಕುಸಿದಿದೆ. ಈ ಕೊಳವೆ ಬಾವಿಗಳ ನಿರ್ವಹಣೆಗೆ ಬೇಕಾದ ಸಾಮಗ್ರಿಗಳನ್ನು ಕೇಂದ್ರ ಉಗ್ರಾಣದಲ್ಲಿ ಅಗತ್ಯ ಪ್ರಮಾಣದಲ್ಲಿ ಶೇಖರಿಸಲಾಗಿದೆ. ಬತ್ತಿ ಹೋಗಿರುವ ಹಾಗೂ ನೀರಿನ ಒರತೆ ಕಡಿಮೆಯಾಗಿರುವ ಕೊಳವೆ ಬಾವಿಗಳನ್ನು ರೀ ಡ್ರಿಲ್ಲಿಂಗ್ ಮಾಡಲು ಟೆಂಡರ್ ಪ್ರಕ್ರಿಯೆ ಪ್ರಗತಿಯಲ್ಲಿದೆ. ಹೆಚ್ಚಿನ ನೀರಿನ ಬವಣೆ ಇರುವ ಪ್ರದೇಶಗಳಲ್ಲಿ ಹೊಸ ಕೊಳವೆ ಬಾವಿ ಕೊರೆಸುವ ಉದ್ದೇಶವೂ ಇದೆ. ಜಲಮಂಡಳಿಯ ಒಟ್ಟು 68 ನೀರಿನ ಟ್ಯಾಂಕರ್‌ಗಳು ಸುಸ್ಥಿತಿಯಲ್ಲಿದ್ದು ನೀರಿನ ಸಮಸ್ಯೆ ಇರುವ ಪ್ರದೇಶಗಳಲ್ಲಿ ಕುಡಿಯುವ ನೀರು ಪೂರೈಸಲಾಗುವುದು' ಎಂದು ವಿವರಿಸಿದರು.

'ವರ್ಷದಿಂದ ವರ್ಷಕ್ಕೆ ನೀರು ಸರಬರಾಜುಗೆ ಸಂಬಂಧಿಸಿದ ಕಾಮಗಾರಿಗಳು, ನಿರ್ವಹಣೆ ವೆಚ್ಚ ಹೆಚ್ಚುತ್ತಲೇ ಇರುತ್ತದೆ. ಆದರೆ, 2003ರಿಂದ ರಾಜಕೀಯ ಕಾರಣಗಳಿಗೆ ಬೆಂಗಳೂರಿನಲ್ಲಿ ನೀರಿನ ದರ ಹೆಚ್ಚಿಸಲು ಬಿಟ್ಟಿಲ್ಲ. ಇದರಿಂದ ಬೆಂಗಳೂರು ಜಲಮಂಡಳಿಯ ನೌಕರರಿಗೆ ಸಂಬಳ ನೀಡಲೂ ಹಣ ಇಲ್ಲದ ಸ್ಥಿತಿ ಬಂದಿದೆ' ಎಂದು ಅವರು ಹೇಳಿದರು.

'ಕೊಳವೆ ಬಾವಿಗಳ ರಿ ಡ್ರಿಲ್ಲಿಂಗ್‌ಗೆ ಅವಕಾಶ ನೀಡಿದರೆ ಸಾಲದು. ಅವುಗಳಲ್ಲಿ ನೀರು ಸಿಗದಿದ್ದಾಗ ಏನು ಮಾಡಬೇಕು. ಹೀಗಾಗಿ ತಕ್ಷಣ ಹೊಸ ಕೊಳವೆ ಬಾವಿ ಕೊರೆಯಲು ಕೂಡ ಅನುಮತಿ ನೀಡಬೇಕು. ಹೊಸದಾಗಿ ಕೊಳವೆ ಬಾವಿ ಕೊರೆಯಲು ಇರುವ ನಿರ್ಬಂಧವನ್ನು ತೆರವುಗೊಳಿಸಬೇಕು' ಎಂದು ವಿರೋಧ ಪಕ್ಷದ ನಾಯಕ ಆರ್. ಅಶೋಕ ಆಗ್ರಹಿಸಿದರು.

'ಟ್ಯಾಂಕರ್ ನೀರಿನ ದಂಧೆ ನಿಯಂತ್ರಿಸಲು ಕ್ರಮ'

'ಬೆಂಗಳೂರಿನಲ್ಲಿ ನಡೆಯುತ್ತಿರುವ ಖಾಸಗಿ ಟ್ಯಾಂಕರ್ ನೀರಿನ ದಂಧೆ ನಿಯಂತ್ರಿಸಿ, ನಿರ್ದಿಷ್ಟ ದರ ಸರ್ಕಾರದಿಂದಲೇ ನಿಗದಿಪಡಿಸಲು ಕ್ರಮ ತೆಗೆದುಕೊಳ್ಳಲಾಗುವುದು' ಎಂದು ಡಿ.ಕೆ. ಶಿವಕುಮಾರ್ ತಿಳಿಸಿದರು.

'ಆಡಳಿತ ಮತ್ತು ವಿರೋಧ ಪಕ್ಷದ ಸದಸ್ಯರ ಜೊತೆ ಚರ್ಚಿಸಿ ಟ್ಯಾಂಕರ್ ನೀರಿಗೆ ನಿರ್ದಿಷ್ಟ ದರ ನಿಗದಿಪಡಿಸಲಾಗುವುದು' ಎಂದರು.

'ಕೆಲವು ಕಡೆಗಳಲ್ಲಿ ಒಂದು ಟ್ಯಾಂಕರ್ ನೀರಿಗೆ ₹ 1,500ವರೆಗೂ ದರ ವಸೂಲು ಮಾಡಲಾಗುತ್ತಿದೆ. ಟ್ಯಾಂಕರ್‌ನವರು ನೀರು ಪೂರೈಸದೆ ಕೃತಕ ಅಭಾವ ಸೃಷ್ಟಿಸಿ ಹೆಚ್ಚಿನ ದರ ವಸೂಲು ಮಾಡುತ್ತಿದ್ದಾರೆ. ಒಂದು ಟ್ಯಾಂಕರ್ ನೀರಿಗೆ ₹ 500ರಿಂದ ₹ 600 ದರ ನಿಗದಿಪಡಿಸಬೇಕು' ಎಂದು ಬಿಜೆಪಿ ಸದಸ್ಯರು ಆಗ್ರಹಿಸಿದರು.

'ಪ್ರತಿ ವಾರ್ಡ್‌ಗೆ 3–4 ಹೊಸ ಕೊಳವೆ ಬಾವಿ ಕೊರೆಯಲು ಅವಕಾಶ ನೀಡಬೇಕು' ಎಂದು ಬಿಜೆಪಿಯ ಎಸ್. ಸುರೇಶ್‌ಕುಮಾರ್, ಕೆ. ಗೋಪಾಲಯ್ಯ ಒತ್ತಾಯಿಸಿದರು.

ತಾಂತ್ರಿಕ ಸಮಸ್ಯೆ: ಮೆಟ್ರೊ ಸಂಚಾರ ವ್ಯತ್ಯಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಮ್ಮ ಮೆಟ್ರೊ' ನೇರಳೆ ಮಾರ್ಗದಲ್ಲಿ ಮಂಗಳವಾರ ಬೆಳಿಗ್ಗೆ ಬೈಯಪ್ಪನಹಳ್ಳಿ – ಗರುಡಾಚಾರ್ ಪಾಳ್ಯ ನಿಲ್ದಾಣಗಳ ನಡುವೆ ತಾಂತ್ರಿಕ ದೋಷದಿಂದಾಗಿ ರೈಲು ಸಂಚಾರ ನಿಧಾನವಾಗಿದ್ದರಿಂದ ಪ್ರಯಾಣಿಕರು ಪರದಾಡಿದರು.

ಬೆಳಿಗ್ಗೆ 7ರಿಂದ 9.20ರವರೆಗೆ ಸಿಗ್ನಲಿಂಗ್ ಸಮಸ್ಯೆ ಉಂಟಾಯಿತು. ರೈಲುಗಳ ಬಗ್ಗೆ ಮಾಹಿತಿ, ಬಂದು ಹೋಗುವ ಸಮಯ ಪ್ರತಿಫಲನ ಇಲ್ಲದೇ ಗೊಂದಲ ಉಂಟಾಯಿತು. ಈ ಸಮಯಲ್ಲಿ 5 ನಿಮಿಷಕ್ಕೊಂದರಂತೆ ಸಂಚರಿಸಬೇಕಿದ್ದ ಮೆಟ್ರೊ ರೈಲುಗಳನ್ನು 10 ನಿಮಿಷಕ್ಕೊಂದು ಸಂಚರಿಸುವಂತೆ ಮಾಡಲಾಯಿತು. ಜನದಟ್ಟಣೆಯ ಅವಧಿಯಲ್ಲಿ ಸಮಯ ನಿಧಾನಗೊಳಿಸಿದ್ದರಿಂದ ನೇರಳೆ ಮಾರ್ಗದ ಎಲ್ಲ ಮೆಟ್ರೊ ನಿಲ್ದಾಣಗಳಲ್ಲಿ ಭಾರಿ ಸಂಖ್ಯೆಯಲ್ಲಿ ಪ್ರಯಾಣಿಕರು ಕಾಯುವಂತಾಯಿತು.



ನಾಡಪ್ರಭು ಕೆಂಪೇಗೌಡ ಮೆಟ್ರೊ ನಿಲ್ದಾಣದಲ್ಲಿ ಮಂಗಳವಾರ ಬೆಳಿಗ್ಗೆ ರೈಲಿನಲ್ಲಿ ಜಾಗ ಸಿಗದೇ ಕಾಯುತ್ತಿದ್ದ ಪ್ರಯಾಣಿಕರು —ಪ್ರಜಾವಾಣಿ ಚಿತ್ರ

ಮೆಜೆಸ್ಟಿಕ್‌ನ ನಾಡಪ್ರಭು ಕೆಂಪೇಗೌಡ ಮೆಟ್ರೊ ನಿಲ್ದಾಣದಲ್ಲಿ ನೂಕುನುಗ್ಗಲು ಉಂಟಾಯಿತು. ಸರದಿಯಲ್ಲಿ ನಿಂತವರಿಗೆ ರೈಲಿನಲ್ಲಿ ಜಾಗ ಸಿಗದೇ ಸುಮಾರು ಹೊತ್ತು ನಿಲ್ದಾಣದಲ್ಲೇ ಉಳಿದರು.

ಬೆಳಿಗ್ಗೆ 9.20ಕ್ಕೆ ತಾಂತ್ರಿಕ ಸಮಸ್ಯೆ ನಿವಾರಣೆಗೊಂಡಿತು. ಬಳಿಕ ಸಿಗ್ನಲ್ ಹೊಂದಾಣಿಕೆ ಮಾಡಿ ಮೆಟ್ರೊ ರೈಲುಗಳು ಎಂದಿನಂತೆ ಸಂಚರಿಸಿದವು ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ಮಾಹಿತಿ ನೀಡಿದರು.

'ವಿಶೇಷ ಕೌಶಲ ಬೆಳೆಸಿಕೊಂಡು ಕೆಲಸ ಮಾಡಿ'

ತರಬೇತಿ ಕಾರ್ಯಕ್ರಮದಲ್ಲಿ ಲೋಕಾಯುಕ್ತ ನ್ಯಾಯಮೂರ್ತಿ ಬಿ.ಎಸ್. ಪಾಟೀಲ ಸಲಹೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಲೋಕಾಯುಕ್ತದಲ್ಲಿ ಇರುವವರು ಹೆದರಿಕೆ ಇಲ್ಲದೇ, ಯಾರ ಪರವಾಗಿಯೂ ಇರದೇ, ಪ್ರಾಮಾಣಿಕತೆ, ಬದ್ಧತೆ ಮತ್ತು ಕೌಶಲಪೂರ್ಣವಾಗಿ ಕೆಲಸ ಮಾಡಬೇಕು' ಎಂದು ಲೋಕಾಯುಕ್ತ ನ್ಯಾ. ಬಿ.ಎಸ್. ಪಾಟೀಲ ಹೇಳಿದರು.

ಲೋಕಾಯುಕ್ತ ಅಧಿಕಾರಿಗಳಿಗೆ ನಗರದಲ್ಲಿ ಹಮ್ಮಿಕೊಂಡಿರುವ ಮೂರು ದಿನಗಳ ತರಬೇತಿ ಕಾರ್ಯಕ್ರಮವನ್ನು ಮಂಗಳವಾರ ಉದ್ಘಾಟಿಸಿ ಮಾತನಾಡಿದ ಅವರು, 'ಲೋಕಾಯುಕ್ತವು ವಿಶೇಷ ತನಿಖಾ ಸಂಸ್ಥೆ. ಈ ಸಂಸ್ಥೆಯಲ್ಲಿ ಕೆಲಸ ಮಾಡುವವರಿಗೆ ವಿಶೇಷ ಕೌಶಲ ಅಗತ್ಯ. ಹಿಂದೆ ಎಸಿಬಿಯಲ್ಲಿ ಕೆಲಸ ಮಾಡಿದ್ದರಿಂದ ಇದೇನು ಮಹಾ ಎಂಬ ಉಡಾಫೆ ಬೇಡ. ಹೊಸಬರಾಗಿರುವುದರಿಂದ ಕೆಲಸ ಮಾಡಲು ಗೊತ್ತಾಗುತ್ತಿಲ್ಲ ಎಂಬ ಕೀಳರಿಮೆಯೂ ಬೇಡ. ತರಬೇತಿ ಮೂಲಕ ತಿಳಿದುಕೊಂಡು ಪರಿಶ್ರಮದಿಂದ ಕೆಲಸ ಮಾಡಬೇಕು' ಎಂದರು.

'ಯಾವುದೇ ವಿಷಯ ತಿಳಿದುಕೊಳ್ಳುವ ಮೊದಲೇ ನಿರ್ಧಾರಕ್ಕೆ ಬರಬಾರದು. ಎಲ್ಲದಕ್ಕೂ ತೀರ್ಮಾನ ನೀಡುವ ಮನಸ್ಸು ಕಲಿಯುವಿಕೆಯ ಮೊದಲ ಶತ್ರು. ನಾವು ಎಷ್ಟು ಕೆಲಸ ಮಾಡಿದರೂ ಇಷ್ಟೇ, ನಾಲ್ಕು ಭ್ರಷ್ಟರನ್ನು ಹಿಡಿದ ಕೂಡಲೇ ಭಷ್ಟಾಚಾರ ನಿಂತು ಹೋಗುತ್ತಾ ಎಂಬ ಸಿನಿಕತನಕ್ಕೂ ಬರಬಾರದು. ಭ್ರಷ್ಟರಿಗೆ ದೊಡ್ಡವರ ಸಂಪರ್ಕ ಇದೆ, ನಾವು ಯಾಕೆ ತೊಂದರೆ ತೆಗೆದುಕೊಳ್ಳಬೇಕು ಎಂಬ ಹೆದರಿಕೆಯೂ ಇರಬಾರದು. ಎಲ್ಲೇ ಭ್ರಷ್ಟತೆ ಕಂಡರೂ ತಡೆಯುವುದೇ ನಮ್ಮ ಕೆಲಸ' ಎಂದರು.

'ಉತ್ಸಾಹದಿಂದ ಪ್ರಕರಣ ಪತ್ತೆ ಹಚ್ಚಿರುತ್ತೀರಿ. ಆದರೆ, ತಾಂತ್ರಿಕ ತಪ್ಪಿನಿಂದಾಗಿ ಪ್ರಕರಣ ಬಿದ್ದು ಹೋಗುತ್ತದೆ. ತಪ್ಪಿತಸ್ಥನಿಗೆ ಶಿಕ್ಷೆಯಾಗಲ್ಲ. ಹೀಗಾಗದಂತೆ ಮಾಡಬೇಕಿದ್ದರೆ ತಾಂತ್ರಿಕ ತಿಳಿವಳಿಕೆ ಮೂಡಿಸಿಕೊಳ್ಳಬೇಕು ಎಂದರು.

'ಕರ್ನಾಟಕ ಲೋಕಾಯುಕ್ತ ಕಾಯ್ದೆ, ಭ್ರಷ್ಟಾಚಾರ ನಿರ್ಮೂಲನಾ ಕಾಯ್ದೆಗಳಡಿ ನಾವು ಕೆಲಸ ಮಾಡುವಾಗ ನಮ್ಮ ವ್ಯಾಪ್ತಿ ಎಷ್ಟು? ಹೇಗೆ ಕಾರ್ಯನಿರ್ವಹಿಸಬೇಕು ಎಂಬುದನ್ನು ತಿಳಿದುಕೊಳ್ಳಬೇಕು' ಎಂದು ಹೇಳಿದರು.

ಉಪ ಲೋಕಾಯುಕ್ತ ನ್ಯಾ. ಕೆ.ಎನ್. ಫಣೀಂದ್ರ, ಲೋಕಾಯುಕ್ತ ಪೊಲೀಸ್ ಮಹಾನಿರ್ದೇಶಕ ಪ್ರಶಾಂತ್ ಕುಮಾರ್ ಠಾಕೂರ್ ಮತ್ತು ಲೋಕಾಯುಕ್ತ ಪೊಲೀಸ್ ಮಹಾನಿರೀಕ್ಷಕ ಎ. ಸುಬ್ರಮಣ್ಯೇಶ್ವರ ರಾವ್, ರಿಜಿಸ್ಟ್ರಾರ್ ಉಷಾರಾಣಿ ಭಾಗವಹಿಸಿದ್ದರು.




ಲೋಕಾಯುಕ್ತ ಕಚೇರಿಯಲ್ಲಿ ಹಮ್ಮಿಕೊಂಡಿರುವ ತರಬೇತಿ ಕಾರ್ಯಾಗಾರದಲ್ಲಿ ಲೋಕಾಯುಕ್ತ ನ್ಯಾ. ಬಿ.ಎಸ್. ಪಾಟೀಲ ಮಾತನಾಡಿದರು. ಲೋಕಾಯುಕ್ತ ಪೊಲೀಸ್ ಮಹಾನಿರ್ದೇಶಕ ಪ್ರಶಾಂತ್ ಕುಮಾರ್ ಠಾಕೂರ್ ಮತ್ತು ಲೋಕಾಯುಕ್ತ ಪೊಲೀಸ್ ಮಹಾನಿರೀಕ್ಷಕ ಎ. ಸುಬ್ರಮಣ್ಯೇಶ್ವರ ರಾವ್ ಉಪಸ್ಥಿತರಿದ್ದರು —ಪ್ರಜಾವಾಣಿ ಚಿತ್ರ



ಸರ್ಜಾಪುರ ಬಸ್ ನಿಲ್ದಾಣದಲ್ಲಿ ಹೊಸ ಮಾರ್ಗಗಳ ಬಸ್‌ಗಳಿಗೆ ಸಾರಿಗೆ ಸಚಿವ ರಾಮಲಿಂಗಾರೆಡ್ಡಿ, ಬಿಎಂಟಿಸಿ ಅಧ್ಯಕ್ಷ ಬಿ. ಶಿವಣ್ಣ ಚಾಲನೆ ನೀಡಿದರು

ರವೀಂದ್ರಗೆ 'ಶಿವಲಿಂಗ ಪ್ರಶಸ್ತಿ'

ಪ್ರಜಾವಾಣಿ ವಾರ್ತೆ



ರವೀಂದ್ರ ಸೊರಗಾವಿ

ಬೆಂಗಳೂರು: ವಚನಜ್ಯೋತಿ ಬಳಗದ ಸಂಸ್ಥಾಪಕರಾದ ಪಂಡಿತ ಕೆ.ಪಿ. ಶಿವಲಿಂಗಯ್ಯನವರ ಸ್ಮರಣಾರ್ಥ ಸ್ಥಾಪಿಸಿರುವ 'ಶಿವಲಿಂಗ ಪ್ರಶಸ್ತಿ'ಗೆ ಗಾಯಕ ರವೀಂದ್ರ ಸೊರಗಾವಿ ಭಾಜನರಾಗಿದ್ದಾರೆ.

ಬಾಗಲಕೋಟೆ ಜಿಲ್ಲೆಯ ಮಹಾಲಿಂಗಪುರದ ರವೀಂದ್ರ ಅವರು, ವಚನಗಳನ್ನು ನಾಡಿನಾದ್ಯಂತ ಮನೆಮನಕ್ಕೆ ತಲುಪಿಸುತ್ತಿದ್ದಾರೆ ಎಂದು ಬಳಗದ ಅಧ್ಯಕ್ಷ ಎಸ್. ಪಿನಾಕಪಾಣಿ ತಿಳಿಸಿದ್ದಾರೆ.

ಪ್ರಶಸ್ತಿಯು ₹10 ಸಾವಿರ ನಗದು ಹಾಗೂ ಸ್ಮರಣಿಕೆಯನ್ನು ಒಳಗೊಂಡಿದೆ. 1997ರಲ್ಲಿ ಮೊದಲ 'ಶಿವಲಿಂಗ ಪ್ರಶಸ್ತಿ'ಯನ್ನು ಜಿ. ನಾರಾಯಣ ಅವರಿಗೆ ನೀಡಲಾಗಿದ್ದು, ಕನ್ನಡ ಭಾಷೆ ಮತ್ತು ಸಂಸ್ಕೃತಿಗೆ, ವಿಶೇಷವಾಗಿ ವಚನ ಸಾಹಿತ್ಯ - ಸಂಗೀತ ಕ್ಷೇತ್ರದಲ್ಲಿ ಸಾಧನೆ ಮಾಡಿರುವವರಿಗೆ ಪ್ರತಿ ವರ್ಷ ಪ್ರಶಸ್ತಿ ನೀಡಲಾಗುತ್ತದೆ ಎಂದು ಹೇಳಿದ್ದಾರೆ. ಫೆ.26ರಂದು ಸಂಸ ಬಯಲು ರಂಗಮಂದಿರದಲ್ಲಿ ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಲಿದೆ.

'ವ್ಯಾಪಾರ ಪರವಾನಗಿ ರದ್ದುಗೊಳಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೋಟೆಲ್ ಉದ್ಯಮ ನಡೆಸಲು ವ್ಯಾಪಾರ ಪರವಾನಗಿ (ಟ್ರೇಡ್ ಲೈಸನ್ಸ್) ಅವಶ್ಯಕತೆ ಇಲ್ಲ. ಆದ್ದರಿಂದ, ಅದನ್ನು ರದ್ದುಗೊಳಿಸಬೇಕೆಂದು ಬೃಹತ್ ಬೆಂಗಳೂರು ಹೋಟೆಲ್‌ಗಳ ಸಂಘದ ವತಿಯಿಂದ ನಗರಾಭಿವೃದ್ಧಿ ಸಚಿವ ಬೈರತಿ ಸುರೇಶ್ ಅವರಿಗೆ ಮನವಿ ಸಲ್ಲಿಸಲಾಗಿದೆ.

'ಹೋಟೆಲ್, ರೆಸ್ಟೋರೆಂಟ್, ಬೇಕರಿ, ಐಸ್‌ಕ್ರೀಂ ಪಾರ್ಲರ್‌ಗಳ ಉದ್ಯಮಿಗಳು ಆಹಾರ ಸುರಕ್ಷತೆ ಮತ್ತು ಮಾನದಂಡಗಳ ಪ್ರಾಧಿಕಾರದ (ಎಫ್‌ಎಸ್‌ಎಸ್‌ಎಐ) ವತಿಯಿಂದ ವ್ಯಾಪಾರದ ಪರವಾನಗಿ ಪಡೆದುಕೊಂಡಿರುತ್ತಾರೆ. ಆದ್ದರಿಂದ, ಒಂದೇ ಉದ್ಯಮ ನಡೆಸಲು ಎರಡು ಪರವಾನಗಿ ತೆಗೆದುಕೊಳ್ಳುವಂತಾಗುತ್ತದೆ. ಈ ಬಗ್ಗೆ ಚರ್ಚಿಸಿ ಟ್ರೇಡ್ ಲೈಸನ್ಸ್ ಅನ್ನು ರದ್ದುಗೊಳಿಸಬೇಕು' ಎಂದು ಸಂಘದ ಅಧ್ಯಕ್ಷ ಪಿ.ಸಿ. ರಾವ್ ಒತ್ತಾಯಿಸಿದ್ದಾರೆ.

ಬಿಎಂಟಿಸಿ ಹೆಚ್ಚುವರಿ ಬಸ್ ಸಂಚಾರಕ್ಕೆ ಚಾಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರ ಹಾಗೂ ಹೊರ ವಲಯದಲ್ಲಿ ಪ್ರಯಾಣಿಕರ ದಟ್ಟಣೆ ಕಡಿಮೆ ಮಾಡಲು ಬಿಎಂಟಿಸಿಯು ಹೊಸ ಮಾರ್ಗಗಳಲ್ಲಿ ಹೆಚ್ಚುವರಿ ಬಸ್ ಸಂಚಾರವನ್ನು ಆರಂಭಿಸಿದೆ.

ಸರ್ಜಾಪುರದಿಂದ ಅಂತರ-ರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಪ್ರಯಾಣಿಸಲು ಸರ್ಜಾಪುರ, ದೊಡ್ಡಕನ್ನಲ್ಲಿ, ಬೆಳ್ಳಂದೂರು ಗೇಟ್, ಸರ್ಜಾಪುರ ರಸ್ತೆ ಜಂಕ್ಷನ್, ಮಾರತ್‌ಹಳ್ಳಿ ಸೇತುವೆ, ಹೆಬ್ಬಾಳ ಮಾರ್ಗವಾಗಿ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ನಿತ್ಯ ನಾಲ್ಕು ವಾಯುವಜ್ರ ಬಸ್‌ಗಳು 14 ಟ್ರಿಪ್ ಸಂಚರಿಸಲಿವೆ.

ಸರ್ಜಾಪುರದಿಂದ ದೊಡ್ಡಕನ್ನಲ್ಲಿ, ಬೆಳ್ಳಂದೂರು ಗೇಟ್, ಸರ್ಜಾಪುರ ರಸ್ತೆ ಜಂಕ್ಷನ್, ಮಾರತ್‌ಹಳ್ಳಿ ಬ್ರಿಡ್ಜ್ ಮಾರ್ಗವಾಗಿ ಹೆಬ್ಬಾಳಕ್ಕೆ 4 ವಜ್ರ ಬಸ್‌ಗಳು ನಿತ್ಯ 16 ಟ್ರಿಪ್ ಹಾಗೂ ಶಿವಾಜಿನಗರದಿಂದ ಶಾಂತಿನಗರ, ಹುಳಿಮಾವು ಮಾರ್ಗವಾಗಿ ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನಕ್ಕೆ 4 ವಜ್ರ ಬಸ್‌ಗಳು ನಿತ್ಯ 30 ಟ್ರಿಪ್ ಸಂಚರಿಸಲಿವೆ.

ಸಾಮಾನ್ಯ ಸಾರಿಗೆ ಬಸ್‌ಗಳು ಸರ್ಜಾಪುರ ಬಸ್ ನಿಲ್ದಾಣ ಹೆಬ್ಬಾಳ, ದೊಮ್ಮಸಂದ್ರ, ಕೊಡತಿ ಗೇಟ್, ದೊಡ್ಡಕನ್ನಲ್ಲಿ, ಕಾಡುಬೀಸನಹಳ್ಳಿ, ಮಾರತ್‌ಹಳ್ಳಿ ಬ್ರಿಡ್ಜ್ ಹಾಗೂ ಶಿವಾಜಿನಗರ ಬಸ್ ನಿಲ್ದಾಣ, ಬನ್ನೇರುಘಟ್ಟ ನ್ಯಾಷನಲ್ ಪಾರ್ಕ್ ಶಾಂತಿನಗರ ಟಿಟಿಎಂಸಿ, ಡೇರಿ ಸರ್ಕಲ್, ಗುರಪ್ಪನಪಾಳ್ಯ, ಗೊಟ್ಟಿಗೆರೆ ಮಾರ್ಗದಲ್ಲಿ ಸಂಚರಿಸಲಿವೆ.

ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಈ ಹೊಸ ಮಾರ್ಗಗಳಿಗೆ ಮಂಗಳವಾರ ಚಾಲನೆ ನೀಡಿದರು. ಬಿಎಂಟಿಸಿ ಅಧ್ಯಕ್ಷ ಬಿ.ಶಿವಣ್ಣ, ಬಿಎಂಟಿಸಿ ವ್ಯವಸ್ಥಾಪಕ ನಿರ್ದೇಶಕ ರಾಮಚಂದ್ರನ್ ಆರ್., ನಿರ್ದೇಶಕಿ ಶಿಲ್ಪಾ ಭಾಗವಹಿಸಿದ್ದರು.

ಲೇಖಕಿ ಜಾಹ್ನವಿ ಕಥಾ ಸಂಕಲನ ಬಿಡುಗಡೆ

ಮನಸ್ಸಿಗೆ ತಾಯ್ತನ ಅಗತ್ಯ: ಬರಗೂರು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬಹುತನ ಕಳೆದುಕೊಳ್ಳುತ್ತಿರುವ ಬೌದ್ಧಿಕ ವಲಯದಲ್ಲಿ ನಾವಿದ್ದೇವೆ. ಆದ್ದರಿಂದ ಮನಸ್ಸಿಗೆ ತಾಯ್ತನ ಹಾಗೂ ಮಿದುಳಿಗೆ ಮಗುತನ ಅಗತ್ಯ' ಎಂದು ಸಾಹಿತಿ ಬರಗೂರು ರಾಮಚಂದ್ರಪ್ಪ ತಿಳಿಸಿದರು.

ಕೌದಿ ಪ್ರಕಾಶನ ನಗರದಲ್ಲಿ ಮಂಗಳವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಜಿ.ಟಿ. ಜಾಹ್ನವಿ ಅವರ 'ಒಬ್ರು ಸುದ್ಯಾಕೆ... ಒಬ್ರು ಗದ್ಲ್ಯಾಕೆ...' ಸಮಗ್ರ ಕಥಾ ಸಂಕಲನ ಬಿಡುಗಡೆಗೊಳಿಸಿ, ಮಾತನಾಡಿದರು.

'ಬುದ್ಧಿಜೀವಿಗಳು ಎಂಬ ಹಣೆಪಟ್ಟಿ ಅಂಟಿಸಿಕೊಂಡು, ನಾವು ಅಂತಿಮ ಸತ್ಯದ ಹರಿಕಾರರು ಎಂಬ ಭ್ರಮೆಯಲ್ಲಿ ಬದುಕುವವರು ಅನೇಕರಿದ್ದಾರೆ. ಹೀಗಾಗಿ, ಬೌದ್ಧಿಕ ವಲಯಕ್ಕೆ ಮಗುತನ ಇದ್ದರೆ ಕುತೂಹಲ, ಆಸಕ್ತಿ ಹಾಗೂ ಮುಗ್ಧತೆ ಇರುತ್ತದೆ. ತಾಯ್ತನದಲ್ಲಿ ಮಕ್ಕಳನ್ನು ಮೇಲು-ಕೀಳು, ಗಂಡು-ಹೆಣ್ಣು ಎನ್ನದೆ ಸಮಾನವಾಗಿ ಕಾಣಲಾಗುತ್ತದೆ. ಆದ್ದರಿಂದ ಅಂತಹ ತಾಯ್ತನ ಸಮಾಜಕ್ಕೆ, ಈ ದೇಶಕ್ಕೆ ಹಾಗೂ ಸಾಹಿತ್ಯಕ್ಕೂ ಅಗತ್ಯವಿದೆ' ಎಂದು ಹೇಳಿದರು.



ಕಾರ್ಯಕ್ರಮದಲ್ಲಿ ಬರಗೂರು ರಾಮಚಂದ್ರಪ್ಪ ಅವರು (ಎಡದಿಂದ ಮೂರನೆಯವರು) 'ಒಬ್ರು ಸುದ್ಯಾಕೆ... ಒಬ್ರು ಗದ್ಲ್ಯಾಕೆ...' ಪುಸ್ತಕವನ್ನು ಬಿಡುಗಡೆ ಮಾಡಿದರು. ಲೇಖಕಿ ಬಿ.ಟಿ. ಜಾಹ್ನವಿ, ಸಿ.ಎಸ್. ದ್ವಾರಕಾನಾಥ್, ರವಿಕುಮಾರ ನೀಹ ಮತ್ತು ಲೇಖಕಿ ದಯಾ ಗಂಗನಘಟ್ಟ ಪಾಲ್ಗೊಂಡಿದ್ದರು —ಪ್ರಜಾವಾಣಿ ಚಿತ್ರ

ವಕೀಲ ಸಿ.ಎಸ್. ದ್ವಾರಕಾನಾಥ್, 'ಯುವಜನರು ಉತ್ತಮವಾಗಿ ಬರೆಯುತ್ತಿದ್ದಾರೆ. ಆದರೆ, ಬರವಣಿಗೆಯ ವಿಮರ್ಶೆ ನಡೆಯುತ್ತಿಲ್ಲ. ವಿಮರ್ಶಕರು ಯುವ ಲೇಖಕರ ಬರವಣಿಗೆ ಬಗ್ಗೆ ಸಾಮಾಜಿಕ ಜಾಲತಾಣದಲ್ಲಿ ಯಾದರೂ ವಿಮರ್ಶೆ ಹಾಕಿ, ಪ್ರೋತ್ಸಾಹಿಸಬೇಕು' ಎಂದು ಅವರು ಹೇಳಿದರು.

ಕೃತಿಯ ಬಗ್ಗೆ ಮಾತನಾಡಿದ ಪ್ರಾಧ್ಯಾಪಕ ರವಿಕುಮಾರ ನೀಹ, 'ಕೃತಿಯಲ್ಲಿ ದಲಿತ ಮತ್ತು ಮಹಿಳಾ ನೆಲೆಯನ್ನು ಭಿನ್ನವಾಗಿ ಕಟ್ಟಿಕೊಡಲಾಗಿದೆ. ಜಾತಿಗಳ ಒಳಗಡೆಯ ಶ್ರೇಷ್ಠತೆಯ ವ್ಯಸನ ದಾಟುವ ಬಗೆ ಹೇಗೆ ಎನ್ನುವ ಪ್ರಶ್ನೆಗಳಿಗೆ ಸೂಕ್ಷ್ಮವಾಗಿ ಉತ್ತರ ನೀಡಲಾಗಿದೆ. ಪುರುಷ ಪ್ರಧಾನ ಜಗತ್ತಿನಲ್ಲಿ ಮಾನವೀಯ ಅಂತಃಕರಣ ಕಟ್ಟಿಕೊಡಲಾಗಿದೆ' ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಪುಸ್ತಕ ಪರಿಚಯ

ಪುಸ್ತಕ: 'ಒಬ್ರು ಸುದ್ಯಾಕೆ... ಒಬ್ರು ಗದ್ಲ್ಯಾಕೆ...'
ಲೇಖಕರು: ಬಿ.ಟಿ. ಜಾಹ್ನವಿ
ಪುಟಗಳು: 336
ಬೆಲೆ: ₹ 350
ಪ್ರಕಾಶನ: ಕೌದಿ ಪ್ರಕಾಶನ

ಚಿತ್ರಾವಳಿ



ನಾದಜ್ಯೋತಿ ಸಂಗೀತ ಸಭಾ ಟ್ರಸ್ಟ್ ನಗರದಲ್ಲಿ ಹಮ್ಮಿಕೊಂಡಿದ್ದ ವಜ್ರ ಮಹೋತ್ಸವ ಸಮಾರಂಭವನ್ನು ಮೇಲುಕೋಟೆಯ ಯತಿರಾಜ ಮಠದ ಯದುಗಿರಿ ಯತಿರಾಜ ನಾರಾಯಣ ರಾಮಾನುಜ ಜೀಯರ್ ಸ್ವಾಮೀಜಿ ಉದ್ಘಾಟಿಸಿದರು. ವಿದ್ವಾಂಸರಾದ ಆರ್.ಕೆ. ಪದ್ಮನಾಭ, ಸಿ. ಚಂದ್ರಶೇಖರ್, ಸಮಾರಂಭದ ಸ್ವಾಗತ ಸಮಿತಿ ಅಧ್ಯಕ್ಷ ಎಸ್. ಶಂಕರ್, ಸಭಾದ ಅಧ್ಯಕ್ಷ ಸೂತ್ರಂ ನಾಗರಾಜ ಶಾಸ್ತ್ರಿ ಪಾಲ್ಗೊಂಡಿದ್ದರು



ಬೆಂಗಳೂರಿನ ರಾಘವೇಂದ್ರ ಸಂಗೀತ ಸೇವಾ ಪ್ರತಿಷ್ಠಾನ ಹಮ್ಮಿಕೊಂಡಿದ್ದ ಪುರಂದರದಾಸರ ಆರಾಧನಾ ಕಾರ್ಯಕ್ರಮದಲ್ಲಿ ಗಾಯಕ ಪುತ್ತೂರು ನರಸಿಂಹ ನಾಯಕ್ ಅವರಿಗೆ ಗುರು ರಾಘವೇಂದ್ರ ಸಂಸ್ಮರಣಾ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಪ್ರತಿಷ್ಠಾನದ ಗಾನಭೂಷಣ, ಗೌರಿ ನಾಗರಾಜ್, ವೀಣಾ ಸುರೇಶ್, ಡಾ. ಸಂತೋಷ್ ಹೆಗ್ಡೆ ಭಾಗವಹಿಸಿದ್ದರು

ಸಾರಿಗೆ ಇಲಾಖೆ

ಸಾರಿಗೆ ಆಯುಕ್ತರ ಕಚೇರಿ, 1ನೇ ಮಹಡಿ, ಟಿ.ಟಿ.ಎಂ.ಸಿ ಕಟ್ಟಡ, ಬಿ.ಎಂ.ಟಿ.ಸಿ ಸಂಕೀರ್ಣ, ಶಾಂತಿನಗರ, ಬೆಂಗಳೂರು-560027

ಸಂ: ಸಾಆ/ಪೀಕ-3/ಪಿಆರ್-35/2012-13 ದಿನಾಂಕ: 20.02.2024

ಇ-ಟೆಂಡರ್ ಪ್ರಕಟಣೆ

ಎಲೆಕ್ಟ್ರಾನಿಕ್ ಸಿಟಿಯಲ್ಲಿರುವ ಗಣಕೀಕೃತ ಚಾಲನಾ ಪರೀಕ್ಷಾ ಪಥದ ನಿರ್ವಹಣೆ ಸಂಬಂಧ ಅರ್ಹ ಸಂಸ್ಥೆಗಳಿಂದ ಟೆಂಡರನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಆಹ್ವಾನಿಸಲಾಗಿದೆ. (Call-3) ಆಸಕ್ತಿಯುಳ್ಳ ಸಂಸ್ಥೆಗಳು ವಿವರಗಳನ್ನು ಅಂತರ್ಜಾಲ ಮೂಲಕ ವೆಬ್‌ಸೈಟ್ ವಿಳಾಸ **https://kppp.karnataka.gov.in** ನ್ನು ಸಂಪರ್ಕಿಸಿ ಪಡೆಯಬಹುದಾಗಿದೆ. ಸಂಸ್ಥೆಗಳು ಇ-ಪ್ರೊಕ್ಯೂರ್‌ಮೆಂಟ್ ಸಹಾಯವಾಣಿಯನ್ನು ದೂರವಾಣಿ ಸಂಖ್ಯೆ: +91-8046010000 / +91-8068948777 ರ ಮೂಲಕ ಸಂಪರ್ಕಿಸಿ ಸಹಾಯವನ್ನು ಪಡೆಯಬಹುದು.

ಇ-ಪೋರ್ಟಲ್ ಮೂಲಕ ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ: 27.02.2024ರ ಸಂಜೆ 5.00 ಗಂಟೆಯವರೆಗೆ. ಹೆಚ್ಚಿನ ಮಾಹಿತಿಗಾಗಿ ಈ ದೂರವಾಣಿ ಸಂಖ್ಯೆ: 080-22235176 ಯನ್ನು ಸಂಪರ್ಕಿಸಬಹುದು.

ಸಹಿ/- ಅಪರ ಸಾರಿಗೆ ಆಯುಕ್ತರು (ಆಡಳಿತ), ಸಾರಿಗೆ ಇಲಾಖೆ, ಬೆಂಗಳೂರು

ವಾಸಾಸಂಇ/ವಾಪ್ರ/ಪಿಆರ್/3750/2023-24

ನಿರ್ದೇಶಕರ ಕಾರ್ಯಾಲಯ
ರಾಜ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಂಸ್ಥೆ

ಮಾಗಡಿ ರಸ್ತೆ, ಬೆಂಗಳೂರು – 560 023.

ಟೆಲಿಫ್ಯಾಕ್ಸ್: 080-23206125/6 ಇ-ಮೇಲ್: directorsihfw.bg@gmail.com

ಸಂಖ್ಯೆ: ರಾಆಸಂ/ಉಟೋಪಹಾರ/ಟೆಂಡರ್/01/2023-24 ದಿನಾಂಕ: 20.02.2024

ಟೆಂಡರ್ ಪ್ರಕಟಣೆ

ರಾಜ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಂಸ್ಥೆ, ಮಾಗಡಿ ರಸ್ತೆ, ಬೆಂಗಳೂರು, ಇಲ್ಲಿಗೆ 2023-24ನೇ ಸಾಲಿನ ತರಬೇತಿಗಳಿಗೆ ಊಟೋಪಹಾರ ಸರಬರಾಜು ಕುರಿತು ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಅನ್ನು ಕರೆಯಲಾಗಿದೆ. ಟೆಂಡರ್‌ನಲ್ಲಿ ಭಾಗವಹಿಸಲು ಇಚ್ಛಿಸುವವರು ಟೆಂಡರ್‌ನ್ನು ಸಲ್ಲಿಸಬಹುದು. ದಿನಾಂಕ: **20.02.2024** ರಿಂದ ಇ-ಪ್ರೊಕ್ಯೂರ್‌ಮೆಂಟ್ https://kppp.karnataka.gov.in ನಲ್ಲಿ ಟೆಂಡರ್‌ಗಳನ್ನು ಡೌನ್‌ಲೋಡ್ ಮಾಡಿಕೊಂಡು ಭರ್ತಿ ಮಾಡಿ ದಿನಾಂಕ: **28.03.2024 ರ ಸಂಜೆ 05.30 ರ ಒಳಗಾಗಿ** ಅಪ್‌ಲೋಡ್ ಮಾಡಬೇಕಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ https://kppp.karnataka.gov.in ನಲ್ಲಿ ವೀಕ್ಷಿಸಬಹುದಾಗಿದೆ.

ಸಹಿ/- ನಿರ್ದೇಶಕರು

ವಾಸಾಸಂಇ/ವಾಪ್ರ/3738/2023-24

ಬೆಂಗಳೂರು ವಿದ್ಯುತ್ ಸರಬರಾಜು ಕಂಪೆನಿ ನಿಯಮಿತ

(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ)
(CIN-U04010KA2002SGC030438)

ಟೆಂಡರ್ ಆಹ್ವಾನ ಪ್ರಕಟಣೆ (ಕೆಪಿಪಿ ಪೋರ್ಟಲ್ ಮುಖಾಂತರ)

ಬೆವಿಕಂ ವಿಚಾರಣೆ ಸಂಖ್ಯೆ: **ಬೆವಿಕಂ/2023-24/ಇಎಸ್/ವರ್ಕ್_ಇಂಡೆಂಟ್137ರ** ಮೂಲಕ ಬೆವಿಕಂ, ಬೆಂ.ಮ.ಕ್ಷೇ.ವ (ಉತ್ತರ), ಬೆಂಗಳೂರು ಉತ್ತರ ವೃತ್ತ, ವಿಜಾಪನಗರ ವಿಭಾಗದ ಇ-1, ಇ-2, ಮತ್ತು ಇ-9 ಉಪ-ವಿಭಾಗಗಳಲ್ಲಿ 11ಕೆವಿ ಓವರ್‌ಹೆಡ್ ಲೈನ್‌ಗಳನ್ನು ಯುಜಿ ಕೇಬಲ್‌ಗೆ ಪರಿವರ್ತಿಸಲು, ಎಲ್‌ಟಿ ಓವರ್‌ಹೆಡ್ ಲೈನ್ ಅನ್ನು ಎಬಿ ಕೇಬಲ್‌ಗೆ ಪರಿವರ್ತಿಸುವ ಮತ್ತು 11ಕೆವಿ ಯುಜಿ ಕೇಬಲ್‌ನೊಂದಿಗೆ ಆಪ್ಟಿಕ್ ಫೈಬರ್ ಕೇಬಲ್ (ಓಎಫ್‌ಸಿ) ಅಳವಡಿಸುವ ಬಾಕಿ ಇರುವ ಕಾಮಗಾರಿಗಳನ್ನು ಟರ್ನ್‌ಕೀ ಆಧಾರದ ಮೇಲೆ ಕೈಗೊಳ್ಳಲು ಅರ್ಹ ಬಿಡ್‌ದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಟೆಂಡರ್‌ಗಿಟ್ಟ ಮೊತ್ತ: **ರೂ. 62,41,54,372/-**. ಬಿಡ್ ದಾಖಲೆಗಳ ಲಭ್ಯತೆ: **ದಿನಾಂಕ: 26.02.2024 ರಿಂದ**. ಬಿಡ್ ಸಲ್ಲಿಸಲು ಕೊನೆಯ ದಿನಾಂಕ: **27.03.2024 @ 15:00 ಗಂಟೆಗಳು.** ತಾಂತ್ರಿಕ ಬಿಡ್‌ಗಳ ತೆರೆಯುವ ದಿನಾಂಕ: **28.03.2024 @ 15:30 ಗಂಟೆಗಳು.** ಬಿಡ್-ಪೂರ್ವ ಸಭೆ: ದಿನಾಂಕ: **06.03.2024 @ 11:00 ಗಂಟೆ**, ಸ್ಥಳ: **ಕಾನ್ಫರೆನ್ಸ್ ಹಾಲ್, 3ನೇ ಮಹಡಿ ಬೆಳಕು ಭವನ, ಬ್ಲಾಕ್-II, ಕಾರ್ಪೊರೇಟ್ ಕಚೇರಿ, ಬೆವಿಕಂ, ಕೆ.ಆರ್. ವೃತ್ತ, ಬೆಂಗಳೂರು-560 001.**

ಬಿಡ್ ದಾಖಲೆಗಳನ್ನು ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್: **https://kppp.karnataka.gov.in** ನಿಂದ ಡೌನ್‌ಲೋಡ್ ಮಾಡಬಹುದು ಹಾಗೂ ಅಗತ್ಯ ಸಹಾಯವನ್ನು ಪಡೆಯಬಹುದು. ಕೆಪಿಪಿ ಹೆಲ್ಪ್‌ಡೆಸ್ಕ್ ದೂರವಾಣಿ ಸಂಖ್ಯೆ: **+91-80460 10000, +91-80689 48777** ಇ-ಮೇಲ್: **support@eprochelpdesk.com**. ಆಸಕ್ತ ಬಿಡ್ಡುದಾರರು ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್(ಕೆಪಿಪಿ)ನಲ್ಲಿ ನೊಂದಾಯಿಸಿಕೊಳ್ಳತಕ್ಕದ್ದು. ಬಿಡ್‌ದಾರರು ಕೆಲಸದ ವೇಳೆಯಲ್ಲಿ ಕೆಪಿಪಿಯಿಂದ ಸಹಾಯವನ್ನು ಪಡೆದುಕೊಳ್ಳಬಹುದು.

ಸಹಿ/- ಮುಖ್ಯ ಪ್ರಧಾನ ವ್ಯವಸ್ಥಾಪಕರು, ವಿದ್ಯುತ್, ಯೋಜನೆ, ಕಾರ್ಪೊರೇಟ್ ಕಚೇರಿ, ಬೆವಿಕಂ, ಕೆ.ಆರ್. ವೃತ್ತ, ಬೆಂಗಳೂರು-560001.

ವಿದ್ಯುತ್ ಸಂಬಂಧಿತ ದೂರುಗಳಿಗೆ ಕರೆಮಾಡಿ: 1912
ಬೆಸ್ಕಾಂ ಮಿತ್ರ Mobile APP ಡೌನ್‌ಲೋಡ್ ಮಾಡಿಕೊಳ್ಳಿ ಇ-ಮೇಲ್: cgmproject.bescom@gmail.com

---

(ಕರ್ನಾಟಕ ಸರ್ಕಾರ)

ಕಾರ್ಯಪಾಲಕ ಇಂಜಿನಿಯರ್‌ರವರ ಕಚೇರಿ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ, ಹಾಸನ ವಿಭಾಗ, ಹಾಸನ-573201

Ph:08172-261640 Email ID:eerdwss.hsn@gmail.com

ದ್ವಿ-ಲಕೋಟೆ ಪದ್ಧತಿಯಲ್ಲಿ ಅಲ್ಪಾವಧಿ ಟೆಂಡರ್ ಪ್ರಕಟಣೆ: 09/2023-24 ದಿನಾಂಕ:19-02-2024

ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಇಂಜಿನಿಯರ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ, ಹಾಸನ ವಿಭಾಗ, ಹಾಸನ ರವರಿಂದ JJM ಯೋಜನೆಯಡಿ ಅನುಮೋದನೆಯಾಗಿರುವ ಹಾಸನ ಜಿಲ್ಲೆಯ ಚನ್ನರಾಯಪಟ್ಟಣ, ಅರಕಲಗೂಡು ತಾಲ್ಲೂಕಿನ ಕಾಮಗಾರಿಗಳನ್ನು ಈ ಕೆಳಕಂಡಂತೆ ಟೆಂಡರನ್ನು ಆಹ್ವಾನಿಸಲಾಗಿರುತ್ತದೆ. ಏಕ-ಲಕೋಟೆ ಮತ್ತು ದ್ವಿ-ಲಕೋಟೆ ಪದ್ಧತಿ ಕಾಮಗಾರಿಗಳನ್ನು ಚನ್ನರಾಯಪಟ್ಟಣ ತಾಲ್ಲೂಕಿನ ಒಂದು ಕಾಮಗಾರಿ (Gen) ಅರಕಲಗೂಡು ತಾಲ್ಲೂಕಿನ ಒಂದು ಕಾಮಗಾರಿ (Gen) ಸಕಲೇಶಪುರ ತಾಲ್ಲೂಕಿನ ಒಂದು ಕಾಮಗಾರಿ (Gen) ಸದರಿ ಕಾಮಗಾರಿಗಳಿಗೆ ಏಕ-ಲಕೋಟೆ ಮತ್ತು ದ್ವಿ-ಲಕೋಟೆ ಪದ್ಧತಿಯಲ್ಲಿ ಸ್ಪರ್ಧಾತ್ಮಕ ಟೆಂಡರನ್ನು Karnataka Public Procurement Portal ಅಂತರ್ಜಾಲದಲ್ಲಿ ಕರೆಯಲಾಗಿದ್ದು, ದಿನಾಂಕ: 19.02.2024, 5:30 ಘಂಟೆಯವರೆಗೆ ಟೆಂಡರನ್ನು ನಿಗಧಿತ ನಮೂನೆಗಳನ್ನು, https://kppp.karnataka.gov.in ನಲ್ಲಿ Download ಮಾಡಿ ಅಪ್‌ಲೋಡ್ ಮಾಡಿಕೊಳ್ಳಲಾಗಿದ್ದು, ಅಪ್‌ಲೋಡ್ ಮಾಡಬಹುದಾಗಿರುತ್ತದೆ. ದಿನಾಂಕ 21.02.2024 ರ ಸಂಜೆ 5:30 ರವರೆಗೆ ಗುತ್ತಿಗೆದಾರರು ಕಚೇರಿ ವೇಳೆಯಲ್ಲಿ ಸಂಪರ್ಕಿಸಿ ಯಾವುದೇ ಮಾಹಿತಿಯನ್ನು ಪಡೆಯಬಹುದಾಗಿರುತ್ತದೆ. ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ :27-02-2024 ರ ಸಂಜೆ 5:30 ಕ್ಕೆ ನಿಗದಿಪಡಿಸಲಾಗಿದೆ. Pre Bid Meeting Date:22-02-2024 ಬೆಳಗ್ಗೆ 11:00 ಘಂಟೆಗೆ. ಏಕ-ಲಕೋಟೆ ಮತ್ತು ದ್ವಿ-ಲಕೋಟೆ ಪದ್ಧತಿ ಕಾಮಗಾರಿಗಳ ತಾಂತ್ರಿಕ & ಆರ್ಥಿಕ ಬಿಡ್ ಅನ್ನು ದಿನಾಂಕ:28-02-2024 ಹಾಗೂ 29-02-2024 ರಂದು, ಸಂಜೆ 05:30 ಹಾಗೂ ಬೆಳಗ್ಗೆ 10:30 ಘಂಟೆಯ ನಂತರ ತೆರೆಯಲಾಗುವುದು ಒಂದು ವೇಳೆ ತಿದ್ದುಪಡಿ ಉಂಟಾದಲ್ಲಿ ಸದರಿ ತಿದ್ದುಪಡಿಗಳನ್ನು ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡಲಾಗುವುದು. ಎಲ್ಲ ಟೆಂಡರ್‌ಗಳನ್ನು ಅಥವಾ ಯಾವುದಾದರೂ ಒಂದು ಟೆಂಡರನ್ನು ಯಾವುದೇ ಕಾರಣ ನೀಡದೇ ತಿರಸ್ಕರಿಸುವ ಹಕ್ಕನ್ನು ಕಾಯ್ದಿರಿಸಿದೆ.

ಸಹಿ/- ಕಾರ್ಯಪಾಲಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ, ಹಾಸನ ವಿಭಾಗ,ಹಾಸನ

ವಾಸಾಸಂಇ/ಹಾಸನ/ವಾಪ್ರ/807/ಕೆಎಸ್‌ಎಂಸಿಎ/812/2023-24

ಕರ್ನಾಟಕ ಸರ್ಕಾರ

ರೇಷ್ಮೆ ಇಲಾಖೆ

ರೇಷ್ಮೆ ಉಪನಿರ್ದೇಶಕರ ಕಛೇರಿ, ಜಿಲ್ಲಾ ಪಂಚಾಯತ್, ವಿಜಯಪುರ. ದೂರವಾಣಿ ಸಂ:08352-200066, ಇ-ಮೇಲ್:ddsbjp.sericulture@gmail.com

ಅಲ್ಪಾವಧಿ ಟೆಂಡರ್ ಪ್ರಕಟಣೆ (ಇ-ಪ್ರೊಕ್ಯೂರ್‌ಮೆಂಟ್ ಮೂಲಕ)

ವಿಜಯಪುರ ಜಿಲ್ಲೆಯ ರೇಷ್ಮೆ ಬೆಳೆಗಾರರಿಗೆ ಉಚಿತವಾಗಿ ವಿತರಿಸಲು ರೇಷ್ಮೆ ಬೆಳೆಗೆ ಬಳಸುವ General Disinfectants, Surface Disinfectants & Hygiene Disinfectants ಗಳನ್ನು ಸರಬರಾಜು ಮಾಡಲು ಆಸಕ್ತ ಸರಬರಾಜುದಾರರಿಂದ ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https://kppp.karnataka.gov.in ಮೂಲಕ ಟೆಂಡರ್ ಸಲ್ಲಿಸಲು ಅಲ್ಪಾವಧಿ ಟೆಂಡರ್ ಪ್ರಕಟಣೆ ಹೊರಡಿಸಲಾಗಿದೆ. ಇ-ಪ್ರೊಕ್ಯೂರ್‌ಮೆಂಟ್ ವ್ಯವಸ್ಥೆಯಲ್ಲಿ ಟೆಂಡರ್ ಶೆಡ್ಯೂಲ್ ಸಲ್ಲಿಸಲು ದಿನಾಂಕಗಳ ವಿವರ ಈ ಕೆಳಗಿನಂತಿವೆ.

1) ಟೆಂಡರ್ ವಿವರ: ರೇಷ್ಮೆ ಬೆಳೆಗೆ ಬಳಸುವ General Disinfectants, Surface Disinfectants & Hygiene Disinfectants ಸರಬರಾಜು ಮಾಡಲು ಅಲ್ಪಾವಧಿ ಟೆಂಡರ್ ಪ್ರಕಟಣೆ 2) ಟೆಂಡರ್ ಸಂಖ್ಯೆ: ರೇಉನಿ/ವಿಜ/ಇ-ಪ್ರೊ/ಕೊಂ.ನಿ/1/2024 ದಿನಾಂಕ:- 19.02.2024 3) ಇ-ಪೋರ್ಟಲ್‌ನಲ್ಲಿ ಟೆಂಡರ್ ಪ್ರಕಟಣೆ ಬಿಡುಗಡೆ ದಿನಾಂಕ:- 19.02.2024. 4) ಕಛೇರಿ ವಿಳಾಸ:- ರೇಷ್ಮೆ ಉಪನಿರ್ದೇಶಕರ ಕಛೇರಿ, ಜಿಲ್ಲಾ ಪಂಚಾಯತ್ ವಿಜಯಪುರ, ರೇಷ್ಮೆ ಇಲಾಖೆ ಅಲ್-ಅಮೀನ ಮೆಡಿಕಲ್ ಕಾಲೇಜ ಹತ್ತಿರ ತೊರವಿ ರಸ್ತೆ ವಿಜಯಪುರ-586108 5) ಟೆಂಡರ್ ದಾಖಲೆಗಳನ್ನು ಮಾಡಲು ಟೆಂಡರ್ ಸಲ್ಲಿಸಲು ಕೊನೆ ದಿನಾಂಕ & ಸಮಯ 27.02.2024 ಸಮಯ 05.00 ರವರೆಗೆ 6)ಇ.ಎಂ.ಡಿ ಹಾಗೂ ಭದ್ರತಾ ಠೇವಣಿ ಮೊತ್ತ:- ಟೆಂಡರ್ ಡಾಕ್ಯುಮೆಂಟ್‌ನಲ್ಲಿ ತಿಳಿಸಿರುವಂತೆ 7) ತಾಂತ್ರಿಕ ಬಿಡ್ ತೆರೆಯುವ ದಿನಾಂಕ & ಸಮಯ:- 29.02.2024 ಬೆ:- 11.00 8) ಆರ್ಥಿಕ ಬಿಡ್ ತೆರೆಯುವ ದಿನಾಂಕ:- 01.03.2024 ಬೆ:- 11.00 (ತಾತ್ಕಾಲಿಕ ವೇಳಾಪಟ್ಟಿ ಬದಲಾವಣೆಗೆ ಒಳಪಟ್ಟಿದೆ).

ಆಸಕ್ತ ಸರಬರಾಜುದಾರರು "ಇ-ಪೋರ್ಟಲ್" ಮುಖಾಂತರ ಸಲ್ಲಿಸಬಹುದಾಗಿದೆ. ಹೆಚ್ಚಿನ ವಿವರಗಳನ್ನು www.eproc.karnataka.gov.in ವೆಬ್‌ಸೈಟ್‌ನಿಂದ ಪಡೆಯಬಹುದಾಗಿದೆ.

ಸಹಿ/- ರೇಷ್ಮೆ ಉಪನಿರ್ದೇಶಕರು, ಜಿಲ್ಲಾ ಪಂಚಾಯತ್,ವಿಜಯಪುರ

ವಾಸಾಸಂಇ/ವಿಜಯಪುರ/482/ಕೆಎಸ್‌ಎಂಸಿಎ/2023-24

ಮಂಗಳೂರು ಮಹಾನಗರಪಾಲಿಕೆ

ಮಂಮಪಾ/ಇಇ/15ನೇ ಹಣಕಾಸು/2023-24 ದಿನಾಂಕ: 14.02.2024

ಟೆಂಡರ್ ಪ್ರಕಟಣೆ E-PROCUREMENT OF KARNATAKA

ಮಹಾನಗರಪಾಲಿಕೆ ಅನುದಾನದಲ್ಲಿ ಮ.ನ.ಪಾ ವ್ಯಾಪ್ತಿಯಲ್ಲಿ ಬರುವ ವಿ.ನಂ.28ರ ನೆಹರು ಅವೆನ್ಯೂ ರಸ್ತೆ ಅಭಿವೃದ್ಧಿ ಕಾಮಗಾರಿ ಅಂದಾಜುಪಟ್ಟಿ ಮೊತ್ತ **ರೂ.84,00,000.00** ಟೆಂಡರ್ ಸಲ್ಲಿಸಲು **ಕೊನೆಯ ದಿನಾಂಕ 26.02.2024** ಹೆಚ್ಚಿನ ವಿವರವನ್ನು ಇ-ಪ್ರೊಕ್ಯೂರ್ ಮೆಂಟ್ ಪೋರ್ಟಲ್ **https://kppp.karnataka.gov.in** ಮುಖಾಂತರ ಪಡೆಯಬಹುದು.

ಸಹಿ/- ಕಾರ್ಯಪಾಲಕ ಅಭಿಯಂತರರು, ಮಹಾನಗರಪಾಲಿಕೆ, ಮಂಗಳೂರು

DIPR/MNG/KSMCA/1379/23-24 dt: 20.02.2024

ಕಾರ್ಯನಿರ್ವಾಹಕ ಇಂಜನೀಯರರು, ಲೋಕೋಪಯೋಗಿ ಇಲಾಖೆ, ವಿಭಾಗ, ಹಾವೇರಿ

ಇ-ಟೆಂಡರ್ ಪ್ರಕಟಣೆ

ಈ ಕಚೇರಿ ಗುತ್ತಿಗೆ ಪ್ರಕಟಣೆ ಸಂ. 033/ಪಿಬಿ/ಗುತ್ತಿಗೆ/5054/2023-24/6537/, ದಿನಾಂಕ: 20-02-2024

ದಿನಾಂಕ:20-02-2024ರಂದು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ, ಕಾಮಗಾರಿಗಳ ಇಂಡೆಂಟ್ ಸಂಖ್ಯೆ 7228ರ ಕಾಮಗಾರಿಗೆ ಗುತ್ತಿಗೆ ಪ್ರಕಟಣೆಯನ್ನು ನೀಡಲಾಗಿದ್ದು, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ ಗುತ್ತಿಗೆ ಪತ್ರಗಳನ್ನು ಸಲ್ಲಿಸುವ ಕೊನೆಯ ದಿನಾಂಕಃ 29-02-2024 (ಮಧ್ಯಾಹ್ನ 4.00 ಗಂಟೆಯವರೆಗೆ ಮಾತ್ರ) ವನ್ನು ನಿಗದಿಪಡಿಸಲಾಗಿರುತ್ತದೆ. ಹೆಚ್ಚಿನ ವಿವರಗಳಿಗಾಗಿ ಹಾಗೂ ಬದಲಾವಣೆಗಳಿದ್ದಲ್ಲಿ ಇಲಾಖೆಯ ವೆಬ್‌ಸೈಟ್ http://www.kppp.karnataka.gov.in ನ್ನು ಸಂಪರ್ಕಿಸಲು ಕೋರಲಾಗಿದೆ.

ಸಹಿ/- (ಮಹಾಬಲೇಶಪ್ಪ.ಕೆ.)
ಕಾರ್ಯನಿರ್ವಾಹಕ ಇಂಜನೀಯರರು, ಲೋಕೋಪಯೋಗಿ ಇಲಾಖೆ ವಿಭಾಗ, ಹಾವೇರಿ.

ವಾ.ಸಾ.ಇ/ಹಾವೇರಿ/481/ ದೇಶಪಾಂಡೆಪಬ್ಲಿಸಿಟಿ/2023-24

ಬೆಂಗಳೂರು-ಮೈಸೂರು ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ ಪ್ರದೇಶ ಯೋಜನಾ ಪ್ರಾಧಿಕಾರ

ನಂ. 5, 2ನೇ ಮಹಡಿ, ಲೂಪ್‌ಲೇನ್, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು – 560009.
ದೂರವಾಣಿ: 080-22341230/35 ಇ-ಮೇಲ್: bmicapa@gmail.com

ಸಂಖ್ಯೆ:ಬಿಎಂಐಸಿಎಪಿಎ/ಭೂಉಬ-02/73/2023-24/1795 ದಿನಾಂಕ: 19-02-2024

ಸಾರ್ವಜನಿಕ ಪ್ರಕಟಣೆ

(ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14(ಎ)ರ ಪ್ರಕಾರ)

ಶ್ರೀಮತಿ ಸಿ. ರಾಧ ರವರ ಪರವಾಗಿ ಜಿಪಿಎದಾರರಾದ ಶ್ರೀ ಸುನೀಲ್‌ಕುಮಾರ್ ನಹತಾ ಮತ್ತು ಇತರರು, ರಾಮನಗರ ತಾಲ್ಲೂಕು, ಬಿಡದಿ ಹೋಬಳಿ, ಚಿಕ್ಕಕುಂಟನಹಳ್ಳಿ ಗ್ರಾಮದ ಸರ್ವೆ ಸಂಖ್ಯೆ: 32/7 ರ 04ಎ-39ಗು ಮತ್ತು 01ಎ-24ಗು 'ಅ' ಖರಾಬು ಸೇರಿ ಒಟ್ಟು 06ಎ-23ಗು ವಿಸ್ತೀರ್ಣದ ಪ್ರದೇಶಕ್ಕೆ ಕೆಟಿಸಿಪಿ ಕಾಯ್ದೆ, 1961 ರ ಕಲಂ 14(ಎ) ರಡಿಯಲ್ಲಿ ಮಹಾಯೋಜನೆಯಲ್ಲಿ ವ್ಯವಸಾಯ ವಲಯದಲ್ಲಿ ಕಾಯ್ದಿರಿಸಲಾಗಿರುವ ಜಮೀನನ್ನು **"ವ್ಯವಸಾಯ"** ವಲಯದಿಂದ **"ಕೈಗಾರಿಕೆ"** ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಕೋರಿ ಪ್ರಾಧಿಕಾರಕ್ಕೆ ಅರ್ಜಿ ಸಲ್ಲಿಸಿರುತ್ತಾರೆ. ಅರ್ಜಿದಾರರು ಸದರಿ ಭೂ ಉಪಯೋಗ ಬದಲಾವಣೆ ಪ್ರಸ್ತಾವನೆಯು ಈ ಕೆಳಕಂಡ ಸಾರ್ವಜನಿಕ ಹಿತಾಸಕ್ತಿ ಹೊಂದಿರುವುದಾಗಿ ತಿಳಿಸಿರುತ್ತಾರೆ.

1) ಈ ಜಮೀನುಗಳಲ್ಲಿ ಕೈಗಾರಿಕೆ ಅಭಿವೃದ್ಧಿಪಡಿಸುವುದರಿಂದ ಬಡವರು, ಮಧ್ಯಮ ವರ್ಗದವರಿಗೆ ಕೆಲಸ ದೊರೆಯುತ್ತದೆ.
2) ಈ ಜಮೀನಿನಲ್ಲಿ ಕೈಗಾರಿಕೆ ಅಭಿವೃದ್ಧಿ ಕಾಮಗಾರಿಗಳು ನಡೆಯುವಾಗ ಕೂಲಿ ಕಾರ್ಮಿಕರಿಗೆ ಉದ್ಯೋಗ ದೊರಕುತ್ತದೆ.
3) ಈ ಕೈಗಾರಿಕಾ ಅಭಿವೃದ್ಧಿಯಿಂದ ಸುತ್ತಲಿನ ಪ್ರದೇಶದ ಅಭಿವೃದ್ಧಿ ಹೊಂದುತ್ತದೆ.
4) ಈ ಜಮೀನಿನಲ್ಲಿ ಕೈಗಾರಿಕೆ ಸ್ಥಾಪಿಸುವುದರಿಂದ, ಸರ್ಕಾರಕ್ಕೆ ಹೆಚ್ಚಿನ ರೀತಿಯ ತೆರಿಗೆ ಸಂಗ್ರಹವಾಗುತ್ತದೆ. ಈ ತೆರಿಗೆ ಹಣದಲ್ಲಿ ಸುತ್ತಮುತ್ತಲಿನ ಪ್ರದೇಶವನ್ನು ಅಭಿವೃದ್ಧಿಗೊಳಿಸಲು ಸಹಾಯವಾಗುತ್ತದೆ.

ಸದರಿ ಭೂ ಉಪಯೋಗ ಬದಲಾವಣೆ ಪ್ರಸ್ತಾವನೆಯ ಬಗ್ಗೆ ಸಾರ್ವಜನಿಕರಿಂದ ಯಾವುದೇ ಆಕ್ಷೇಪಣೆಗಳು ಇದ್ದಲ್ಲಿ ಅವುಗಳನ್ನು ಈ ಪ್ರಕಟಣೆಯ ದಿನಾಂಕದಿಂದ 15 ದಿವಸಗಳೊಳಗಾಗಿ ಸೂಕ್ತ ಕಾರಣಗಳೊಂದಿಗೆ ಲಿಖಿತವಾಗಿ **ಸದಸ್ಯ-ಕಾರ್ಯದರ್ಶಿಗಳು, ಬಿ.ಎಂ.ಐ.ಸಿ.ಎ.ಪಿ.ಎ., ಬೆಂಗಳೂರು** ಇವರಿಗೆ ಈ ಪ್ರಕಟಣೆಯಲ್ಲಿನ ಮೇಲ್ಕಂಡ ವಿಳಾಸಕ್ಕೆ ಸಲ್ಲಿಸಬೇಕೆಂದು ತಿಳಿಸಲಾಗಿದೆ. ನಿಗಧಿತ ಅವಧಿಯ ನಂತರ ಸ್ವೀಕೃತವಾಗುವ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಸಹಿ/- ಸದಸ್ಯ ಕಾರ್ಯದರ್ಶಿಗಳು, ಬಿ.ಎಂ.ಐ.ಸಿ.ಎ.ಪಿ.ಎ., ಬೆಂಗಳೂರು.

ವಾಸಾಸಂಇ/ವಾ.ಪ್ರ/3702/ಅಡ್ವರ್ಟೋರ್/2023-24

ಕರ್ನಾಟಕ ಸರ್ಕಾರ

ಲೋಕೋಪಯೋಗಿ ಇಲಾಖೆ

ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಮೈಸೂರು ವಿಭಾಗ, ಮೈಸೂರು.
www:eepwdmys21@gmail.com
ದೂರವಾಣಿ ಸಂಖ್ಯೆ/ಫ್ಯಾಕ್ಸ್ ನಂ: 0821-2420810

ಈ ಕಛೇರಿ ಐಟಂವಾರು ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂ:13/2023-24 ದಿನಾಂಕ: 16.02.2024

ಕರ್ನಾಟಕ ರಾಜ್ಯಪಾಲರ ಪರವಾಗಿ ಮೈಸೂರು ಲೋಕೋಪಯೋಗಿ ಇಲಾಖೆ ವಿಭಾಗದ ಕಾರ್ಯಪಾಲಕ ಇಂಜಿನಿಯರ್‌ರವರಿಂದ ಈ ವಿಭಾಗ ವ್ಯಾಪ್ತಿಯ ಕಾಮಗಾರಿಗಳಿಗೆ ಸ್ಟ್ಯಾಂಡರ್ಡ್ ಬಿಡ್ ಡಾಕ್ಯುಮೆಂಟ್ ಕೆ.ಡಬ್ಲ್ಯೂ-4ರ ಷರತ್ತು ಮತ್ತು ನಿಯಮಗಳನ್ವಯ ಲೆಕ್ಕ ಶೀರ್ಷಿಕೆ: 3054-03-337-0-05-200 ರಾಜ್ಯ ಹೆದ್ದಾರಿ ಅಡಿಯಲ್ಲಿ ಅನುಮೋದನೆಯಾದ 01 ಸಂಖ್ಯೆ ಕಾಮಗಾರಿಗೆ ಅಲ್ಪಾವಧಿ ಐಟಂವಾರು ಟೆಂಡರ್ ಪ್ರಕಟಣೆಯನ್ನು ಹೊರಡಿಸಲಾಗಿದೆ. ಕೆಪಿಪಿ ಪೋರ್ಟಲ್‌ನಲ್ಲಿ ನೊಂದಾಯಿಸಿರುವ ಲೋಕೋಪಯೋಗಿ 3ನೇ ದರ್ಜೆ ಮೇಲ್ಪಟ್ಟ ಲೋಕೋಪಯೋಗಿ ಗುತ್ತಿಗೆದಾರರು ಕೆಪಿಪಿ ಪೋರ್ಟಲ್‌ನಲ್ಲಿ (viz https://kppp.karnataka.gov.in/) 17.02.2024 ರಿಂದ 27.02.2024ರ ಸಂಜೆ 17:00 ರವರೆಗೆ ಸಲ್ಲಿಸಬಹುದಾಗಿರುತ್ತದೆ. ಗರಿಷ್ಟ ಟೆಂಡರ್‌ಗಿಟ್ಟ ಮೊತ್ತ ರೂ.150.00ಲಕ್ಷ ಇ.ಎಂ.ಡಿ ರೂ.2,25,000/-ಗಳಾಗಿರುತ್ತದೆ. ಸದರಿ ಕಾಮಗಾರಿಗೆ ಪೂರ್ವಭಾವಿ ಸಭೆಯನ್ನು ದಿ: 17.02.2024 ರಂದು ಈ ಕೆಳಗೆ ಸಹಿ ಮಾಡಿರುವವರ ಕಛೇರಿಯಲ್ಲಿ ಪೂರ್ವಾಹ್ನ 11.00ಕ್ಕೆ ನಿಗಧಿಪಡಿಸಿದೆ. ಕಾಮಗಾರಿಗೆ ಸಂಬಂಧಿಸಿದಂತೆ ಹೆಚ್ಚಿನ ವಿವರಗಳು ಬೇಕಾದ್ದಲ್ಲಿ ಈ ಕೆಳಗೆ ಸಹಿ ಮಾಡಿರುವವರ ಕಛೇರಿಯಲ್ಲಿ ಕೆಲಸದ ವೇಳೆಯಲ್ಲಿ ಪಡೆಯಬಹುದಾಗಿದ್ದು, ಟೆಂಡರ್ ಪ್ರಕಟಣೆಯಲ್ಲಿ ಯಾವುದೇ ತಿದ್ದುಪಡಿ ಅಥವಾ ಮಾರ್ಪಾಡುಗಳಾದಲ್ಲಿ ಕೆಪಿಪಿ ಪೋರ್ಟಲ್ ಮೂಲಕ ಮಾತ್ರ ಪ್ರಕಟಿಸಲಾಗುವುದು.

ಸಹಿ/- ಕಾರ್ಯಪಾಲಕ ಇಂಜಿನಿಯರ್

DIPR/DDMYS/KSMCA/ /2023-24

ಮಹಾನಗರ ಪಾಲಿಕೆ ಕಾರ್ಯಾಲಯ, ದಾವಣಗೆರೆ.

ನಂ:ದಾಮಪಾ:ಕಾಅ2.ಇ.ಟೆಂಡರ್:44:2023-24 ದಿನಾಂಕ 14-02-2024

ಟೆಂಡರ್ ಪ್ರಕಟಣೆ (2ನೇ ಕರೆ)

(ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)

2020-21 ರಿಂದ 2022-23 ಸಾಲಿನ 15ನೇ ಹಣಕಾಸು ಆಯೋಗದ ಸಾಮಾನ್ಯ ಮೂಲ ಅನುದಾನ ಹಾಗೂ ಎಸ್.ಬಿ.ಎಂ 2.0 ಅನುದಾನಗಳಡಿ ಕೆಳಕಂಡ ಕಾಮಗಾರಿಗೆ ಕೆ.ಪಿ.ಪಿ. ಪೋರ್ಟಲ್ ಮುಖಾಂತರ ತ್ರೀ ಕವರ್ ಪದ್ಧತಿಯಲ್ಲಿ ಟೆಂಡರ್ ಕರೆಯಲಾಗಿದ್ದು, ಅರ್ಹ ಗುತ್ತಿಗೆದಾರರು/ಏಜನ್ಸಿದಾರರು/ ಸರಬರಾಜುದಾರರು ಕೆ.ಪಿ.ಪಿ. ಪೋರ್ಟಲ್ ವೆಬ್ ಸೈಟ್ https://kppp.karnataka.gov.in ನಲ್ಲಿ ಟೆಂಡರ್‌ಗಾಗಿ ಭಾಗವಹಿಸಬಹುದು. ಹೆಚ್ಚಿನ ವಿವರಗಳನ್ನು ದಾವಣಗೆರೆ ಮಹಾನಗರ ಪಾಲಿಕೆಯ ಕಛೇರಿಯ ವೆಬ್ ಸೈಟ್ www.davanagerecity.mrc.gov.in ರಲ್ಲಿ ಹಾಗೂ ಕೆ.ಪಿ.ಪಿ.ಪಿ. ಸಹಾಯಕ ದೂರವಾಣಿ ಸಂಖ್ಯೆ: +91-8046010000 / +91-8068948777 ರಿಂದ ಮಾಹಿತಿ ಪಡೆಯಬಹುದು.

ಇ-ಪ್ರಕ್ಯೂರ್ ಮೆಂಟ್ ಉಲ್ಲೇಖ:- DMA/2023-24/OW/WORK_INDENT 1288/CALL-2. ಕಾಮಗಾರಿಯ ವಿವರ:- ದಾವಣಗೆರೆ ಮಹಾನಗರಪಾಲಿಕೆಯ ಆವರಗೊಳ್ಳ ಸ.ನಂ.117/2,129,130/1 ರ ನೆಲಭರ್ತಿ ಜಾಗದಲ್ಲಿ ಸಂಗ್ರಹವಾಗಿರುವ ಪಾರಂಪರಿಕ ತ್ಯಾಜ್ಯವನ್ನು ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿಯ ಮಾರ್ಗಸೂಚಿಗಳನ್ವಯ ವಿಲೇವಾರಿ ಮಾಡುವುದು. ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ):- 2184.60 ಟೆಂಡರ್‌ಗೆ ಇಟ್ಟಿರುವ ಮೊತ್ತ (ರೂ.ಗಳಲ್ಲಿ):- 216119910.36 ಮುಂಗಡ ಠೇವಣಿ ಮೊತ್ತ (ರೂ. ಗಳಲ್ಲಿ):- 2162000.00 ಗುತ್ತಿಗೆದಾರರ ದರ್ಜೆ:-ಗುತ್ತಿಗೆದಾರರು/ ಜೆವಿ/ ಕಂಪನಿ ಟೆಂಡರ್ ನಮೂನೆ:- KW-4 & 6 ಪೂರ್ಣಗೊಳಿಸಲು ನಿಗಧಿಪಡಿಸಿದ ಅವಧಿ ಮಳೆಗಾಲ ಸೇರಿ:- 15 ತಿಂಗಳು

ಸೂಚನೆ : 1) ದಿನಾಂಕ ಮತ್ತು ಯಾವುದೇ ಬದಲಾವಣೆಯಾದಲ್ಲಿ ಕೆ.ಪಿ.ಪಿ. ಪೋರ್ಟಲ್‌ನಲ್ಲಿ ಮಾತ್ರ ಪ್ರಚುರ ಪಡಿಸಲಾಗುವುದು. ಪೂರ್ವಭಾವಿ ಸಭೆ ದಿನಾಂಕ ಮತ್ತು ವೇಳೆ : 05-03-2024 ಸಮಯ : 11.00 ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕ ಮತ್ತು ವೇಳೆ :19-03-2024 ಸಮಯ : 17.30 ಪ್ರೀ ಕ್ವಾಲಿಫಿಕೇಷನ್ ಬಿಡ್ ತೆರೆಯುವ ವೇಳೆ :21-03-2024 ಸಮಯ : 11.00 ಟೆಂಡರ್/ತಾಂತ್ರಿಕ ಬಿಡ್ ತೆರೆಯುವ ದಿನಾಂಕ & ವೇಳೆ :28-03-2024 ಸಮಯ : 11.00

1 ಕಾಮಗಾರಿಗಳು ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ಕೆ.ಡಬ್ಲ್ಯೂ ರ ನಿಬಂಧನೆಗಳಿಗೆ ಒಳಪಟ್ಟಿರುತ್ತವೆ.

2 ಹೆಚ್ಚಿನ ಮಾಹಿತಿಯನ್ನು ಮಹಾನಗರ ಪಾಲಿಕೆಯ ಕಾರ್ಯಪಾಲಕ ಅಭಿಯಂತರರನ್ನು ಕಛೇರಿ ವೇಳೆಯಲ್ಲಿ ಖುದ್ದಾಗಿ ಭೇಟಿ ಮಾಡಿ ಪಡೆಯಬಹುದು ಮತ್ತು ಇತರೆ ಮಾಹಿತಿಗಾಗಿ ಮಹಾನಗರ ಪಾಲಿಕೆಯ ದೂರವಾಣಿ ಸಂಖ್ಯೆ. 08192-234444 ಸಂಪರ್ಕಿಸಬಹುದು.

ವಾಸಾಇ/ದಾವಣಗೆರೆ/612/ ಕೆಎಸ್‌ಎಂಸಿಎ/2023-24

ಸಹಿ/-ಆಯುಕ್ತರು, ಮಹಾನಗರ ಪಾಲಿಕೆ, ದಾವಣಗೆರೆ.

ಕರ್ನಾಟಕ ರಾಜ್ಯ ಕೃಷಿ ಮಾರಾಟ ಮಂಡಳಿ,

ಕೃಷಿಪೇಟೆ ಮಾಸಪತ್ರಿಕೆ, ಶ್ರೀ ಆರ್.ಬಿ. ಮಾಮಲೇದೇಸಾಯಿ ಸ್ಮಾರಕ ಭವನ, ಭೈರಿದೇವರಕೊಪ್ಪ, ಹುಬ್ಬಳ್ಳಿ-580025
☎ : (0836) 2373726 E mail : ksamb@rediffmail.com/ gmpp@rediffmail.com

ಸಂಖ್ಯೆ:ಕೃಮಾಮಂ/ಕೃಪೇ/ಲೇ.ವಿ/ಠೇವಣಿ/518/2023-24, ದಿನಾಂಕ : 19.02.2024

ಅಲ್ಪಾವಧಿ ಇ-ಆಕ್ಷ್ಯನ್ ಪ್ರಕಟಣೆ (ಇ-ಪ್ರೊಕ್ಯೂರಮೆಂಟ ಮೂಲಕ)

ಕರ್ನಾಟಕ ರಾಜ್ಯ ಕೃಷಿ ಮಾರಾಟ ಮಂಡಳಿಯ ಕೃಷಿಪೇಟೆ ಕಛೇರಿಯು ರೂ. **9.25** ಕೋಟಿಗಳನ್ನು (ರೂ. ಒಂಭತ್ತು ಕೋಟಿ ಇಪ್ಪತ್ತೈದು ಲಕ್ಷಗಳನ್ನು) ಈ-ಪ್ರೊಕ್ಯೂರ್‌ಮೆಂಟ್ ಮೂಲಕ **365** ದಿವಸಗಳ ಅಲ್ಪಾವಧಿಗೆ ನಿಶ್ಚಿತ ಠೇವಣಿಯಲ್ಲಿ ತೊಡಗಿಸುವ ಕುರಿತು ಆಸಕ್ತ, ರಾಷ್ಟ್ರೀಯ ಬ್ಯಾಂಕುಗಳಿಂದ ಸ್ಪಧಾತ್ಮಕ ಇ-ಬಿಡ್ಡಿಂಗನ್ನು ಆಹ್ವಾನಿಸಲಾಗಿದ್ದು, ಹೆಚ್ಚಿನ ಮಾಹಿತಿಯನ್ನು http://www.kppp.karnataka.gov.in ವೆಬ್‌ಸೈಟ್‌ನ ಇಂಡೆಂಟ್ ಸಂಖ್ಯೆ: **APMC/2023-24/ AUCTION54** ರಲ್ಲಿ ಪಡೆಯಬಹುದಾಗಿದ್ದು, ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ : **27.02.2024.**

ಸಹಿ/- [ಜಿ.ಕೆ. ವೆಂಕಟೇಶ]
ವ್ಯವಸ್ಥಾಪಕ ಸಂಪಾದಕರು, ಕೃಷಿಪೇಟೆ, ಹುಬ್ಬಳ್ಳಿ

ನಗರಸಭಾ ಕಾರ್ಯಾಲಯ, ಉಡುಪಿ

ಸಂಖ್ಯೆ:ಉನಸ:ಬಿ2:ಸಿಆರ್:ಟೆ.ಪ್ರ:2023-24 ದಿನಾಂಕ: 15.02.2024

ಟೆಂಡರು ಪ್ರಕಟಣೆ

2023-24ನೇ ಸಾಲಿನ 15ನೇ ಹಣಕಾಸು ಆಯೋಗದ ಅನುದಾನದಡಿ ಈ ಕೆಳಗಿನ ಕಾಮಗಾರಿಗಳನ್ನು ಕೈಗೊಳ್ಳಲು ಅರ್ಹ ಗುತ್ತಿಗೆದಾರರಿಂದ **Standard Bid Document K.W-2** ರ ನಿಯಮ ನಿಬಂಧನೆಗೊಳಪಟ್ಟು (ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡಿರುವಂತೆ) **e-procurement** ಮೂಲಕ ಟೆಂಡರುಗಳನ್ನು ಆಹ್ವಾನಿಸಲಾಗಿದೆ. ಹೆಚ್ಚಿನ ವಿವರಗಳನ್ನು ಕಚೇರಿ ವೇಳೆಯಲ್ಲಿ ಸಂಬಂಧಿಸಿದವರಿಂದ ಮತ್ತು ವೆಬ್‌ಸೈಟ್ **https://kppp.karnataka.gov.in** ನಿಂದ ಪಡೆದುಕೊಳ್ಳಬಹುದು.

(1) ತುಂಬಿದ ಟೆಂಡರುಗಳನ್ನು ಸ್ವೀಕರಿಸುವ ಕೊನೆಯ **ದಿನಾಂಕ: 28.02.2024 ಸಂಜೆ 5.00 ಗಂಟೆಗೆ** (2) ಸ್ವೀಕರಿಸಲಾದ ಟೆಂಡರುಗಳನ್ನು ತೆರೆಯುವ **ದಿನಾಂಕ: 29.02.2024 ಸಂಜೆ 5.01 ಗಂಟೆಗೆ**

ಕಾಮಗಾರಿಗಳ ವಿವರ: ನೀರು ಸರಬರಾಜು ಕಾಮಗಾರಿ: ಕೊಡವೂರು ವಾರ್ಡಿನ ಗರಡಿ ಸಿರಿಕುಮಾರ ಕೆರೆ ಅಭಿವೃದ್ಧಿ, DMA/2023-24/OW/WORK_INDENT15651, ಅಂದಾಜು ಮೊತ್ತ: **ರೂ. 5000000.00,** ಇ.ಎಂ.ಡಿ: **100000.00,** ಟ್ರಾನ್ಸಾಕ್ಷನ್ ಫೀ: **ಇ-ಪೋರ್ಟಲ್ ನಂತೆ,** ಕಾಮಗಾರಿ ಪೂರ್ತಿಗೊಳಿಸುವ ಅವಧಿ: **4 ತಿಂಗಳು**

ಹೆಚ್ಚಿನ ವಿವರಗಳನ್ನು ಇ-ಪ್ರೊಕ್ಯೂರ್‌ಮೆಂಟ್ **https://kppp.karnataka.gov.in** ನಿಂದ ಟೆಂಡರು ದಾಖಲಾತಿಗಳನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ ಹಾಗೂ ಇದಕ್ಕೆ ಸಂಬಂಧಪಟ್ಟ ಹೆಚ್ಚಿನ ಮಾಹಿತಿಗಳನ್ನು ಕಛೇರಿ ವೇಳೆಯಲ್ಲಿ ಸಂಬಂಧಪಟ್ಟವರಿಂದ ಪಡೆದುಕೊಳ್ಳಬಹುದು.

ವಾಸಾಇ/ಸನಿಉ/ಕೆಎಸ್‌ಎಂಸಿಎ/775/23-24 ದಿ: 20.02.2024

ಸಹಿ/- ಪೌರಾಯುಕ್ತರು, ಉಡುಪಿ ನಗರಸಭೆ

ಸಾರ್ವಜನಿಕ ಗ್ರಂಥಾಲಯ ಇಲಾಖೆ

ಉಪನಿರ್ದೇಶಕರ ಕಛೇರಿ, ನಗರ ಕೇಂದ್ರ ಗ್ರಂಥಾಲಯ, ಪಶ್ಚಿಮ ವಲಯ, ಹಂಪಿನಗರ, ಬೆಂಗಳೂರು- 560104. ದೂರವಾಣಿಃ- 080-23209691
E-mail:- westzone_hampinagar@rediffmail.com

ಸಂಖ್ಯೆಃ ನಕೇಗ್ರಂ/ಪವ/57/ಲೆಪವಿ/42/ಲೇ&ಸ್ವ.ಸಾ.ಸ/2023-24/857 ದಿನಾಂಕಃ 19-02-2024.

ಅಲ್ಪಾವಧಿ ಟೆಂಡರ್ ಪ್ರಕಟಣೆ (ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

2023-24 ನೇ ಸಾಲಿಗೆ ನಕೇಂಗ್ರಂ/ಪವ/ಬೆಂಗಳೂರು ಈ ಕಛೇರಿ ಹಾಗೂ ಈ ಕಛೇರಿ ವ್ಯಾಪ್ತಿಯ ಶಾಖಾ ಗ್ರಂಥಾಲಯಗಳಿಗೆ ಅಗತ್ಯವಿರುವ ಲೇಖನ ಸಾಮಗ್ರಿ & ಸ್ವಚ್ಛತಾ ಸಾಮಗ್ರಿಗಳನ್ನು ಸರಬರಾಜು ಮಾಡಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯ ಪಾರದರ್ಶಕತೆ ಅಧಿನಿಯಮ 2000ರ ಪ್ರಕಾರ **e-Procurement Portal** ಮುಖಾಂತರ ಅಲ್ಪಾವಧಿ e-Tender ಆಹ್ವಾನಿಸಲಾಗಿದೆ. ಅನುಭವವುಳ್ಳ ಸಂಸ್ಥೆಯವರು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಭಾಗವಹಿಸಬಹುದು. ಟೆಂಡರ್‌ಗಿಟ್ಟ ಅಂದಾಜು **ಮೊತ್ತ ರೂ.25.00 ಲಕ್ಷ**. ಇ.ಎಂ.ಡಿ. **ಮೊತ್ತ ರೂ.50,000/-** ಟೆಂಡರ್‌ನಲ್ಲಿ ಭಾಗವಹಿಸಲು ಇಚ್ಛಿಸುವವರು **https://kppp.karnataka.gov.in** ವೆಬ್‌ಸೈಟ್‌ನಲ್ಲಿ ಟೆಂಡರ್ ಡಾಕ್ಯುಮೆಂಟ್‌ಗಳನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದು. ಟೆಂಡರ್‌ಗಳನ್ನು ಸ್ವೀಕರಿಸುವ ಅಂತಿಮ **ದಿನಾಂಕಃ 27-02-2024 ಸಮಯ ಸಂಜೆ 5.30 ಗಂಟೆ**. ತಾಂತ್ರಿಕ ಬಿಡ್‌ಗಳನ್ನು **ದಿನಾಂಕಃ 29-02-2024 ರಂದು ಬೆಳಗ್ಗೆ 11.15 ಗಂಟೆಗೆ** ತೆರೆಯಲಾಗುವುದು. ಟೆಂಡರ್‌ದಾರರು ಹೆಚ್ಚಿನ ವಿವರಗಳನ್ನು ಈ ಕಛೇರಿ ಕೆಲಸದ ವೇಳೆಯಲ್ಲಿ ಪಡೆಯುವುದು.

ಸಹಿ/- (ಪಾರ್ವತಮ್ಮ, ಸಿ.) ಉಪನಿರ್ದೇಶಕರು
ನಗರ ಕೇಂದ ಗಂಥಾಲಯ, ಪಶ್ಚಿಮ ವಲಯ, ಹಂಪಿನಗರ, ಬೆಂಗಳೂರು.

DIPR/CP/AAPL/RO3728/23-24

ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ

(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ)
ಮುಖ್ಯ ಕಛೇರಿ, ನಂ.6/13/1, 10ನೇ ಬ್ಲಾಕ್, 2ನೇ ಹಂತ, ನಾಗರಭಾವಿ, ಬೆಂಗಳೂರು-560072, ದೂರವಾಣಿ: 080-222 02100
ಇ-ಮೇಲ್: kredlmd@gmail.com

ಟೆಂಡರ್ ಸಂಖ್ಯೆ: KREDL/2023-24/SE0011

ಸಂಕ್ಷಿಪ್ತ ಟೆಂಡರ್ ಪ್ರಕಟಣೆ (ಕೆ.ಪಿ.ಪಿ ಪೋರ್ಟಲ್ ಮೂಲಕ)

ಕೆ.ಆರ್.ಇ.ಡಿ.ಎಲ್ ಸಂಸ್ಥೆಯಿಂದ **"ಸೌರ ವಿದ್ಯುತ್ ಉತ್ಪಾದಕರ (SPGs) ಆಯ್ಕೆಗಾಗಿ ಬಿಲ್ಡ್-ಓನ್-ಆಪರೇಟ್ (BOO) ಆಧಾರದ ಮೇಲೆ ಹೆಸ್ಕಾಂ ಮತ್ತು ಸೆಸ್ಕ ಮೈಸೂರು ವ್ಯಾಪ್ತಿಯ 198.52 MW ಸಾಮರ್ಥ್ಯದ ಸಬ್ ಸ್ಟೇಷನ್ (SS) ಮಟ್ಟದಲ್ಲಿ ಆಯ್ದ ಕೃಷಿ ಫೀಡರ್‌ಗಳ ಸೌರೀಕರಣಕ್ಕಾಗಿ, ವಿಕೇಂದ್ರೀಕೃತ ಸೌರ ಘಟಕಗಳ ವಿನ್ಯಾಸ, ಸಮೀಕ್ಷೆ, ಸರಬರಾಜು, ಸ್ಥಾಪನೆ, ಪರೀಕ್ಷೆ, ಅನುಷ್ಠಾನ, ಕಾರ್ಯಾಚರಣೆ & ನಿರ್ವಹಣೆ, ಅದರ ಸಂಬಂಧಿತ 11ಕೆ.ವಿ ಮಾರ್ಗ ಹಾಗೂ ಸೌರ ವಿದ್ಯುತ್ ಸ್ಥಾವರಗಳ ರಿಮೋಟ್ ಮಾನಿಟರಿಂಗ್ ಸಿಸ್ಟಮ್ (RMS) ನೊಂದಿಗೆ ಸ್ಥಾವರವನ್ನು RESCO ಮಾದರಿಯಲ್ಲಿ 25 ವರ್ಷಗಳ PPA ಅವಧಿಯೊಂದಿಗೆ ಸ್ಥಾಪಿಸಿ ಸಂಪರ್ಕ ಕಲ್ಪಿಸಲು, PM-KUSUM, Component-C ಅಡಿ ಕೃಷಿ ಫೀಡರ್‌ಗಳ ಸೌರೀಕರಣ"** ಯೋಜನೆಯ ಅನುಷ್ಠಾನಕ್ಕಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣ ಪೋರ್ಟಲ್ ವೆಬ್‌ಸೈಟ್ **https://kppp.karnataka.gov.in** ಮೂಲಕ Request for Proposal (RFP) ಅನ್ನು ಆಹ್ವಾನಿಸಲಾಗಿದೆ. ಆಸಕ್ತ ಬಿಡ್ಡರ್‌ಗಳು ಟೆಂಡರ್ ದಸ್ತಾವೇಜುಗಳನ್ನು **https://kppp.karnataka.gov.in** ರಲ್ಲಿ **27.02.2024** ರ ನಂತರ ಪಡೆಯಬಹುದಾಗಿದೆ, ಆಸಕ್ತ ಬಿಡ್ಡರ್‌ಗಳು **KPP Portal** ನಲ್ಲಿ ನೋಂದಾಯಿಸಿಕೊಳ್ಳತಕ್ಕದ್ದು, ಸಹಾಯಕ್ಕಾಗಿ **KPPP helpdesk +91 8046010000, +91 8068948777** ಅಥವಾ e-mail: **support@prochelpdesk.com** ಸಂಪರ್ಕಿಸಬಹುದಾಗಿದೆ.

ಸಹಿ/- ವ್ಯವಸ್ಥಾಪಕ ನಿರ್ದೇಶಕರು, ಕೆ.ಆರ್.ಇ.ಡಿ.ಎಲ್, ಬೆಂಗಳೂರು.

ಕರ್ನಾಟಕ ಸರಕಾರ (ಜಿಲ್ಲಾ ಪಂಚಾಯತ್, ಗದಗ)

ಕಾರ್ಯನಿರ್ವಾಹಕ ಇಂಜಿನೀಯರ, ಪಂಚಾಯತ್ ರಾಜ್ ಇಂಜಿನೀಯರಿಂಗ್ ವಿಭಾಗ, ಗದಗ.

ನಂ:ಪಂ.ರಾಜ್.ಇಂ.ವಿ/ಗದಗ/ಪಿಬಿ.3/ಟೆಂಡರ/2023-24/2922
ದಿನಾಂಕ : 20-02-2024

ಕೆಪಿಪಿ ಪೋರ್ಟಲ್ ಟೆಂಡರ ಪ್ರಕಟಣೆ
Standard Bid Document KW-1 [ಏಕಲಕೋಟಿ ಪದ್ದತಿ]

ಕರ್ನಾಟಕ ಸಾರ್ವಜನಿಕ ಪಾರದರ್ಶಕತೆ ಆಕ್ಟ್-2000 ನಿಯಮದಂತೆ **Standard Bid Document KW-1**ರ ನಿಯಮಗಳನ್ವಯ ಅರ್ಹ ಗುತ್ತೇದಾರರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮುಖಾಂತರ **06** ಕಾಮಗಾರಿಯ ಟೆಂಡರನ್ನು ಆಹ್ವಾನಿಸಲಾಗಿದೆ. ಲೆಕ್ಕ ಶೀರ್ಷಿಕೆ: 2022-23ನೇ ಸಾಲಿನ ಸಿ.ಡಿ.ಪಿ.ಓ. ಅನುದಾನ ಮತ್ತು ಎಮ್.ಜಿ.ಎನ್.ಆರ್.ಇ.ಜಿ. ಓಗ್ಗೂಡೂವಿಕೆ ಯೋಜನೆ/2022-23ನೇ ಸಾಲಿನ ಎಸ್.ಬಿ.ಎಂ.ಯೋಜನೆ/2021-22 ನೇ ಸಾಲಿನ **15** ನೇ ಹಣಕಾಸು ಯೋಜನೆ ಅಡಿ ಟೆಂಡರನ್ನು ಆಹ್ವಾನಿಸಲಾಗಿದೆ. ಪಿ.ಡಬ್ಲ್ಯೂ.ಡಿ. ಇಲಾಖೆಯಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್, **(https://kppp.karnataka.gov.in)** ಮುಖಾಂತರ ಭಾಗವಹಿಸಬಹುದು. ಕಾಮಗಾರಿಗಳ ವರ್ಕ ಇಂಡೆಂಟ್ ಸಂಖ್ಯೆ ಈ ಕೆಳಗಿನಂತೆ ಇರುತ್ತವೆ.

Indent Nos : RDPR/2023-24/WORK_INDENT : 3556/Call-2, 3760/Call-2, 3815/Call-2, 4668, 4669, 4682

ಟೆಂಡರಿಗಿಟ್ಟ ಕನಿಷ್ಠ ಮೊತ್ತ ರೂ. **12.70** ಲಕ್ಷ ಮತ್ತು ಗರಿಷ್ಠ ಮೊತ್ತ ರೂ. **16.56** ಲಕ್ಷಗಳು

ಟೆಂಡರ ಅರ್ಜಿಯ ಬೆಲೆ ಹಾಗೂ ಇ.ಎಂ.ಡಿ ಮೊತ್ತದ ವಿವರ:- ಅರ್ಜಿ ಬೆಲೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಇ.ಎಂ.ಡಿ. ಸಂಬಂಧಪಟ್ಟ ವರ್ಕ ಇಂಡೆಂಟ್‌ನಲ್ಲಿ ನೋಡಬಹುದಾಗಿದೆ.

ಇ-ಪ್ರೋಕ್ಯೂರಮೆಂಟ ಮುಖಾಂತರ ಅರ್ಜಿ ಹಾಗೂ ಶೆಡ್ಯೂಲ್-ಬಿ ಯನ್ನು ವೆಬಸೈಟಿನಲ್ಲಿ ಭರ್ತಿ ಮಾಡಿ ಸಲ್ಲಿಸುವ ದಿನಾಂಕ : **21-02-2024** ರಿಂದ **29-02-2024** ರಂದು 16.00 ಗಂಟೆಯವರೆಗೆ. ಆರ್ಥಿಕ ಬಿಡ್ ತೆರೆಯುವ ದಿನಾಂಕ : **01-03-2024** ರಂದು 16.30 ಗಂಟೆಗೆ ತೆರೆಯಲಾಗುವುದು. ಟೆಂಡರನ್ನು ಅನಾವರಣಗೊಳಿಸಿದ ದಿನಾಂಕದಿಂದ ಭಾಗವಹಿಸಿದ ಗುತ್ತಿಗೆದಾರರಲ್ಲಿ ಆರ್ಥಿಕ ಬಿಡ್‌ದಲ್ಲಿ ಅರ್ಹ ಗುತ್ತಿಗೆದಾರರು ಈ ಕಾರ್ಯಾಲಯಕ್ಕೆ ಹಾಜರಾಗಿ ವ್ಯತ್ಯಾಸದ ಮೊತ್ತ ಹಾಗೂ ಪಿ.ಎಸ್.ಡಿ. ಮೊತ್ತವನ್ನು ಎಫ್.ಡಿ.ಆರ್ ರೂಪದಲ್ಲಿ **20** ದಿನಗಳ ಒಳಗಾಗಿ (ಷರತ್ತು ಕ್ರ.ಸಂ : 13 ರಂತೆ) ಭರಣಾ ಮಾಡಬೇಕು. ಇ-ಪದ್ಧತಿ ಇರುವುದರಿಂದ ಕಾಗದ ರಹಿತವಾಗಿದ್ದು ಯಾವುದೇ ಪತ್ರ ವ್ಯವಹಾರಕ್ಕೆ ಅವಕಾಶ ಇರುವುದಿಲ್ಲ. ಹೆಚ್ಚಿನ ಮಾಹಿತಿಯನ್ನು ಈ ಕಚೇರಿಯ ಕೆಲಸದ ವೇಳೆಯಲ್ಲಿ ಪಡೆಯಬಹುದು.

ಸಹಿ/- ಕಾರ್ಯನಿರ್ವಾಹಕ ಇಂಜಿನೀಯರರು, ಪಂ.ರಾಜ್. ಇಂಜಿನೀಯರಿಂಗ್ ವಿಭಾಗ, ಗದಗ

ವಾಸಾಸಂಇ/ಗದಗ/ಕೆಎಸ್‌ಎಂಸಿಎ/556/2023-24

ಬೆಂಗಳೂರು ಮಹಾನಗರ ರಸ್ತೆ ಸಾರಿಗೆ ಸಂಸ್ಥೆ

ಕೇಂದ್ರ ಕಛೇರಿ, ಯಾಂತ್ರಿಕ ಇಲಾಖೆ, ಕೆ.ಎಚ್.ರಸ್ತೆ, ಶಾಂತಿನಗರ, ಬೆಂಗಳೂರು-560027
ದೂರವಾಣಿ ಸಂಖ್ಯೆ : 080-22537519

ಟೆಂಡರ್ ಸಂಖ್ಯೆ: BMTC/2023-24/SE0217/CALL-3 ದಿನಾಂಕ:20.02.2024

ಅಲ್ಪಾವಧಿ ಟೆಂಡರ್ ಆಹ್ವಾನ ಸೂಚನಾ ಪತ್ರ

(ಇ-ಪ್ರೊಕ್ಯೂರ್‌ಮೆಂಟ್ ವಿಧಾನದಲ್ಲಿ ಮಾತ್ರ)

(1) 120 ಸಂಖ್ಯೆಯ, 900 ಮಿ.ಮಿ. ಫ್ಲೋರ್ ಎತ್ತರದ, 9 ಮೀಟರ್ ಉದ್ದದ ಹವಾನಿಯಂತ್ರಣ ರಹಿತ ವಿದ್ಯುತ್ ಚಾಲಿತ ನಗರ ಸಾರಿಗೆ ಮಾದರಿ ಬಸ್ಸುಗಳ ಖರೀದಿ, ಕಾರ್ಯಾಚರಣೆ, ಹಾಗೂ ನಿರ್ವಹಣೆಯನ್ನು ಗ್ರಾಸ್ ಕಾಸ್ಟ್ ಕಾಂಟ್ರಾಕ್ಟ್ (ಜಿ.ಸಿ.ಸಿ) ಮಾದರಿಯಲ್ಲಿ ನಿರ್ವಹಿಸಲು ಸೇವಾದಾರರನ್ನು ಆಯ್ಕೆ ಮಾಡಲು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮೇಲ್ಕಂಡ ಟೆಂಡರ್‌ನ್ನು ಆಹ್ವಾನಿಸಲಾಗಿದೆ.

(2) ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಬಿಡ್ ಸಲ್ಲಿಸಲು ಕೊನೆಯ ದಿನಾಂಕವು **27.02.2024** ಸಮಯ **17.00** ಗಂಟೆಗೆ ಮುಂಚಿತವಾಗಿ.

ಯಾವುದೇ ಟೆಂಡರ್‌ನ ವೇಳಾಪಟ್ಟಿ, ಕಾರ್ಯವ್ಯಾಪ್ತಿ, ಅಥವಾ ಇತರೆ ಷರತ್ತು ಮತ್ತು ನಿಬಂಧನೆಗಳಲ್ಲಿ ಬದಲಾವಣೆಗಳನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಮಾತ್ರ ಅಪ್‌ಲೋಡ್ ಮಾಡಲಾಗುವುದು.

ಸೂಚನೆ: ಆಸಕ್ತಿಯುಳ್ಳ ಬಿಡ್ಡುದಾರರು **https://kppp.karnataka.gov.in** ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನೋಂದಣಿಯಾಗಿರಬೇಕು. ಬಿಡ್ ಸಲ್ಲಿಸಲು ಹೆಚ್ಚಿನ ಸಹಾಯಕ್ಕಾಗಿ ಇ-ಪ್ರೊಕ್ಯೂರ್‌ಮೆಂಟ್ ಹೆಲ್ಪ್ ಡೆಸ್ಕ್, ದೂರವಾಣಿ ಸಂಖ್ಯೆ: **080-46010000,** ಅಥವಾ **080-68948777**ಕ್ಕೆ ಕರೆ ಮಾಡಬಹುದು ಅಥವಾ **eprocurementhelpdesk@gmail.com**ಗೆ ಇ-ಮೇಲ್ ಮಾಡಬಹುದಾಗಿರುತ್ತದೆ.

ಸಹಿ/- ಮುಖ್ಯ ಯಾಂತ್ರಿಕ ಅಭಿಯಂತರರು (ಟೆಂಡರ್ ಆಹ್ವಾನಿಸುವ ಪ್ರಾಧಿಕಾರಿ)

ಕಾರ್ಮಿಕರ ರಾಜ್ಯ ವಿಮಾ ಯೋಜನೆ ವೈದ್ಯಕೀಯ ಸೇವೆಗಳ ನಿರ್ದೇಶನಾಲಯ

E.S.I.S.M. SERVICES KARNATAKA

ಎಸ್. ನಿಜಲಿಂಗಪ್ಪ ರಸ್ತೆ, ರಾಜಾಜಿನಗರ 2ನೇ ಬ್ಲಾಕ್, ಬೆಂಗಳೂರು-560010

ಸಂಖ್ಯೆ: ಇಎಸ್‌ಐಎಸ್/ಇಜಿಎಸ್-01/08/2023-24 ದಿನಾಂಕ: 19.02.2024

ನಿರ್ದೇಶನಾಲಯ ಕಛೇರಿ, ಎಲ್ಲಾ ಇಎಸ್‌ಐ ಆಸ್ಪತ್ರೆಗಳು ಮತ್ತು ಬಸವನಗುಡಿ ಡಯಾಗ್ನೊಸ್ಟಿಕ್ ಸೆಂಟರ್‌ಗೆ ಕಂಪ್ಯೂಟರ್‌ಗಳು, ಯುಪಿಎಸ್ ಮತ್ತು ಪ್ರಿಂಟರ್ಸ್‌ಗಳ ಸರಬರಾಜು ಮಾಡಲು ಅಲ್ಪಾವಧಿ ಟೆಂಡರ್ ಪ್ರಕಟಣೆ

ಟೆಂಡರ್ ಉಲ್ಲೇಖ.	ಇಎಸ್‌ಐಎಸ್/ಇಜಿಎಸ್-01/08/ 2023-24 ದಿನಾಂಕ:19.02.2024
ಪೂರ್ವಭಾವಿ ಸಭೆಯು ಕಾರ್ಮಿಕರ ರಾಜ್ಯ ವಿಮಾ ಯೋಜನೆ ವೈದ್ಯಕೀಯ ಸೇವೆಗಳ ನಿರ್ದೇಶನಾಲಯ ಕಛೇರಿ, ರಾಜಾಜಿನಗರ, ಬೆಂಗಳೂರು-10ರಲ್ಲಿ ನಡೆಯಲಿದೆ.	26.02.2024 ಬೆಳಿಗ್ಗೆ 11:30 ಗಂಟೆಗೆ
ಇಎಂಡಿ (ರೂ.ಗಳಲ್ಲಿ)	ರೂ. 2,50,000/-
ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಪದ್ಧತಿ ಮೂಲಕ ಟೆಂಡರ್ ದಸ್ತಾವೇಜು / ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ.	01.03.2024 ಸಂಜೆ 4:30
ಕಾರ್ಮಿಕರ ರಾಜ್ಯ ವಿಮಾ ಯೋಜನೆ ವೈದ್ಯಕೀಯ ಸೇವೆಗಳ ನಿರ್ದೇಶನಾಲಯ ಕಛೇರಿ, ರಾಜಾಜಿನಗರ, ಬೆಂಗಳೂರು-10ರಲ್ಲಿ ತಾಂತ್ರಿಕ ಬಿಡ್ ತೆರೆಯುವ ದಿನಾಂಕ.	04.03.2024 ಬೆಳಿಗ್ಗೆ 11:30
ಟೆಂಡರ್ ತೆರೆಯುವ ಸ್ಥಳ	ಕಾರಾವಿ ಯೋಜನೆ ವೈದ್ಯಕೀಯ ಸೇವೆಗಳ ನಿರ್ದೇಶನಾಲಯ, ರಾಜಾಜಿನಗರ, ಬೆಂಗಳೂರು-10
ಟೆಂಡರ್ ಬಗ್ಗೆ ಹೆಚ್ಚಿನ ವಿವರವಾದ ಮಾಹಿತಿಗಾಗಿ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ಗೆ ಭೇಟಿ ನೀಡಿ	www.kppp.karnataka.gov.in
ಸಂಪರ್ಕಿಸುವ ವಿಳಾಸ	ಕಾರಾವಿ ಯೋಜನೆ ವೈದ್ಯಕೀಯ ಸೇವೆಗಳ ನಿರ್ದೇಶನಾಲಯ, ರಾಜಾಜಿನಗರ, ಬೆಂಗಳೂರು-10

ಸಹಿ/-, ನಿರ್ದೇಶಕರು
ಕಾ.ರಾ.ವಿ.ಯೋ.ವೈ. ಸೇವೆಗಳು

ವಾಸಾಸಂಇ/ವಾಪ್ರ/ಎಲ್‌ಸಿ/3727/2023-24

ಕರ್ನಾಟಕ ಸರ್ಕಾರ

ಕಾರ್ಯನಿರ್ವಾಹಕ ಅಭಿಯಂತರರವರ ಕಛೇರಿ ಗ್ರಾಮೀಣ ಅಭಿವೃದ್ಧಿ ಪಂಚಾಯತ ರಾಜ್ ಇಂಜನೀಯರಿಂಗ್ ಯೋಜನಾ ವಿಭಾಗ ಕಲಬುರಗಿ

ಸಂಖ್ಯೆ: ಕಾನಿಅ/ಗ್ರಾಅಪಂರಾಇಂಯೋವಿಕ/ತಾಶಾ/ಟೆಂಡರ/2023-24/821 ದಿನಾಂಕ : 19/02/2024

ಇ-ಪ್ರೊಕ್ಯೂರಮೆಂಟ್ ಅಲ್ಪಾವಧಿ ಟೆಂಡರ ಪ್ರಕಟಣೆ ದ್ವಿ-ಲಕೋಟೆ ಪದ್ಧತಿಯಲ್ಲಿ

1.	ಕಾಮಗಾರಿಗಳ ಹೆಸರು ಇಂಡೆಂಟ್ ಸಂಖ್ಯೆ	**Improvements to Road from SH-10 to Yalnavadagi, Bolani, Basawan Sangolgi Degaon in Aland Taluka Kalaburagi District under KKRDB for the year 2023-24** Indent No. KRRDA/2023-24/RD/WORK_INDENT15/call-2
2.	ಲೆಕ್ಕ ಶೀರ್ಷಿಕೆ	2023-24ನೇ ಸಾಲಿನ (ಮೈಕ್ರೋ ಯೋಜನೆ) ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ ಕಲಬುರಗಿ
3.	ಟೆಂಡರಿಗಿಟ್ಟ ಅಂದಾಜು ಮೊತ್ತ	₹ 33720517.60
4.	ಗುತ್ತಿಗೆದಾರರ ಅರ್ಹತೆ	2ನೇ ದರ್ಜೆ ಮತ್ತು ಮೇಲ್ಪಟ್ಟು
5.	ಟೆಂಡರ ಫಾರಂ ಪಡೆಯುವ ದಿನಾಂಕ	19-02-2024 ರಿಂದ 28-02-2024 16:00 ಗಂಟೆವರೆಗೆ
6.	ಟೆಂಡರ ಅರ್ಜಿ ಬೆಲೆ	ಇ-ಪ್ರೊಕ್ಯೂರಮೆಂಟ್ ನಿಯಮಾನುಸಾರ
7.	ಇ.ಎಂ.ಡಿ.	ಇ-ಪ್ರೊಕ್ಯೂರಮೆಂಟ್ ನಲ್ಲಿ
8.	ಟೆಂಡರ ಸಲ್ಲಿಸುವ ದಿನಾಂಕ	19-02-2024 ರಿಂದ 28-02-2024 16:00 ಗಂಟೆವರೆಗೆ
9.	ತಾಂತ್ರಿಕ ಬಿಡ್ ತೆರೆಯುವ ದಿನಾಂಕ	29-02-2024 16:00 ಗಂಟೆ ನಂತರ
10.	ಆರ್ಥಿಕ ಬಿಡ್ ತೆರೆಯುವ ದಿನಾಂಕ	02-03-2024 ಬೆಳಿಗ್ಗೆ 11:00 ಗಂಟೆ ನಂತರ
11.	ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ವಿಳಾಸ	ಕಾರ್ಯನಿರ್ವಾಹಕ ಅಭಿಯಂತರರವರ ಕಛೇರಿ ಗ್ರಾಮಿಣಾಭಿವೃದ್ಧಿ ಪಂಚಾಯತ ರಾಜ್ ಇಂಜನೀಯರಿಂಗ್ ಯೋಜನಾ ವಿಭಾಗ ಅಂಬೇಡ್ಕರ ವಸತಿ ನಿಲಯದ ಎದುರಿಗೆ ರಾಜಾಪೂರ ರಸ್ತೆ, ಕಲಬುರಗಿ E-mail : kn-gul-1@pmgsy.nic.in
12.	ಅಂತರಜಾಲ ತಾಣದ ವಿಳಾಸ	www.kppp.karnataka.gov.in

ಸಹಿ/-
ಸೈಯದ್ ಜಮಾಲುದ್ದಿನ್ ಖಾದ್ರಿ
ಕಾರ್ಯನಿರ್ವಾಹಕ ಅಭಿಯಂತರರು
ಗ್ರಾಮೀಣ ಅಭವೃದ್ಧಿ ಪಂಚಾಯತ ರಾಜ್
ಇಂಜಿನೀಯರಿಂಗ್ ಯೋಜನಾ ವಿಭಾಗ ಕಲಬುರಗಿ

MYSURU MAHANAGARA PALIKE

Office of the Executive Engineer (East)
New Sayyaji Rao Road, Mysuru

No. MCC/EE/(E)/TN-39/ /2023-24 Date : 17-02-2024

TENDER NOTIFICATION
(Through GOK kppp.karnataka.gov.in Portal only)
TWO COVER SYSTEM


1) The Executive Engineer, East, Mysuru City Corporation Mysuru on behalf of the Commissioner, MCC Mysuru invites tenders from eligible Contractors registered in CPWD/ KPWD or any State Government Organizations for the construction of work detailed in the table below. The tenderers may submit tenders for works given in the table through e-procurement portal of the Government of Karnataka (viz https://kppp.karnataka.gov.in) The Tenderers are advised to note the minimum qualification criteria specified in Clause 3 of the Instructions to Tenderers to qualify for award of the contract as per standard bidding document uploaded in e-procurement portal. 2) Tender documents may be downloaded from the e-procurement portal of the Government of Karnataka from 17-02-2024. 3) Tenders must be accompanied by Earnest Money Deposit specified for the work in the table below. Earnest money deposit will have to be in any one of the forms as specified in the Tender document and shall have to be valid for a minimum of 60 days beyond the validity of the tender. 4) Tenders must be submitted online through e-procurement portal on or before 17.30 hours on 02-03-2024 and the opening of tenders will be as per the e-procurement portal guidelines. 5) Other details can be seen in the tender documents.

Sl. No.	Name of the Work	Period of Completion
1	Quotation for setting up of MRF plants in the ULBs of Mysuru. Chamarajanagara, Mandya and Kodagu Districts	

Note :
1) Last date for receipt of queries 02-03-2024 upto 17.30 pm 2) Pre bid meeting will be held on 27-02-2024 at 11.00 hours in the office of the Executive Engineer (East) to clarify the issue and to answer questions on any matter that may be raised at that stage as stated in "Instructions to Bidders" of the bidding document. 3) The Technical Bids will be opened on the website https://kppp.karnataka.gov.in on 04-03-2024 after 17.31 hours. 4) Date of Opening of Financial Bid after Approval of Technical Bids through e-Procurement. 5) Aspiring Bidders/ Contractors who have not registered in e-procurement should register before participating through the website https://kppp.karnataka.gov.in 6) Before submission of bids, bidders must ensure that scanned copies of all the necessary documents have been attached with bid. 7) No Joint Venture allowed. 8) All the required information required for Bids must be filled and submit online. 9) For details, registration and e-payment visit GOK e-Procurement website https://kppp.karnataka.gov.in or contact e-Procurement Helpdesk at 0821-2418828.

Sd/-
Executive Engineer (East)
Mysuru City Corporation Mysuru, Mysuru

ತಂತ್ರಜ್ಞಾನ







ಪೆಟೂನಿಯಾ

ರಾತ್ರಿಯೂ ಹೊಳೆಯುವ ಕುಲಾಂತರಿ ಗಿಡ ಮಾರಾಟಕ್ಕಿದೆ; ಉಡುಗೊರೆ ನೀಡಲು ಕೊಳ್ಳಬಹುದಂತೆ!

ಉಡುಗೊರೆಗೊಂದು ಕುಲಾಂತರಿ ಗಿಡ!

ಕೊಳ್ಳೇಗಾಲ ಶರ್ಮ

ಕ್ಷಮಿಸಿ; ತಪ್ಪಾಗಿ ಟೈಪಾಗಿಲ್ಲ.

ಪ್ರಿಯತಮೆಗೋ, ಪ್ರಿಯಕರನಿಗೋ ಬೇರಾರೂ ನೀಡದ ಉಡುಗೊರೆಯನ್ನು ನೀಡಬೇಕೆಂದುಕೊಂಡಿದ್ದೀರಾ? ತಡ ಯಾಕೆ? 'ಲೈಟ್ಬಯೋ' ಎನ್ನುವ ಕಂಪೆನಿಯು ಸೃಷ್ಟಿಸಿರುವ ಕುಲಾಂತರಿ 'ಪೆಟೂನಿಯಾ'ಗಳನ್ನು ನಿಮ್ಮ ಪ್ರೇಯಸಿಗೆ ಕಳಿಸಿ. ಕೆಂಪು ಗುಲಾಬಿಯಂತೆ ಅವು ತಕ್ಷಣಕ್ಕೆ ಮನಸೆಳೆಯದಿದ್ದರೂ, ರಾತ್ರಿಯ ಕತ್ತಲಲ್ಲಿ ಹಸಿರುಬಣ್ಣದಿಂದ ಹೊಳೆಯುತ್ತವೆ. ಮಿಂಚುಹುಳ ಬೆಳಗುವಂತೆ, ಎಲೆಗಳನ್ನು ಮಿರುಗಿಸಿ ಮನಸೆಳೆಯುತ್ತವೆಯಂತೆ.

ಕುಲಾಂತರಿ ಸಸ್ಯವೇ? ಮನೆಯೊಳಗೇ? ಹೊಲದಲ್ಲಿ ಬೇಡ ಎನ್ನುವ ಪಿಶಾಚಿಯನ್ನು ಮನೆಯೊಳಗೆ ಬಿಟ್ಟುಕೊಂಡಂತೆ ಆಗಲಿಲ್ಲವೇ? - ಹೀಗೆಲ್ಲ ಎಂದಿರಾ? ಅಮೆರಿಕದ ಕೃಷಿ ಇಲಾಖೆಯು ಇದೀಗ ಈ ಗಿಡಗಳು ಮಾರಾಟಕ್ಕೆ, ಹಾಗೂ ಸಾರ್ವಜನಿಕ ಬಳಕೆಗೆ ಸುರಕ್ಷಿತ ಎಂದು ಸರ್ಟಿಫಿಕೇಟು ಕೊಟ್ಟಿದೆ. ಈ ತಿಂಗಳಿನಿಂದ ಲೈಟ್ಬಯೋ ಕಂಪೆನಿಯ ಹೊಳೆಯುವ ಗಿಡಗಳು ಅಮೆರಿಕದ ನಲವತ್ತನಾಲ್ಕೂ ರಾಜ್ಯಗಳಲ್ಲಿ ಮಾರಾಟವಾಗಲಿವೆ ಎಂದು 'ನೇಚರ್' ಪತ್ರಿಕೆ ವರದಿ ಮಾಡಿದೆ.

ಲೈಟ್ಬಯೋ ಕಂಪೆನಿಯ ಸಂಸ್ಥಾಪಕ ಕೀತ್ ವುಡ್ ಎನ್ನುವವನ ಕನಸು ಈ 'ಪೆಟೂನಿಯಾ'. ನಲವತ್ತು ವರ್ಷಗಳ ಹಿಂದೆ ಕುಲಾಂತರಿ ಸಸ್ಯಗಳು ಇನ್ನೂ ಹೊಸತಾಗಿದ್ದಾಗ, ತಳಿಗುಣಗಳನ್ನು ನಿಕಟ ಸಂಬಂಧಿಗಳೇ ಅಲ್ಲದ ಜೀವಿಗಳಿಗೆ ವರ್ಗಾಯಿಸಿದರೆ ಏನಾಗಬಹುದು ಎನ್ನುವ ಪ್ರಯೋಗಗಳು ನಡೆಯುತ್ತಿದ್ದುವು. ಜೀವಕೋಶಗಳೊಳಗೆ ನಡೆಯುವ ವಿದ್ಯಮಾನಗಳು ಎದ್ದುಕಾಣಲಿ ಎಂದು ಅದಕ್ಕಾಗಿ ಒಂದು ಹಸಿರುಬಣ್ಣ ಸೂಸುವ ಪ್ರೊಟೀನನ್ನು ಬಳಸುತ್ತಿದ್ದರು. ಇಂತಹ ಪ್ರಯೋಗಗಳ ವೇಳೆ ತಂಬಾಕಿನ ಗಿಡದಲ್ಲಿ ಮಿಂಚುಹುಳದಲ್ಲಿ ಬೆಳಕು ಸೂಸುವ 'ಲುಸಿಫರೇಸ್' ಎನ್ನುವ ಜೀನನ್ನು ಕೀತ್ ವುಡ್ ಹುದುಗಿಸಿದ್ದ. ಅದರ ಜೊತೆಗೆ ತಳುಕಿಕೊಂಡ ಯಾವುದೇ ಜೀನ್ ಕಾರ್ಯಪ್ರವೃತ್ತವಾದರೂ, ಈ ಪ್ರೊಟೀನು ಲುಸಿಫೆರಿನನ್ನು ತಯಾರಿಸುತ್ತಿತ್ತು. ಸಸ್ಯಗಳು ಹೊಳೆಯುತ್ತಿದ್ದುವು. ಇದು ಕೇವಲ ಅಧ್ಯಯನದ ವಿಷಯವಾಗಿತ್ತಷ್ಟೆ. ಮನೆಯೊಳಗೆ ಅಲಂಕಾರಕ್ಕೆ ಇರಿಸಿಕೊಳ್ಳುವ ಗಿಡಗಳನ್ನೂ ಹೀಗೆ ಹೊಳೆಯುವಂತೆ ಮಾಡಬಹುದಲ್ಲ? ವಿಜ್ಞಾನ ಮತ್ತು ಸೌಂದರ್ಯ - ಎರಡರ ಮಿಲನದಿಂದ ರಾತ್ರಿಯೂ ದಿಕ್ಕು ತೋರುವಂತಹ ಗಿಡಗಳನ್ನು ಹುಟ್ಟಿಸಬಹುದು ಎನ್ನುವ ಬಯಕೆಯಿಂದ ಕೀತ್ ವುಡ್ ಲೈಟ್ ಬಯೋ ಎನ್ನುವ ಸಂಸ್ಥೆಯನ್ನು ಸ್ಥಾಪಿಸಿದ. ಆದರೆ ಅವನ ಕನಸು ನನಸಾಗುವುದು ಅಷ್ಟು ಸುಲಭವಾಗಿರಲಿಲ್ಲ.

ಲುಸಿಫರೇಸ್ ಎನ್ನುವುದು ಒಂದು ಕಿಣ್ವ. ಅದು ಲುಸಿಫೆರಿನ್ ಎನ್ನುವ ವಸ್ತುವನ್ನು ಅರಗಿಸಿದಾಗಷ್ಟೆ ಬೆಳಕು ಹೊರ ಹೊಮ್ಮುತ್ತದೆ. ಅಂದರೆ ಗಿಡದಲ್ಲಿ ಲುಸಿಫೆರಿನ್ ಕೂಡ ಇರಬೇಕು. ಅದಕ್ಕಾಗಿ ವಿಶೇಷ ಆಹಾರವನ್ನು ಒದಗಿಸಬೇಕು. ಇಲ್ಲದಿದ್ದರೆ ಲುಸಿಫರೇಸ್ ಇದ್ದರೂ ಪ್ರಯೋಜನವಿಲ್ಲ. ಲೂಸಿಫೆರಿನ್ ನಂತೆಯೇ ಹೊಳೆಯುವ ಇನ್ನೊಂದು ಹಸಿರು ಪ್ರೊಟೀನು ಇದೆ. ಮೀನಿನಲ್ಲಿ ಕಾಣುವ ಇದನ್ನು 'ಜಿಎಫ್ಪಿ' ಎನ್ನುತ್ತಾರೆ. ಇದನ್ನು ವಿವಿಧ ಗಿಡಗಳಲ್ಲಿ ಉತ್ಪಾದಿಸಿದರೂ, ಅವು ಸ್ವತಃ ಹೊಳೆಯುವುದಿಲ್ಲ. ಯೂವಿ ಕಿರಣಗಳು ಅಥವಾ ಬಿಸಿಲು ಬೀಳದಿದ್ದರೆ ಅವು ತಣ್ಣಗೆ ಇರುತ್ತವೆ.

ಲೈಟ್ಬಯೋದ ಪೆಟುನಿಯಾ ಇವ್ಯಾವ ತೊಂದರೆಯೂ ಇಲ್ಲದಂತೆ ಸ್ವಯಂ ಬೆಳಗುತ್ತದೆ; ಮಿನುಗುತ್ತದೆ. ಇದಕ್ಕೆ ಕಾರಣ ಕಾಡಿನಲ್ಲಿ ಮರಗಳ ಮೇಲೆ ಬೆಳೆಯುವ ಒಂದು ಅಣಬೆ. 'ನಿಯೊನಾಥೋಪ್ಯಾನಸ್ ನಂಬಿ' ಎನ್ನುವ ಈ ಅಣಬೆ ರಾತ್ರಿಯ ಹೊತ್ತು ದೀಪದಂತೆ ಹೊಳೆಯುತ್ತದೆ. ಎಷ್ಟೋ ಮಂದಿ ಅದನ್ನು ಹೊತ್ತ ಮರವನ್ನು ರಾತ್ರಿ ನೋಡಿ ದೆವ್ವ ಎಂದು ಭಯಪಟ್ಟದ್ದೂ ಉಂಟು! ಅಣಬೆಯಲ್ಲಿ ಇರುವ ಹೊಳೆಯುವ ಪ್ರೊಟೀನನ್ನು ಬಳಸಿದರೆ ಹೇಗೆ ಎಂದು ಯೋಚಿಸಿದ ಲೈಟ್ ಬಯೋ ಇತ್ತೀಚಿನ ಹಲವು ತಂತ್ರಗಳನ್ನು ಬಳಸಿಕೊಂಡು ಪೆಟೂನಿಯಾವನ್ನು ಕುಲಾಂತರಗೊಳಿಸಿತು.



ಪೆಟೂನಿಯಾದೊಳಗೆ ಅಣಬೆಯ ಜೀನನ್ನು ಹಾಕಿದ್ದಲ್ಲದೆ, ಅದು ಸೃಷ್ಟಿಸಿದ ಪ್ರೊಟೀನನ್ನು ಗಿಡ ಅರಗಿಸಿಕೊಂಡು, ಮರಳಿ ಮೂಲರೂಪಕ್ಕೆ ಪರಿವರ್ತಿಸುವಂತೆಯೂ ಮಾಡಿದೆ. ಈ ಅಣಬೆ 'ಕೆಫೀಕ್ ಆಮ್ಲ' ಎನ್ನುವ ವಸ್ತುವನ್ನು ಅರಗಿಸಿದಾಗ ಬೆಳಕು ಚೆಲ್ಲುತ್ತದೆ. ವಿಶೇಷ ಎಂದರೆ ಈ ಆಮ್ಲ ಬಹುತೇಕ ಗಿಡಗಳಲ್ಲಿಯೂ ತಯಾರಾಗುವ ವಸ್ತು, ಅಣಬೆಗಷ್ಟೆ ವಿಶೇಷವಲ್ಲ. ಹೀಗಾಗಿ ಈ ಬೆಳಕು ಚೆಲ್ಲುವ ಕ್ರಿಯೆ, ಗಿಡದಲ್ಲಿ ನಡೆಯುವ ಉಸಿರಾಟ, ದ್ಯುತಿಸಂಶ್ಲೇಷಣೆಯಂತೆಯೇ ಅದರದ್ದೇ ಅಂಗವಾದೊಂದು ಜೈವಿಕ ಕ್ರಿಯೆ ಆಗಿಬಿಟ್ಟಿದೆ. ಇಂತಹ ಪೆಟೂನಿಯಾಗಳು ರಾತ್ರಿ ತಮ್ಮಂತಾವೇ ಕತ್ತಲಲ್ಲಿ ಬೆಳಕು ಚೆಲ್ಲುತ್ತಾ ಹೊಳೆಯುತ್ತವೆ. ಅದುವೂ ಮಸುಕಾದ ಬೆಳಕಲ್ಲ. 'ಗಾಳಿ, ಬೆಳಕು ಚೆನ್ನಾಗಿದ್ದು, ಗಿಡ ಚೆನ್ನಾಗಿ ಆರೋಗ್ಯಕರವಾಗಿ ಬೆಳೆದರೆ, ಸಾಕಷ್ಟು ಗಾಢವಾದ ಬೆಳಕನ್ನೇ ಚೆಲ್ಲುತ್ತವೆ,' ಎನ್ನುತ್ತಾರೆ, ಕೀತ್ ವುಡ್.

ಪೆಟೂನಿಯಾಗಳೇ ಏಕೆ? ಗುಲಾಬಿಯನ್ನೂ ಹೊಳೆಯುವಂತೆ ಮಾಡಬಹುದಿತ್ತಲ್ಲ? - ಹೀಗೆ ಪ್ರಶ್ನಿಸಿದಿರಾ? ಅದಕ್ಕೆ ಕಾರಣವೂ ಇದೆ. ಪೆಟೂನಿಯಾಗಳನ್ನು ಆಲಂಕಾರಿಕ ಗಿಡವನ್ನಾಗಿ ಅಮೆರಿಕದಲ್ಲಿ ವ್ಯಾಪಕವಾಗಿ ಬೆಳೆಸಲಾಗುತ್ತಿದೆ. ಲಂಟಾನಾದಂತೆ ಇದು ನುಸುಳುಕೋರ ಗಿಡವಂತೂ ಅಲ್ಲ. ಉಳಿದೆಲ್ಲವನ್ನೂ ಹತ್ತಿಕ್ಕಿ ತನ್ನ ಸಾಮ್ರಾಜ್ಯ ಸ್ಥಾಪಿಸಿದ್ದೂ ಅಲ್ಲ. ಹೀಗಾಗಿ ಇದರಿಂದ ಇತರೆ ಸಸ್ಯಗಳಿಗೆ ಅಪಾಯ ಕಡಿಮೆ ಎನ್ನುವುದು ಪ್ರಮುಖ ಕಾರಣ. ಹೀಗಾಗಿ ಇದರಲ್ಲಿರುವ ಕುಲಾಂತರಿ ಜೀನುಗಳು, ಇತರೆ ಗಿಡಗಳಿಗೆ ಹರಸುವ ಸಾಧ್ಯತೆಗಳು ಕಡಿಮೆ ಎನ್ನುತ್ತಾರೆ, ಕೀತ್ ವುಡ್.

ಇತ್ತೀಚೆಗೆ ಅಮೆರಿಕದ ಫ್ಲಾರಿಡಾ ರಾಜ್ಯದಲ್ಲಿ ಸೊಳ್ಳೆಗಳ ಸಂಖ್ಯೆಯನ್ನು ನಿಯಂತ್ರಿಸಲೆಂದು ಕುಲಾಂತರಿ ಗಂಡುಸೊಳ್ಳೆಗಳನ್ನು 'ಆಕ್ಸಿಟೆಕ್' ಎನ್ನುವ ಕಂಪೆನಿ ಬಿಡುಗಡೆ ಮಾಡಿತ್ತು. ಆ ಪ್ರಯೋಗ ಇನ್ನೂ ನಡೆಯುತ್ತಲಿದೆ. ಕುಲಾಂತರಿ ಪೆಟೂನಿಯ ಅದಕ್ಕಿಂತಲೂ ನಿರಪಾಯಕಾರಿ ಎನ್ನಬಹುದು. ಏಕೆಂದರೆ, ಕುಲಾಂತರಿ ಸೊಳ್ಳೆಯನ್ನು ಬರಿಗಣ್ಣಿನಲ್ಲಿ ಪತ್ತೆ ಮಾಡುವುದು ಕಷ್ಟ. ಪೆಟೂನಿಯ ತಾನು ಕುಲಾಂತರಿ ಎಂದು ಪ್ರಖರವಾಗಿ ತಿಳಿಸಿಬಿಡುತ್ತದಲ್ಲ!

'ಲೈಟ್ ಬಯೋ ಸಂಸ್ಥೆ' ಇದೇ ಏಪ್ರಿಲ್‌ನಲ್ಲಿ ಸುಮಾರು 50 ಸಾವಿರ ಪೆಟೂನಿಯಾ ಗಿಡಗಳನ್ನು ಬಿಡುಗಡೆ ಮಾಡಲು ಸಿದ್ಧವಾಗಿದೆ. ವೇಲೆಂಟೈನ್ ದಿನಕ್ಕೆ ಭರವಸೆ ನೀಡಿ, ಏಪ್ರಿಲ್‌ನಲ್ಲಿ ಉಡುಗೊರೆ ಕೊಡಬಹುದು. ಗಿಡವೊಂದಕ್ಕೆ ಕೇವಲ ಮೂವತ್ತು ಡಾಲರುಗಳು (ಸುಮಾರು ₹2,000) ಅಷ್ಟೆ. ಈ ಗಿಡದ ಬೆಳಕನ್ನು ನೋಡಿ, ಸೊಳ್ಳೆ, ನೊಣಗಳು ಹತ್ತಿರ ಬರಬಹುದೋ, ಇಲ್ಲವೋ ಗೊತ್ತಿಲ್ಲ!

ನಕಲಿಯ ಪತ್ತೆಗೆ 'ಐ.ಡಿ.'

ಅಮೃತೇಶ್ವರಿ ಬಿ.

ಇದು ಡಿಜಿಟಲ್ ಯುಗ. ಶಿಕ್ಷಣ, ಆರೋಗ್ಯ, ಸಾರಿಗೆ, ಮಾರುಕಟ್ಟೆಗಳಂಥ ಎಷ್ಟೋ ವ್ಯವಹಾರಗಳು ಡಿಜಿಟಲೀಕರಣವಾಗಿವೆ. ಬಾರ್ ಕೋಡನ್ನು ಗುರುತಿಸಿ ಒಂದು ಉತ್ಪನ್ನದ ಎಲ್ಲಾ ವಿವರಗಳನ್ನು ತಿಳಿಯುವುದು, ಆಸ್ಪತ್ರೆಗಳಲ್ಲಿ ಒಂದು ಫೈಲಿನ ಮೇಲಿರುವ ಬಾರ್ ಕೋಡನ್ನು ಸ್ಕ್ಯಾನ್ ಮಾಡಿ ಆ ವ್ಯಕ್ತಿಯ ವಿವರಗಳನ್ನೆಲ್ಲಾ ಕಲೆಹಾಕುವುದು, ಟೋಲ್ ಗೇಟುಗಳಲ್ಲಿ ವಾಹನಗಳ ವಿವರಗಳನ್ನು ದಾಖಲಿಸಿ ಸುಂಕವನ್ನು ಪಾವತಿಸಿಕೊಳ್ಳಲು – ಹೀಗೆ ಪ್ರತಿಯೊಂದು ಕ್ಷೇತ್ರಗಳಲ್ಲೂ ಡಿಜಿಟಲೀಕರಣ ಬಹಳ ವೇಗವಾಗಿ ಆವರಿಸಿಕೊಂಡಿದೆ. ಇಲ್ಲೆಲ್ಲ ಬಳಸುವ ತಂತ್ರಜ್ಞಾನಕ್ಕೆ 'ರೇಡಿಯೊ ಫ್ರೀಕ್ವೆನ್ಸಿ ಐಡೆಂಟಿಫಿಕೇಷನ್' (ಆರ್. ಎಫ್. ಐ. ಡಿ.) ಎನ್ನಲಾಗುತ್ತದೆ. ವಿದ್ಯುತ್ಕಾಂತೀಯ ತರಂಗಗಳ ಸಹಾಯದಿಂದ ವಸ್ತುಗಳ ಮೇಲೆ ಅಂಟಿಸಿರುವ ಬಾರ್ ಕೋಡ್ ಇರುವ ಟ್ಯಾಗ್ ಅಥವಾ ಕಾರ್ಡುಗಳನ್ನು ಓದಿ ಅವುಗಳನ್ನು ಗುರುತಿಸಿ ನಮ್ಮ ಕೆಲಸಗಳನ್ನು ವೇಗವಾಗಿ ಸಾಧಿಸಿಕೊಳ್ಳುವ ಒಂದು ಬಹುಪಯೋಗಿ ತಂತ್ರಜ್ಞಾನವಿದು. ಆದರೆ ಇದು ಹೊಸ ವಿಷಯವೇನಲ್ಲ; ಬಹಳ ವರ್ಷಗಳ ಹಿಂದಿನಿಂದಲೇ ಈ ತಂತ್ರಜ್ಞಾನವನ್ನು ನಾವು ನೋಡಿದ್ದೇವೆ ಮತ್ತು ಬಳಸುತ್ತಿದ್ದೇವೆ. ಆರ್. ಎಫ್. ಐ. ಡಿ. ನಂತರ 'ಕ್ರಿಪ್ಟೋಗ್ರಾಫಿಕ್ ಐ.ಡಿ. ಟ್ಯಾಗ್'ನ ಅನ್ವೇಷಣೆಯಾಯಿತು. ಆದರೆ ಇದಕ್ಕಿಂತಲೂ ಮುಂದುವರೆದ ಆವೃತ್ತಿಯಾದ, ಕ್ಷಣಮಾತ್ರದಲ್ಲೇ ಬಹಳ ನಿರ್ದಿಷ್ಟವಾಗಿ ಒಂದು ವಸ್ತುವು ಅಸಲಿಯೋ ನಕಲಿಯೋ ಎಂದು ಪತ್ತೆಮಾಡಿಬಿಡುವಂತಹ 'ಐಡೆಂಟಿಫಿಕೇಷನ್ ಟ್ಯಾಗ್' ಒಂದನ್ನು ಅಭಿವೃದ್ಧಿಪಡಿಸಿದ್ದಾರೆ ಮಸಾಚುಸೆಟ್ಸ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯ ಸಂಶೋಧಕರು.

ವಾಟರ್ ಪ್ರೂಫ್, ಸೌಂಡ್ ಪ್ರೂಫ್ ಎನ್ನುವಂತೆ ಇದೊಂದು 'ಟ್ಯಾಂಪರ್ ಪ್ರೂಫ್' ತಂತ್ರಜ್ಞಾನವೆನ್ನುವುದು ವಿಶೇಷ. ಅಂದರೆ ಅಕ್ರಮವನ್ನು ತಡೆಯುವುದು. ಈ ಪುಟ್ಟ ಸಾಧನವು ಆರ್. ಎಫ್. ಐ. ಡಿ. ತಂತ್ರಜ್ಞಾನಕ್ಕಿಂತಲೂ ಹೆಚ್ಚಿನ ಸುರಕ್ಷತೆಯನ್ನು ನೀಡುತ್ತದೆಯಂತೆ. ಇಲ್ಲಿ ಬಳಕೆಯಾಗುವ ವಿದ್ಯುತ್ಕಾಂತೀಯ ತರಂಗ - ಟೆರಾಹರ್ಟ್ಸ್. ಇದು ಸೂಕ್ಷ್ಮತರಂಗ ಹಾಗೂ ಅವಕೆಂಪು ತರಂಗಗಳ ನಡುವಿನ ತರಂಗದೂರದ ಕಿರಣಗಳಾಗಿವೆ. ಇವು ಆರ್. ಎಫ್. ಐ. ಡಿ.ಯಲ್ಲಿ ಬಳಕೆಯಾಗುವ ರೇಡಿಯೊ ತರಂಗಗಳಿಗಿಂತಲೂ ಚಿಕ್ಕದಾಗಿದ್ದು, ಅತಿ ವೇಗವಾಗಿ ಚಲಿಸಬಲ್ಲವಂತೆ. ಆದರೆ ಇದರಲ್ಲಿನ ದೋಷವೆಂದರೆ ಕಳ್ಳತನ ಮಾಡುವವರು, ಸುಲಭವಾಗಿ ಈ ಕಾರ್ಡು ಅಥವಾ ಟ್ಯಾಗುಗಳನ್ನು ಕಿತ್ತು ನಕಲೀ ವಸ್ತುಗಳ ಮೇಲೆ ಅಂಟಿಸಿಕೊಂಡು ಅವನ್ನು ಅಸಲೀ ಎಂದು ಸಾಬೀತು ಮಾಡಿ ತಮ್ಮ ವ್ಯವಹಾರಗಳನ್ನು ಸಾಧಿಸಿಕೊಂಡುಬಿಡುತ್ತಿದ್ದರು. ಆದರೆ ಸಂಶೋಧಕರು ಈ ಸಮಸ್ಯೆಯನ್ನು ಬಗೆಹರಿಸುವಲ್ಲಿ ಯಶಸ್ವಿಯಾಗಿದ್ದಾರೆ. ಅದುವೇ ಪುಟ್ಟ, ಅಗ್ಗ ಹಾಗೂ ಸುರಕ್ಷಿತವಾಗಿರುವ, ಸುಲಭವಾಗಿ ಮೋಸಮಾಡಲಾಗದಂತಹ ಐಡೆಂಟಿಫಿಕೇಷನ್ ಟ್ಯಾಗ್. ಇವರು ಇದಕ್ಕಾಗಿ ವಸ್ತುಗಳ ಮೇಲೆ ಚಿಪ್, ಸ್ಮಾರ್ಟ್ ಕಾರ್ಡು ಅಥವಾ ಟ್ಯಾಗನ್ನು ಅಂಟಿಸಲು ಬಳಸುವ ಅಂಟು ಅಥವಾ ಗೋಂದಿನಲ್ಲಿ ಲೋಹದ ಸೂಕ್ಷ್ಮಕಣಗಳನ್ನು ಬೆರೆಸಿದ್ದಾರೆ. ಇವೆರೆಡೂ ಬೆರೆತು ವಸ್ತುವಿನ ಮೇಲ್ಮೈ ಮೇಲೆ ವಿಶೇಷ ಹಾಗೂ ವಿಭಿನ್ನವಾದ ವಿನ್ಯಾಸವನ್ನು ರಚಿಸುತ್ತವೆ. ನಂತರ ಇವು ಟೆರಾಹರ್ಟ್ಸ್ ತರಂಗಗಳನ್ನು ಹೀರಿಕೊಂಡು ವಸ್ತುಗಳ ವಿವರಗಳನ್ನು ಗುರುತಿಸಿ ಕಲೆಹಾಕುವ ಕೆಲಸ ಮಾಡುತ್ತವೆ. ಹೀಗೆ ಈ ಗೋಂದಿನ ವಿನ್ಯಾಸವು ಆಯಾ ವಸ್ತುವಿಗೇ ಸೀಮಿತ ಹಾಗೂ ವಿಶಿಷ್ಟವಾಗಿರುವುದರಿಂದ ವಸ್ತುವನ್ನು ದೃಢೀಕರಿಸುತ್ತದೆ.

ಈ ಲೋಹದ ಸೂಕ್ಷ್ಮಕಣಗಳು ಟೆರಾಹರ್ಟ್ಸ್ ತರಂಗಗಳೊಂದಿಗೆ ಕನ್ನಡಿಯಂತೆ ವರ್ತಿಸುತ್ತವೆ. ಅರ್ಥಾತ್, ಕನ್ನಡಿಯ ಸಣ್ಣ ತುಣುಕುಗಳನ್ನು ಒಂದು ಸಮತಲದ ಮೇಲೆ ಹರಡಿ, ಬೆಳಕನ್ನು ಹಾಯಿಸಿದಾಗ, ಅವುಗಳ ದಿಕ್ಕು, ಗಾತ್ರ ಮತ್ತು ಸ್ಥಾನದ ಆಧಾರದ ಮೇಲೆ, ಅವು ಪ್ರತಿಫಲಿಸುವ ಬೆಳಕೂ ಭಿನ್ನವಾಗಿರುತ್ತದೆ. ಅಂತೆಯೇ ಗೋಂದು ಹಾಗೂ ಲೋಹದ ಕಣಗಳು ತರಂಗದೊಂದಿಗೆ ವರ್ತಿಸಿ ರಚಿಸುವ ವಿನ್ಯಾಸವೂ ವಿಭಿನ್ನ. ಒಂದು ವೇಳೆ ಆ ಚಿಪ್ ಅನ್ನು ಕಿತ್ತು ಬೇರೊಂದು ವಸ್ತುವಿನ ಮೇಲೆ ಅಂಟಿಸಲು ಹೊರಟಾಗ ಅದು ರಚಿಸುವ ವಿನ್ಯಾಸ ಬೇರೆಯದಾಗಿರುತ್ತದೆ. ಆಗ ನಕಲಿ–ಅಸಲಿ ಆಟ ಬಯಲಾಗುತ್ತದೆ, ಎನ್ನುತ್ತಾರೆ ರೋನಾನ್ ಹನ್. ರೋನಾನ್ ಹನ್ ಮತ್ತು ಸಂಗಡಿಗರು ಈ ತತ್ವವನ್ನು ಬಳಸಿಕೊಂಡು ಬೆಳಕಿನಿಂದ ಕಾರ್ಯ ನಿರ್ವಹಿಸಬಲ್ಲ, ಅಕ್ರಮ ಬಳಕೆಯನ್ನು ಪತ್ತೆಮಾಡಬಲ್ಲ 4 ಚದರ ಮಿಲಿಮೀಟರು ಗಾತ್ರದ ಟ್ಯಾಗ್ ಅನ್ನು ತಯಾರಿಸಿ ವಿಜಯಿಗಳಾಗಿದ್ದಾರೆ. ಒಂದೇ ತೆರನಾದ ನಕಲಿ ವಿನ್ಯಾಸವನ್ನೂ ನಿಖರವಾಗಿ, ಯಶಸ್ವಿಯಾಗಿ ಗುರುತು ಹಿಡಿಯಬಲ್ಲ ಯಾಂತ್ರಿಕ ಕಲಿಕೆಯನ್ನಾಧರಿಸಿದ ಮಾಡೆಲ್ ಅನ್ನೂ ರಚಿಸಿ ಪರೀಕ್ಷಿಸಿದ್ದಾರೆ. ಟೆರಾಹರ್ಟ್ಸ್ ಟ್ಯಾಗ್ ತಯಾರಿಸುವುದು ಅಗ್ಗವಾಗಿರುವುದರಿಂದ, ಬೃಹತ್ ಪೂರೈಕೆ ಸರಣಿ(ಸಪ್ಲೈ ಚೈನ್) ಯಲ್ಲಿಯೂ ಇದನ್ನು ಅಳವಡಿಕೊಳ್ಳಬಹುದಂತೆ. ಗಾತ್ರದಲ್ಲಿ ಸಣ್ಣದೂ ಆಗಿರುವುದರಿಂದ ಪುಟ್ಟಪುಟ್ಟ ವೈದ್ಯಕೀಯ ಸಾಧನಗಳಲ್ಲಿಯೂ ಬಳಸಿಕೊಳ್ಳಬಹುದಂತೆ. ಹೆಚ್ಚಿನ ಸುರಕ್ಷತೆಗಾಗಿ, ಟ್ಯಾಗನ್ನು ಅತಿ ತೆಳುವಾದ ಕಾಗದದಿಂದ ಮಾಡಲಾಗಿದೆಯಂತೆ. ಟ್ಯಾಗ್ ಅನ್ನು ಅಕ್ರಮವಾಗಿ ಬಳಸಿಕೊಳ್ಳಲು ಎಳೆದಾಗ ಅರಿದುಹೋಗುವುದರಿಂದ ಪುನಃ ಬೇರೆ ವಸ್ತುಗಳ ಮೇಲೆ ಅಂಟಿಸಿ ಬಳಸಿಕೊಳ್ಳಲಾಗುವುದಿಲ್ಲ. ಒಮ್ಮೆ ಅಂಟಿಸಿದರೆ ಮುಗಿಯಿತು, ಆ ನಿರ್ದಿಷ್ಟ ವಸ್ತುವಿಗಷ್ಟೇ ಸೀಮಿತವಾಗಿರುತ್ತದೆ. ಆದರೆ, ಇದರಲ್ಲೂ ಮತ್ತೊಂದು ಸಮಸ್ಯೆಯಿದೆ. ಯಾರಾದರೂ ಚತುರರು ಗೋಂದನ್ನು ಯಾವುದಾದರೂ ದ್ರಾವಣದಿಂದ ಕರಗಿಸಿ ತೆಗೆದುಕೊಂಡು ಆ ಟ್ಯಾಗ್ ಅನ್ನು ಬಿಡಿಸಿಕೊಂಡುಬಿಡಬಹುದು. ಮರುಬಳಸಿಕೊಂಡುಬಿಡಬಹುದು ಎನ್ನುವುದು. ಹಾಗಾಗಿ ಟ್ಯಾಗ್ ಅನ್ನು ದೃಢೀಕರಿಸುವ ಬದಲು ವಸ್ತುವನ್ನೇ ದೃಢೀಕರಿಸುವುದು ಉತ್ತಮ ಎನ್ನುತ್ತಾರೆ, ರೋನಾನ್ ಹನ್. ಹಾಗಾಗಿ ಇವರಿಲ್ಲಿ ಟ್ಯಾಗ್ ಮತ್ತು ವಸ್ತುವಿನ ಮೇಲ್ಮೈನ ನಡುವಿರುವ ಗೋಂದನ್ನು ಗುರಿಯಾಗಿಟ್ಟುಕೊಂಡು ಕೆಲಸ ಮಾಡಿದ್ದಾರೆ. ಟ್ಯಾಗ್‌ನ ನಡುನಡುವೆ ಸಣ್ಣಸಣ್ಣ ಜಾಗಗಳಿದ್ದು ತನ್ಮೂಲಕ ಟೆರಾಹರ್ಟ್ಸ್ ತರಂಗಗಳನ್ನು ಹಾಯಗೊಡುತ್ತವೆ. ನಂತರ ಗೋಂದಿನಲ್ಲಿ ಮಿಶ್ರಿತವಾಗಿರುವ ಲೋಹದ ಸೂಕ್ಷ್ಮಕಣಗಳೊಂದಿಗೆ ವರ್ತಿಸುತ್ತವೆ. ಟೆರಾಹರ್ಟ್ಸ್ ತರಂಗಗಳು ಸಣ್ಣದಾಗಿರುವುದರಿಂದ ಸುಲಭವಾಗಿ ಈ ಕಣಗಳ ಮೂಲಕ ತೂರಬಲ್ಲವು, ವಸ್ತುಗಳನ್ನು ಪ್ರಮಾಣೀಕರಿಸಬಲ್ಲವು. ರೇಡಿಯೊ ತರಂಗಗಳು ದೊಡ್ಡಗಾತ್ರದಾಗಿರುವುದರಿಂದ ಟೆರಾಹರ್ಟ್ಸ್ ತರಂಗಗಳಷ್ಟು ಸಂವೇದನಾಶೀಲತೆಯಿರುವುದಿಲ್ಲ. ಮತ್ತು ಟೆರಾಹರ್ಟ್ಸ್ ತರಂಗಗಳನ್ನು ಬಳಸಿದಾಗ ಸಂದೇಶ ರವಾನೆಗೆ ದೊಡ್ಡದೊಡ್ಡ ಆ್ಯಂಟೆನಾಗಳ ಅವಶ್ಯಕತೆಯೂ ಇರುವುದಿಲ್ಲ. ಈ ವಿನ್ಯಾಸಗಳನ್ನು ದ್ವಿಪ್ರತಿಗೊಳಿಸುವುದೂ ಸಾಧ್ಯವಿಲ್ಲವಂತೆ. ಒಮ್ಮೆ ರಚಿತವಾಗಿರುವ ವಿನ್ಯಾಸ ನಾಶವಾಗದ ಹೊರತು ಅದೇ ವಿನ್ಯಾಸ ದ್ವಿಪ್ರತಿಯಾಗದು. ಆದರೆ ಅದನ್ನು ನಾಶಪಡಿಸುವುದೂ ಸುಲಭವಲ್ಲವಂತೆ. ಈ ಟ್ಯಾಗ್ ಮಿತಿಯೆಂದರೆ, ಸಾಕಷ್ಟು ದತ್ತಾಂಶಗಳಿಲ್ಲದಿರುವುದು. ಆದರೆ ಭವಿಷ್ಯದಲ್ಲಿ ದತ್ತಾಂಶಗಳನ್ನು ಒದಗಿಸಿಕೊಂಡರೆ ಪೂರೈಕೆ ಸರಣಿಯಲ್ಲಿಯೂ ಹೆಚ್ಚೆಚ್ಚು ಉಪಯೋಗಿಸಿಕೊಳ್ಳಬಹುದು.

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ವಿಜ್ಞಾನ

ಪುನರಾವರ್ತನೆ ಮತ್ತು ಮಾದರಿ ಪ್ರಶ್ನೋತ್ತರ

44) ಏಕಲಿಂಗಿ ಹೂವು ಯಾವುದು?

ಉತ್ತರ:– ಒಂದು ಹೂವು ಕೇವಲ ಕೇಸರಗಳನ್ನೋ ಅಥವಾ ಶಲಾಕಗಳನ್ನೋ ಹೊಂದಿದ್ದರೆ ಅದು ಏಕಲಿಂಗಿ ಹೂವು ಎನ್ನುವರು ಉದಾ:– ಪಪಾಯ, ಕಲ್ಲಂಗಡಿ

45) ನೀರಿನ ಕೊಯ್ಲು ವಿಧಾನದ ಬಗ್ಗೆ ಬರೆಯಿರಿ

ಉತ್ತರ:– ನೀರಿನ ಕೊಯ್ಲು ವಿಧಾನವು ಭಾರತದಲ್ಲಿ ಒಂದು ಅತ್ಯಂತ ಹಳೆಯ ಪರಿಕಲ್ಪನೆಯಾಗಿದೆ. ರಾಜಸ್ಥಾನದಲ್ಲಿನ ಖಾದಿನ್, ಕೆರೆಗಳು ಮತ್ತು ನಾದಿಸ್‌ಗಳು, ಮಹಾರಾಷ್ಟ್ರದಲ್ಲಿನ ಬಾಂದಾರಗಳು ಮತ್ತು ತಾಲ್‌ಗಳು, ಮಧ್ಯಪ್ರದೇಶ ಮತ್ತು ಉತ್ತರ ಪ್ರದೇಶದಲ್ಲಿನ ಬುಂಧೀಸ್‌ಗಳು, ಬಿಹಾರದಲ್ಲಿನ ಆಹರ್‌ಗಳು ಮತ್ತು ಪೈನ್‌ಗಳು, ಹಿಮಾಚಲ ಪ್ರದೇಶದಲ್ಲಿನ ಕುಲ್ಸ್‌ಗಳು, ಜಮ್ಮುವಿನ ಕಂದಿಪಟ್ಟಿಯಲ್ಲಿನ ಕೊಳಗಳು ಮತ್ತು ತಮಿಳುನಾಡಿನಲ್ಲಿರುವ ಎರಿಗಳು (ಕೆರೆಗಳು), ಕೇರಳದಲ್ಲಿನ ಸುರಂಗಗಳು ಮತ್ತು ಕರ್ನಾಟಕದಲ್ಲಿನ ಕಟ್ಟಗಳು ಇವು ಪುರಾತನ ನೀರು ಕೊಯ್ಲು ಮತ್ತು ನೀರೊದಗಿಸುವ ಕೆಲವು ರಚನೆಗಳಾಗಿದ್ದು ಇವತ್ತಿಗೂ ಬಳಕೆಯಲ್ಲಿವೆ.

ಜಲಕೊಯ್ಲು ತಂತ್ರಗಳು ಹೆಚ್ಚಾಗಿ ಪ್ರದೇಶ ನಿರ್ದಿಷ್ಟವಾಗಿವೆ ಮತ್ತು ಪ್ರಯೋಜನಗಳೂ ಕೂಡಾ ಸ್ಥಳೀಯವಾಗಿರುತ್ತವೆ. ಜನರಿಗೆ ಅವರ ಸ್ಥಳೀಯ ನೀರಿನ ಸಂಪನ್ಮೂಲಗಳನ್ನು ನಿಯಂತ್ರಿಸುವ ಜವಾಬ್ದಾರಿಯನ್ನು ನೀಡುವುದರಿಂದ ಈ ಸಂಪನ್ಮೂಲಗಳ ಕೆಟ್ಟ ನಿರ್ವಹಣೆ ಮತ್ತು ಅಧಿಕ ದುರುಪಯೋಗವನ್ನು ಕಡಿಮೆ ಮಾಡುವುದು ಅಥವಾ ನಿವಾರಿಸುವುದನ್ನು ಖಚಿತಪಡಿಸಿಕೊಳ್ಳಬಹುದು. ಜಲಾನಯನ ಪ್ರದೇಶ ಖಾದಿನ್ ಅಥವಾ ಬೆಳೆಬೆಳೆಯುವ ಪ್ರದೇಶ ಖಾದಿನ್ ಒಡ್ಡು ಲವಣಯುಕ್ತ ಪ್ರದೇಶ ಆಳವಿಲ್ಲದ ಬಾವಿ ಇಂಗುವಿಕೆ ಸಾಂಪ್ರದಾಯಿಕ ನೀರು ಕೊಯ್ಲು ವಿಧಾನಗಳಾಗಿವೆ.

ಒಂದು ಆದರ್ಶಪ್ರಾಯವಾದ ಖಾದಿನ್ ವ್ಯವಸ್ಥೆ ಹೆಚ್ಚು ಸಮತಟ್ಟಾಗಿರುವ ಭೂಭಾಗಗಳಲ್ಲಿನ ಜಲಕೊಯ್ಲು ರಚನೆಗಳು ಮುಖ್ಯವಾಗಿ ಅರ್ಧ ಚಂದ್ರಾಕಾರದ ರೂಪದಲ್ಲಿದ್ದು ಮಣ್ಣಿನಿಂದ ನಿರ್ಮಿತವಾದ ಒಡ್ಡುಗಳು ಕೆಳಮಟ್ಟದಲ್ಲಿರುತ್ತವೆ. ಮಳೆಗಾಲದಲ್ಲಿ ಉಕ್ಕಿ ಹರಿಯುವ ಸಣ್ಣ ತೊರೆಗೆ ಅಡ್ಡಲಾಗಿ ಕಾಂಕ್ರೀಟ್ ಮತ್ತು ಕಟ್ಟಡಗಳ ಅವಶೇಷಗಳಿಂದ ನೇರವಾದ ತಡೆಗೋಡೆಗಳನ್ನು ಕಟ್ಟಲಾಗುತ್ತದೆ. ಈ ರಚನೆಗಳ ಹಿಂದಿರುವ ಹೊಂಡಗಳನ್ನು ಮಾನ್ಸೂನ್ ಮಳೆಗಳು ತುಂಬುತ್ತವೆ. ಕೇವಲ ದೊಡ್ಡ ರಚನೆಗಳು ಮಾತ್ರ ವರ್ಷಪೂರ್ತಿ ನೀರನ್ನು ಹಿಡಿದಿಡುತ್ತವೆ; ಉಳಿದವುಗಳು ಬಹುತೇಕ ಮಳೆಗಾಲ ಮುಗಿದ ಆರು ತಿಂಗಳು ಅಥವಾ ಅದಕ್ಕಿಂತ ಕಡಿಮೆ ಅವಧಿಯೊಳಗೆ ಒಣಗಿ ಹೋಗುತ್ತವೆ. ಏನೇ ಆದರೂ ಅವುಗಳ ಮುಖ್ಯ ಉದ್ದೇಶ ಮೇಲ್ಮೈ ನೀರನ್ನು ಹಿಡಿದಿಡುವುದಲ್ಲ ಬದಲಾಗಿ ಕೆಳಗಿನ ಅಂತರ್ಜಲವನ್ನು ಮರುಭರ್ತಿ ಮಾಡುವುದಾಗಿದೆ.

ನೆಲದೊಳಗೆ ನೀರನ್ನು ಸಂಗ್ರಹಿಸುವುದರಿಂದ ಹಲವಾರು ಪ್ರಯೋಜನಗಳಿವೆ. ಇದು ಆವಿಯಾಗುವುದಿಲ್ಲ ಆದರೆ ವಿಸರಣೆಗೊಂಡು ಬಾವಿಗಳನ್ನು ಮರುಪೂರಣಗೊಳಿಸುತ್ತವೆ ಮತ್ತು ವಿಶಾಲವಾದ ಪ್ರದೇಶಗಳಲ್ಲಿರುವ ಸಸ್ಯವರ್ಗಗಳಿಗೆ ತೇವಾಂಶವನ್ನು ಒದಗಿಸುತ್ತದೆ. ಇದರ ಜೊತೆಗೆ ಹೊಂಡಗಳಲ್ಲಿ ನಿಂತ ನೀರು ಅಥವಾ ಕೃತಕ ಕೆರೆಗಳಲ್ಲಾಗುವಂತೆ ಸೊಳ್ಳೆಗಳಿಗೆ ಮೊಟ್ಟೆಗಳನ್ನಿಟ್ಟು ಮರಿ ಮಾಡಲು ಬ್ರೀಡಿಂಗ್ ಪ್ರದೇಶಗಳನ್ನು ಒದಗಿಸುವುದಿಲ್ಲ. ಮನುಷ್ಯರು ಮತ್ತು ಪ್ರಾಣಿಗಳ ತ್ಯಾಜ್ಯಗಳಿಂದ ಉಂಟಾಗುವ ಮಾಲಿನ್ಯದಿಂದಲೂ ಅಂತರ್ಜಲವು ರಕ್ಷಿಸಲ್ಪಡುತ್ತದೆ.

46) ಕೆಳಗಿನ ಸಂದರ್ಭಗಳನ್ನು ಕಲ್ಪಿಸಿಕೊಳ್ಳಿ
(1) ಕಾರ್ಯಕ್ರಮದ ಕೊನೆಯಲ್ಲಿ ಚಪ್ಪಾಳೆ ತಟ್ಟುವುದು
(2) ದೇಹದಲ್ಲಿ ಏರುಪೇರಾಗುತ್ತಿರುವ ರಕ್ತದ ಒತ್ತಡ
ಈ ಸಂದರ್ಭಗಳು ಕ್ರಿಯಾತ್ಮಕವಾಗಿ ಹೇಗೆ ಭಿನ್ನವಾಗಿವೆ? ಕಾರಣ ಕೊಡಿ.
(ಜೂನ್ 2019)

ಉತ್ತರ:– (1) ಕಾರ್ಯಕ್ರಮದ ಕೊನೆಯಲ್ಲಿ ಚಪ್ಪಾಳೆ ತಟ್ಟುವುದು ಇದು ಐಚ್ಛಿಕ ಕ್ರಿಯೆ, ನಾವು ಮಾಡುವ ಆಲೋಚನೆಯ ಆಧಾರದ ಮೇಲೆ ನಡೆಯುವ ಕ್ರಿಯೆ. ಮುಮ್ಮೆದುಳಿನಿಂದ ನಿಯಂತ್ರಿಸಲ್ಪಡುತ್ತದೆ.

(2) ದೇಹದಲ್ಲಿ ಏರುಪೇರಾಗುತ್ತಿರುವ ರಕ್ತದ ಒತ್ತಡ ಇದು ಅನೈಚ್ಛಿಕ ಕ್ರಿಯೆ, ಆಲೋಚನೆ ನಿಯಂತ್ರಣವಿಲ್ಲದ ಕ್ರಿಯೆ, ಹಿಮ್ಮೆದುಳಿನಿಂದ ನಿಯಂತ್ರಿಸಲ್ಪಡುತ್ತದೆ.

47) ನಾವು ಕಾಡುಗಳ ಸಂರಕ್ಷಣೆಯನ್ನು ಪರಿಗಣಿಸುವಾಗ ಪಾಲುದಾರರು ಯಾರು ಯಾರು ಇದ್ದಾರೆ?

ಉತ್ತರ:–. ನಾವು ಕಾಡುಗಳ ಸಂರಕ್ಷಣೆಯನ್ನು ಪರಿಗಣಿಸುವಾಗ ಪಾಲುದಾರರು ಯಾರು ಎಂದರೆ

i. ತಮ್ಮ ಜೀವನದ ಅನೇಕ ಅವಶ್ಯಕತೆಗಳಿಗಾಗಿ ಕಾಡಿನಲ್ಲಿ ಮತ್ತು ಅದರ ಸುತ್ತಮುತ್ತ ವಾಸಿಸುವ ಜನರು ಇವರು ಅರಣ್ಯ ಉತ್ಪನ್ನಗಳ ಮೇಲೆ ಅವಲಂಬಿತರಾಗಿದ್ದಾರೆ

ii. . ಸರ್ಕಾರದ ಅರಣ್ಯ ಇಲಾಖೆಯು ಅರಣ್ಯ ಪ್ರದೇಶದ ಒಡೆತನವನ್ನು ಹೊಂದಿದ್ದು ಅರಣ್ಯದಿಂದ ದೊರಕುವ ಸಂಪನ್ಮೂಲಗಳನ್ನು ನಿಯಂತ್ರಿಸುತ್ತದೆ.

iii. . ತೆಂಡು ಎಲೆ(tendu leaves)ಗಳನ್ನು ಬಳಸಿ ಬೀಡಿ ಕಟ್ಟುವವರಿಂದ ಹಿಡಿದು ಕಾಗದ ಕಾರ್ಖಾನೆಗಳ ಮಾಲೀಕರವರೆಗಿನ ಕೈಗಾರಿಕೋದ್ಯಮಿಗಳು ಅನೇಕ ಅರಣ್ಯ ಉತ್ಪನ್ನಗಳನ್ನು ಬಳಸುತ್ತಾರೆ. ಆದರೆ, ಅವರು ಯಾವುದೇ ಒಂದು ಪ್ರದೇಶದ ಅರಣ್ಯಗಳ ಮೇಲೆ ಅವಲಂಬಿತರಾಗಿರುವುದಿಲ್ಲ.

iv. ವನ್ಯಜೀವಿ ಮತ್ತು ನಿಸರ್ಗವನ್ನು ಪ್ರೀತಿಸುವ ಉತ್ಸಾಹಿಗಳು ನಿಸರ್ಗವನ್ನು ಅದರ ಮೂಲರೂಪದಲ್ಲೇ ಸಂರಕ್ಷಿಸಲು ಬಯಸುತ್ತಾರೆ.

48) ಸೂರ್ಯೋದಯದ ಕಾಲದಲ್ಲಿ ಸೂರ್ಯನು ಕೆಂಪಾಗಿ ಆದರೆ ಮಧ್ಯಾಹ್ನದಲ್ಲಿ ಬೆಳ್ಳಗೆ ಕಾಣಲು ಕಾರಣಗಳನ್ನು ತಿಳಿಸಿ.

ಉತ್ತರ:– ಸೂರ್ಯನ ಬೆಳಕು ನಮ್ಮ ಕಣ್ಣನ್ನು ತಲುಪುವ ಮೊದಲು ದಿಗಂತದ ಸಮತಲದಲ್ಲಿ ಸಮೀಪದಲ್ಲಿನ ಗಾಳಿಯ ದಪ್ಪ ಪದರದಲ್ಲಿ ಹಾಗೂ ಹೆಚ್ಚು ದೂರ ವಾಯುಮಂಡಲದಲ್ಲಿ ಹಾದು ಹೋಗುತ್ತದೆ

ದಿಗಂತದ ಬಳಿ ಕಣಗಳಿಂದ ಹೆಚ್ಚಿನ ನೀಲಿ ಬೆಳಕು ಮತ್ತು ಕಡಿಮೆ ತರಂಗ ದೂರದ ಬೆಳಕು ಚದುರಿ ಹೋಗುತ್ತದೆ. ಇದರಿಂದಾಗಿ ನಮ್ಮ ಕಣ್ಣನ್ನು ತಲುಪುವ ಬೆಳಕು ಹೆಚ್ಚು ತರಂಗದೂರವುಳ್ಳದ್ದಾಗಿದೆ ಇದರಿಂದ ಸೂರ್ಯ ಕೆಂಪು ಬಣ್ಣದಿಂದ ಕಾಣ ಸಿಗುತ್ತದೆ.

ಮಧ್ಯಾಹ್ನದಲ್ಲಿ ನೆತ್ತಿಯ ಮೇಲಿನ ಸೂರ್ಯನ ಬೆಳಕು ನಮ್ಮ ಕಣ್ಣನ್ನು ತಲುಪಲು ಕಡಿಮೆ ದೂರವನ್ನು ಪ್ರಯಾಣಿಸುತ್ತದೆ, ಮಧ್ಯಾಹ್ನದ ಸಮಯ ಸೂರ್ಯನು ಬೆಳ್ಳಗೆ ಕಾಣುತ್ತಾನೆ ಏಕೆಂದರೆ ಸ್ವಲ್ಪವೇ ನೀಲಿ ಮತ್ತು ನೇರಳೆ ಬಣ್ಣಗಳು ಚದುರುತ್ತದೆ.

(ಮುಂದುವರಿಯುವುದು)

ಎಸ್ಸೆಸ್ಸೆಲ್ಸಿ ಗಣಿತ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

II PUC PHYSICS

REVISION : MODEL QUESTIONS

Answer the following:

22. What are - (i) Magnetic declination, (ii) Magnetic dip (iii) Horizontal component of earth's magnetic field at a place?

Ans:- i) Magnetic declination: It is the angle between the geographic meridian and the magnetic meridian.

ii) Magnetic dip: It is the angle between the earth's total magnetic field and its component along the horizontal at a place.

iii) Horizontal component of earth's magnetic field (B_H): It is the component of earth's total magnetic field along the horizontal direction at a place.

23. What is the nature of force between two long straight parallel conductors, when they carry currents in the (i) Same direction and (ii) Opposite direction?

Ans:- The nature of force between two long straight parallel conductors, when they carry currents in the
(i) Same direction:– they attract each other
(ii) Opposite direction:– they repel each other

24. State and explain Lenz's law for induced emf.

Ans:- ***Statement:*** The polarity of induced emf is such that it tends to produce a current which opposes the change in magnetic flux that produced it.

Diagram:




Fig (1) Fig (2)

Explanation: When North pole of a bar-magnet is moved towards the coil (fig. 1), emf is induced in the coil. This induces current in the anti-clock wise direction through the coil so as to generate North-pole. This opposes the movement of the magnet. When North-pole is moved away from the coil (fig. 2) emf induces again. This induces the current in the clockwise direction through the coil so as to generate South-pole. It opposes the movement of the magnet.


25. What is transformer? Give the principle of a transformer.

Ans:- A transformer is an electrical device that transfers energy between two or more circuits through electromagnetic induction.

It works on the principle of a transformer of Faradays law of electromagnetic induction.

26. Explain the construction of transformer. Mention its principle.

Ans:-



Construction: A transformer consists of two coils insulated from each other. They are wound on a soft-iron core, on separate limbs of the core (or either one on top of the other).

They are called primary and secondary coils. In a step up transformer, the primary coil consists of few turns when compared to turns of secondary coil. It is just opposite in step down transformer.

Principle: Transformer works on "mutual induction".

26. Mention three application of total internal reflection of light.

Ans:- The principle of total internal reflection is used in:- 1) Optical fibres.
2) Total reflection prisms.
3) Brilliance of diamond.

27. Name any two types of electron emission.

Ans:- Two types of electron emission are -
a) Thermionic emission
b) Photoelectric emission

28. Obtain an expression for de Broglie wavelength of a photon.

Ans:- An expression for de Broglie wavelength of a photon.

$$\lambda = \frac{h}{mv}$$

29. Give three characteristics of photon.

Ans:- The characteristics of photon are -
1) Radiation consists of packets of energy called photons (or quanta).
2) The rest mass of the photons is zero.
3) The photons are electrically neutral.
4) The photons travel with the speed of light.
5) The energy of each photon is given by E = hν where h=plank's constant and ν=frequency of photon.
6) The energy of the photon is directly proportional to the frequency of the photon.
7) Momentum of the photon is given by, p=mc or p = h/λ.

ವಯನಾಡು ಆನೆ ದಾಳಿಗೆ ಕರ್ನಾಟಕ ಸರ್ಕಾರದ ಪರಿಹಾರ: ಮಲೆನಾಡಿನ ಜನರ ಅಸಮಾಧಾನ

ಹೊರಗಿನವರಿಗೆ ಪರಿಹಾರ: ಆಕ್ರೋಶ

ಪ್ರಜಾವಾಣಿ ವಾರ್ತೆ

ಹಾಸನ: 'ಕೇರಳದ ವಯನಾಡಿನಲ್ಲಿ ಆನೆ ತುಳಿತಕ್ಕೆ ಬಲಿಯಾದ ವ್ಯಕ್ತಿಗೆ ರಾಜ್ಯ ಸರ್ಕಾರವು ₹ 15 ಲಕ್ಷ ಪರಿಹಾರ ನೀಡಿದೆ. ಆದರೆ, ಸಕಲೇಶಪುರ ತಾಲ್ಲೂಕಿನ ಹೆಬ್ಬನಹಳ್ಳಿಯಲ್ಲಿ 2022ರ ನ.1ರಂದು ಕಾಡಾನೆ ದಾಳಿಯಿಂದ ಮೃತಪಟ್ಟ ಮನು ಅವರ ಕುಟುಂಬಕ್ಕೆ ₹7.5 ಲಕ್ಷ ಪರಿಹಾರವನ್ನಷ್ಟೇ ನೀಡಿದೆ' ಎಂಬ ಆಕ್ರೋಶ ವ್ಯಕ್ತವಾಗಿದೆ.

ಮನು ಮೃತಪಟ್ಟಾಗ, ಸ್ಥಳೀಯರು ಶವ ಮೇಲೆತ್ತಲು ಬಿಡದೇ ಅಹೋರಾತ್ರಿ ಪ್ರತಿಭಟನೆ ನಡೆಸಿದ್ದರು. ಪ್ರತಿಭಟನೆ ನಡೆಸುತ್ತಿದ್ದ ಮಾಜಿ ಶಾಸಕ ಎಚ್.ಎಂ.ವಿಶ್ವನಾಥ್ ಅವರಿಗೆ ಕರೆ ಮಾಡಿದ್ದ ಅಂದಿನ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, 'ಪರಿಹಾರವನ್ನು ₹ 15 ಲಕ್ಷಕ್ಕೆ ಹೆಚ್ಚಿಸಿ, ಮನು ಕುಟುಂಬಕ್ಕೂ ನೀಡಲಾಗುವುದು' ಎಂದಿದ್ದರು.

ಈ ಕುರಿತು 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿರುವ ಹೋರಾಟಗಾರ ಯಡೇಹಳ್ಳಿ ಮಂಜುನಾಥ, 'ಈಗ ಜಿಲ್ಲೆಯಲ್ಲಿ ಬೀಡು ಬಿಟ್ಟಿರುವ ಬಹುತೇಕ ಕಾಡಾನೆಗಳು ಕೇರಳದಿಂದಲೇ ಬಂದಿವೆ. ಮಾರ್ಟಿನ್, ಲೂಯಿಸ್, ತಣ್ಣೀರು ಸೇರಿದಂತೆ ಇತರೆ ಆನೆಗಳಿಗೆ ಹೆಸರಿಟ್ಟವರೂ ಅವರೇ. ಇದುವರೆಗೆ ಇಲ್ಲಿ 79 ಮಂದಿ ಮೃತಪಟ್ಟಿದ್ದು, ಆಗ ಕೇರಳ ರಾಜ್ಯ ಸರ್ಕಾರ ಪರಿಹಾರ ನೀಡಿತ್ತೇ' ಎಂದು ಪ್ರಶ್ನಿಸಿದರು.



2022ರ ನವೆಂಬರ್ 1ರಂದು ಕಾಡಾನೆ ದಾಳಿಯಿಂದ ಮನು ಮೃತಪಟ್ಟ ಸಂದರ್ಭದಲ್ಲಿ ಸ್ಥಳೀಯರು ಪ್ರತಿಭಟನೆ ನಡೆಸಿದ್ದರು (ಸಂಗ್ರಹ ಚಿತ್ರ)

2022ರ ಡಿ.15ರಿಂದ ಪರಿಹಾರದ ಮೊತ್ತವನ್ನು ಹೆಚ್ಚಿಸಿ ಸರ್ಕಾರ ಆದೇಶಿಸಿದೆ. ಮನು ಅವರು ನವೆಂಬರ್‌ನಲ್ಲಿ ಮೃತಪಟ್ಟಿದ್ದರಿಂದ ಆದೇಶ ಅನ್ವಯವಾಗಿಲ್ಲ

ಶಿಲ್ಪಾ, ವಲಯ ಅರಣ್ಯಾಧಿಕಾರಿ, ಸಕಲೇಶಪುರ

'ಇತ್ತೀಚಿಗೆ ಮೃತಪಟ್ಟ ಜಾರ್ಖಂಡ್ ಮೂಲದ ಲಾರಿ ಚಾಲಕನ ಕುಟುಂಬಕ್ಕೂ ರಾಜ್ಯ ಸರ್ಕಾರ ಪರಿಹಾರ ನೀಡಲಿಲ್ಲ' ಎಂದು ಆರೋಪಿಸಿದರು.

ಸ್ಥಳೀಯರಿಗೆ ಮೊದಲು ಕೊಡಲಿ: 'ಕಾಡು ಪ್ರಾಣಿಗಳಿಗೆ ಗಡಿ ಇರುವುದಿಲ್ಲ. ವಯನಾಡಿನಲ್ಲಿ ಮೃತಪಟ್ಟವರ ಕುಟುಂಬಕ್ಕೆ ಪರಿಹಾರ ನೀಡುತ್ತಿರುವುದು ಬಾಲಿಶ ನಡೆ. ನಮ್ಮ ರಾಜ್ಯದವರಿಗೆ ಮೊದಲು ಬಾಕಿ ಪರಿಹಾರ ಬಿಡುಗಡೆ ಮಾಡಲಿ' ಎಂದು ಮಾಜಿ ಶಾಸಕ ಎಚ್.ಎಂ.ವಿಶ್ವನಾಥ್ ಆಗ್ರಹಿಸಿದರು.

ಕೇರಳದ ಕುಟುಂಬಕ್ಕೆ ₹15 ಲಕ್ಷ

ಒಂದನೇ ಪುಟದಿಂದ...



'ಇಡೀ ದೇಶದಲ್ಲಿ ಕರ್ನಾಟಕದಲ್ಲೇ ಅತಿ ಹೆಚ್ಚು (6395) ಆನೆಗಳಿವೆ. ವಿವಿಧ ಕಾರಣಗಳಿಂದ ಕಾಡಿನ ವ್ಯಾಪ್ತಿ ಕುಗ್ಗುತ್ತಾ ಹೋಗಿದೆ. ಇದರ ಪರಿಣಾಮ ಆನೆಗಳು ಜನವಸತಿ ಪ್ರದೇಶಗಳಿಗೆ ಹೆಚ್ಚಿನ ಸಂಖ್ಯೆಯಲ್ಲಿ ಬರುತ್ತಿವೆ. ಈ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಲು ಕೇರಳ ಮತ್ತು ತಮಿಳುನಾಡು ರಾಜ್ಯಗಳ ಅರಣ್ಯ ಸಚಿವರ ಸಭೆಯೊಂದನ್ನು ನಡೆಸಲು ಉದ್ದೇಶಿಸಿದ್ದು, ಮಾನವ–ವನ್ಯಜೀವಿ ಸಂಘರ್ಷ ತಗ್ಗಿಸಲು ಕ್ರಮ ತೆಗೆದುಕೊಳ್ಳುತ್ತೇವೆ' ಎಂದು ಪತ್ರದಲ್ಲಿ ಖಂಡ್ರೆ ಹೇಳಿದ್ದಾರೆ.

'ನಮ್ಮ ತೆರಿಗೆ ಹಣ ಕೇರಳಕ್ಕೇಕೆ?'



'ಕನ್ನಡಿಗರ ತೆರಿಗೆ ಹಣವನ್ನು ಕೇರಳದ ವಯನಾಡು ಸಂಸದ ರಾಹುಲ್‌ಗಾಂಧಿ ಹಾಗೂ ಕೆ.ಸಿ. ವೇಣುಗೋಪಾಲ್ ಅವರ ಆಣತಿಯಂತೆ ಬಿಡುಗಡೆ ಮಾಡಲು ಕರ್ನಾಟಕವೇನು ಕಾಂಗ್ರೆಸ್ ಪಕ್ಷದ ಆಸ್ತಿಯೇ' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ ಪ್ರಶ್ನಿಸಿದ್ದಾರೆ.

'ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೇ ಇದು ನಮ್ಮ ತೆರಿಗೆ ನಮ್ಮ ಹಕ್ಕು ಅಂತ ನಿಮ್ಮ ಪಕ್ಷದ ಹೈಕಮಾಂಡ್ ನಾಯಕನ ಬಳಿ ಧೈರ್ಯವಾಗಿ ಪ್ರಶ್ನಿಸಲು, ನಿಮ್ಮ ಸಚಿವರಿಗೆ ತಾಕತ್ತಿಲ್ಲವೆ' ಎಂದು ಕುಟುಕಿದ್ದಾರೆ.

11 ಪ್ರಕರಣ: 10 ಕುಟುಂಬಕ್ಕೆ ಪರಿಹಾರ

ರಾಮನಗರ: ಜಿಲ್ಲೆಯಲ್ಲಿ ಕಳೆದ 14 ತಿಂಗಳಲ್ಲಿ ಕಾಡಾನೆ ದಾಳಿಯಲ್ಲಿ 11 ಮಂದಿ ಮೃತಪಟ್ಟಿದ್ದಾರೆ. ಈ ವರ್ಷ ಜನವರಿ ಮತ್ತು ಫೆಬ್ರುವರಿ ಎರಡೇ ತಿಂಗಳಲ್ಲಿ ಮೂವರು ಕಾಡಾನೆ ದಾಳಿಯಲ್ಲಿ ಮೃತಪಟ್ಟಿದ್ದಾರೆ.

ಕನಕಪುರ ತಾಲ್ಲೂಕಿನಲ್ಲೇ ಹತ್ತು ಮಂದಿ ಬಲಿಯಾಗಿದ್ದಾರೆ. ಹತ್ತು ಪ್ರಕರಣಗಳಲ್ಲಿ ಪರಿಹಾರ ಪಾವತಿಸಲಾಗಿದೆ. ಮೃತರ ಕುಟುಂಬದವರಿಗೆ ಅರಣ್ಯ ಇಲಾಖೆಯು ₹ 15 ಲಕ್ಷದಂತೆ ಇದುವರೆಗೆ ₹ 1.50 ಕೋಟಿ ಪರಿಹಾರ ಪಾವತಿಸಿದೆ. ಕುಟುಂಬದ ಒಬ್ಬರಿಗೆ ಐದು ವರ್ಷಗಳವರೆಗೆ ₹ 4 ಸಾವಿರ ಮಾಸಾಶನ ನೀಡುತ್ತಿದೆ.

ಕಾಡಾನೆ ದಾಳಿಯಿಂದ ರಾಮಗರ ಜಿಲ್ಲಾ ಅರಣ್ಯ ವ್ಯಾಪ್ತಿಯ ಚನ್ನಪಟ್ಟಣದಲ್ಲಿ ಒಬ್ಬರು, ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನ ಮತ್ತು ಕಾವೇರಿ ವನ್ಯಜೀವಿಧಾಮವಿರುವ ಕನಕಪುರ ತಾಲ್ಲೂಕಿನಲ್ಲಿ ಹತ್ತು ಮಂದಿ ಸಾವನ್ನಪ್ಪಿದ್ದಾರೆ.

'ಹತ್ತು ಪ್ರಕರಣಗಳಲ್ಲಿ ಪರಿಹಾರ ಪಾವತಿಸಲಾಗಿದ್ದು, ಇತ್ತೀಚೆಗೆ ಬಲಿಯಾದ ಮತ್ತೊಬ್ಬ ರೈತನ ಕುಟುಂಬಕ್ಕೆ ಪರಿಹಾರ ಮಂಜೂರು ಪ್ರಕ್ರಿಯೆ ಪ್ರಗತಿಯಲ್ಲಿದೆ' ಎಂದು ರಾಮನಗರ ಜಿಲ್ಲೆಯ ಉಪ ಅರಣ್ಯ ಸಂರಕ್ಷಣಾಧಿಕಾರಿ ರಾಮಕೃಷ್ಣಪ್ಪ ತಿಳಿಸಿದರು.



ನಾಗಮಂಗಲದ ಆದಿಚುಂಚನಗಿರಿ ಮಠದ ಪೀಠಾಧ್ಯಕ್ಷ ನಿರ್ಮಲಾನಂದನಾಥ ಸ್ವಾಮೀಜಿ ಪಟ್ಟಾಭಿಷೇಕದ 11ನೇ ವಾರ್ಷಿಕೋತ್ಸವ ಹಾಗೂ ಜ್ಞಾನ– ವಿಜ್ಞಾನ– ತಂತ್ರಜ್ಞಾನ ಸಮ್ಮೇಳನದ ಅಂಗವಾಗಿ ಮಂಗಳವಾರ ಮಠದಲ್ಲಿ ಇಸ್ರೊ ಅಧ್ಯಕ್ಷ ಎಸ್‌.ಸೋಮನಾಥ್ 'ವಿಜ್ಞಾತಂ' ಪ್ರಶಸ್ತಿ ಸ್ವೀಕರಿಸಿದರು. ಡಾ.ಎಂ.ಜಿ.ಶಿವರಾಮು, ಎಂ.ಎ.ಶೇಖರ್, ಪ್ರಸನ್ನನಾಥ ಸ್ವಾಮೀಜಿ, ಮಹಾಂತ ಬಾಲಕ್‌ನಾಥ್ ಯೋಗಿ, ಸ್ವಾಮಿ ಪರಮಾತ್ಮಾನಂದ ಸರಸ್ವತಿ, ಪ್ರಕಾಶನಾಥ ಸ್ವಾಮೀಜಿ, ಸೋಮನಾಥ ಸ್ವಾಮೀಜಿ, ಎನ್‌.ಚಲುವರಾಯಸ್ವಾಮಿ, ನಿರ್ಮಲಾನಂದನಾಥ ಸ್ವಾಮೀಜಿ, ಚೈತನ್ಯನಾಥ ಸ್ವಾಜೀಜಿ, ಶಂಭೂನಾಥ ಸ್ವಾಮೀಜಿ, ಡಾ.ಸಿ.ಎನ್‌.ಅಶ್ವತ್ಥನಾರಾಯಣ ಇದ್ದಾರೆ

ಕಡಿಮೆ ವೆಚ್ಚದಲ್ಲಿ ಅಂತರಿಕ್ಷ ಯಾನ: ಎಸ್‌. ಸೋಮನಾಥ್

ಪ್ರಜಾವಾಣಿ ವಾರ್ತೆ

ನಾಗಮಂಗಲ (ಮಂಡ್ಯ ಜಿಲ್ಲೆ): 'ಅತ್ಯಂತ ಕಡಿಮೆ ವೆಚ್ಚದಲ್ಲಿ ಅಂತರಿಕ್ಷ ಯಾನ ಕಾರ್ಯಕ್ರಮ ಹಮ್ಮಿಕೊಳ್ಳುವುದು ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಯ (ಇಸ್ರೊ) ಉದ್ದೇಶ. ಈ ನಿಟ್ಟಿನಲ್ಲಿ ನಾವು ಯಶಸ್ವಿಯಾಗುತ್ತಿದ್ದೇವೆ' ಎಂದು ಇಸ್ರೊ ಅಧ್ಯಕ್ಷ ಎಸ್.ಸೋಮನಾಥ್ ಹೇಳಿದರು.

ಆದಿಚುಂಚನಗಿರಿ ಮಠದ ಪೀಠಾಧ್ಯಕ್ಷ ನಿರ್ಮಲಾನಂದನಾಥ ಸ್ವಾಮೀಜಿ ಪಟ್ಟಾಭಿಷೇಕದ 11ನೇ ವಾರ್ಷಿಕೋತ್ಸವ ಹಾಗೂ ಜ್ಞಾನ– ವಿಜ್ಞಾನ– ತಂತ್ರಜ್ಞಾನ ಮೇಳದ ಅಂಗವಾಗಿ ಮಂಗಳವಾರ ಬಿಜಿಎಸ್ ಸಭಾಂಗಣದಲ್ಲಿ 'ವಿಜ್ಞಾತಂ' ಪ್ರಶಸ್ತಿ ಸ್ವೀಕರಿಸಿ ಅವರು ಮಾತನಾಡಿದರು.

'ಜನರ ತೆರಿಗೆ ಹಣದಿಂದ ಬಾಹ್ಯಾಕಾಶ ಕಾರ್ಯಕ್ರಮಗಳು ನಡೆಯುತ್ತಿವೆ. ನಮ್ಮ ವಿಜ್ಞಾನಿಗಳು ಬುದ್ಧಿವಂತಿಕೆಯಿಂದ, ಜಾಗರೂಕತೆಯಿಂದ ಕಡಿಮೆ ವೆಚ್ಚದಲ್ಲಿ ಚಂದ್ರಯಾನವನ್ನು ಯಶಸ್ವಿಗೊಳಿಸಿದ್ದಾರೆ. ವಿಜ್ಞಾನ ಮತ್ತು ತಂತ್ರಜ್ಞಾನ ವ್ಯಕ್ತಿಯ ಪ್ರತಿನಿತ್ಯದ ಚಟುವಟಿಕೆಯ ಭಾಗವಾಗಬೇಕು, ಸಂಶೋಧನೆಗಳು ನಿರಂತರವಾಗಬೇಕು' ಎಂದರು.

'ಕೃತಕ ಉಪಗ್ರಹಗಳನ್ನು ತಯಾರಿಸಿ ಉಡಾವಣೆ ಮಾಡುವುದು ಸವಾಲಿನ ಸಂಗತಿ. ಚಂದ್ರನ ದಕ್ಷಿಣದ ತುದಿಗೆ ಉಪಗ್ರಹ ಉಡಾವಣೆ ಮಾಡಿದ ಮೊದಲ ದೇಶವಾಗಿ ಭಾರತ ಗುರುತಿಸಿಕೊಂಡಿರುವುದು ಹೆಮ್ಮೆಯ ವಿಷಯ. ಇಂದು ದೇಶವು 50ಕ್ಕೂ ಅಧಿಕ ಉಪಗ್ರಹಗಳನ್ನು ಅಂತರಿಕ್ಷಕ್ಕೆ ಸೇರಿಸಿದ್ದು, ಹವಾಮಾನ, ರಕ್ಷಣೆ, ಶಿಕ್ಷಣ, ಆರೋಗ್ಯ ಸೇರಿದಂತೆ ವಿವಿಧ ಕಾರ್ಯಗಳಿಗೆ ಉಪಯೋಗವಾಗುತ್ತಿದೆ' ಎಂದರು.

ಮಠದ ಪೀಠಾಧ್ಯಕ್ಷ ನಿರ್ಮಲಾನಂದನಾಥ ಸ್ವಾಮೀಜಿ ಮಾತನಾಡಿ 'ಧರ್ಮ ಮತ್ತು ವಿಜ್ಞಾನ ಸಮ್ಮಿಲನವಾದಾಗ ಬದುಕು ಸುಂದರವಾಗುತ್ತದೆ. ಇವೆರಡೂ ಪರಸ್ಪರ ಬೆಸೆದುಕೊಂಡಿದ್ದು, ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ ಎಂಬುದನ್ನು ವಿಜ್ಞಾನಿಗಳೂ ಹೇಳುತ್ತಾರೆ' ಎಂದರು.

ಮಠದ ಕಾರ್ಯದರ್ಶಿ ಪ್ರಸನ್ನನಾಥ ಸ್ವಾಮೀಜಿ, ಕೃಷಿ ಸಚಿವ ಎನ್‌. ಚಲುವರಾಯಸ್ವಾಮಿ, ಗುಜರಾತಿನ ಆರ್ಶ್ ವಿದ್ಯಾಮಂದಿರ ಅಧ್ಯಕ್ಷ ಸ್ವಾಮಿ ಪರಮಾತ್ಮಾನಂದ ಸರಸ್ವತಿ, ಶಾಸಕ ಡಾ.ಸಿ.ಎನ್‌.ಅಶ್ವತ್ಥನಾರಾಯಣ ಇದ್ದರು.

ಪಟ್ಟಾಭಿಷೇಕ ವಾರ್ಷಿಕೋತ್ಸವ ವೈಭವ

ನಿರ್ಮಲಾನಂದನಾಥ ಸ್ವಾಮೀಜಿಯ ಪಟ್ಟಾಭಿಷೇಕದ 11ನೇ ವಾರ್ಷಿಕೋತ್ಸವ ವೈಭವಯುತವಾಗಿ ನಡೆಯಿತು. ಬೆಳಿಗ್ಗೆಯಿಂದಲೂ ಆದಿಚುಂಚನಗಿರಿ ಮಠದ ದೇವಾಲಯಗಳಲ್ಲಿ ವಿಶೇಷ ಧಾರ್ಮಿಕ ಕಾರ್ಯಕ್ರಮಗಳು ನಡೆದವು.

ಸ್ವಾಮೀಜಿಯನ್ನು ಸಿಂಹಾಸನದಲ್ಲಿ ಕೂರಿಸಿ, ಕಿರೀಟ, ಆಭರಣದ ತೊಡಿಸಿ ಪಟ್ಟಾಭಿಷೇಕದ ವಿಧಿವಿಧಾನ ನೆರವೇರಿಸಲಾಯಿತು. ಶ್ರೀಗಳ ಮೇಲೆ ಬಗೆಬಗೆಯ ಹೂವಿನ ಮಳೆಗರೆಯಲಾಯಿತು.

ಕಾರ್ಯಕ್ರಮದ ಅಂಗವಾಗಿ ಕ್ಷೇತ್ರದ ಆದಿಶಕ್ತಿ ಭವನದಲ್ಲಿ ಜ್ಞಾನ– ವಿಜ್ಞಾನ– ತಂತ್ರಜ್ಞಾನ ವಸ್ತು ಪ್ರದರ್ಶನ ಆಯೋಜಿಸಲಾಗಿತ್ತು. ವಸ್ತುಪ್ರದರ್ಶನ ಮಳಿಗೆಗಳಿಗೆ ಇಸ್ರೊ ಅಧ್ಯಕ್ಷ ಎಸ್.ಸೋಮನಾಥ್ ಭೇಟಿ ನೀಡಿ ಮಾದರಿಗಳನ್ನು ವೀಕ್ಷಿಸಿದರು.

'10 ಅಡಿಯಲ್ಲೇ ನೀರಿತ್ತು, ಬಾವಿ ಬಂದ್ ಮಾಡಿಸಿದರು'

ಶಿರಸಿ: '30 ಅಡಿ ಆಳದ ಬಾವಿ ತೋಡುವಾಗಿನ ಕಷ್ಟ ನನಗೆ ಗೊತ್ತಿದೆ ಹೊರತು ಕಳ್ಳರಂತೆ ರಾತ್ರಿ ವೇಳೆ ಬಾವಿ ಬಂದ್ ಮಾಡಿಸಿದ ಅಧಿಕಾರಿಗಳಿಗಲ್ಲ. ಅಧಿಕಾರಿಗಳು ನೇರವಾಗಿ ನನಗೆ ಹೇಳಿದ್ದರೆ, ನಾನೇ ಸ್ವತಃ ಮುಚ್ಚುತ್ತಿದ್ದೆ ಹೊರತು ಅಧಿಕಾರಿಗಳಿಗೆ ಅವಕಾಶ ಕೊಡುತ್ತಿರಲಿಲ್ಲ' ಎಂದು ಗಣೇಶನಗರದ ಗೌರಿ ನಾಯ್ಕ ತಿಳಿಸಿದರು.

ಗಣೇಶನಗರದ ಅಂಗನವಾಡಿ ಕೇಂದ್ರ 6ರ ಹಿಂಭಾಗ ಗೌರಿ ನಾಯ್ಕ ತೋಡುತ್ತಿದ್ದ ಬಾವಿಯನ್ನು ಅಧಿಕಾರಿಗಳು ಸೋಮವಾರ ರಾತ್ರಿ ಬಂದ್ ಮಾಡಿಸಿದರು.

ಈ ಹಿನ್ನೆಲೆಯಲ್ಲಿ ಮಂಗಳವಾರ 'ಪ್ರಜಾವಾಣಿ' ಜೊತೆ ಮಾತನಾಡಿದ ಅವರು, 'ನಾನೇನು ಸ್ವಂತಕ್ಕೆ ಬಾವಿ ತೋಡುತ್ತಿರಲಿಲ್ಲ. ಆದರೆ, 15 ದಿನಗಳಿಂದ ವಿವಿಧ ಇಲಾಖೆಗಳ ಅಧಿಕಾರಿಗಳು ಸಾಕಷ್ಟು ಕಿರಿಕಿರಿ ನೀಡಿದರು. ಜಿಲ್ಲಾ ಸಚಿವರಿಂದ ಸನ್ಮಾನ ಮಾಡಿಸಿ, ಇಷ್ಟು ದಿನ ಕಾಮಗಾರಿಗೆ ಅವಕಾಶ ನೀಡಿದರು. ಇನ್ನೂ 10 ಅಡಿ ತೋಡಿದ್ದರೆ ನೀರು ಸಿಗುತಿತ್ತು.ಅಷ್ಟರಲ್ಲಿ ಬಾವಿ ಬಂದ್ ಮಾಡಿಸಿದ ಅಧಿಕಾರಿಗಳ ನಡೆ ಸರಿಯಲ್ಲ. ಬೆನ್ನಿಗೆ ಚೂರಿ ಹಾಕಿದಂತಾಗಿದೆ' ಎಂದರು.

'ಒಎಂಆರ್ ಶೀಟ್ ತಿದ್ದುಪಡಿ'

ಒಂದನೇ ಪುಟದಿಂದ...

'ಕಲಬುರಗಿಯ ಜ್ಞಾನಜ್ಯೋತಿ ಆಂಗ್ಲ ಮಾಧ್ಯಮ ಶಾಲೆಯ ಆಡಳಿತ ಮಂಡಳಿಯ ಸಹಯೋಗದಲ್ಲಿ ಒಎಂಆರ್ ಉತ್ತರ ಪತ್ರಿಕೆಗಳನ್ನು ಸಂವೀಕ್ಷಕರು ತಿದ್ದಿರುವುದು, ಈ ಪರೀಕ್ಷಾ ಕೇಂದ್ರದಲ್ಲಿ ಅಭ್ಯರ್ಥಿಗಳು ಬ್ಲೂಟೂತ್ ಉಪಕರಣ ಬಳಸಿರುವುದು ದೃಢಪಟ್ಟಿದೆ. ಈ ಎರಡೂ ದುಷ್ಕೃತ್ಯಗಳ ರೂವಾರಿ ಆರ್.ಡಿ. ಪಾಟೀಲ ಆಗಿದ್ದು, ಶಾಲಾ ಆಡಳಿತ ಮಂಡಳಿಯ ಸಹಯೋಗದಲ್ಲಿ ಕೆಲವು ಅಭ್ಯರ್ಥಿಗಳ ಒಎಂಆರ್ ಉತ್ತರ ಪತ್ರಿಕೆಗಳನ್ನು ಸಿಸಿಟಿವಿ ಕ್ಯಾಮೆರಾ ಕವರೇಜ್‌ನ ಹೊರಗೆ ತಿದ್ದಿರುವುದೂ ದೃಢಪಟ್ಟಿದೆ.

ಕೆಲವು ಅಭ್ಯರ್ಥಿಗಳು ಮತ್ತು ಅವರ ಸ್ನೇಹಿತರು ಹಣ ನೀಡಿ ಹೊಸ ಸಿಮ್ ಕಾರ್ಡ್‌ಗಳನ್ನು ಖರೀದಿಸಿ ಬ್ಲೂಟೂತ್ ಉಪಕರಣಗಳ ಮೂಲಕ ಆರ್.ಡಿ. ಪಾಟೀಲರ ತಂಡ ನೀಡಿದ ಉತ್ತರಗಳನ್ನು ಭರ್ತಿ ಮಾಡಿ ಆಯ್ಕೆಯಾಗಿದ್ದಾರೆ. ಶಾಲೆಯ ಆಡಳಿತ ಮಂಡಳಿಯ ದಿವ್ಯಾ ಹಾಗರಗಿ, ರಾಜೇಶ್ ಹಾಗರಗಿ, ಪ್ರಾಂಶುಪಾಲರಾದ ಕಾಶಿನಾಥ ಚಿಲ್ಲಾ, ಸಂವೀಕ್ಷಕರಾದ ಸಾವಿತ್ರಿ ಕಾಬಾ, ಸುಮಾ ಕಂಬಳಿಮಠ, ಸಿದ್ದಮ್ಮ ಬಿರಾದಾರ, ಅರ್ಚನಾ ಹೊನಗೇರಿ ಮತ್ತು ಸುನಂದಾ ಅಲಿಯಾಸ್ ಸುನೀತಾ ಮುಳಗೆ ಈ ಹಗರಣದಲ್ಲಿ ಭಾಗಿಯಾಗಿದ್ದಾರೆ.

ಈ ಪರೀಕ್ಷಾ ಅಕ್ರಮಗಳನ್ನು ವಿಧಿವಿಜ್ಞಾನ ಪರೀಕ್ಷೆಯಿಂದ ಹಾಗೂ ಅಭ್ಯರ್ಥಿಗಳು, ಮಧ್ಯವರ್ತಿಗಳು ಮತ್ತು ಉತ್ತರ ಒದಗಿಸುತ್ತಿದ್ದ ತಂಡದ ದೂರವಾಣಿ ಕರೆ ವಿವರ ರೆಕಾರ್ಡ್‌ನಿಂದ ಖಚಿತಪಡಿಸಿಕೊಳ್ಳಲಾಗಿದೆ' ಎಂದೂ ವರದಿಯಲ್ಲಿದೆ.

ಈ ಹಗರಣದಲ್ಲಿ ಒಟ್ಟು 113 ಆರೋಪಿಗಳಿದ್ದು, ಅದರಲ್ಲಿ ಪೊಲೀಸ್ ಅಧಿಕಾರಿ, ಸಿಬ್ಬಂದಿ, ಅಭ್ಯರ್ಥಿಗಳು, ಮಧ್ಯವರ್ತಿಗಳು, ಮಧ್ಯವರ್ತಿಗಳಾಗಿದ್ದ ಸರ್ಕಾರಿ ನೌಕರರು ಮತ್ತು ವಂಚಕರು ಇದ್ದಾರೆ. ಇವರ ವಿರುದ್ಧ ಸಿಐಡಿ ದಾಖಲಿಸಿರುವ 17 ಕ್ರಿಮಿನಲ್ ಪ್ರಕರಣಗಳ ಸಂಪೂರ್ಣ ತನಿಖೆ ಕೈಗೊಂಡು ಮುಂದಿನ ಕ್ರಮ ವಹಿಸಬೇಕು ಎಂದು ಆಯೋಗ ಅಭಿಪ್ರಾಯಪಟ್ಟಿದೆ. ಅಲ್ಲದೆ, ನಾಗರಿಕ ಸಮಾಜದ ಕಡೆಗೆ ಪೊಲೀಸ್ ಅಧಿಕಾರಿಗಳ ಕರ್ತವ್ಯ ಮತ್ತು ಕಾರ್ಯವೈಖರಿಯ ಬಗ್ಗೆಯೂ ಆಯೋಗವು ತನ್ನ ವರದಿಯಲ್ಲಿ ವಿವರಣೆ ನೀಡಿದೆ.

'ಪ್ರತ್ಯೇಕ ಸಂಸ್ಥೆಯಿಂದ ತನಿಖೆ ಸೂಕ್ತ'

ಹಗರಣಕ್ಕೆ ಸಂಬಂಧಪಟ್ಟಂತೆ ಜನಪ್ರತಿನಿಧಿಗಳು ಮಾಧ್ಯಮಗಳಿಗೆ ನೀಡಿದ ಹೇಳಿಕೆಗಳ ಕುರಿತು ಪ್ರತ್ಯೇಕ ಸಂಸ್ಥೆಯಿಂದ ತನಿಖೆ ಕೈಗೊಳ್ಳುವುದು ಸೂಕ್ತ ಎಂದು ಆಯೋಗ ಅಭಿಪ್ರಾಯ ನೀಡಿದೆ. ರಾಜಕೀಯ ನಾಯಕರನ್ನೂ ಒಳಗೊಂಡಂತೆ ಯಾವುದೇ ವ್ಯಕ್ತಿಯು ಸೂಕ್ತ ದಾಖಲಾತಿ ಇಲ್ಲದೇ ಹೇಳಿಕೆಗಳನ್ನು ನೀಡಬಾರದು. ಮಾಧ್ಯಮಗಳ ಮುಂದೆ ಹೇಳಿಕೆಗಳನ್ನು ನೀಡುವಾಗ ಸಂಯಮದಿಂದ ಹೇಳಿಕೆ ನೀಡುವುದು ಸೂಕ್ತವಾಗಿದೆ. ಸಂವಿಧಾನದ ಕಲಂ 19 (2) ಅಡಿ ವಾಕ್ ಸ್ವಾತಂತ್ರ್ಯಕ್ಕೆ ಕೆಲವು ಮಿತಿಗಳಿರುವುದನ್ನು ಗಮನಿಸಬೇಕು ಎಂದು ಆಯೋಗ ಹೇಳಿದೆ.

ಸಿ.ಎನ್. ಅಶ್ವತ್ಥನಾರಾಯಣ, ಎಚ್.ಡಿ. ಕುಮಾರಸ್ವಾಮಿ, ಬಸನಗೌಡ ಪಾಟೀಲ ಯತ್ನಾಳ ನೀಡಿರುವ ಹೇಳಿಕೆಗಳನ್ನು ಆಧರಿಸಿ ಅವರನ್ನು ತನಿಖೆಗೆ ಒಳಪಡಿಸಬೇಕೆಂದು ಆಯೋಗಕ್ಕೆ ವಕೀಲ ಸೂರ್ಯ ಮುಕುಂದರಾಜ್ ಅರ್ಜಿ ಸಲ್ಲಿಸಿದ್ದರು. ಹೀಗಾಗಿ ಆಯೋಗವು ಅವರಿಗೆ ನೋಟಿಸ್ ನೀಡಿತ್ತು. ಸಿ.ಎನ್. ಅಶ್ವತ್ಥನಾರಾಯಣ ಮತ್ತು ಅವರ ಸಹೋದರ ಸತೀಶ ಬಗ್ಗೆ ಮಾಧ್ಯಮಗಳಲ್ಲಿ ಬಂದ ವರದಿಗಳನ್ನು ಸಾಕ್ಷ್ಯ ಕಾಯ್ದೆಯ ಸೆಕ್ಷನ್ 78(2) ಮತ್ತು 81ರ ಪ್ರಕಾರ ಸಾಕ್ಷ್ಯಗಳೆಂದು ಪರಿಗಣಿಸಲು ಸಾಧ್ಯ ಇಲ್ಲ. ಸೂಕ್ತ ಸಾಕ್ಷ್ಯ ಇಲ್ಲದೆ ಪರಿಗಣಿಸಬಾರದೆಂದು ಅವರು ಆಕ್ಷೇಪಣೆ ಸಲ್ಲಿಸಿದ್ದಾರೆ. ಈ ವಿಚಾರದಲ್ಲಿ ಯಾವುದೇ ಸಾಕ್ಷ್ಯ ನೀಡುವ ಉದ್ದೇಶವಿಲ್ಲವೆಂದು ಕುಮಾರಸ್ವಾಮಿ ಪರ ವಕೀಲರು ತಿಳಿಸಿದ್ದಾರೆ. ಯತ್ನಾಳ ಅವರು ಸಮನ್ಸ್ ಸ್ವೀಕರಿಸಿಲ್ಲ. ₹15 ಲಕ್ಷ ಪಡೆದಿರುವ ಆರೋಪದಲ್ಲಿ ಮಾಜಿ ಶಾಸಕ ಬಸವರಾಜ ದಢೇಸಗೂರು ಯಾವುದೇ ಹೇಳಿಕೆ ನೀಡಿಲ್ಲ. ಅಲ್ಲದೆ, ಕೋರ್ಟ್‌ನಿಂದ ತಾತ್ಕಾಲಿಕ ಇಂಜೆಕ್ಷನ್ ತಂದಿರುವ ಬಗ್ಗೆ ಆಯೋಗಕ್ಕೆ ಮೆಮೊ ಸಲ್ಲಿಸಿದ್ದಾರೆ ಎಂಬುದೂ ಆಯೋಗದ ವರದಿಯಲ್ಲಿದೆ.

₹40 ಕೋಟಿ ವ್ಯಯಿಸಿದರೂ ಸೋತೆ: ಅರುಣಕುಮಾರ

ಪ್ರಜಾವಾಣಿ ವಾರ್ತೆ

ಹಾವೇರಿ: ರಾಣೆಬೆನ್ನೂರಿನ ಮಾಜಿ ಶಾಸಕ, ಬಿಜೆಪಿ ಜಿಲ್ಲಾ ಘಟಕದ ಅಧ್ಯಕ್ಷ ಅರುಣಕುಮಾರ ಪೂಜಾರ ಅವರು 'ಕಳೆದ ವಿಧಾನಸಭಾ ಚುನಾವಣೆಯಲ್ಲಿ ₹40 ಕೋಟಿ ಖರ್ಚು ಮಾಡಿಯೂ ಸೋತೆ' ಎಂದಿದ್ದು ಚರ್ಚೆಗೆ ಗ್ರಾಸವಾಗಿದೆ.

'ಅರುಣಕುಮಾರ ಅವರನ್ನು ಬಂಧಿಸಿ, ಬೇನಾಮಿ ಆಸ್ತಿಯ ಬಗ್ಗೆ ತನಿಖೆ ನಡೆಸಬೇಕು' ಎಂದು ಕರ್ನಾಟಕ ರಾಜ್ಯ ರೈತ ಸಂಘದ ಮುಖಂಡರು, ಕಾಂಗ್ರೆಸ್ ಮುಖಂಡರು ತಹಶೀಲ್ದಾರ್ ಕೆ.ಗುರು ಬಸವರಾಜ ಅವರಿಗೆ ಮಂಗಳ ವಾರ ಮನವಿಪತ್ರ ಸಲ್ಲಿಸಿದ್ದಾರೆ.

ರೈತ ಮುಖಂಡ ರವೀಂದ್ರಗೌಡ ಪಾಟೀಲ ಮಾತನಾಡಿ, '2019ರಲ್ಲಿ ನಡೆದ ರಾಣೆಬೆನ್ನೂರಿನ ಉಪಚುನಾವಣೆಯಲ್ಲಿ ಬಿಜೆಪಿಯಿಂದ ಸ್ಪರ್ಧಿಸಿ ಗೆದ್ದ ಅವರು ಮೂರು ವರ್ಷಗಳ ಅವಧಿಯಲ್ಲಿ ನೂರಾರು ಕೋಟಿ ಭ್ರಷ್ಟಾಚಾರ ಮಾಡಿದ್ದಾರೆ. ಗುತ್ತಿಗೆದಾರರಿಂದ ಶೇ 40ರಷ್ಟು ಕಮಿಷನ್ ಪಡೆದ ಪರಿಣಾಮ ಅವರ ಅವಧಿಯ ಬಹುತೇಕ ಕಾಮಗಾರಿಗಳು ಕಳಪೆಯಾಗಿವೆ' ಎಂದಿದ್ದಾರೆ.

ಚುನಾವಣಾ ಆಯೋಗಕ್ಕೆ ನೀಡಿದ್ದ ಅಫಿಡವಿಟ್‌ನಲ್ಲಿ ಇಟ್ಟಿಗೆ ಬಟ್ಟಿ ವ್ಯಾಪಾರ ಮಾಡುತ್ತೇನೆ. ನನಗೆ ಯಾವುದೇ ಆಸ್ತಿಯಿಲ್ಲ, ಸಾಲವಿದೆ ಎಂದಿದ್ದರು. ಹಾಗಾದರೆ, 2023ರ ಚುನಾವಣೆಯಲ್ಲಿ ₹40 ಕೋಟಿ ಖರ್ಚು ಮಾಡಲು ಹಣ ಎಲ್ಲಿತ್ತು? ನಿಯಮ ಉಲ್ಲಂಘಿಸಿದ್ದಕ್ಕೆ ಇದು ಉದಾಹರಣೆ. ಉನ್ನತ ಮಟ್ಟದ ತನಿಖೆ ನಡೆಸಿ' ಎಂದು ಅವರು ಆಗ್ರಹಿಸಿದ್ದಾರೆ.

'ತನಿಖೆಗೆ ಸಿದ್ಧ'

'ಪದಾಧಿಕಾರಿಗಳ ನೇಮಕದ ಬಗ್ಗೆ ಸೋಮವಾರ ಆಕ್ಷೇಪ ವ್ಯಕ್ತಪಡಿಸಿದ್ದ ಬಿಜೆಪಿ ಕಾರ್ಯಕರ್ತರನ್ನು ಸಮಾಧಾನ ಪಡಿಸುವಾಗ, ₹40 ಲಕ್ಷ ಖರ್ಚು ಮಾಡಿಯೂ ಸೋತೆ ಎನ್ನುವ ಬದಲು, ಬಾಯಿತಪ್ಪಿ ₹40 ಕೋಟಿ ಎಂದು ಹೇಳಿದ್ದೇನೆ' ಎಂದು ಮಾಜಿ ಶಾಸಕ ಅರುಣಕುಮಾರ ಪೂಜಾರ ಹೇಳಿದರು.

'ಚುನಾವಣೆಯಲ್ಲಿ ಮಾಡಿದ ಖರ್ಚು–ವೆಚ್ಚದ ಬಗ್ಗೆ ಚುನಾವಣಾ ಆಯೋಗಕ್ಕೆ ಲೆಕ್ಕ ಕೊಟ್ಟಿದ್ದೇನೆ. ಹಲವರು ದೂರು ಕೊಟ್ಟಿರುವುದು ಗಮನಕ್ಕೆ ಬಂದಿದೆ. ತನಿಖೆ ಎದುರಿಸಲು ಸಿದ್ಧನಿದ್ದೇನೆ. ಕಾನೂನು ಹೋರಾಟ ಮಾಡುತ್ತೇನೆ' ಎಂದು ಅವರು 'ಪ್ರಜಾವಾಣಿ'ಗೆ ತಿಳಿಸಿದರು.

ಜೆರೋಸಾ ಶಾಲೆ ಪ್ರಕರಣ

ಅವಹೇಳನ: ಪೋಷಕಿ ದೂರು

ಪ್ರಜಾವಾಣಿ ವಾರ್ತೆ

ಮಂಗಳೂರು: ನಗರದ ಸೇಂಟ್ ಜೆರೋಸಾ ಶಾಲೆಯ ಶಿಕ್ಷಕಿ ವಿರುದ್ಧ ಪ್ರತಿಭಟನೆಯಲ್ಲಿ ಭಾಗವಹಿಸಿದ್ದ ವಿದ್ಯಾರ್ಥಿನಿಯ ಪೋಷಕಿ, ಗರೋಡಿ ನಿವಾಸಿ ಕವಿತಾ ಅವರು, 'ನನ್ನ ಕುರಿತು ಸಾಮಾಜಿಕ ಮಾಧ್ಯಮಗಳಲ್ಲಿ ಅವಹೇಳನಕಾರಿ ಸಂದೇಶ ಹರಡಲಾಗುತ್ತಿದೆ' ಎಂದು ದೂರು ನೀಡಿದ್ದಾರೆ. ಇಲ್ಲಿನ ಕಂಕನಾಡಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸೇಂಟ್ ಜೆರೋಸಾ ಶಾಲೆಯಲ್ಲಿ ಪಾಠ ಮಾಡುವಾಗ ಶಿಕ್ಷಕಿಯೊಬ್ಬರು ಹಿಂದೂ ಧರ್ಮಕ್ಕೆ ಅವಹೇಳನ ಮಾಡಿದ್ದಾರೆ ಎಂದು ಆರೋಪಿಸಿರುವ ಧ್ವನಿ ಮುದ್ರಿತ ಸಂದೇಶ ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡಿತ್ತು.

'ಈ ಆಡಿಯೊವನ್ನು ಮಾಡಿ ಹರಿಯ ಬಿಟ್ಟಿದ್ದು ನಾನೇ ಎಂದು ಭಾವಿಸಿ ಅನೇಕರು ಸಾಮಾಜಿಕ ಮಾಧ್ಯಮಗಳಲ್ಲಿ ನನ್ನ ಬಗ್ಗೆ ಅವಹೇಳನಕಾರಿಯಾಗಿ ಸಂದೇಶ ಪ್ರಕಟಿಸುತ್ತಿದ್ದಾರೆ. ವ್ಯಕ್ತಿಯೊಬ್ಬರು ತೀರಾ ಅಶ್ಲೀಲವಾಗಿಯೂ ಸಂದೇಶ ಹರಿಯಬಿಟ್ಟಿದ್ದಾರೆ ಎಂದು ಕವಿತಾ ದೂರಿನಲ್ಲಿ ತಿಳಿಸಿದ್ದಾರೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ಫೆ.15ರಂದು ರಾತ್ರಿ 9.30ಗೆ ವಾಟ್ಸ್‌ಆ್ಯಪ್ ಸಂದೇಶ ಬಂತು. ಸೇಂಟ್ ಜೆರೋಸಾ ಶಾಲೆಯಲ್ಲಿ ನಡೆದ ಘಟನೆಗಳಿಗೆ ನಾನೇ ಕಾರಣ ಎಂಬಂತೆ ಬಿಂಬಿಸಿದ್ದರು. ನಾನು ಕಾನ್ವೆಂಟ್ ಶಾಲೆಯಲ್ಲಿ ಶಿಕ್ಷಕಿಯಾಗಿರುವ ವಿಷಯವನ್ನೂ ಅದರಲ್ಲಿ ಉಲ್ಲೇಖಿಸಿದ್ದರು. ನನ್ನ ಫೇಸ್‌ಬುಕ್ ಖಾತೆಯಲ್ಲಿದ್ದ ಫೋಟೊ ಜೊತೆ ನನ್ನ ಮೊಬೈಲ್ ಸಂಖ್ಯೆಯನ್ನೂ ಉಲ್ಲೇಖಿಸಿ ಅವರು ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಂಡರು. ರಾತ್ರಿ 12.30 ಹೊತ್ತಿಗೆ ಹೊರದೇಶಗಳಿಂದ ಹಲವಾರು ಕರೆಗಳು ಬರಲಾರಂಭಿಸಿದವು. ಅಗತ್ಯ ಇಲ್ಲದ ಕಾರಣ ನಾನು ಅವುಗಳನ್ನು ಸ್ವೀಕಾರ ಮಾಡಲಿಲ್ಲ' ಎಂದು ಕವಿತಾ ತಿಳಿಸಿದರು.

ಆರೋಪಿಗಳಿಗೆ ಮಧ್ಯಂತರ ಜಾಮೀನು

ಬೆಂಗಳೂರು: 'ಮಂಗಳೂರಿನ ಸೇಂಟ್ ಜೆರೋಸಾ ಪ್ರೌಢಶಾಲೆಯಲ್ಲಿ ಪಾಠ ಮಾಡುವಾಗ ಹಿಂದೂ ಧರ್ಮಕ್ಕೆ ಅವಹೇಳನ ಮಾಡಲಾಗಿದೆ' ಎಂದು ಆರೋಪಿಸಿ ಪ್ರತಿಭಟನೆ ನಡೆಸಿದ ಪ್ರಕರಣದಲ್ಲಿನ ಆರೋಪಿಗಳೂ ಆದ ಶಾಸಕ ವೇದವ್ಯಾಸ ಕಾಮತ್ ಮತ್ತು ಡಾ. ವೈ.ಭರತ್ ಶೆಟ್ಟಿ ಸೇರಿದಂತೆ ಐವರಿಗೆ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ಷರತ್ತುಬದ್ಧ ಮಧ್ಯಂತರ ಜಾಮೀನು ನೀಡಿದೆ.

ಈ ಸಂಬಂಧ ಮಂಗಳೂರು ದಕ್ಷಿಣ ಕ್ಷೇತ್ರದ ಬಿಜೆಪಿಯ ಶಾಸಕ ವೇದವ್ಯಾಸ ಕಾಮತ್, ಮಂಗಳೂರು ಉತ್ತರ ಕ್ಷೇತ್ರದ ಶಾಸಕ ಭರತ್ ಶೆಟ್ಟಿ ಹಾಗೂ ಸ್ಥಳೀಯ ಸಂಸ್ಥೆ ಸದಸ್ಯರಾದ ಶರಣ್ ಕುಮಾರ್ ಅಲಿಯಾಸ್ ಶರಣ್ ಪಂಪ್‌ವೆಲ್, ಸಂದೀಪ್ ಮತ್ತು ಭರತ್ ಕುಮಾರ್ ಸಲ್ಲಿಸಿದ್ದ ಅರ್ಜಿಗಳನ್ನು 'ಶಾಸಕರು–ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆಯ ವಿಶೇಷ ನ್ಯಾಯಾಲಯ'ದ ನ್ಯಾಯಾಧೀಶ ಸಂತೋಷ ಗಜಾನನ ಭಟ್ ವಿಚಾರಣೆ ನಡೆಸಿ ಜಾಮೀನು ಮಂಜೂರು ಮಾಡಿದ್ದಾರೆ.

ಅಕ್ಕಿ ಸಾಲ: ಅಧಿಕಾರಿ ಅಮಾನತು

ಪ್ರಜಾವಾಣಿ ವಾರ್ತೆ

ತುಮಕೂರು: ತಾಲ್ಲೂಕಿನ ಹಿಂದುಳಿದ ವರ್ಗಗಳ (ಬಿಸಿಎಂ) ವಿದ್ಯಾರ್ಥಿ ನಿಲಯಗಳಿಗೆ ಸಿದ್ಧಗಂಗಾ ಮಠದಿಂದ ಅಕ್ಕಿ ಸಾಲ ಪಡೆದ ಪ್ರಕರಣದಲ್ಲಿ ತುಮಕೂರು ತಾಲ್ಲೂಕು ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿ ಗೀತಮ್ಮ ಅವರನ್ನು ಮಂಗಳವಾರ ಅಮಾನತು ಮಾಡಿ ಇಲಾಖೆ ಆಯುಕ್ತ ಕೆ.ಎ.ದಯಾನಂದ ಆದೇಶ ಹೊರಡಿಸಿದ್ದಾರೆ

2013 ಅಕ್ಟೋಬರ್‌ನಿಂದ 2024 ಮಾರ್ಚ್ ವರೆಗೆ ಹಂಚಿಕೆಯಾಗಿದ್ದ ಅಕ್ಕಿ ಮತ್ತು ಗೋಧಿಯನ್ನು ಎತ್ತುವಳಿ ಮಾಡಿ ಹಾಸ್ಟೆಲ್‌ಗಳಿಗೆ ಸರಬರಾಜು ಮಾಡುವಲ್ಲಿ ಅಧಿಕಾರಿಯು ಕರ್ತವ್ಯ ಲೋಪವೆಸಗಿದ್ದಾರೆ. ಸಿದ್ಧಗಂಗಾ ಮಠದಿಂದ ನಿಯಮ ಬಾಹಿರವಾಗಿ ಅಕ್ಕಿ ಸಾಲ ತಂದಿರುವುದು ಖಚಿತಪಟ್ಟಿದೆ ಎಂದು ಅಮಾನತು ಆದೇಶದಲ್ಲಿ ಹೇಳಲಾಗಿದೆ. 'ಅಕ್ಕಿ ಕೊರತೆ, ಸಿದ್ಧಗಂಗಾ ಮಠದಿಂದ ಅಕ್ಕಿ ಸಾಲ' ಸುದ್ದಿ ಫೆ. 19ರಂದು 'ಪ್ರಜಾವಾಣಿ' ಮುಖಪುಟದಲ್ಲಿ ಪ್ರಕಟವಾಗಿತ್ತು.

ನಮ್ಮ ಆಕ್ಷೇಪ ಇರುವುದು ನಮ್ಮ ಪಾಲಿನ ಹಣ ನೀಡದ್ದಕ್ಕೆ: ವಿಧಾನಸಭೆಯಲ್ಲಿ ಗುಡುಗಿದ ಸಿ.ಎಂ ಸಿದ್ದರಾಮಯ್ಯ

‘ಕೇಂದ್ರದ ಬಳಿ ನ್ಯಾಯ ಕೇಳುವುದು ತಪ್ಪಾ?’

ಪ್ರಜಾವಾಣಿ ವಾರ್ತೆ


ವಿಧಾನಸಭೆ ಕಲಾಪದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮಾತನಾಡಿದರು. ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಸಚಿವರಾದ ಜಿ. ಪರಮೇಶ್ವರ, ಪ್ರಿಯಾಂಕ್ ಖರ್ಗೆ ಉಪಸ್ಥಿತರಿದ್ದರು

ಬೆಂಗಳೂರು: ‘ಕೇಂದ್ರದ ಜತೆ ಸಂಘರ್ಷಕ್ಕೆ ಇಳಿದಿಲ್ಲ. ಆದರೆ, ನಮಗೆ ಆಗಿರುವ ಅನ್ಯಾಯಕ್ಕೆ ನ್ಯಾಯ ಕೊಡಿ ಎಂದು ಕೇಳಿದ್ದೇವೆ. ಇದು ತಪ್ಪೇ? ಇದನ್ನೂ ಮಾಡದಿದ್ದರೆ, ಕರ್ನಾಟಕಕ್ಕೆ ದ್ರೋಹ ಮಾಡಿದಂತೆ ಆಗುವುದಿಲ್ಲವೇ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಗುಡುಗಿದರು.

ರಾಜ್ಯಪಾಲರ ಭಾಷಣದ ವಂದನಾ ನಿರ್ಣಯ ಮೇಲಿನ ಚರ್ಚೆಗೆ ವಿಧಾನ-ಸಭೆಯಲ್ಲಿ ಮಂಗಳವಾರ ಸುದೀರ್ಘ ಉತ್ತರ ನೀಡಿದ ಅವರು, ‘ನಮ್ಮ ಆಕ್ಷೇಪ ಇರುವುದು ನಮ್ಮ ಪಾಲಿನ ಹಣಕೊಟ್ಟಿಲ್ಲ ಎನ್ನುವುದು. ಇದನ್ನು ನೀವು ಸಂಘರ್ಷ ಎನ್ನುತ್ತೀರಿ. ನಾವು ಸಂಘರ್ಷ ಮಾಡುವುದಿಲ್ಲ. 7 ಕೋಟಿ ಕನ್ನಡಿಗರಿಗೆ ಅನ್ಯಾಯ ಆದಾಗ ಕೇಳಲೇಬೇಕಾಗುತ್ತದೆ’ ಎಂದು ಪ್ರತಿಪಾದಿಸಿದರು. ‘ಮುಖ್ಯಮಂತ್ರಿ ಅವರ ಉತ್ತರ ಸುಳ್ಳುಗಳಿಂದ ಕೂಡಿದೆ’ ಎಂದು ಆರೋಪಿಸಿದ ಬಿಜೆಪಿ ಸದಸ್ಯರು ಸಭಾತ್ಯಾಗ ಮಾಡಿದರು.

‘ನಾವು ರಾಜ್ಯಪಾಲರ ಮೂಲಕ ಸುಳ್ಳು ಹೇಳಿಸಿಲ್ಲ. ನಮ್ಮ ರಾಜ್ಯಪಾಲರು ಕೇರಳ ಮತ್ತು ತಮಿಳುನಾಡಿನ ರಾಜ್ಯಪಾಲರಂತೆ ವರ್ತಿಸಲಿಲ್ಲ. ಸರ್ಕಾರದ ಕಾರ್ಯಕ್ರಮ ಮತ್ತು ಮುನ್ನೋಟವನ್ನು ಮುಂದಿಟ್ಟಿದ್ದಾರೆ. ಸತ್ಯವನ್ನೇ ಹೇಳಿದ್ದಾರೆ. ಸಜ್ಜನಿಕೆಯಿಂದ ನಡೆದುಕೊಂಡಿದ್ದಾರೆ. ಅದಕ್ಕಾಗಿ ಅವರನ್ನು ಅಭಿನಂದಿಸುತ್ತೇನೆ ಎಂದು ಸಿದ್ದರಾಮಯ್ಯ ಹೇಳಿದಾಗ, ‘ನೀವು ಅವರ ಒಳ್ಳೆಯತನವನ್ನು ದುರುಪಯೋಗ ಮಾಡಿಕೊಂಡಿದ್ದೀರಿ’ ಎಂದು ಬಿಜೆಪಿಯ ಬಸವರಾಜ ಬೊಮ್ಮಾಯಿ ಛೇಡಿಸಿದರು.

‘ನಾವು ಸಂಘರ್ಷಕ್ಕೆ ಇಳಿದಿದ್ದೇವೆ, ನಮ್ಮ ಧೋರಣೆ ಸರಿ ಇಲ್ಲ ಎಂದು ಎಚ್‌.ಡಿ.ಕುಮಾರಸ್ವಾಮಿ ಹೇಳಿದ್ದಾರೆ. ನಮ್ಮ ಪಾಲಿನ ಹಣ ಬಂದಿಲ್ಲ ಎಂದು ಕೇಂದ್ರಕ್ಕೆ ಪತ್ರ ಬರೆದಿದ್ದೇವೆ. ಪ್ರಧಾನ ಮಂತ್ರಿ ಮತ್ತು ಇತರ ಸಚಿವರನ್ನೂ ಭೇಟಿ ಮಾಡಿದ್ದೇವೆ. ಆದರೂ ಹಣ ಬಂದಿಲ್ಲ. ಗೃಹಸಚಿವರಿಗೆ 17 ಪತ್ರಗಳನ್ನು ಬರೆದಿದ್ದು, ಒಂದಕ್ಕೆ ಮಾತ್ರ ಪ್ರತಿಕ್ರಿಯಿ-ಸಿದ್ದು, ಉಳಿದವುಗಳಿಗೆ ಪ್ರತಿಕ್ರಿಯಿಸಿಲ್ಲ’ ಎಂದು ಸಿದ್ದರಾಮಯ್ಯ ಕಿಡಿಕಾರಿದರು.

‘ಐದು ಗ್ಯಾರಂಟಿಗಳನ್ನು ಜಾರಿ ಮಾಡಲು ಸಾಧ್ಯವಿಲ್ಲ. ಆ ರೀತಿ ಮಾಡಿದರೆ ರಾಜ್ಯ ದಿವಾಳಿ ಆಗಿ ಹೋಗುತ್ತದೆ ಎಂದು ಪ್ರಧಾನಿ ಮೋದಿ ಹೇಳಿದ್ದರು. ಕಳೆದ ಬಜೆಟ್‌ನಲ್ಲಿ ಗ್ಯಾರಂಟಿಗಾಗಿ ₹32 ಸಾವಿರ ಕೋಟಿ ಇಟ್ಟಿದ್ದೆವು. ಈ ಬಜೆಟ್‌ನಲ್ಲಿ ₹52 ಸಾವಿರ ಕೋಟಿ ಇಟ್ಟಿದ್ದೇವೆ. ನಮ್ಮ ಗ್ಯಾರಂಟಿ ಯೋಜನೆಗಳು ಮತ್ತು ಬಜೆಟ್ ಕುರಿತು ಪತ್ರಿಕೆಗಳು ಮೆಚ್ಚುಗೆ ವ್ಯಕ್ತಪ-ಡಿಸಿವೆ’ ಎಂದು ‘ಪ್ರಜಾವಾಣಿ’ ಮತ್ತು ಇತರ ಪತ್ರಿಕೆಗಳ ಸಂಪಾದಕೀಯಗಳನ್ನು ಉಲ್ಲೇಖಿಸಿದರು.

ಒಂದು ಹಂತದಲ್ಲಿ ಸಿದ್ದರಾಮಯ್ಯ ಅವರು ಬಜೆಟ್ ವರದಿಯ ಕುರಿತ ಪತ್ರಿಕಾ ವರದಿಗಳ ತಲೆ ಬರಹಗಳನ್ನೂ ಓದಿ, ‘ನೋಡಿ ಪತ್ರಿಕೆಗಳೇ ನಮ್ಮ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿವೆ’ ಎಂದಾಗ, ‘ನಿಮ್ಮ ಬಜೆಟ್ ಕುರಿತ ವರದಿಗಳನ್ನೇ ಮೆಚ್ಚುಗೆ ಎಂದರೆ ಹೇಗೆ? ಸಿದ್ದರಾಮಯ್ಯ ಹಿಂದೆ ಎಂದೂ ತಮ್ಮನ್ನು ಸಮರ್ಥಿಸಿ-ಕೊಳ್ಳಲು ಪತ್ರಿಕಾ ವರದಿಗಳ ನೆರವಿಗೆ ಹೋಗಿದ್ದು ನೋಡಿಲ್ಲ. ಈಗ ಯಾವ ಸ್ಥಿತಿಗೆ ತಲುಪಿದ್ದೀರಿ ಎನ್ನುವುದು ಅರ್ಥ-ವಾಗುತ್ತದೆ’ ಎಂದು ಬೊಮ್ಮಾಯಿ ಕಾಲೆಳೆದರು.

> **ಬಿಜೆಪಿಯದು ದ್ವೇಷ ತುಂಬಿದ ತುಕ್ಕು ಹಿಡಿದ ಬಸ್ಸು. ಕಳೆದ ಚುನಾವಣೆಯಲ್ಲಿ ಆ ಬಸ್ಸು ಮುಂದೆ ಹೋಗಲೇ ಇಲ್ಲ. ಜನ ಆ ಬಸ್ಸನ್ನು ಪಕ್ಕಕ್ಕೆ ತಳ್ಳಿದರು**
> **ಸಿದ್ದರಾಮಯ್ಯ,** ಮುಖ್ಯಮಂತ್ರಿ

ಆರೋಗ್ಯ ಸರಿ ಇಲ್ಲದ ಕಾರಣ ಬರಲಿಲ್ಲ: ‘ಕಳೆದ ಕೆಲವು ದಿನಗಳಿಂದ ಆರೋಗ್ಯ ಸರಿ ಇಲ್ಲದ ಕಾರಣ ವಿಧಾನಸಭೆಗೆ ಬರಲಿಲ್ಲ. ವಿಧಾನ ಪರಿಷತ್ತಿಗೂ ಹೋಗಿದ್ದು ಕಡಿಮೆ’ ಎಂದು ಸಿದ್ದರಾಮಯ್ಯ ಹೇಳಿದಾಗ, ‘ನೀವು ಈ ಬಾರಿ ವಿಧಾನಸಭೆ ಕಲಾಪಕ್ಕೆ ಬರಲಿಲ್ಲ. ನಮ್ಮ ಯಾರ ಭಾಷಣಗಳನ್ನೂ ಕೇಳಲಿಲ್ಲ’ ಎಂದು ಬೊಮ್ಮಾಯಿ ತಿಳಿಸಿದರು.

‘ರಾಜ್ಯಪಾಲರ ಭಾಷಣ ಮತ್ತು ಬಜೆಟ್ ಮಂಡನೆಗಾಗಿ ಬಂದಿದ್ದೆ’ ಎಂದು ಸಿದ್ದರಾಮಯ್ಯ ಪ್ರತಿಕ್ರಿಯಿಸಿದರು.

‘ಇಲ್ಲ’ ಎಂದ ಸಿಎಂ: ರಾಜ್ಯಪಾಲರ ಭಾಷಣದ ವಂದನಾ ನಿರ್ಣಯವನ್ನು ಸಭಾಧ್ಯಕ್ಷ ಯು.ಟಿ.ಖಾದರ್ ಅವರು ಮತಕ್ಕೆ ಹಾಕುವಾಗ ‘ಹೌದು’ ಎನ್ನುವವರು ‘ಹೌದು’ ಎನ್ನಿ, ‘ಇಲ್ಲ’ ಎನ್ನುವವರು ‘ಇಲ್ಲ’ ಎನ್ನಿ ಎಂದು ಹೇಳಿದಾಗ, ಕಾಂಗ್ರೆಸ್ ಸದಸ್ಯರೆಲ್ಲಾ ‘ಹೌದು’ ಎಂದು ಹೇಳಿದರೆ, ಸಿದ್ದರಾಮಯ್ಯ ಮಾತ್ರ ‘ಇಲ್ಲ’ ಎಂದು ಬಿಟ್ಟರು. ಸದನದಲ್ಲಿದ್ದ ಸಚಿವರು, ಆಡಳಿತ ಪಕ್ಷದ ಸದಸ್ಯರು ಒಂದು ಕ್ಷಣ ಅವಾಕ್ಕಾದರು.

‘ನನ್ನದು ಸಿದ್ದನಾಮಿಕ್ಸ್ ಅಲ್ಲ, ಗುಡ್ ಎಕನಾಮಿಕ್ಸ್’

ಎಚ್‌.ಡಿ.ಕುಮಾರಸ್ವಾಮಿ ಅದೇನೋ ‘ಸಿದ್ದನಾಮಿಕ್ಸ್’ ಅಂತ ಹೇಳಿದ್ದಾರೆ. ಯಾರಾದರೂ ಆ ಪದವನ್ನು ಕೇಳಿದ್ದೀರಾ? ಪುಸ್ತಕದಲ್ಲಿ ಎಲ್ಲಿಯಾದರೂ ಇದೆಯಾ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ವ್ಯಂಗ್ಯವಾಗಿ ಪ್ರಶ್ನಿಸಿದರು. ‘ನಾವು ಏನಿದ್ದರೂ ಗುಡ್ ಎಕನಾಮಿಕ್ಸ್‌ನಲ್ಲಿ ನಂಬಿಕೆ ಇಟ್ಟವರು’ ಎಂದು ಹೇಳಿದರು.

‘ನೀವು ಸದಾ ಸುಳ್ಳುಗಳನ್ನು ಹೇಳುತ್ತೀರಲ್ಲ. ಅದಕ್ಕೆ ಸಿದ್ದನಾಮಿಕ್ಸ್ ಎಂಬ ಹೊಸ ಪದ ಹುಟ್ಟಿಕೊಂಡಿದೆ’ ಎಂದು ವಿರೋಧಪಕ್ಷದ ನಾಯಕ ಆರ್.ಅಶೋಕ ಅವರು ಹೇಳಿದರು.

‘ಸಿದ್ದನಾಮಿಕ್ಸ್ ಎನ್ನುವುದನ್ನು ಟ್ರೇಡ್ ಮಾರ್ಕ್ ಅಥವಾ ಬ್ರ್ಯಾಂಡ್ ನೇಮ್ ಮಾಡಿಕೊಳ್ಳಿ’ ಎಂದು ಬಸವರಾಜ ಬೊಮ್ಮಾಯಿ ಹೇಳಿದಾಗ, ನನ್ನದೇನಿದ್ದರೂ ಗುಡ್ ಎಕಾನಮಿಕ್ಸ್. ಅದರಲ್ಲೇ ನಂಬಿಕೆ ಇಟ್ಟಿದ್ದೇನೆ’ ಎಂದು ಸಿದ್ದರಾಮಯ್ಯ ಪ್ರತಿಕ್ರಿಯಿಸಿದರು.

‘ಶ್ರೀಮಂತರಿಂದ ಹೆಚ್ಚು ತೆರಿಗೆ ವಸೂಲಿ ಮಾಡಿ ಬಡವರಿಗೆ ಹಂಚುವುದೇ ನಮ್ಮ ಉದ್ದೇಶ. ಇದಕ್ಕಾಗಿ ಐದು ಗ್ಯಾರಂಟಿಗಳನ್ನು ಜಾರಿ ಮಾಡಿದ್ದೇವೆ. ಇದು ಗುಡ್ ಎಕನಾಮಿಕ್ಸ್. ಸ್ವಾಭಿಮಾನದ ಎಕನಾಮಿಕ್ಸ್ ವಿನಾ ಸ್ವಾಹಾ ಎಕನಾಮಿಕ್ಸ್ ಅಲ್ಲ’ ಎಂದು ಅವರು ಹೇಳಿದರು.

‘ಕಾಗಕ್ಕ ಗುಬ್ಬಕ್ಕನ ಕಥೆ’

ರಾಜ್ಯಪಾಲರ ಭಾಷಣದ ಮೂಲಕ ಕೇಂದ್ರ ಸರ್ಕಾರವನ್ನು ಬಯ್ಯುವುದು ಬಿಟ್ಟರೆ, ತಾವು ಮಾಡಿದ ಅಭಿವೃದ್ಧಿ ಕಾರ್ಯ ಏನೆಂದು ತಿಳಿಸಿ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರದು ಸುಳ್ಳಿನ ಆರ್ಥಿಕತೆ ಎಂದು ವಿರೋಧಪಕ್ಷದ ನಾಯಕ ಆರ್. ಅಶೋಕ ಟೀಕಿಸಿದರು.

‘ನಮ್ಮ ಸರ್ಕಾರದ ಅವಧಿಯಲ್ಲಿ ಜಾರಿ ಮಾಡಿದ ರೈತ ವಿದ್ಯಾನಿಧಿ, ಕಿಸಾನ್ ಸಮ್ಮಾನ್ ರದ್ದು ಮಾಡಿದ ಬಗ್ಗೆ ಸಿದ್ದರಾಮಯ್ಯ ಉತ್ತರ ನೀಡಿಲ್ಲ. ₹5,000 ದಿಂದ ₹50,000 ವರೆಗೆ ನೀಡುತ್ತಿದ್ದ ವಿದ್ಯಾರ್ಥಿ ವೇತನವನ್ನು ₹1200 ಕ್ಕೆ ಇಳಿಸಲಾಗಿದೆ. ಪರಿಶಿಷ್ಟರಿಗೆ ಮೀಸಲಾದ ಹಣದಲ್ಲಿ ₹11 ಸಾವಿರ ಕೋಟಿಗೂ ಹೆಚ್ಚು ಹಣವನ್ನು ಬೇರೆ ಉದ್ದೇಶಕ್ಕೆ ಬಳಸಲಾಗಿದೆ. ರೈತರಿಗೆ ನೀಡುವ ಸಹಾಯಧನದ ಬಗ್ಗೆಯೂ ಪ್ರತಿಕ್ರಿಯೆ ನೀಡದೇ ಕಾಗಕ್ಕ ಗುಬ್ಬಕ್ಕನ ಕಥೆ ಹೇಳಲಾಗುತ್ತಿದೆ. ಇದೇ ‘ಸಿದ್ದನಾಮಿಕ್ಸ್’ ಎಂದರು.

ಯತ್ನಾಳ ಮೇಲೆ ಸಿ.ಎಂ ಪರೋಕ್ಷ ಗರಂ

ಬಿಜೆಪಿಯ ಬಸನಗೌಡ ಪಾಟೀಲ ಯತ್ನಾಳ ಅವರು ಪದೇ ಪದೇ ಎದ್ದು ನಿಂತು ಅಡ್ಡಿಪಡಿಸುತ್ತಿದ್ದ ಕಾರಣ ಸಿದ್ದರಾಮಯ್ಯ ಅವರು ತಮ್ಮ ಹಿಂದೆ ಕುಳಿತಿದ್ದ ಸಚಿವ ದಿನೇಶ್ ಗುಂಡೂರಾವ್ ಅವರನ್ನು ಉದ್ದೇಶಿಸಿ ‘ಯತ್ನಾಳ ಪದೇ ಪದೇ ಅಡ್ಡಿ ಮಾಡಿದರೆ ಕ್ರಮ ತಗೋ ಬೇಕಾಗುತ್ತದೆ ಎಂದು ಸಭಾಧ್ಯಕ್ಷರಿಗೆ ಹೇಳಿ’ ಎಂದು ಮೆಲುಧ್ವನಿಯಲ್ಲಿ ಉಸುರಿದರು. ಆಗ ದಿನೇಶ್ ಗುಂಡೂರಾವ್ ಅವರು, ‘ಯತ್ನಾಳ ಅವರು ಪದೇ ಪದೇ ಅಡ್ಡಿ ಮಾಡುತ್ತಿರುವುದ-ರಿಂದ ಅವರ ಮೇಲೆ ಕ್ರಮ ತಗೆದುಕೊಳ್ಳಬೇಕಾಗುತ್ತದೆ’ ಎಂದರು. ‘ಅದೇನು ಕ್ರಮ ತೆಗೆದುಕೊಳ್ಳುತ್ತೀರೋ ತೆಗೆದುಕೊಳ್ಳಿ’ ಎಂದು ಯತ್ನಾಳ ತಿರುಗೇಟು ನೀಡಿದರು.

ಸುದ್ದಿ 2 ನಿಮಿಷ

ಕೇಂದ್ರದ ತಾರತಮ್ಯ: ಬಹಿರಂಗ ಚರ್ಚೆಗೆ ಕುಮಾರಸ್ವಾಮಿ ಆಹ್ವಾನ

ಬೆಂಗಳೂರು: ತೆರಿಗೆ, ಅನುದಾನ ತಾರತಮ್ಯ ಕುರಿತು ಕೇಂದ್ರ ಸರ್ಕಾರ ಹಾಗೂ ಪ್ರಧಾನಿ ವಿರುದ್ಧ ನಿರಂತರ ಆರೋಪ ಮಾಡುತ್ತಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ, ಬಹಿರಂಗ ಚರ್ಚೆಗೆ ಬರಬೇಕು ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಆಹ್ವಾನ ನೀಡಿದರು.

ವಿಧಾನಸೌಧದಲ್ಲಿ ಮಂಗಳವಾರ ಸುದ್ದಿಗಾರರ ಜತೆ ಮಾತನಾಡಿದ ಅವರು, ‘ದೇಶದ ಹಿರಿಯರು, ನುರಿತ ಆರ್ಥಿಕ ತಜ್ಞರನ್ನು ಕೂರಿಸಿಕೊಂಡು ಮಾಧ್ಯಮಗಳ ಮುಂದೆಯೇ ಚರ್ಚೆ ಮಾಡೋಣ. ಕೇಂದ್ರದ ಅನ್ಯಾಯ ಸಾಬೀತು ಮಾಡಿದರೆ ನಿಮ್ಮ ಜತೆ ನಾವೂ ಧ್ವನಿ ಎತ್ತುತ್ತೇವೆ’ ಎಂದು ಸವಾಲು ಹಾಕಿದರು.



ಈಗ 16ನೇ ಹಣಕಾಸು ಆಯೋಗ ರಚನೆ ಆಗಿದೆ. ಆಯೋಗ ರಾಜ್ಯಕ್ಕೆ ಭೇಟಿ ನೀಡಿದಾಗ ಸರಿಯಾದ ಮಾಹಿತಿ ಕೊಡಬೇಕು. ರಾಜ್ಯದ ಹಕ್ಕು ಮಂಡಿಸಬೇಕು. ಅದನ್ನು ಬಿಟ್ಟು ಕೇಂದ್ರ ಸರ್ಕಾರಕ್ಕೆ ಮನವಿ ಮಾಡಿದರೆ ಅಥವಾ ದೂರಿದರೆ ಉಪಯೋಗ ಇಲ್ಲ. ತೆರಿಗೆ ಪಾಲು, ಅನುದಾನ ಹಂಚಿಕೆ ಮಾಡುವುದು ಆಯೋಗವೇ ಹೊರತು ಕೆಂದ್ರವಲ್ಲ. ಕೇಂದ್ರ ಹಿಂದೆ ನೀಡಿದ್ದ ಹಣವನ್ನೂ ಸರ್ಕಾರ ಸದ್ಬಳಕೆ ಮಾಡಿಲ್ಲ ಎಂದು ದೂರಿದರು.

ಕರಗ ಉತ್ಸವಗಳಿಗೆ ₹3 ಕೋಟಿ ಅನುದಾನ

ಬೆಂಗಳೂರು: ರಾಜ್ಯದ ಹಲವು ಜಿಲ್ಲೆಗಳಲ್ಲಿ ಆಚರಿಸುವ ಕರಗ ಉತ್ಸವಗಳಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ₹3 ಕೋಟಿ ಅನುದಾನ ಬಿಡುಗಡೆ ಮಾಡಿದ್ದಾರೆ.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಡಿ ಕೋಲಾರ, ಚಿಕ್ಕಬಳ್ಳಾಪುರ, ರಾಮನಗರ, ಬೆಂಗಳೂರು ಗ್ರಾಮಾಂತರ, ತುಮಕೂರು, ಬೆಂಗಳೂರು ನಗರ, ಹಾವೇರಿ, ಶಿವಮೊಗ್ಗ, ಚಿಕ್ಕಮಗಳೂರು, ಮಂಡ್ಯ, ಮೈಸೂರು, ಚಾಮರಾಜನಗರ ಹಾಗೂ ಇತರೆ ಜಿಲ್ಲೆಗಳಲ್ಲಿ ಆಯಾ ತಾಲ್ಲೂಕು, ಹೋಬಳಿ, ಗ್ರಾಮಗಳಲ್ಲಿ ನಡೆಯುವ ಕರಗ ಉತ್ಸವಗಳಿಗೆ ಉಪಯೋಗಿಸಲು ಅನುದಾನ ಬಿಡುಗಡೆ ಮಾಡುವಂತೆ ಆರ್ಥಿಕ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಯವರಿಗೆ ಫೆ.20ರಂದು ಟಿಪ್ಪಣಿ ಮೂಲಕ ಸೂಚಿಸಿದ್ದಾರೆ.

‘ಹಲವು ದಶಕಗಳಿಂದ ತಿಗಳ ಜನಾಂಗದವರು (ವಹ್ನಿಕುಲ ಕ್ಷತ್ರಿಯರು) ದ್ರಾವಿಡ ಶೈಲಿಯಲ್ಲಿ ಕರಗ ಉತ್ಸವವನ್ನು ಲೋಕ ಕಲ್ಯಾಣಕ್ಕಾಗಿ ಆಚರಿಸುತ್ತಿದ್ದಾರೆ. 2018ರಲ್ಲಿ ತಮ್ಮ ನೇತೃತ್ವದ ಸರ್ಕಾರ ಅನುದಾನ ಬಿಡುಗಡೆ ಮಾಡಿದ ನಂತರ, ಅನುದಾನ ಅಥವಾ ಸಹಾಯಧನ ಬಿಡುಗಡೆ ಮಾಡಿಲ್ಲ. ಆದ್ದರಿಂದ, ರಾಜ್ಯದಲ್ಲಿ ನಡೆಯುವ ಪ್ರತಿ ಕರಗ ಉತ್ಸವಗಳಿಗೆ ತಲಾ ₹2 ಲಕ್ಷದಂತೆ ಒಟ್ಟು ₹3 ಕೋಟಿ ಅನುದಾನ ಬಿಡುಗಡೆ ಮಾಡಬೇಕು’ ಎಂದು ವಿಧಾನ ಪರಿಷತ್ ಮಾಜಿ ಸದಸ್ಯ ಪಿ.ಆರ್. ರಮೇಶ್ ಅವರು ಮುಖ್ಯಮಂತ್ರಿ ಅವರಿಗೆ ಮನವಿ ಸಲ್ಲಿಸಿದ್ದರು. ಈ ಮನವಿಯಂತೆ ಮುಖ್ಯಮಂತ್ರಿಯವರು ಅನುದಾನ ಮಂಜೂರು ಮಾಡಿದ್ದಾರೆ.

‘ತೆರಿಗೆಯಲ್ಲಷ್ಟೇ ಅಲ್ಲ, ಕನ್ನಡ ಭಾಷೆಗೂ ಅನ್ಯಾಯ’

ವಿಧಾನಪರಿಷತ್ತಿನಲ್ಲಿ ಸಚಿವ ಶಿವರಾಜ ತಂಗಡಗಿ, ಬಿ.ಕೆ. ಹರಿಪ್ರಸಾದ್ ಆರೋಪ • ಕನ್ನಡ ನಾಮಫಲಕ ಮಸೂದೆಗೆ ಒಪ್ಪಿಗೆ

ಪ್ರಜಾವಾಣಿ ವಾರ್ತೆ


ಮಂಗಳವಾರ ನಡೆದ ವಿಧಾನ ಪರಿಷತ್ ಕಲಾಪದಲ್ಲಿ 'ಕನ್ನಡ ಮತ್ತು ಸಂಸ್ಕೃತಿ ಇಲಾಖೆ' ಸಚಿವ ಶಿವರಾಜ್ ತಂಗಡಗಿ ಅವರು, ವಿರೋಧ ಪಕ್ಷದ ಸದಸ್ಯರ ಮಾತಿಗೆ ಪ್ರತಿಕ್ರಿಯಿಸಿದ ರೀತಿ. ಸಚಿವರಾದ ಶಿವಾನಂದ ಪಾಟೀಲ, ಸತೀಶ ಜಾರಕಿಹೊಳಿ, ಸದಸ್ಯರಾದ ಉಮಾಶ್ರೀ, ಸುನೀಲಗೌಡ ಪಾಟೀಲ, ಯು.ಬಿ. ವೆಂಕಟೇಶ್ ಉಪಸ್ಥಿತರಿದ್ದರು —ಪ್ರಜಾವಾಣಿ ಚಿತ್ರ

ಬೆಂಗಳೂರು: ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರ ತೆರಿಗೆ, ಅನುದಾನದ ಪಾಲಿನಲ್ಲಿ ಮಾತ್ರ ಅನ್ಯಾಯ ಮಾಡಿದ್ದಲ್ಲ. ಕನ್ನಡ ಭಾಷೆಯ ಬೆಳವಣಿಗೆಗೆ ಅನುದಾನ ನೀಡುವಲ್ಲಿಯೂ ಅನ್ಯಾಯ ಮಾಡುತ್ತಿದೆ ಎಂದು ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ ತಂಗಡಗಿ ಹೇಳಿದರು.

ವಾಣಿಜ್ಯ ಸಂಸ್ಥೆಗಳು, ಉದ್ದಿಮೆಗಳು, ಕೈಗಾರಿಕೆಗಳ ನಾಮಫಲಕಗಳಲ್ಲಿ ಶೇಕಡ 60ರಷ್ಟು ಕನ್ನಡ ಭಾಷೆಯಲ್ಲಿ ಇರಬೇಕು ಎಂಬುದನ್ನು ಖಾತ್ರಿಪಡಿಸಲು ತರಲಾದ ‘ಕನ್ನಡ ಭಾಷಾ ಸಮಗ್ರ ಅಭಿವೃದ್ಧಿ (ತಿದ್ದುಪಡಿ) ಮಸೂದೆ–2024’ ಕುರಿತು ವಿಧಾನಪರಿಷತ್ತಿನಲ್ಲಿ ಮಂಗಳವಾರ ನಡೆದ ಚರ್ಚೆಗೆ ಉತ್ತರ ನೀಡಿದ ಅವರು, ಈ ವಿಷಯದಲ್ಲಿ ಬಿಜೆಪಿ ಸದಸ್ಯರು ಕನ್ನಡ ಪರ ನಿಲ್ಲಬೇಕು ಎಂದು ಮನವಿ ಮಾಡಿದರು.

ಮಸೂದೆ ಕುರಿತು ಮಾತನಾಡಿದ ಕಾಂಗ್ರೆಸ್‌ನ ಬಿ.ಕೆ. ಹರಿಪ್ರಸಾದ್, ಕೇಂದ್ರ ಸರ್ಕಾರ ಹಿಂದಿ ಭಾಷೆಗೆ ಹೆಚ್ಚಿನ ಪ್ರಾಧಾನ್ಯ ನೀಡಿದೆ. ಪ್ರತಿವರ್ಷ ಹಿಂದಿಗೆ ₹1,500 ಕೋಟಿ, ಸಂಸ್ಕೃತಕ್ಕೆ ₹400 ಕೋಟಿ ಕೊಟ್ಟರೆ ಕನ್ನಡಕ್ಕೆ ಕೇವಲ ₹3 ಕೋಟಿ ನೀಡಲಾಗುತ್ತಿದೆ. ಸಂಸ್ಕೃತ ಮಾತನಾಡುವವರು ದೇಶದಲ್ಲಿ 50 ಸಾವಿರ ಜನರಿದ್ದಾರೆ. ಆ ಭಾಷೆಗೆ ₹400 ಕೋಟಿ, ಏಳು ಕೋಟಿ ಜನ ಮಾತನಾಡುವ ಕನ್ನಡಕ್ಕೆ ₹3 ಕೋಟಿ ಮಾತ್ರ. ದೇಶದಲ್ಲಿ 21 ಭಾಷೆಗಳಲ್ಲಿ ಸಾಂವಿಧಾನಿಕ ಮಾನ್ಯತೆ ನೀಡಲಾಗಿದ್ದು, ಎಲ್ಲ ಭಾಷೆಗಳನ್ನೂ ಕೇಂದ್ರ ಸರ್ಕಾರ ಒಂದೇ ರೀತಿ ನೋಡಬೇಕು ಎಂದು ಒತ್ತಾಯಿಸಬೇಕಾಗಿದೆ ಎಂದರು.

ಬೆಂಗಳೂರಿನಲ್ಲಿ 108 ಭಾಷೆಗಳನ್ನು ಮಾತನಾಡುವ ಜನ ಇದ್ದಾರೆ. ಅತಿ ಹೆಚ್ಚು ಭಾಷೆಗಳು ಚಾಲ್ತಿಯಲ್ಲಿರುವ ದೇಶದ ನಗರಗಳಲ್ಲಿ ಬೆಂಗಳೂರು ಎರಡನೇ ಸ್ಥಾನದಲ್ಲಿದೆ ಎಂದರು.

ಮಸೂದೆಗೆ ಅನುಮೋದನೆ ಕೋರಿ ಮಾತನಾಡಿದ ಸಚಿವ ತಂಗಡಗಿ, ಕನ್ನಡಕ್ಕೆ ಶಾಸ್ತ್ರೀಯ ಭಾಷೆಯ ಸ್ಥಾನ ನೀಡಲಾಗಿದ್ದರೂ ಅನುದಾನವನ್ನು ಕೊಡುತ್ತಿಲ್ಲ. ನಮ್ಮ ಮೂಗಿಗೆ ತುಪ್ಪ ಸವರುವಂತೆ ಅನುದಾನ ಕೊಡಲಾಗುತ್ತಿದೆ. ಲೋಕಸಭೆ ಚುನಾವಣೆ ಬರುತ್ತಿದ್ದು, ಅನುದಾನ ಕೊಡಿಸುವ ಯತ್ನವನ್ನು ಪೂಜಾರಿ ಸಾಹೇಬರು ಮಾಡಬೇಕು ಎಂದು ವಿರೋಧ ಪಕ್ಷದ ನಾಯಕ ಕೋಟ ಶ್ರೀನಿವಾಸ ಪೂಜಾರಿ ಅವರನ್ನು ಉದ್ದೇಶಿಸಿ ಹೇಳಿದರು.

ಪ್ರಧಾನಿಯವರನ್ನು ಏಕವಚನದಲ್ಲಿ ಬೈದು, ಅನುದಾನ ಕೊಡಿ ಎಂದರೆ ಹೇಗೆ ಎಂದು ಪೂಜಾರಿ ಪ್ರಶ್ನಿಸಿದರು. ಅನುದಾನ ಕೊಡದೇ ಇದ್ದರೆ ಬೈಯದೇ ಇನ್ನೇನು ಮಾಡುವುದು ಎಂದು ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ಕೇಳಿದರು.

ಮಸೂದೆ ಕುರಿತು ನಡೆದ ಚರ್ಚೆಯಲ್ಲಿ ಆಡಳಿತ ಪಕ್ಷದ ಮುಖ್ಯಸಚೇತಕ ಸಲೀಂ ಅಹಮದ್, ವಿರೋಧ ಪಕ್ಷದ ಮುಖ್ಯ ಸಚೇತಕ ಎನ್.ರವಿಕುಮಾರ್, ಉಮಾಶ್ರೀ, ತೇಜಸ್ವಿನಿಗೌಡ, ತಿಪ್ಪೇಸ್ವಾಮಿ, ಎಸ್.ವಿ. ಸಂಕನೂರ, ತಳವಾರ ಸಾಬಣ್ಣ , ಶಾಂತರಾಮ ಸಿದ್ದಿ, ಹೇಮಲತಾ ನಾಯಕ್, ಡಾ. ತಿಮ್ಮಯ್ಯ ಮಾತನಾಡಿದರು.

ಬಳಿಕ ಮಸೂದೆಗೆ ಅಂಗೀಕಾರ ನೀಡಲಾಯಿತು.

ಮೊಕದ್ದಮೆ ವಾಪಸ್‌ಗೆ ಆಗ್ರಹ

ಕನ್ನಡ ನಾಮಫಲಕ ಅಭಿಯಾನದಲ್ಲಿ ಪಾಲ್ಗೊಂಡ ಹೋರಾಟಗಾರರ ವಿರುದ್ಧ ದಾಖಲಿಸಿರುವ ಪ್ರಕರಣ ವಾಪಸ್ ಪಡೆಯಬೇಕು ಎಂದು ಸದಸ್ಯರು ಪಕ್ಷಭೇದ ಮರೆತು ಆಗ್ರಹಿಸಿದರು.

ಹೋರಾಟ ಮಾಡದೇ ಇದ್ದರೆ ಸರ್ಕಾರವು ಕಾಯ್ದೆಗೆ ತಿದ್ದುಪಡಿ ತರುತ್ತಿರಲಿಲ್ಲ. ಹಾಗಂತ, ಹಿಂಸಾತ್ಮಕ ಹೋರಾಟವನ್ನು ನಾವು ಒಪ್ಪುವುದಿಲ್ಲ. ಕನ್ನಡಕ್ಕಾಗಿ ಹೋರಾಟ ನಡೆಸಿದ ವಿರುದ್ಧ ಗಂಭೀರ ಪ್ರಕರಣಗಳನ್ನು ಹೂಡಿದ್ದೂ ಸರಿಯಲ್ಲ ಎಂದು ಸದಸ್ಯರು ಪ್ರತಿಪಾದಿಸಿದರು.

ಮೊಕದ್ದಮೆ ವಾಪಸ್ ಪಡೆಯುವ ಬಗ್ಗೆ ಮುಖ್ಯಮಂತ್ರಿ ಮತ್ತು ಗೃಹ ಸಚಿವರ ಜತೆ ಚರ್ಚಿಸುವುದಾಗಿ ಸಚಿವ ತಂಗಡಗಿ ಹೇಳಿದರು.

ಬದಲಾಗಿದೆ ಬೆಳಗಾವಿ: ಸತೀಶ ಜಾರಕಿಹೊಳಿ

ಬೆಳಗಾವಿ ಜಿಲ್ಲೆಯ ಕೆಲವು ಭಾಗಗಳು ಮರಾಠಿ ಮಯವಾಗಿವೆ ಎಂಬ ವಿಷಯ ಪರಿಷತ್ತಿನಲ್ಲಿ ಚರ್ಚೆಗೆ ಕಾರಣವಾಯಿತು.

ಮಸೂದೆ ಕುರಿತ ಚರ್ಚೆ ವೇಳೆ ಮಾತನಾಡಿದ ಬಿಜೆಪಿಯ ತಳವಾರ ಸಾಬಣ್ಣ, ಬೆಳಗಾವಿಯ ಗಡಿಭಾಗಗಳಲ್ಲಿ ಮರಾಠಿ ಭಾಷೆ ಬಳಕೆ ಮತ್ತು ನಾಮಫಲಕಗಳು ಇವೆ ಎಂದರು. ಇದಕ್ಕೆ ಧ್ವನಿಗೂಡಿಸಿದ ಕಾಂಗ್ರೆಸ್‌ನ ಉಮಾಶ್ರೀ, ‘ನಿಪ್ಪಾಣಿ ಮರಾಠಿ ಮಯ; ಕನ್ನಡ ಮಾಯ’ ಎಂದು ಹೇಳಿದರು.

ಇದನ್ನು ಅಲ್ಲಗಳೆದ ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ, ‘70ರ ದಶಕದ ಪರಿಸ್ಥಿತಿ ಆಧರಿಸಿ ನೀವು ಹೇಳುತ್ತಿದ್ದೀರಿ. ಬೆಳಗಾವಿ ಬದಲಾಗಿದೆ. ನಿಪ್ಪಾಣಿ, ಖಾನಾಪುರ ಭಾಗದಲ್ಲಿ ಮರಾಠಿ ಮಾತನಾಡುವವರು ಇದ್ದಾರೆ. ಅಲ್ಲಿಯೂ ಶೇ 70ರಷ್ಟು ಕನ್ನಡ ವಾತಾವರಣವೇ ಇದೆ. ಮರಾಠಿ ಭಾಷಿಕರು ಬೇರೆ, ಮರಾಠರು ಬೇರೆ. ಎರಡೂ ಒಂದೇ ಅಲ್ಲ. ಬೆಳಗಾವಿ ಜಿಲ್ಲೆಯ ಜನ ಕನ್ನಡ ಮತ್ತು ಮರಾಠಿ ಭಾಷೆಗಳನ್ನು ಸಂದರ್ಭಕ್ಕೆ ಅನುಗುಣವಾಗಿ ಬಳಸುತ್ತಾರೆ ಎಂದು ಪ್ರತಿಪಾ-ದಿಸಿದರು.

ಕನ್ನಡಿಗರಿಗೆ ಉದ್ಯೋಗ; ಮಾಹಿತಿ ಕಡ್ಡಾಯ

ಕರ್ನಾಟಕದಲ್ಲಿರುವ ಕೈಗಾರಿಕೆಗಳು, ಉದ್ದಿಮೆ ಸಂಸ್ಥೆಗಳಲ್ಲಿ ಉದ್ಯೋಗಿಗಳ ಭಾಷಿಕ ವಿವರವನ್ನು ಡ್ಯಾಷ್‌ಬೋರ್ಡ್‌ನಲ್ಲಿ ಪ್ರಕಟಿಸುವುದನ್ನು ಕಡ್ಡಾಯಗೊಳಿಸಲಾಗುವುದು ಎಂದು ಸಚಿವ ತಂಗಡಗಿ ಹೇಳಿದರು.

ಮುಖ್ಯಸಚೇತಕ ಸಲೀಂ ಅಹಮದ್ ಅವರು ಇಲ್ಲಿ ಉದ್ದಿಮೆ ಆರಂಭಿಸುವವರು ಕನ್ನಡಿಗರಿಗೆ ಉದ್ಯೋಗ ನೀಡುವುದನ್ನು ಖಾತ್ರಿಪಡಿಸಲು ಕ್ರಮ ಆಗಬೇಕಿದೆ ಎಂದರು.

‘ಉದ್ದಿಮೆ ಆರಂಭಿಸಿದವರು ಯಾವ ಯಾವ ಭಾಷೆಯವರಿಗೆ ಉದ್ಯೋಗ ನೀಡಿದ್ದಾರೆ. ಅದರಲ್ಲಿ ಕನ್ನಡಿಗರ ಸಂಖ್ಯೆ ಎಷ್ಟು ಎಂಬುದನ್ನು ಎಲ್ಲರಿಗೂ ಗೊತ್ತಾಗುವ ರೀತಿಯಲ್ಲಿ ಡ್ಯಾಷ್ ಬೋರ್ಡ್‌ನಲ್ಲಿ ಪ್ರಕಟಿಸುವಂತೆ ಮಾಡುತ್ತೇವೆ’ ಎಂದು ಹೇಳಿದರು.

ಅನುದಾನ ಸಿಗದಿರಲು ಸರ್ಕಾರದ ನಿರ್ಲಕ್ಷ್ಯವೇ ಕಾರಣ: ಬೊಮ್ಮಾಯಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭದ್ರಾ ಮೇಲ್ದಂಡೆ ಯೋಜನೆ ಸೇರಿ ಕೆಲವು ಯೋಜನೆಗಳಲ್ಲಿ ಕೇಂದ್ರದಿಂದ ಹಣ ಬರದೇ ಇರಲು ರಾಜ್ಯ ಸರ್ಕಾರದ ನಿರ್ಲಕ್ಷ್ಯವೇ ಕಾರಣ ಎಂದು ಬಿಜೆಪಿಯ ಬಸವರಾಜ ಬೊಮ್ಮಾಯಿ ವಿಧಾನ ಸಭೆಯಲ್ಲಿ ಮಂಗಳವಾರ ದೂರಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ರಾಜ್ಯಪಾಲರ ಭಾಷಣದ ವಂದನಾ ನಿರ್ಣಯಕ್ಕೆ ಉತ್ತರ ನೀಡುವಾಗ ಮಧ್ಯ ಪ್ರವೇಶಿಸಿದ ಬೊಮ್ಮಾಯಿ, ‘ಕೇಂದ್ರದಿಂದ ಹಣ ತೆಗೆದುಕೊಳ್ಳುವುದು ಹೇಗೆ ಎನ್ನುವುದೇ ನಿಮಗೆ ಗೊತ್ತಿಲ್ಲ. ರಾಜಕೀಯ ಲಾಭಕ್ಕೆ ಕೇಂದ್ರದ ವಿರುದ್ಧ ಆರೋಪ ಮಾಡಿ, ರಾಜ್ಯದ ಜನತೆಗೆ ಪಂಗನಾಮ ಹಾಕುತ್ತಿದ್ದೀರಿ’ ಎಂದರು.

‘ಭದ್ರಾ ಮೇಲ್ದಂಡೆ ಯೋಜನೆಗಾಗಿ ಕೇಂದ್ರ ಸರ್ಕಾರ ಕಳೆದ ವರ್ಷದ ಬಜೆಟ್‌ನಲ್ಲಿ ₹5,300 ಕೋಟಿ ಇಟ್ಟಿದೆ. ಆದರೆ, ಅದನ್ನು ಪಡೆಯಲು ನಿಗದಿತ (ಎನ್) ಅರ್ಜಿ ಫಾರಂ ಸಲ್ಲಿಸಬೇಕಿತ್ತು. ಆ ವಿಚಾರ ನಿಮಗೆ ಗೊತ್ತಾ? ನೀರಾವರಿ ಇಲಾಖೆಯ ಅಧಿಕಾರಿಗಳು ಇಲ್ಲಿಯವರೆಗೆ ಅಂತಹದ್ದೊಂದು ಅರ್ಜಿ ಸಲ್ಲಿಸಿದ್ದಾರಾ? ನೀವು ಅಧಿಕಾರಕ್ಕೆ ಬಂದು 9 ತಿಂಗಳು ಆಯಿತು. ಕೇವಲ ದೂರುವುದನ್ನು ಬಿಟ್ಟು ಇನ್ನೇನು ಮಾಡಿದ್ದೀರಿ. ಟೀಕೆ ಮಾಡಿದರೆ ಅಥವಾ ಕೇಂದ್ರ ಸಚಿವರು ಭೇಟಿ ಮಾಡಿ ಮನವಿ ಮಾಡಿದ ತಕ್ಷಣ ಹಣ ಬರುವುದಿಲ್ಲ. ಭದ್ರಾ ಮೇಲ್ದಂಡೆಗೆ ಹಣ ಬಂದಿಲ್ಲವಾದರೆ ಅದಕ್ಕೆ ನೀವೇ ಕಾರಣ’ ಎಂದು ಬೊಮ್ಮಾಯಿ ಹೇಳಿದರು.

‘ಬೆಂಗಳೂರಿನ ಪೆರಿಫೆರಲ್ ರಸ್ತೆಗೆ ₹6,000 ಕೋಟಿ ಕೇಂದ್ರದ ಅನುದಾನ ಲಭ್ಯ ಇದೆ. ಆದರೆ ಯೋಜನೆಗೆ ಭೂಸ್ವಾಧೀನವೇ ಆಗಿಲ್ಲ. ಭೂಸ್ವಾಧೀನದ ಸಮಸ್ಯೆ ಕಾರಣ ಯಾರೂ ಟೆಂಡರ್‌ನಲ್ಲಿ ಭಾಗವಹಿಸಲು ಬರುತ್ತಿಲ್ಲ. ಆದ್ದರಿಂದ ಆ ಹಣ ಹಾಗೇ ಉಳಿದಿದೆ. ಈಗ ಡಿ.ಕೆ. ಶಿವಕುಮಾರ್ ಅವರು ಮತ್ತೊಮ್ಮೆ ಟೆಂಡರ್ ಕರೆಯುವುದಾಗಿ ಹೇಳಿದ್ದಾರೆ. ಯೋಜನೆ ಆರಂಭವಾದ ತಕ್ಷಣವೇ ಕೇಂದ್ರದಿಂದ ಅನುದಾನ ಬರುತ್ತದೆ’ ಎಂದು ಬೊಮ್ಮಾಯಿ ತಿಳಿಸಿದರು.

ಶಿಕ್ಷಕರ ಕ್ಷೇತ್ರ: ಪುಟ್ಟಣ್ಣ ಗೆಲುವು

ಒಂದನೇ ಪುಟದಿಂದ...

ಹಿಂದೆ ಇದೇ ಕ್ಷೇತ್ರದಿಂದ ಬಿಜೆಪಿಯಿಂದ ಆಯ್ಕೆಯಾಗಿದ್ದ ಪುಟ್ಟಣ್ಣ ಅವರು ವಿಧಾನಸಭೆ ಚುನಾವಣೆಯಲ್ಲಿ ಸ್ಪರ್ಧಿಸುವ ಉದ್ದೇಶದಿಂದ 2022ರ ಮಾರ್ಚ್‌ನಲ್ಲಿ ರಾಜೀನಾಮೆ ನೀಡಿದ್ದರು. ರಾಜಾಜಿನಗರ ಕ್ಷೇತ್ರದಲ್ಲಿ ಕಾಂಗ್ರೆಸ್‌ನಿಂದ ಸ್ಪರ್ಧಿಸಿ ಸೋಲು ಕಂಡಿದ್ದರು. ಪುಟ್ಟಣ್ಣ ರಾಜೀನಾಮೆಯಿಂದ ಖಾಲಿಯಾಗಿದ್ದ ಬೆಂಗಳೂರು ಶಿಕ್ಷಕರ ವಿಧಾನ ಪರಿಷತ್ ಕ್ಷೇತ್ರಕ್ಕೆ ಫೆ.16ರಂದು ಉಪ ಚುನಾವಣೆ ನಡೆದಿತ್ತು. ಕಾಂಗ್ರೆಸ್‌ನಿಂದ ಸ್ಪರ್ಧಿಸಿದ್ದ ಪುಟ್ಟಣ್ಣ ಇದೀಗ ಮತ್ತೆ ಗೆಲುವು ಸಾಧಿಸಿದ್ದು, ಈ ಸ್ಥಾನದ ಅವಧಿ 2026 ನವೆಂಬರ್ 11ರವರೆಗಿದೆ.

2002ರಿಂದ ನಿರಂತರವಾಗಿ ಜೆಡಿಎಸ್‌ನಿಂದ ಮೂರು ಬಾರಿ, ಬಿಜೆಪಿಯಿಂದ ಒಂದು ಬಾರಿ ಹಾಗೂ ಈಗ ಉಪ ಚುನಾವಣೆಯಲ್ಲಿ ಕಾಂಗ್ರೆಸ್‌ನಿಂದ ಪುಟ್ಟಣ್ಣ ಗೆದ್ದಿದ್ದಾರೆ.

ಪ್ರೀಮಿಯಂ ಎಫ್‌ಎಆರ್: ಮಸೂದೆಗೆ ಒಪ್ಪಿಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಿವೇಶನ ಮಾರ್ಗಸೂಚಿ ದರದ ಶೇ 40ರಷ್ಟು ಶುಲ್ಕವನ್ನು ಸ್ಥಳೀಯ ಯೋಜನಾ ಪ್ರಾಧಿಕಾರ ಅಥವಾ ನಗರ ಸ್ಥಳೀಯ ಸಂಸ್ಥೆಗಳಿಗೆ ಪಾವತಿಸುವ ಮೂಲಕ ‘ಪ್ರೀಮಿಯಂ ನೆಲ ವಿಸ್ತೀರ್ಣ ಅನುಪಾತ’ವನ್ನು (ಪ್ರೀಮಿಯಂ ಎಫ್‌ಎಆರ್) ಖರೀದಿ ಮತ್ತು ಮಾರಾಟಕ್ಕೆ ಅವಕಾಶ ಕಲ್ಪಿಸುವ ಮಸೂದೆಗೆ ವಿಧಾನಸಭೆ ಒಪ್ಪಿಗೆ ಸೂಚಿಸಿದೆ.

ಹೀಗೆ ಲಭ್ಯವಾಗುವ ಬಹುಮಹಡಿ ಕಟ್ಟಡ-ಗಳಲ್ಲಿ ಹೆಚ್ಚುವರಿ ಅಂತಸ್ತುಗಳನ್ನು ನಿರ್ಮಿಸಲು ಹಾಗೂ ಎಫ್‌ಎಆರ್‌ಗಳನ್ನು ಬೇರೆಯವರಿಗೆ ಮಾರಾಟ ಮಾಡುವ ಅವಕಾಶ ಸಿಗಲಿದೆ. ಇದಕ್ಕೆ ಅನುವು ಮಾಡಿಕೊಡಲು, ಸರ್ಕಾರ ಮಂಡಿಸಿದ ‘ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ (ತಿದ್ದುಪಡಿ) ಮಸೂದೆ-2024’ಕ್ಕೆ ವಿಪಕ್ಷ ವಿರೋಧದ ಮಧ್ಯೆಯೇ ಅನುಮೋದನೆ ನೀಡಲಾಯಿತು.

ರಾಮನಗರದಲ್ಲಿ ನಡೆಯುತ್ತಿರುವ ವಕೀಲರ ಪ್ರತಿಭಟನೆಗೆ ಸಂಬಂಧಿಸಿದಂತೆ ಬಿಜೆಪಿ ಮತ್ತು ಜೆಡಿಎಸ್ ಸದಸ್ಯರು ಸಭಾಧ್ಯಕ್ಷರ ಪೀಠದ ಎದುರು ಪ್ರತಿಭಟನೆ ನಡೆಸುತ್ತಿರುವಾಗಲೇ, ನಗರಾಭಿವೃದ್ಧಿ ಸಚಿವ ಬೈರತಿ ಸುರೇಶ್ ಪರವಾಗಿ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಈ ಮಸೂದೆ ಮಂಡಿಸಿದರು.

ಕಟ್ಟಡ ನಿರ್ಮಿಸುವವರು ಪ್ರೀಮಿಯಂ ಎಫ್‌ಎ-ಆರ್‌ಗಳನ್ನು ಖರೀದಿಸಿ, ಕಟ್ಟಡದ ನಿವೇಶನದ ಅಳತೆಗೆ ನಿಗದಿಪಡಿಸಿದ ಎಫ್‌ಎಆರ್‌ಗಿಂತ ಹೆಚ್ಚುವರಿ ಅಂತಸ್ತುಗಳನ್ನು ನಿರ್ಮಿಸಿಕೊಳ್ಳ-ಬಹುದು. ಕಟ್ಟಡಗಳ ನಿರ್ಮಾಣಕ್ಕೆ ಅನುಮತಿ ನೀಡುವ ಸಕ್ಷಮ ಪ್ರಾಧಿಕಾರದ ಅನುಮೋದಿತ ಮಾಸ್ಟರ್ ಪ್ಲಾನ್‌ನ ವಲಯ ನಿಯಮಗಳ ಅನ್ವಯವೇ ಪ್ರೀಮಿಯಂ ಎಫ್‌ಎಆರ್‌ಗೆ ಅನುಮತಿ ನೀಡಬೇಕೆಂದು ಮಸೂದೆ ಪ್ರಸ್ತಾವಿಸಿದೆ.

ಪ್ರೀಮಿಯಂ ಎಫ್‌ಎಆರ್ ಮಾರಾಟದಿಂದ ಸಂಗ್ರಹವಾಗುವ ಶುಲ್ಕವನ್ನು ಭೂಸ್ವಾಧೀನ ಮತ್ತು ಮೂಲಸೌಕರ್ಯ ಅಭಿವೃದ್ಧಿ ಕಾಮಗಾರಿಗಳಿಗೆ ಬಳಸಿಕೊಳ್ಳಲು ಅವಕಾಶ ಮಾಡಿಕೊಡಲಾಗಿದೆ. ಟಿಡಿಆರ್ (ಅಭಿವೃದ್ಧಿ ಹಕ್ಕು ವರ್ಗಾವಣೆ) ಬಳಸಿ ನಿರ್ಮಿಸಿರುವ ಕಟ್ಟಡದ ಎಫ್‌ಎಆರ್ ಮಿತಿಯು ಶೇ 0.6ರಷ್ಟು ಅಥವಾ ಶೇ 60ರಷ್ಟು ಮೀರುವಂತಿಲ್ಲ. ಪ್ರೀಮಿಯಂ ಎಫ್‌ಎಆರ್ ಮಿತಿಯನ್ನು ಶೇ 4ಕ್ಕೆ ನಿಗದಿಪಡಿಸಲಾಗಿದೆ.

ಪರಿಶಿಷ್ಟರ ಹಣ ‘ಗ್ಯಾರಂಟಿ’ಗೆ ಪ್ರತ್ಯೇಕ ತೆಗೆದಿರಿಸಲು ಸಲಹೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ (ಎಸ್‌ಸಿಎಸ್‌ಪಿ–ಟಿಎಸ್‌ಪಿ) ಮೀಸಲಿರಿಸಿದ ಅನುದಾನವನ್ನು ಗ್ಯಾರಂಟಿ ಯೋಜನೆಗಳಿಗೆ ಬಳಸುವುದಾದರೆ, ಅದನ್ನು ಈಗಲೇ ಪ್ರತ್ಯೇಕವಾಗಿ ತೆಗೆದಿಡಿ. ಒಂದು ಕೈಯಲ್ಲಿ ಕೊಟ್ಟು ಮತ್ತೊಂದು ಕೈಯಲ್ಲಿ ವಾಪಸ್ ಪಡೆಯುವುದು ಬೇಡ ಎಂದು ವಿಧಾನಪರಿಷತ್ತಿನ ಕಾಂಗ್ರೆಸ್ ಸದಸ್ಯ ಸುಧಾಮ್ ದಾಸ್ ಸಲಹೆ ನೀಡಿದರು.

ವಿಧಾನಪರಿಷತ್ತಿನಲ್ಲಿ ಬಜೆಟ್ ಕುರಿತ ಚರ್ಚೆಯಲ್ಲಿ ಮಂಗಳವಾರ ಪಾಲ್ಗೊಂಡು ಮಾತನಾಡಿದ ಅವರು, ಎಸ್‌ಸಿಎಸ್‌ಪಿ–ಟಿಎಸ್‌ಪಿಯಡಿ ಈ ಸಾಲಿನಲ್ಲಿ ₹39,121 ಕೋಟಿ ಅನುದಾನ ಒದಗಿಸಲಾಗಿದೆ. ಅಗತ್ಯವಾದರೆ ಗ್ಯಾರಂಟಿ ಯೋಜನೆಗಳಿಗೆ ಈ ಮೊತ್ತದಲ್ಲಿನ ಪಾಲನ್ನು ಬಳಸಿಕೊ-ಳ್ಳಲಾಗುವುದು ಎಂದು ಬಜೆಟ್‌ನಲ್ಲಿ ಪ್ರಸ್ತಾವಿಸಲಾಗಿದೆ. ಹಾಗೊಂದು ವೇಳೆ ಬಳಸುವುದಾದರೆ, ಪರಿಶಿಷ್ಟ ಸಮುದಾಯದವರಿಗೆ ಗ್ಯಾರಂಟಿ ಯೋಜನೆಗಳನ್ನು ನೀಡಲು ಬೇಕಾದ ಅನುದಾನವನ್ನು ಈಗಲೇ ಪ್ರತ್ಯೇಕವಾಗಿ ತೆಗೆದಿಡಿ. ಈಗ ಪೂರ್ಣ ಮೊತ್ತಕ್ಕೆ ಅನುಮೋದನೆ ಪಡೆದು, ಮತ್ತೆ ಅದರಲ್ಲಿ ತೆಗೆದು-ಕೊಳ್ಳುವುದು ಬೇಡ ಎಂದು ಅವರು ಹೇಳಿದರು.

₹39,121 ಕೋಟಿ ಮೊತ್ತವನ್ನು ಮೀಸಲಿದ್ದು, ಅದರಲ್ಲೇ ಗ್ಯಾರಂಟಿಗೆ ಬಳಸಿದ ಬಳಿಕ ಪರಿಶಿಷ್ಟ ಜಾತಿ–ಪಂಗಡ-ದವರಿಗೆ ನೀಡಿದ್ದೇವೆ ಎಂದು ಹೇಳುತ್ತಾ ಹೋಗುವುದು ಸರಿಯಲ್ಲ. ಕೊಟ್ಟ ಅನುದಾನವನ್ನು ಅನ್ಯ ಉದ್ದೇಶಕ್ಕೆ ಬಳಸಿದರೆ ಸಮುದಾಯದ ಅಸಮಾಧಾನವನ್ನು ಎದುರಿಸಬೇಕಾಗುತ್ತದೆ ಎಂದರು.

ಗ್ಯಾರಂಟಿಗಳಿಗೆ ಎತ್ತಿಟ್ಟ ಮೊತ್ತ ಕಳೆದು ಎಸ್‌ಸಿಎಸ್‌ಪಿ–ಟಿಎಸ್‌ಪಿಯಡಿ ಸಿಗಬಹುದಾದ ಮೊತ್ತವನ್ನು ಈ ಸಮುದಾಯದ ಏಳಿಗೆಗಾಗಿಯೇ ಸಮರ್ಪಕವಾಗಿ ಬಳಸಬೇಕು. ಅದಕ್ಕಾಗಿ, ಸಮರ್ಥ ಅಧಿಕಾರಿಗಳನ್ನು ಇಲಾಖೆಗೆ ನಿಯೋಜಿಸಬೇಕು ಎಂದು ಹೇಳಿದರು.

ಬಜೆಟ್‌ನ ₹3.71 ಲಕ್ಷ ಕೋಟಿಯಲ್ಲಿ ಗ್ಯಾರಂಟಿಗೆ ನೀಡಿರುವುದು ₹52 ಸಾವಿರ ಕೋಟಿ ಮಾತ್ರ. ಅಂದರೆ ಬಜೆಟ್‌ನ ಶೇ 13ರಷ್ಟು. ಬಿಜೆಪಿ ಸರ್ಕಾರದ ಅವಧಿಯಲ್ಲಿ ಶೇ 40ರಷ್ಟು ಕಮಿಷನ್‌ಗೆ ಹೋಗುತ್ತಿತ್ತು. ಆ ಮೊತ್ತಕ್ಕೆ ಹೋಲಿಸಿದರೆ, ಗ್ಯಾರಂಟಿಗೆ ಬಳಕೆಯಾಗಿರುವುದು ಅತ್ಯಲ್ಪ ಎಂದು ಅವರು ತಿಳಿಸಿದರು.

‘ಭ್ರಷ್ಟ ಅಧಿಕಾರಿಗಳು ಬೇಡ’


ಸುಧಾಮ್ ದಾಸ್

ಬಿಜೆಪಿ ಸರ್ಕಾರದ ಅವಧಿಯಲ್ಲಿ ಶೇ 40ರಷ್ಟು ಕಮಿಷನ್ ನಡೆಯುತ್ತಿದೆ ಎಂಬುದನ್ನು ನಮ್ಮ ಪಕ್ಷ ಪ್ರಧಾನವಾಗಿ ಪ್ರತಿಪಾದಿಸಿತ್ತು. ಆ ಹಗರಣದಲ್ಲಿ ಪ್ರತ್ಯಕ್ಷ, ಪರೋಕ್ಷವಾಗಿ ಪಾಲ್ಗೊಂಡಿದ್ದ ಅಧಿಕಾರಿಗಳು ಈಗಲೂ ವಿವಿಧ ಇಲಾಖೆಗಳ ಆಯಕಟ್ಟಿನ ಹುದ್ದೆಗಳಲ್ಲಿ ಇದ್ದಾರೆ. ಅಂತಹ ಅಧಿಕಾರಿಗಳನ್ನು ಮೂಲೆಗೆ ಸರಿಸಿ, ಶ್ರದ್ಧೆ ಮತ್ತು ಪ್ರಾಮಾಣಿಕತೆಯಿಂದ ಕೆಲಸ ಮಾಡುವವರಿಗೆ ಅಧಿಕಾರ ಕೊಡಬೇಕು ಎಂದು ಹೇಳಿದರು.

ಮಾರ್ಚ್ 1ರಿಂದ ದ್ವಿತೀಯ ಪಿಯು, 22ರಿಂದ ಎಸ್‌ಎಸ್‌ಎಲ್‌ಸಿ ಪರೀಕ್ಷೆ ಆರಂಭ

3 ಪರೀಕ್ಷೆ: ವಿದ್ಯಾರ್ಥಿಗಳಿಗೆ ಆಯ್ಕೆ ಅವಕಾಶ

ಪ್ರಜಾವಾಣಿ ವಾರ್ತೆ


ಮಧು ಬಂಗಾರಪ್ಪ

ಬೆಂಗಳೂರು: 6.98 ಲಕ್ಷ ವಿದ್ಯಾರ್ಥಿಗಳು ದ್ವಿತೀಯ ಪಿಯು ಹಾಗೂ 8.96 ಲಕ್ಷ ವಿದ್ಯಾರ್ಥಿಗಳು ಎಸ್‌ಎಸ್‌ಎಲ್‌ಸಿ ಪರೀಕ್ಷೆ ಬರೆಯಲಿದ್ದಾರೆ.

ಮಾರ್ಚ್ 1ರಿಂದ ದ್ವಿತೀಯ ಪಿಯು, 22ರಿಂದ ಮೊದಲ ಎಸ್‌ಎಸ್‌ಎಲ್‌ಸಿ ಪರೀಕ್ಷೆಗಳು ಆರಂಭವಾಗಲಿವೆ. ಇದೇ ಮೊದಲ ಬಾರಿ ಮೂರು ಪರೀಕ್ಷಾ ಪದ್ಧತಿಯನ್ನು ಪರಿಚಯಿಸಲಾಗಿದೆ. ಅನುತ್ತೀರ್ಣರಾದ ವಿದ್ಯಾರ್ಥಿಗಳ ಜತೆಗೆ, ಫಲಿತಾಂಶ ತೃಪ್ತಿಕರವಾಗಿ-ಲ್ಲದ ವಿದ್ಯಾರ್ಥಿಗಳೂ ಉಳಿದ ಎರಡು ಪರೀಕ್ಷೆಗಳಿಗೆ ಹಾಜರಾಗಬಹುದು ಎಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವ ಮಧು ಬಂಗಾರಪ್ಪ ಮಂಗಳವಾರ ಪತ್ರಿಕಾ ಗೋಷ್ಠಿಯಲ್ಲಿ ಮಾಹಿತಿ ನೀಡಿದರು.

ಮೊದಲ ಪರೀಕ್ಷೆ ಬರೆಯಲು ಸಾಧ್ಯವಾಗದವರು ಎರಡನೇ ಅಥವಾ ಮೂರನೇ ಪರೀಕ್ಷೆ ಬರೆಯಬಹುದು. ಮೊದಲ ಪರೀಕ್ಷೆಯ ಸಮಯದಲ್ಲೇ ನೋಂದಣಿ ಮಾಡಿಕೊಂಡಿರುವ ವಿದ್ಯಾರ್ಥಿಗಳಿಗೆ ಮಾತ್ರ ಈ ಅವಕಾಶವಿದೆ. ಮೂರು ಪರೀಕ್ಷೆಗಳಲ್ಲಿ ಯಾವುದರಲ್ಲಿ ಹೆಚ್ಚು ಅಂಕಗಳು ಬಂದಿರುತ್ತವೆಯೋ, ಅದೇ ಅಂಕಪಟ್ಟಿ ಪಡೆಯಬಹುದು. ಆಯಾ ಪರೀಕ್ಷೆಗಳು ಮುಕ್ತಾಯವಾದ ತಕ್ಷಣ ಅಂಕಪಟ್ಟಿ ಸಿದ್ಧಪಡಿಸಲಾಗುತ್ತದೆ. ವಿದ್ಯಾರ್ಥಿಗಳು ಮೂರರಲ್ಲಿ ತಮಗೆ ಇಷ್ಟವಾದ ಅತ್ಯುತ್ತಮ ಅಂಕಪಟ್ಟಿ ಉಳಿಸಿಕೊಳ್ಳಬಹುದು ಎಂದು ಹೇಳಿದರು.

ಪಿಯು ಬಾಲಕಿಯರು, ಎಸ್‌ಎಸ್‌ಎಲ್‌ಸಿ ಬಾಲಕರೇ ಹೆಚ್ಚು: ದ್ವಿತೀಯ ಪಿಯು ಪರೀಕ್ಷೆಗೆ ಹೆಸರು ನೋಂದಾಯಿಸಿದವರಲ್ಲಿ 3.67 ಲಕ್ಷ ವಿದ್ಯಾರ್ಥಿನಿಯರು, 3.30 ಲಕ್ಷ ವಿದ್ಯಾರ್ಥಿಗಳು ಇದ್ದಾರೆ. ಎಸ್‌ಎಸ್‌ಎಲ್‌ಸಿಯಲ್ಲಿ 4.58 ಲಕ್ಷ ವಿದ್ಯಾರ್ಥಿಗಳು, 4.37 ಲಕ್ಷ ವಿದ್ಯಾರ್ಥಿನಿಯರು ಇದ್ದಾರೆ.

ಏಪ್ರಿಲ್, ಮೇ ಗೆ ಉಳಿದ ಪರೀಕ್ಷೆಗಳು: ಉಳಿದ ಎರಡು ಪರೀಕ್ಷೆಗಳನ್ನು ಏಪ್ರಿಲ್ ಹಾಗೂ ಮೇನಲ್ಲಿ ನಡೆಸಲಾಗುವುದು. ಪ್ರತಿ ಪರೀಕ್ಷೆಯು ಪೂರ್ಣಗೊಂಡ 15ರಿಂದ 20 ದಿನಗಳ ಒಳಗೆ ಫಲಿತಾಂಶ ನೀಡಿ, ಅಂಕಪಟ್ಟಿ ಲಭ್ಯವಾಗುವಂತೆ ವ್ಯವಸ್ಥೆ ಮಾಡಲಾಗುವುದು ಎಂದರು.

558 ಪರೀಕ್ಷಾ ಕೇಂದ್ರಗಳು ರದ್ದು

ನಕಲು ತಡೆಯುವ ಉದ್ದೇಶದಿಂದ 558 ಎಸ್‌ಎಸ್‌ಎಲ್‌ಸಿ ಪರೀಕ್ಷಾ ಕೇಂದ್ರಗಳನ್ನು ರದ್ದು ಮಾಡಲಾಗಿದೆ. 2022–23ನೇ ಸಾಲಿನ ಪರೀಕ್ಷೆಯಲ್ಲಿ 3,305 ಕೇಂದ್ರಗಳಿದ್ದವು. ಈ ಬಾರಿ 2,747 ಕೇಂದ್ರಗಳಿವೆ. ಪರೀಕ್ಷೆಗೆ ಹಾಜರಾಗುವ ಮಕ್ಕಳು ತಮ್ಮ ಗ್ರಾಮದಿಂದ 10 ಕಿ.ಮೀ ಮೀರದಂತಹ ಕೇಂದ್ರಗಳಲ್ಲಿ ಪರೀಕ್ಷೆಗೆ ಅವಕಾಶ ನೀಡಲಾಗಿದೆ. ಹೊಸ ಪರೀಕ್ಷಾ ಕೇಂದ್ರಗಳಿಗೆ ತೆರಳುವ ಮಕ್ಕಳಿಗೆ ಬಸ್ ಮತ್ತಿತರ ಸೌಕರ್ಯಗಳು ಇಲ್ಲದಿದ್ದರೆ, ಮಕ್ಕಳನ್ನು ನಿಗದಿತ ಕೇಂದ್ರಗಳಿಗೆ ಸುರಕ್ಷಿತವಾಗಿ, ಸಮಯಕ್ಕೆ ಸರಿಯಾಗಿ ಕರೆತರುವ ಹೊಣೆ-ಗಾರಿಕೆಯನ್ನು ಆಯಾ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ನೀಡಲಾಗಿದೆ.

ನಾಳೆಯಿಂದಲೇ ಮಕ್ಕಳಿಗೆ ರಾಗಿ ಮಾಲ್ಟ್

ರಾಜ್ಯದ 60 ಲಕ್ಷ ಮಕ್ಕಳಿಗೆ ಫೆ.22ರಿಂದ ಹಾಲಿನ ಜತೆಗೆ ರಾಗಿ ಮಾಲ್ಟ್ ನೀಡಲಾಗುವುದು ಎಂದು ಮಧು ಬಂಗಾರಪ್ಪ ಹೇಳಿದರು.

1ರಿಂದ 10ನೇ ತರಗತಿಯವರೆಗಿನ ಸರ್ಕಾರಿ ಹಾಗೂ ಅನುದಾನಿತ ಶಾಲೆಯ ಎಲ್ಲ ಮಕ್ಕಳಿಗೂ ವಾರದಲ್ಲಿ ಮೂರು ದಿನ ನೀಡಲಾಗುವುದು. ಹಾಲಿನ ಜತೆಗೇ ಮಿಶ್ರಣ ಮಾಡಿಕೊಡಲಾಗುವುದು. ವಾರದಲ್ಲಿ ಎರಡು ದಿನ ಮೊಟ್ಟೆ, ಐದು ದಿನ ಹಾಲನ್ನೂ ಪೂರೈಸಲಾಗುವುದು. ಶಾಲೆಗಳಿಗೆ ರಾಗಿ ಮಾಲ್ಟ್ ಪೂರೈಸುವ ಹೊಣೆಯನ್ನು ಹಾಲು ಒಕ್ಕೂಟಗಳಿಗೆ ವಹಿಸಲಾಗಿದೆ ಎಂದರು.

ಎಂಎಸ್‌ಪಿ ಕಾನೂನು ತರಲು ರೈತ ಸಂಘಗಳ ಒತ್ತಾಯ • 'ದೆಹಲಿ ಚಲೋ'ಗೆ ಬದ್ಧ

ಸಂಸತ್ತಿನ ವಿಶೇಷ ಅಧಿವೇಶನಕ್ಕೆ ಆಗ್ರಹ

ಚಂಡೀಗಢ/ನವದೆಹಲಿ (ಪಿಟಿಐ): ಸ್ವಾಮಿನಾಥನ್ ಆಯೋಗದ ವರದಿ ಜಾರಿ ಸೇರಿ ತಮ್ಮ ವಿವಿಧ ಬೇಡಿಕೆಗಳನ್ನು ಈಡೇರಿಸಿದರಷ್ಟೇ ರೈತರಿಗೆ ನ್ಯಾಯ ಸಿಕ್ಕಂತಾಗುತ್ತದೆ ಎಂದಿರುವ ರೈತ ಸಂಘಗಳು, ಕೃಷಿ ಬೆಳೆಗಳಿಗೆ ಕನಿಷ್ಠ ಬೆಂಬಲ ಬೆಲೆ (ಎಂಎಸ್‌ಪಿ) ಕುರಿತು ಕಾನೂನು ತರಲು ಕೇಂದ್ರ ಸರ್ಕಾರ ಒಂದು ದಿನದ ಮಟ್ಟಿಗೆ ಸಂಸತ್ತಿನ ವಿಶೇಷ ಅಧಿವೇಶನ ಕರೆಯಬೇಕೆಂದು ಆಗ್ರಹಿಸಿವೆ.

ಕೃಷಿ ಸಾಲ ಮನ್ನಾ ಸೇರಿದಂತೆ ರೈತರ ಇತರ ಪ್ರಮುಖ ಬೇಡಿಕೆಗಳನ್ನು ಕೇಂದ್ರ ಸರ್ಕಾರ ಒಪ್ಪಿ, ಪರಿಹಾರ ಒದಗಿಸಬೇಕು ಎಂದು ರೈತ ಸಂಘಟನೆಗಳು ಒತ್ತಾಯಿಸಿವೆ. ಅಲ್ಲದೆ, 'ದೆಹಲಿ ಚಲೋ' ಮೆರವಣಿಗೆ ಕುರಿತು 'ನಮ್ಮ ನಿಲುವಿಗೆ ಬದ್ಧರಾಗಿದ್ದೇವೆ' ಎಂದೂ ಹೇಳಿವೆ.

ದ್ವಿದಳ ಧಾನ್ಯಗಳು, ಮೆಕ್ಕೆಜೋಳ ಮತ್ತು ಹತ್ತಿಯನ್ನು ಕನಿಷ್ಠ ಬೆಂಬಲ ಬೆಲೆ ನೀಡಿ ಸರ್ಕಾರದ ಸಂಸ್ಥೆಗಳ ಮೂಲಕ ಐದು ವರ್ಷಗಳವರೆಗೆ ಖರೀದಿಸುವ ಕೇಂದ್ರ ಸರ್ಕಾರದ ಪ್ರಸ್ತಾವನೆಯು ರೈತರ ಪರವಾಗಿಲ್ಲ ಎಂದು ರೈತ ಮುಖಂಡರು ಸೋಮವಾರವಷ್ಟೇ ತಿರಸ್ಕರಿಸಿ, 'ದೆಹಲಿ ಚಲೋ' ಮುಂದುವರಿಸುವುದಾಗಿ ಘೋಷಿಸಿದ್ದರು.

ಶಂಭು ಗಡಿಯಲ್ಲಿ ಸುದ್ದಿಗಾರರ ಜತೆ ಮಾತನಾಡಿದ ಕಿಸಾನ್ ಮಜ್ದೂರ್ ಮೋರ್ಚಾದ ನಾಯಕ ಸರವಣ್ ಸಿಂಗ್ ಪಂಧೇರ್, ಪ್ರತಿಭಟನಾನಿರತ ರೈತರ ಪ್ರಮುಖ ಬೇಡಿಕೆಯಾದ ಕೃಷಿ ಬೆಳೆಗಳಿಗೆ ಕನಿಷ್ಠ ಬೆಂಬಲ ಬೆಲೆ (ಎಂಎಸ್‌ಪಿ) ಕುರಿತು ಕಾನೂನು ತರುವ ಇಚ್ಛಾಶಕ್ತಿ ಪ್ರಧಾನಿ ಅವರಿಗೆ ಇದ್ದರೆ, ಅವರು ಒಂದು ದಿನದ ಮಟ್ಟಿಗೆ ಸಂಸತ್ತಿನ ವಿಶೇಷ ಅಧಿವೇಶನ ಕರೆಯಬೇಕು' ಎಂದು ಒತ್ತಾಯಿಸಿದರು.

'ಕೇಂದ್ರ ಸರ್ಕಾರ ಎಂಎಸ್‌ಪಿ ಕಾನೂನು ತರುವುದಾದರೆ ಅದರ ಪರ ಮತ ಹಾಕುವ ಕುರಿತು ಕಾಂಗ್ರೆಸ್, ಶಿರೋಮಣಿ ಅಕಾಲಿ ದಳ, ತೃಣಮೂಲ ಕಾಂಗ್ರೆಸ್ ಸೇರಿ ಎಲ್ಲ ವಿರೋಧ ಪಕ್ಷಗಳು ತಮ್ಮ ನಿಲುವು ಸ್ಪಷ್ಟಪಡಿಸಬೇಕು' ಎಂದು ಅವರು ಆಗ್ರಹಿಸಿದರು.

ಸರ್ಕಾರಿ ವರದಿಗಳ ಪ್ರಕಾರ ರೈತರ ಒಟ್ಟು ಸಾಲ ₹ 18.5 ಲಕ್ಷ ಕೋಟಿ ಆಗಿದ್ದು, ಪ್ರಧಾನಿ ಅವರು ಕೃಷಿ ಸಾಲ ಮನ್ನಾ ಮಾಡುವ ಕುರಿತು ಘೋಷಣೆ ಮಾಡಬೇಕು ಎಂದು ಮನವಿ ಮಾಡಿದರು.

'ಮೋದಿ ಅವರು ಬಲಿಷ್ಠ ಪ್ರಧಾನಿ ಎಂದು ಬಿಜೆಪಿಯವರು ಹೇಳುತ್ತಾರೆ. ಅದರಂತೆ ಪ್ರಧಾನಿ ಅವರು 80 ಕೋಟಿ ರೈತರು ಮತ್ತು ರೈತ ಕಾರ್ಮಿಕರ ಸಾಲ ಮನ್ನಾ ಮಾಡುವ ಘೋಷಣೆ ಮಾಡಿ, ತಾನು ನೈಜವಾಗಿಯೂ ಬಲಿಷ್ಠ ಎಂಬುದನ್ನು ಸಾಬೀತು ಮಾಡಲಿ' ಎಂದು ಅವರು ಹೇಳಿದರು.

ಮಾನ್ ವಿರುದ್ಧ ಬಿಜೆಪಿ ಕಿಡಿ: ವಿವಿಧ ಬೇಡಿಕೆಗಳಿಗೆ ಸಂಬಂಧಿಸಿದಂತೆ ಸೂಕ್ತ ಪರಿಹಾರ ಕಂಡುಕೊಳ್ಳುತ್ತಿದ್ದ ರೈತ ಮುಖಂಡರು ಮತ್ತು ಕೇಂದ್ರ ಸಚಿವರ ಪ್ರಾಮಾಣಿಕ ಪ್ರಯತ್ನಗಳಿಗೆ ಪಂಜಾಬ್ ಮುಖ್ಯಮಂತ್ರಿ ಭಗವಂತ್ ಮಾನ್ ಅವರು ಧಕ್ಕೆ ತಂದಿದ್ದಾರೆ ಎಂದು ಬಿಜೆಪಿಯ ಪಂಜಾಬ್ ರಾಜ್ಯ ಘಟಕದ ಅಧ್ಯಕ್ಷ ಸುನೀಲ್ ಜಾಖರ್ ಮಂಗಳವಾರ ಆರೋಪಿಸಿದರು.

ರೈತರು ಮತ್ತು ಕೇಂದ್ರ ಸರ್ಕಾರದ ನಡುವಿನ ಮಾತುಕತೆಗಳು ಫಲಪ್ರದ ಆಗದಿರುವುದು ದುರದೃಷ್ಟಕರ ಎಂದಿರುವ ಅವರು, ಮುಖ್ಯಮಂತ್ರಿ ಮಾನ್ ಅವರಿಂದ ಈ ಮಾತುಕತೆಗಳು ವಿಫಲವಾಗಿವೆ. ಇದರಿಂದ ಅವರಿಗೆ ಹೆಚ್ಚು ಅನುಕೂಲವಿದೆ. ಈ ಕಾರ್ಯಾಚರಣೆಯಲ್ಲಿ ಅವರು ಯಶಸ್ವಿಯಾಗಿದ್ದಾರೆ ಎಂದು ಅವರು 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ.

'ಪಂಜಾಬ್‌ನಲ್ಲಿ ತನ್ನ ಸರ್ಕಾರ ರಚನೆಯಾದ ಐದು ನಿಮಿಷಗಳಲ್ಲಿಯೇ ಎಂಎಸ್‌ಪಿ ನೀಡುವ ಭರವಸೆಯಿಂದ ಮಾನ್ ಹಿಂದೆ ಸರಿದಿದ್ದರು. ಪಂಜಾಬಿನ ರೈತರಿಗೆ ಪ್ರವಾಹದ ಪರಿಹಾರವನ್ನೂ ವಂಚಿಸಿರುವ ಇಂತಹ ವ್ಯಕ್ತಿಗೆ ರೈತರ ಪರ ವಕಾಲತು ವಹಿಸುವ ಅಧಿಕಾರ ನೀಡಿದವರು ಯಾರು' ಎಂದು ಅವರು ಪ್ರಶ್ನಿಸಿದ್ದಾರೆ.

ಭಾನುವಾರದ ಸಭೆಯಲ್ಲಿ ಪಾಲ್ಗೊಂಡಿದ್ದ ಮಾನ್ ಅವರು, ತಾನು ರೈತರ 'ವಕೀಲ'ನಾಗಿ ಭಾಗವಹಿಸಿದ್ದೇನೆ ಎಂದಿದ್ದರು. ರೈತ ಮುಖಂಡರು ಮತ್ತು ಕೇಂದ್ರ ಸಚಿವರಾದ ಪಿಯೂಷ್ ಗೋಯಲ್, ಅರ್ಜುನ್ ಮುಂಡಾ, ನಿತ್ಯಾನಂದ ರಾಯ್ ಅವರ ನಡುವೆ ನಾಲ್ಕನೇ ಸುತ್ತಿನ ಸಭೆ ನಡೆದಿತ್ತು.



'ದೆಹಲಿ ಚಲೋ' ಪ್ರತಿಭಟನೆಯ ಭಾಗವಾಗಿ ರೈತರು ಹರಿಯಾಣದ ಗಡಿಯಾದ ಶಂಭುವಿನಲ್ಲಿ ಮಂಗಳವಾರ ಪ್ರತಿಭಟನೆ ನಡೆಸಿದರು —ಪಿಟಿಐ ಚಿತ್ರ

ಅಮರಿಂದರ್ ಪ್ರಧಾನಿ ಭೇಟಿ

ಪಂಜಾಬ್‌ನ ಮಾಜಿ ಮುಖ್ಯಮಂತ್ರಿ ಮತ್ತು ಬಿಜೆಪಿ ನಾಯಕ ಅಮರಿಂದರ್ ಸಿಂಗ್ ಅವರು ಪ್ರಧಾನಿ ನರೇಂದ್ರ ಮೋದಿ ಅವರನ್ನು ಮಂಗಳವಾರ ಭೇಟಿ ಮಾಡಿ, ರೈತರಿಗೆ ಸಂಬಂಧಿಸಿದ ಹಲವು ಸಮಸ್ಯೆಗಳ ಕುರಿತು ಚರ್ಚಿಸಿದ್ದಾರೆ. ಈ ಕುರಿತು ಸಿಂಗ್ ಅವರು 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ.

ಎಂಎಸ್‌ಪಿ ಬಜೆಟ್‌ಗೆ ಹೊರೆಯಾಗದು: ರಾಹುಲ್ ಗಾಂಧಿ

ನವದೆಹಲಿ (ಪಿಟಿಐ): ಕಾನೂನುಬದ್ಧವಾಗಿ ಎಂಎಸ್‌ಪಿ ಜಾರಿಗೊಳಿಸಿದರೆ ಬಜೆಟ್‌ಗೆ ಯಾವುದೇ ರೀತಿಯ ಹೊರೆ ಆಗುವುದಿಲ್ಲ. ಬದಲಿಗೆ ಇದರಿಂದ ರೈತರು ಜಿಡಿಪಿ ಬೆಳವಣಿಗೆಗೆ ಕಾರಣೀಕರ್ತರಾಗುತ್ತಾರೆ ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಮಂಗಳವಾರ ಪ್ರತಿಪಾದಿಸಿದ್ದಾರೆ.

ಕೇಂದ್ರ ಸರ್ಕಾರದ ಬಜೆಟ್‌ನಲ್ಲಿ 'ಎಂಎಸ್‌ಪಿ ಗ್ಯಾರಂಟಿ' ಕಾರ್ಯಸಾಧುವಲ್ಲ ಎಂಬ ಸುಳ್ಳನ್ನು ಹರಡಲಾಗುತ್ತಿದೆ ಎಂದು ಅವರು ದೂರಿದ್ದಾರೆ.

'ಕಾಂಗ್ರೆಸ್ ಪಕ್ಷವು ಎಂಎಸ್‌ಪಿಗೆ ಕಾನೂನು ಬದ್ಧ ಗ್ಯಾರಂಟಿ ನೀಡಲು ನಿರ್ಧರಿಸಿದಾಗಿನಿಂದ ಮೋದಿ ಪರ ಪ್ರಚಾರಕ ಯಂತ್ರಗಳು ಮತ್ತು ಅವರ ಪರ ಇರುವ ಮಾಧ್ಯಮಗಳು ಅಪಪ್ರಚಾರದಲ್ಲಿ ತೊಡಗಿವೆ' ಎಂದು ಅವರು 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ.

'ಕ್ರಿಸಿಲ್ ಅಂಕಿ ಅಂಶಗಳ ಪ್ರಕಾರ, 2022–23ರಲ್ಲಿ ರೈತರಿಗೆ ಎಂಎಸ್‌ಪಿ ನೀಡಿದ್ದರೆ 21,000 ಕೋಟಿ ಹೆಚ್ಚುವರಿ ಹೊರೆಯಾಗುತ್ತಿತ್ತು. ಅದು ಸರ್ಕಾರ ಒಟ್ಟು ಬಜೆಟ್‌ನಲ್ಲಿ ಕೇವಲ ಶೇ 0.4ರಷ್ಟು ಆಗುತ್ತಿತ್ತು' ಎಂದು ಹೇಳಿದ್ದಾರೆ.



ಮಂಗಳವಾರ ನಡೆದ ವಿವಿಧ ಅಭಿವೃದ್ಧಿ ಯೋಜನೆಗಳ ಶಿಲಾನ್ಯಾಸ ಕಾರ್ಯಕ್ರಮದಲ್ಲಿ ಸೇರಿದ್ದ ಜನಸ್ತೋಮ —ಪಿಟಿಐ ಚಿತ್ರ

ಪ್ರಗತಿಗೆ ಅಡ್ಡಿ ಆಗಿದ್ದ ವಿಧಿ 370 –ಮೋದಿ

ಜಮ್ಮು (ಪಿಟಿಐ): 'ಜಮ್ಮು ಮತ್ತು ಕಾಶ್ಮೀರಕ್ಕೆ ವಿಶೇಷ ಸ್ಥಾನಮಾನ ಕಲ್ಪಿಸಿದ್ದ ವಿಧಿ 370, ರಾಜ್ಯದ ಅಭಿವೃದ್ಧಿಗೆ ದೊಡ್ಡ ತೊಡಕಾಗಿತ್ತು' ಎಂದು ಪ್ರಧಾನಿ ಮೋದಿ ಅಭಿಪ್ರಾಯಪಟ್ಟಿದ್ದಾರೆ.

ಸಂವಿಧಾನದ ವಿಧಿ 370ರ ಅಡಿ ನೀಡಿದ್ದ ವಿಶೇಷ ಸ್ಥಾನಮಾನ ರದ್ದುಪಡಿಸಿದ ಬಳಿಕ, ಸದ್ಯ ಕೇಂದ್ರಾಡಳಿತ ಪ್ರದೇಶವಾಗಿರುವ ಜಮ್ಮು ಮತ್ತು ಕಾಶ್ಮೀರ ಈಗ ಅಭಿವೃದ್ಧಿಯನ್ನು ಕಾಣುತ್ತಿದೆ ಎಂದು ಹೇಳಿದರು.

ಜಮ್ಮು ಮತ್ತು ಕಾಶ್ಮೀರದಲ್ಲಿ ₹ 32 ಸಾವಿರ ಕೋಟಿಗೂ ಅಧಿಕ ಮೊತ್ತದ ಹಾಗೂ ದೇಶದ ವಿವಿಧೆಡೆ ₹ 13,500 ಕೋಟಿ ಮೌಲ್ಯದ ವಿವಿಧ ಯೋಜನೆಗಳಿಗೆ ಚಾಲನೆ ನೀಡಿದ ಬಳಿಕ ಅವರು ರ‍್ಯಾಲಿಯಲ್ಲಿ ಮಾತನಾಡಿದರು.

'ಈ ಅಭಿವೃದ್ಧಿ ಯೋಜನೆಗಳು ಮೋದಿಯ ಗ್ಯಾರಂಟಿ ಹಾಗೂ ಇವು ಮುಂದುವರಿಯಲಿವೆ. ಈ ಮೂಲಕ ಸರ್ಕಾರ ಮೊದಲ ಬಾರಿಗೆ ರಾಜ್ಯದಲ್ಲಿ ಜನರ ಮನೆ ಬಾಗಿಲಿಗೆ ಬಂದಿದೆ' ಎಂದು ಹೇಳಿದರು.

ಶಿಕ್ಷಣ, ರೈಲ್ವೆ, ವಿಮಾನಯಾನ ಮತ್ತು ರಸ್ತೆ ಅಭಿವೃದ್ಧಿ ವಲಯದಲ್ಲಿ ವಿವಿಧ ಯೋಜನೆಗಳಿಗೆ ಪ್ರಧಾನಿ ಚಾಲನೆ ನೀಡಿದರು.

ಜಮ್ಮು ಮತ್ತು ಕಾಶ್ಮೀರದಲ್ಲಿ ಹೊಸದಾಗಿ ನೇಮಕವಾಗಿರುವ 1500 ಅಭ್ಯರ್ಥಿಗಳಿಗೆ ನೇಮಕಾತಿ ಆದೇಶ ನೀಡಿ, ವಿಕಸಿತ ಜಮ್ಮು ಮತ್ತು ಕಾಶ್ಮೀರದ ನಿಮಿತ್ತ ವಿವಿಧ ಯೋಜನೆಗಳ ಫಲಾನುಭವಿಗಳ ಜೊತೆ ಚರ್ಚಿಸಿದರು.

'ಕಾಶ್ಮೀರ– ಕನ್ಯಾಕುಮಾರಿ ನಡುವಿನ ರೈಲು ಸಂಪರ್ಕ ದಿನ ದೂರವಿಲ್ಲ'

ಕಾಶ್ಮೀರ– ಕನ್ಯಾಕುಮಾರಿ ನಡುವೆ ರೈಲು ಸಂಪರ್ಕ ಕಲ್ಪಿಸುವ ದಿನ ದೂರವಿಲ್ಲ' ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಮಂಗಳವಾರ ಹೇಳಿದರು.

ಉಧಂಪುರ– ಶ್ರೀನಗರ– ಬಾರಾಮುಲ್ಲಾ (ಯುಎಸ್‌ಬಿಆರ್‌ಎಲ್) ನಡುವಿನ 41.8 ಕಿ.ಮೀ. ಉದ್ದದ ರೈಲು ಸೇವೆಗೆ ಚಾಲನೆ ನೀಡಿ ಮಾತನಾಡಿದ ಅವರು, 'ಒಟ್ಟು 272 ಕಿ.ಮೀ ಉದ್ದದ ಯುಎಸ್‌ಬಿಆರ್‌ಎಲ್ ರೈಲು ಮಾರ್ಗ ಯೋಜನೆಯನ್ನು ವಿವಿಧ ಹಂತಗಳಲ್ಲಿ ನಿರ್ಮಾಣ ಮಾಡಲಾಗುತ್ತಿದೆ. 2009ರ ಅಕ್ಟೋಬರ್‌ನಲ್ಲಿ 118 ಕಿ.ಮೀ ಉದ್ದದ ಖಾಜಿಗುಂಡ್– ಬಾರಾಮುಲ್ಲಾ ಮಾರ್ಗವನ್ನು, 2013ರ ಜೂನ್‌ನಲ್ಲಿ 18 ಕಿ.ಮೀ. ಉದ್ದದ ಬಾರಾಮುಲ್ಲಾ– ಖಾಜಿಗುಂಡ್ ಮಾರ್ಗವನ್ನು ಹಾಗೂ 2014ರ ಜುಲೈನಲ್ಲಿ 25 ಕಿ.ಮೀ. ಉಧಂಪುರ– ಕತ್ರಾ ಮಾರ್ಗವನ್ನು ಪೂರ್ಣಗೊಳಿಸಲಾಗಿದೆ' ಎಂದು ತಿಳಿಸಿದರು.

ಪಟ್ನಾ ಕ್ಯಾಂಪಸ್ ಉದ್ಘಾಟನೆ

ಪಟ್ನಾ (ಪಿಟಿಐ): ಐಐಟಿ ಪಟ್ನಾ, ಐಐಎಂ–ಬೋಧ್‌ಗಯಾದ ಶಾಶ್ವತ ಕ್ಯಾಂಪಸ್ ಸೇರಿದಂತೆ ವಿವಿಧ ಪ್ರಮುಖ ಶೈಕ್ಷಣಿಕ ಸಂಸ್ಥೆಗಳ ಹೊಸ ಕಟ್ಟಡಗಳನ್ನು ಪ್ರಧಾನಿ ನರೇಂದ್ರ ಮೋದಿ ಮಂಗಳವಾರ ವರ್ಚುಯಲ್ ರೂಪದಲ್ಲಿ ಉದ್ಘಾಟಿಸಿದರು.

ಪ್ರಧಾನಿ ಅವರು ₹ 466 ಕೋಟಿ ವೆಚ್ಚದಲ್ಲಿ ನಿರ್ಮಿಸಿರುವ, ಐಐಟಿ ಪಟ್ನಾದ 24 ನೂತನ ಕಟ್ಟಡಗಳು ಹಾಗೂ ₹ 400 ಕೋಟಿ ವೆಚ್ಚದಲ್ಲಿ ಅಭಿವೃದ್ಧಿಪಡಿಸಿರುವ 60 ಸಾವಿರ ಚದರ ಅಡಿ ವಿಸ್ತೀರ್ಣದ ಐಐಎಮ ಬೋಧ್ ಗಯಾದ ನೂತನ ಕ್ಯಾಂಪಸ್ ಉದ್ಘಾಟಿಸಿದರು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಮರು ಎಣಿಕೆ: ಬಿಜೆಪಿಗೆ ಮುಖಭಂಗ

ಒಂದನೇ ಪುಟದಿಂದ...

ಜನವರಿ 30ರಂದು ನಡೆದ ಈ ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿ ಮನೋಜ್ ಸೋನ್‌ಕರ್ 16 ಮತ ಪಡೆದು ಆಯ್ಕೆಯಾಗಿದ್ದಾರೆ ಎಂದು ಘೋಷಿಸಲಾಗಿತ್ತು. ಎಎಪಿ ಅಭ್ಯರ್ಥಿ 12 ಮತ ಪಡೆದಿದ್ದರೆ, 8 ಮತಗಳನ್ನು ತಿರಸ್ಕೃತಗೊಳಿಸಲಾಗಿತ್ತು. ಎಎಪಿ ಮತ್ತು ಕಾಂಗ್ರೆಸ್ ಮೈತ್ರಿ ಮಾಡಿಕೊಂಡಿದ್ದವು.

ಮತ ಎಣಿಕೆಯ ವಿಡಿಯೊವನ್ನು ನ್ಯಾಯಾಲಯದಲ್ಲಿ ನೋಡಲಾಯಿತು. ವಿರೂಪಗೊಂಡ ಮತಪತ್ರಗಳನ್ನು ನ್ಯಾಯಮೂರ್ತಿಗಳು ಪರಿಶೀಲಿಸಿದರು. ಅನಿಲ್ ಮಸೀಹ್ ಅವರು ಮೇಯರ್ ಚುನಾವಣೆಯ ಮತದಾನದ ಪ್ರಕ್ರಿಯೆಯನ್ನು ಕಾನೂನು ಬಾಹಿರವಾಗಿ ತಿರುಚಿದ್ದಾರೆ ಎಂದು ನ್ಯಾಯಪೀಠವು ತರಾಟೆಗೆ ತೆಗೆದುಕೊಂಡಿದೆ. ಅವರ ಮೇಲೆ ಅಪರಾಧ ಪ್ರಕ್ರಿಯಾ ಸಂಹಿತೆಯ ಸೆಕ್ಷನ್ 340ರ ಅಡಿಯಲ್ಲಿ ಕ್ರಮ ಕೈಗೊಳ್ಳಲು ಕಾರಣ ಕೇಳಿ ನೋಟಿಸ್ ನೀಡಿ ಎಂದು ಸೂಚಿಸಿದೆ.

ಮಸೀಹ್ ನಾಮನಿರ್ದೇಶಿತ ಕಾರ್ಪೊರೇಟರ್ ಆಗಿದ್ದಾರೆ. ಇವರು ಬಿಜೆಪಿಯವರು. ಚುನಾವಣಾಧಿಕಾರಿಯಾಗಿ ಅವರು ನಡೆದುಕೊಂಡ ರೀತಿಯು ಗಂಭೀರ ದುರ್ವರ್ತನೆ ಎಂಬುದು ಸ್ಪಷ್ಟವಾಗಿ ಎದ್ದುಕಾಣುತ್ತದೆ ಎಂದು ಪೀಠ ಹೇಳಿದೆ. ನ್ಯಾಯಾಲಯದಲ್ಲಿ ಅವರು ಪ್ರಮಾಣ ಮಾಡಿ ನೀಡಿದ ಹೇಳಿಕೆ ಕೂಡ ಸುಳ್ಳು. ಈ ತಪ್ಪಿಗೂ ಅವರನ್ನು ಹೊಣೆಗಾರರನ್ನಾಗಿ ಮಾಡಬೇಕು ಎಂದೂ ನ್ಯಾಯಪೀಠ ಹೇಳಿದೆ.

'ಕುಲದೀಪ್ ಕುಮಾರ್ ಸಲ್ಲಿಸಿದ ಅರ್ಜಿಯ ಆಧಾರದಲ್ಲಿ ನ್ಯಾಯಪೀಠವು ವಿವರವಾದ ಆದೇಶ ನೀಡಿದೆ. 'ಚುನಾವಣಾಧಿಕಾರಿಯು ಮತ ಎಣಿಕೆಯನ್ನು ದಾಖಲಿಸಿಕೊಳ್ಳುವ ಹಂತದಲ್ಲಿ ಮಾತ್ರ ಲೋಪ ಸಂಭವಿಸಿದೆ. ಹಾಗಾಗಿ, ಇಡೀ ಚುನಾವಣಾ ಪ್ರಕ್ರಿಯೆಯನ್ನು ಕೈಬಿಡುವುದು ಸರಿ ಎನಿಸದು. ಇಡೀ ಚುನಾವಣಾ ಪ್ರಕ್ರಿಯೆಯನ್ನು ರದ್ದುಪಡಿಸಿದರೆ ಮೂಲಭೂತ ಪ್ರಜಾಸತ್ತಾತ್ಮಕ ತತ್ವಗಳ ವಿನಾಶವು ಇನ್ನಷ್ಟು ತೀವ್ರಗೊಂಡಂತಾಗುತ್ತದೆ. ಚುನಾವಣಾಧಿಕಾರಿ ಮಸೀಹ್ ಅವರ ನಡವಳಿಕೆಯಿಂದ ಹೀಗೆಯೇ ಆಗಿದೆ' ಎಂದು ನ್ಯಾಯಪೀಠವು ಹೇಳಿದೆ.

ಮತಪತ್ರಗಳನ್ನು ತಿರುಚಲಾಗಿದೆ ಎಂಬ ವಿಚಾರದ ಕುರಿತು ಹುಯಿಲೆದ್ದ ಬಳಿಕ, ಗೆದ್ದಿದ್ದಾರೆ ಎಂದು ಘೋಷಣೆ ಮಾಡಲಾಗಿದ್ದ ಬಿಜೆಪಿ ಅಭ್ಯರ್ಥಿ ಮನೋಜ್ ಕುಮಾರ್ ಸೊನ್‌ಕರ್ ರಾಜೀನಾಮೆ ನೀಡಿದ್ದಾರೆ. ಆ ಬಳಿಕ, ಎಎಪಿಯ ಮೂವರು ಕಾರ್ಪೊರೇಟರ್‌ಗಳು ಬಿಜೆಪಿ ಸೇರಿದ್ದಾರೆ. ಅವರ ಖರೀದಿ ಆರೋಪವೂ ಆಗ ಕೇಳಿಬಂದಿತ್ತು.

ಲಿಂಗ ತಾರತಮ್ಯದ ಪ್ರದರ್ಶನ: 'ಸುಪ್ರೀಂ'

ಮದುವೆಯಾದ ಕಾರಣಕ್ಕೆ ಕೆಲಸದಿಂದ ಸೇನಾ ಮಹಿಳಾ ಅಧಿಕಾರಿ ಸೆಲಿನಾ ಜಾನ್ ವಜಾ ಪ್ರಕರಣ

ಪ್ರಜಾವಾಣಿ ವಾರ್ತೆ

ನವದೆಹಲಿ: ಸೇನೆಯ ನರ್ಸಿಂಗ್ ಸೇವೆಯಲ್ಲಿ ಕಾಯಂ ಉದ್ಯೋಗಿಯಾಗಿದ್ದ ಮಹಿಳಾ ಅಧಿಕಾರಿಯೊಬ್ಬರು ಮದುವೆ ಮಾಡಿಕೊಂಡಿದ್ದರಿಂದ, ಪುರಾತನ ನಿಯಮದ ಕಾರಣ ಒಡ್ಡಿ, ಆಕೆಯನ್ನು ಕರ್ತವ್ಯದಿಂದ ಬಿಡುಗಡೆ ಮಾಡಿರುವ ಕ್ರಮವು 'ಸ್ವೇಚ್ಛೆ' ಹಾಗೂ 'ಲಿಂಗ ತಾರತಮ್ಯ ಮತ್ತು ಅಸಮಾನತೆ'ಯನ್ನು ಢಾಳಾಗಿ ತೋರಿಸಿದಂತಾಗಿದೆ ಎಂದು ಸುಪ್ರೀಂ ಕೋರ್ಟ್ ಹೇಳಿದೆ.

ನ್ಯಾಯಮೂರ್ತಿಗಳಾದ ಸಂಜೀವ್ ಖನ್ನಾ ಹಾಗೂ ದೀಪಂಕರ್ ದತ್ತಾ ಅವರಿದ್ದ ನ್ಯಾಯಪೀಠವು ಈ ಕುರಿತ ಅರ್ಜಿ ವಿಚಾರಣೆ ನಡೆಸಿತು.

'(ನಿವೃತ್ತ) ಲೆಫ್ಟಿನೆಂಟ್ ಸೆಲಿನಾ ಜಾನ್ ಅವರು ಮದುವೆಯಾಗಿದ್ದಕ್ಕಾಗಿ, ನಿಯಮಗಳ ಕಾರಣ ನೀಡಿ ಅವರನ್ನು ಕರ್ತವ್ಯದಿಂದ ಬಿಡುಗಡೆ ಮಾಡಿರುವುದು ಕಾನೂನುಬಾಹಿರ. ಸೆಲಿನಾ ಅವರಿಗೆ, ಅಂತಿಮ ಮತ್ತು ಪೂರ್ಣಪ್ರಮಾಣದ ಪರಿಹಾರವಾಗಿ ಎಂಟು ವಾರಗಳ ಒಳಗಾಗಿ ₹ 60 ಲಕ್ಷ ಪಾವತಿಸಬೇಕು' ಎಂದು ಕೇಂದ್ರ ಸರ್ಕಾರಕ್ಕೆ ನ್ಯಾಯಪೀಠವು ಆದೇಶಿಸಿದೆ.

ನಿಗದಿತ ಅವಧಿ ಒಳಗಾಗಿ ಪಾವತಿಸದಿದ್ದಲ್ಲಿ, ಈ ಆದೇಶ ಪ್ರಕಟವಾದ ದಿನದಿಂದ ಪೂರ್ತಿ ಹಣ ಸಂದಾಯವಾಗುವವರೆಗೆ ವಾರ್ಷಿಕ ಶೇ 12ರಷ್ಟು ಬಡ್ಡಿಯೊಂದಿಗೆ ಪರಿಹಾರಧನ ಪಾವತಿಸಬೇಕು ಎಂದೂ ತಿಳಿಸಲಾಗಿದೆ.

'ನಿಯಮಗಳ ಕಾರಣ ನೀಡಿ ಮಹಿಳಾ ಅಧಿಕಾರಿಯೊಬ್ಬರನ್ನು ಉದ್ಯೋಗದಿಂದ ತೆಗೆಯುವುದು ಲಿಂಗ ತಾರತಮ್ಯ ತೋರಿಸುತ್ತದೆ. ಇಂತಹ ಹಳೆಯ ನಿಯಮ ಒಪ್ಪಿಕೊಳ್ಳುವುದೆಂದರೆ ಮಾನವನ ಘನತೆಯನ್ನು ಹಾಗೂ ತಾರತಮ್ಯರಹಿತ ಮತ್ತು ನ್ಯಾಯಯುತವಾಗಿ ನಡೆಸಿಕೊಳ್ಳಬೇಕೆಂಬ ಹಕ್ಕನ್ನು ಕಡೆಗಣಿಸಿದಂತೆ' ಎಂದಿದೆ.

ನಿವೃತ್ತ ಲೆಫ್ಟಿನೆಂಟ್ ಸೆಲಿನಾ ಅವರನ್ನು ವೃತ್ತಿಗೆ ಸಂಬಂಧಿಸಿದ ಎಲ್ಲ ಪ್ರಯೋಜನಗಳೊಂದಿಗೆ ಹುದ್ದೆಯಲ್ಲಿ ಮರುಸ್ಥಾಪಿಸಬೇಕು ಎಂದು ಲಖನೌದ ಸಶಸ್ತ್ರ ಪಡೆಗಳ ನ್ಯಾಯಮಂಡಳಿ ನೀಡಿದ್ದ ಆದೇಶವನ್ನು ಪ್ರಶ್ನಿಸಿ ಕೇಂದ್ರ ಸರ್ಕಾರ ಮೇಲ್ಮನವಿ ಸಲ್ಲಿಸಿತ್ತು.

ಸೆಲಿನಾ ಅವರನ್ನು ಕರ್ತವ್ಯದಿಂದ ಬಿಡುಗಡೆ ಮಾಡಿರುವುದನ್ನು ಎತ್ತಿಹಿಡಿದು ನ್ಯಾಯಮಂಡಳಿ ನೀಡಿದ್ದ ಆದೇಶ ತಪ್ಪು ಹಾಗೂ ಕಾನೂನುಬಾಹಿರ. ಹೀಗಾಗಿ ಈ ವಿಷಯದಲ್ಲಿ ಸುಪ್ರೀಂ ಕೋರ್ಟ್ ಮಧ್ಯಪ್ರವೇಶಿಸುವ ಅಗತ್ಯವೇ ಇಲ್ಲ ಎಂದೂ ಪೀಠ ಹೇಳಿದೆ.

'ಲಿಂಗ ಆಧರಿಸಿ ಪಕ್ಷಪಾತ ಮಾಡುವ ಕಾನೂನುಗಳು ಮತ್ತು ನಿಯಮಗಳಿಗೆ ಸಾಂವಿಧಾನಿಕ ಮಾನ್ಯತೆ ಇಲ್ಲ. ಅಲ್ಲದೇ, ಮಹಿಳಾ ಉದ್ಯೋಗಿಗಳು ಮದುವೆ ಮಾಡಿಕೊಳ್ಳುವುದು ಹಾಗೂ ಕೌಟುಂಬಿಕ ಜವಾಬ್ದಾರಿ ನಿರ್ವಹಣೆಯಲ್ಲಿ ತೊಡಗಿರುವುದನ್ನು ಅವರನ್ನು ಉದ್ಯೋಗದಿಂದ ಅನರ್ಹಗೊಳಿಸುವುದಕ್ಕೆ ಕಾರಣ ಎಂದು ಆಧಾರ ಎಂದು ಪರಿಗಣಿಸುವುದು ಕೂಡ ಅಸಾಂವಿಧಾನಿಕ' ಎಂದು ಪೀಠ ಹೇಳಿದೆ.

ರಾಹುಲ್ ಗಾಂಧಿಗೆ ಜಾಮೀನು

ಸುಲ್ತಾನ್‌ಪುರ (ಉತ್ತರ ಪ್ರದೇಶ) (ಪಿಟಿಐ): ಕೇಂದ್ರ ಗೃಹ ಸಚಿವ ಅಮಿತ್ ಶಾ ಕುರಿತು ಕಾಂಗ್ರೆಸ್ ಸಂಸದ ರಾಹುಲ್ ಗಾಂಧಿ ನೀಡಿದ್ದ ಹೇಳಿಕೆಯ ಸಂಬಂಧ ಅವರ ವಿರುದ್ಧ ದಾಖಲಾಗಿದ್ದ ಮಾನನಷ್ಟ ಮೊಕದ್ದಮೆ ಪ್ರಕರಣದ ವಿಚಾರಣೆ ಉತ್ತರ ಪ್ರದೇಶದ ವಿಶೇಷ ನ್ಯಾಯಾಲಯದಲ್ಲಿ ಮಂಗಳವಾರ ನಡೆಯಿತು.

ಪ್ರಕರಣದ ಸಂಬಂಧ ರಾಹುಲ್ ಗಾಂಧಿ ಅವರಿಗೆ ನ್ಯಾಯಾಲಯವು ಜಾಮೀನು ನೀಡಿ, ಮುಂದಿನ ವಿಚಾರಣೆಯನ್ನು ಮಾರ್ಚ್ 2ಕ್ಕೆ ನಿಗದಿ ಮಾಡಿದೆ.

₹25,000 ಮೌಲ್ಯದ ಎರಡು ಬಾಂಡ್ ಪಡೆದ ನಂತರ ನ್ಯಾಯಾಲಯವು ರಾಹುಲ್ ಗಾಂಧಿ ಅವರಿಗೆ ಜಾಮೀನು ಮಂಜೂರು ಮಾಡಿತು ಎಂದು ಅವರ ವಕೀಲ ಕಾಶಿ ಪ್ರಸಾದ್ ಶುಕ್ಲಾ ಮಾಧ್ಯಮಗಳಿಗೆ ತಿಳಿಸಿದರು.

ಮಧ್ಯಾಹ್ನ 11ಕ್ಕೆ ಜನಪ್ರತಿನಿಧಿಗಳ ನ್ಯಾಯಾಲಯಕ್ಕೆ ಬಂದ ರಾಹುಲ್, 25 ನಿಮಿಷಗಳ ನಂತರ ಹೊರಬಂದರು. ಅಲ್ಲಿಂದ ನೇರವಾಗಿ ರಾಯ್‌ಬರೇಲಿಗೆ ಪ್ರಯಾಣಿಸಿದರು. ಜನವರಿ 18ರಂದು ನಡೆದಿದ್ದ ವಿಚಾರಣೆಗೆ ಗೈರಾಗಿದ್ದ ರಾಹುಲ್ ಇಂದು ನ್ಯಾಯಾಲಯಕ್ಕೆ ಆಗಮಿಸುತ್ತಿದ್ದಂತೆಯೇ 'ರಾಹುಲ್ ಗಾಂಧಿ ಜಿಂದಾಬಾದ್', 'ಭಾರತ್‌ಜೋಡೋ' ಎನ್ನುವ ಘೋಷಣೆಗಳು ಮೊಳಗಿದವು.

ಆರು ವರ್ಷಗಳ ಹಿಂದೆ ಕರ್ನಾಟಕದ ಚುನಾವಣೆಯ ವೇಳೆ ರಾಹುಲ್ ಗಾಂಧಿ ಅಮಿತ್ ಶಾ ವಿರುದ್ಧ ನೀಡಿದ್ದ ಹೇಳಿಕೆಯ ಸಂಬಂಧ ಬಿಜೆಪಿ ಕಾರ್ಯಕರ್ತ ವಿಜಯ್ ಮಿಶ್ರಾ 2018ರಲ್ಲಿ ಮಾನನಷ್ಟ ಪ್ರಕರಣ ದಾಖಲಿಸಿದ್ದರು.

ಪ್ರತಾಪ್ ರೆಡ್ಡಿ ರಾಜೀನಾಮೆ ಅಂಗೀಕಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಆಂತರಿಕ ಭದ್ರತಾ ವಿಭಾಗದ (ಐಎಸ್‌ಡಿ) ಪೊಲೀಸ್ ಮಹಾನಿರ್ದೇಶಕ (ಡಿಜಿಪಿ) ಸಿ.ಎಚ್. ಪ್ರತಾಪ್ ರೆಡ್ಡಿ ಅವರು ತಮ್ಮ ಸ್ಥಾನಕ್ಕೆ ಸಲ್ಲಿಸಿದ್ದ ರಾಜೀನಾಮೆಯನ್ನು ರಾಜ್ಯ ಸರ್ಕಾರವು ಅಂಗೀಕರಿಸಿದೆ.



ಪ್ರತಾಪ್ ರೆಡ್ಡಿ

1991ನೇ ಬ್ಯಾಚ್ ಐಪಿಎಸ್ ಅಧಿಕಾರಿ ಆಗಿರುವ ಪ್ರತಾಪ್ ರೆಡ್ಡಿ ಅವರ ಸೇವಾವಧಿ ಜೂನ್ 30ರವರೆಗಿತ್ತು. ಇದರ ನಡುವೆಯೇ ಸ್ವಯಂನಿವೃತ್ತಿ ಕೋರಿ ಜ.22ರಂದು ಅವರು ಸರ್ಕಾರಕ್ಕೆ ಪತ್ರ ಬರೆದಿದ್ದರು. ಫೆ.17ರಂದು ರಾಜೀನಾಮೆ ಅಂಗೀಕರಿಸಲಾಗಿದ್ದು, ಏಪ್ರಿಲ್ 30ರಂದು ಸೇವೆಯಿಂದ ಬಿಡುಗಡೆ ಆಗಲಿದ್ದಾರೆ.

ಆಂಧ್ರಪ್ರದೇಶ ಗುಂಟೂರು ಜಿಲ್ಲೆಯ ಪ್ರತಾಪ್ ರೆಡ್ಡಿ, ಬಿ.ಟೆಕ್ ಪದವೀಧರರು. ಹಾಸನ ಜಿಲ್ಲೆಯ ಸಹಾಯಕ ಪೊಲೀಸ್ ಅಧೀಕ್ಷಕರಾಗಿ ವೃತ್ತಿ ಆರಂಭಿಸಿದ್ದರು. ನಂತರ, ಹಲವು ಜಿಲ್ಲೆ ಹಾಗೂ ಕಮಿಷನರೇಟ್ ವ್ಯಾಪ್ತಿಯಲ್ಲಿ ಕೆಲಸ ಮಾಡಿದ್ದರು. ನಗರದ 37ನೇ ಪೊಲೀಸ್ ಕಮಿಷನರ್ ಆಗಿಯೂ ಕರ್ತವ್ಯ ನಿರ್ವಹಿಸಿದ್ದರು.

ಬಿಹಾರ: 'ಜನ ವಿಶ್ವಾಸ ಯಾತ್ರೆ'ಗೆ ಚಾಲನೆ

ಪಟ್ನಾ (ಪಿಟಿಐ): ರಾಷ್ಟ್ರೀಯ ಜನತಾ ದಳದ ನಾಯಕ ತೇಜಸ್ವಿ ಯಾದವ್ ಅವರು 'ಜನ ವಿಶ್ವಾಸ ಯಾತ್ರೆ'ಗೆ ಮಂಗಳವಾರ ಚಾಲನೆ ನೀಡಿ, ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರ ವಿರುದ್ಧ ವಾಗ್ದಾಳಿ ನಡೆಸಿದ್ದಾರೆ.

ಮುಜಾಫರ್‌ಪುರದಿಂದ ಆರಂಭವಾಗುವ ಯಾತ್ರೆಯು 11 ದಿನಗಳವರೆಗೆ ಬಿಹಾರದಾದ್ಯಂತ ನಡೆಯಲಿದೆ. ರಾಜ್ಯದ 38 ಜಿಲ್ಲೆಗಳಲ್ಲೂ ತೇಜಸ್ವಿ ಅವರು ಯಾತ್ರೆ ಕೈಗೊಳ್ಳಲಿದ್ದಾರೆ.

'ನನ್ನ ಆಶೀರ್ವಾದ ಮಗನ ಮೇಲೆ ಇರುತ್ತದೆ. ಆತ ತನ್ನ ಗುರಿಯನ್ನು ಸೇರಲಿ' ಎಂದು ಆರ್‌ಜೆಡಿ ಮುಖ್ಯಸ್ಥ ಲಾಲು ಪ್ರಸಾದ್ ಅವರು ಹೇಳಿದರು.

ಸೋನಿಯಾ ಸೇರಿ 41 ಮಂದಿ ಅವಿರೋಧ ಆಯ್ಕೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಕಾಂಗ್ರೆಸ್ ನಾಯಕಿ ಸೋನಿಯಾ ಗಾಂಧಿ, ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ, ಕೇಂದ್ರ ಸಚಿವರಾದ ಅಶ್ವಿನಿ ವೈಷ್ಣವ್, ಎಲ್.ಮುರುಗನ್ ಸೇರಿದಂತೆ 41 ಮಂದಿ ರಾಜ್ಯಸಭೆಗೆ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ನಾಮಪತ್ರಗಳ ವಾಪಸಾತಿಗೆ ಮಂಗಳವಾರ ಕಡೆಯ ದಿನವಾಗಿತ್ತು. ಚುನಾವಣೆ ನಡೆದ ಸ್ಥಾನಗಳಷ್ಟೇ ಅಭ್ಯರ್ಥಿಗಳು ಕಣದಲ್ಲಿದ್ದ ರಾಜ್ಯಗಳಲ್ಲಿ ಅಭ್ಯರ್ಥಿಗಳ ಅವಿರೋಧ ಆಯ್ಕೆಯನ್ನು ಘೋಷಿಸಲಾಯಿತು. ಉಳಿದಂತೆ, ಹೆಚ್ಚುವರಿ ಅಭ್ಯರ್ಥಿ ಕಣದಲ್ಲಿರುವ ಕರ್ನಾಟಕ, ಹಿಮಾಚಲ ಪ್ರದೇಶ ಮತ್ತು ಉತ್ತರ ಪ್ರದೇಶದಲ್ಲಿ ಫೆ. 27ರಂದು ಚುನಾವಣೆ ನಡೆಯಲಿದೆ.

ಈ ಮೂರು ರಾಜ್ಯಗಳಿಂದ ರಾಜ್ಯಸಭೆಯ ಒಟ್ಟು 15 ಸ್ಥಾನಗಳಿಗೆ ಫೆಬ್ರುವರಿ 27ರಂದು ಮತದಾನ ನಡೆಯಲಿದೆ. ಏಪ್ರಿಲ್ ಮೊದಲ ವಾರ ತೆರವಾಗಲಿರುವ 56 ಸ್ಥಾನಗಳಿಗೆ ಚುನಾವಣೆ ಘೋಷಿಸಲಾಗಿತ್ತು.

ಉತ್ತರ ಪ್ರದೇಶದಿಂದ ರಾಜ್ಯಸಭೆಯ 10 ಸ್ಥಾನಗಳಿಗೆ ಚುನಾವಣೆ ನಡೆಯಲಿದ್ದು, 11 ಅಭ್ಯರ್ಥಿಗಳು ಕಣದಲ್ಲಿದ್ದಾರೆ. ಬಿಜೆಪಿ ಇಲ್ಲಿ ಹೆಚ್ಚುವರಿ ಅಭ್ಯರ್ಥಿಯನ್ನು ಕಣಕ್ಕಿಳಿಸಿದೆ. ಅಂತೆಯೇ, ಕರ್ನಾಟಕದಲ್ಲಿ ನಾಲ್ಕು ಸ್ಥಾನಗಳಿಗೆ ಐವರು ಅಭ್ಯರ್ಥಿಗಳು ಸ್ಪರ್ಧಿಸಿದ್ದಾರೆ. ಹಿಮಾಚಲ ಪ್ರದೇಶದಲ್ಲಿ ಒಂದು ಸ್ಥಾನಕ್ಕೆ ಇಬ್ಬರು ಅಭ್ಯರ್ಥಿಗಳು ಸ್ಪರ್ಧಿಸಿದ್ದಾರೆ. ಕ್ರಮವಾಗಿ ಜೆಡಿಎಸ್ ಮತ್ತು ಬಿಜೆಪಿ ಇಲ್ಲಿ ಹೆಚ್ಚುವರಿ ಅಭ್ಯರ್ಥಿಯನ್ನು ಕಣಕ್ಕಿಳಿಸಿವೆ. ಹೀಗಾಗಿ, ಚುನಾವಣೆ ಕುತೂಹಲ ಕೆರಳಿಸಿದೆ.



ಸೋನಿಯಾ ಗಾಂಧಿ

ಇದುವರೆಗೂ ಬಿಜೆಪಿಯು 20 ಸ್ಥಾನ ಗೆದ್ದುಕೊಂಡಿದೆ. ಕಾಂಗ್ರೆಸ್ 6, ತೃಣಮೂಲ ಕಾಂಗ್ರೆಸ್ 4, ವೈಎಸ್‌ಆರ್ ಕಾಂಗ್ರೆಸ್ 3, ಆರ್‌ಜೆಡಿ 2, ಎನ್‌ಸಿಪಿ, ಶಿವಸೇನೆ, ಬಿಆರ್‌ಎಸ್, ಜೆಡಿಯು ತಲಾ ಒಂದು ಸ್ಥಾನ ಗೆದ್ದುಕೊಂಡಿವೆ. ಒಟ್ಟಾರೆಯಾಗಿ ಬಿಜೆಪಿ ನೇತೃತ್ವದ ಎನ್‌ಡಿಎ 29 ಸ್ಥಾನ, 'ಇಂಡಿಯಾ' ಮೈತ್ರಿಕೂಟ 12 ಸ್ಥಾನ ಗೆದ್ದುಕೊಂಡಂತಾಗಿದೆ.

ರಾಜ್ಯಸಭೆಯ ಅವಧಿ ಅಂತ್ಯವಾಗಲಿರುವ ಕೇಂದ್ರ ಸಚಿವರಾದ ಭೂಪೇಂದ್ರ ಯಾದವ್, ಮನ್‌ಸುಖ್ ಮಾಂಡವೀಯ, ರಾಜೀವ್ ಚಂದ್ರಶೇಖರ್, ಪುರುಷೋತ್ತಮ ರೂಪಾಲಾ ಅವರಿಗೆ ಬಿಜೆಪಿ ಈ ಚುನಾವಣೆಗೆ ಟಿಕೆಟ್ ನಿರಾಕರಿಸಿತ್ತು. ಇವರಲ್ಲಿ ಹೆಚ್ಚಿನವರನ್ನು ಲೋಕಸಭೆ ಚುನಾವಣೆಗೆ ಕಣಕ್ಕಿಳಿಸುವ ಇರಾದೆ ಪಕ್ಷದ್ದಾಗಿದೆ ಎಂದು ಹೇಳಲಾಗಿದೆ.

ರಾಜಸ್ಥಾನದಿಂದ ಅವಿರೋಧವಾಗಿ ಆಯ್ಕೆಯಾಗಿರುವ ಕಾಂಗ್ರೆಸ್ ಅಧಿನಾಯಕಿ ಸೋನಿಯಾ ಗಾಂಧಿ ಈ ಮೂಲಕ, ಲೋಕಸಭೆಯ ಸದಸ್ಯೆಯಾಗಿ 25 ವರ್ಷಗಳ ಪಯಣವನ್ನು ಅಂತ್ಯಗೊಳಿಸಲಿದ್ದಾರೆ. ಬಿಜೆಪಿಯ ಮದನ್ ರಾಠೋಡ್ ಮತ್ತು ಚುನ್ನಿ ಲಾಲ್ ಗರಾಸಿಯಾ ಅವರು ಇದೇ ಮೊದಲಿಗೆ ರಾಜ್ಯಸಭೆ ಪ್ರವೇಶಿಸುತ್ತಿದ್ದಾರೆ.

ಬಿಜೆಪಿ ಅಧ್ಯಕ್ಷ ಜೆ.ಪಿ.ನಡ್ಡಾ ಈ ಬಾರಿ ಗುಜರಾತ್‌ನಿಂದ ಅವಿರೋಧವಾಗಿ ರಾಜ್ಯಸಭೆ ಪ್ರವೇಶಿಸುತ್ತಿದ್ದಾರೆ. ಇವರೊಂದಿಗೆ ಜಸ್ವಂತ್ ಸಿನ್ಹಾ ಪಾರ್ಮರ್, ಮಯಂಕ್ ನಾಯಕ್ ಮತ್ತು ಗೋವಿಂದ್ ಢೋಲಕಿಯ ಅವರು ಆಯ್ಕೆಯಾದರು.

ಗುಜರಾತ್‌ನಲ್ಲಿ ಎಲ್ಲ ನಾಲ್ಕು ಸ್ಥಾನಗಳನ್ನು ಬಿಜೆಪಿ ಗೆದ್ದುಕೊಂಡಿದೆ. ವಿಧಾನಸಭೆಯಲ್ಲಿ ಸಂಖ್ಯಾಬಲದ ಕೊರತೆಯಿಂದಾಗಿ ಕಾಂಗ್ರೆಸ್ ತನ್ನ ಹಾಲಿ ಸದಸ್ಯರ ಸ್ಥಾನವನ್ನು ಕಳೆದುಕೊಂಡಿದೆ.

ಕೇಂದ್ರ ಸಚಿವ ಅಶ್ವಿನಿ ವೈಷ್ಣವ್ ಒಡಿಶಾದಿಂದ ಆಯ್ಕೆಯಾದರು. ಹಲವು ಪಕ್ಷಾಂತರ ಬೆಳವಣಿಗೆಗೆ ಸಾಕ್ಷಿಯಾದ ಮಹಾರಾಷ್ಟ್ರದಲ್ಲಿ ಕಾಂಗ್ರೆಸ್‌ನ ಮಾಜಿ ನಾಯಕ, ಈಚೆಗೆ ಬಿಜೆಪಿಗೆ ಸೇರ್ಪಡೆಯಾಗಿದ್ದ ಅಶೋಕ್ ಚವಾಣ್ ಮತ್ತು ಮಿಲಿಂದ್ ದೇವ್ರಾ ಅವರು ಕ್ರಮವಾಗಿ ಬಿಜೆಪಿ ಮತ್ತು ಶಿವಸೇನೆ ಅಭ್ಯರ್ಥಿಗಳಾಗಿ ರಾಜ್ಯಸಭೆಗೆ ಆಯ್ಕೆಯಾದರು. ಇವರೊಂದಿಗೆ ಎನ್‌ಸಿಪಿಯ ಪ್ರಫುಲ್ ಪಟೇಲ್, ಬಿಜೆಪಿ ಅಭ್ಯರ್ಥಿಗಳಾದ ಮೇಧಾ ಕುಲಕರ್ಣಿ, ಅಜಿತ್ ಘೋಪ್ಛಡೆ ಅವರು ರಾಜ್ಯಸಭೆಗೆ ಅವಿರೋಧವಾಗಿ ಆಯ್ಕೆಯಾದರು.

ಪಶ್ಚಿಮ ಬಂಗಾಳದಲ್ಲಿ ಪತ್ರಕರ್ತೆ ಸಾಗರಿಕಾ ಘೋಷ್ ಸೇರಿದಂತೆ ತೃಣಮೂಲ ಕಾಂಗ್ರೆಸ್ ಪಕ್ಷದ ನಾಲ್ವರು ಹಾಗೂ ಬಿಜೆಪಿಯ ಒಬ್ಬರು ಆಯ್ಕೆಯಾದರು. ಸದಸ್ಯ ಬಲವಿಲ್ಲದ ಕಾಂಗ್ರೆಸ್ ರಾಜ್ಯದಲ್ಲಿ ಒಂದು ಸ್ಥಾನ ಕಳೆದುಕೊಂಡಿತು.

ನೆರೆಯ ಆಂಧ್ರಪ್ರದೇಶದಲ್ಲಿ ಆಡಳಿತಾರೂಢ ವೈಎಸ್‌ಆರ್ ಕಾಂಗ್ರೆಸ್ ಎಲ್ಲ ಮೂರು ಸ್ಥಾನ ಗೆದ್ದುಕೊಳ್ಳುವಲ್ಲಿ ಯಶಸ್ವಿಯಾಯಿತು. ಕಾಂಗ್ರೆಸ್ ಅಭ್ಯರ್ಥಿಗಳಾಗಿದ್ದ ರೇಣುಕಾ ಚೌದರಿ, ಅನಿಲ್‌ಕುಮಾರ್ ಯಾದವ್ ಆಯ್ಕೆಯಾದರು.

ಉಮೇಶ್‌ಗೆ 'ರಾಜ್‌ಕುಮಾರ್ ದತ್ತಿ ಪ್ರಶಸ್ತಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತು (ಕಸಾಪ) ನೀಡುವ 'ಡಾ. ರಾಜ್‌ಕುಮಾರ್ ಸಾಂಸ್ಕೃತಿಕ ದತ್ತಿ ಪ್ರಶಸ್ತಿ'ಗೆ ಹಾಸ್ಯ ನಟ ಎಂ.ಎಸ್. ಉಮೇಶ್ ಆಯ್ಕೆಯಾಗಿದ್ದಾರೆ.



ಉಮೇಶ್

ಕಸಾಪ ಅಧ್ಯಕ್ಷ ಮಹೇಶ ಜೋಶಿ ನೇತೃತ್ವದ ಸಮಿತಿ ಈ ಆಯ್ಕೆ ಮಾಡಿದೆ. ಪ್ರಶಸ್ತಿಯು ₹ 25 ಸಾವಿರ ನಗದು ಹಾಗೂ ಸ್ಮರಣಿಕೆ ಒಳಗೊಂಡಿದೆ. ರಾಜ್‌ಕುಮಾರ್ ಅವರು ತಮಗೆ 'ದಾದಾಸಾಹೇಬ್ ಫಾಲ್ಕೆ ಪ್ರಶಸ್ತಿ' ಬಂದಾಗ ನಗದು ಮೊತ್ತವನ್ನು ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ದತ್ತಿನಿಧಿ ಸ್ಥಾಪಿಸಿದ್ದರು. ನಂತರದಲ್ಲಿ ನಿರ್ಮಾಪಕಿ ಪಾರ್ವತಮ್ಮ ರಾಜ್‌ಕುಮಾರ್ ಅವರು ಈ ದತ್ತಿನಿಧಿಗೆ ಇನ್ನಷ್ಟು ಮೊತ್ತವನ್ನು ಸೇರಿಸಿದ್ದರು.

'ಎಂ.ಎಸ್. ಉಮೇಶ್ ಅವರು ಕೆ. ಹಿರಣ್ಣಯ್ಯ ಮಿತ್ರ ಮಂಡಲಿ, ಗುಬ್ಬಿ ಕಂಪನಿಯಲ್ಲಿ ಬಾಲನಟರಾಗಿ ಪ್ರಸಿದ್ಧಿ ಪಡೆದಿದ್ದರು. ಪುಟ್ಟಣ್ಣ ಕಣಗಾಲ್ ಅವರ ಕಥಾ ಸಂಗಮದ ಮೂಲಕ ಬೆಳ್ಳಿತೆರೆಗೆ ಮರಳಿದ ಅವರು, ಈವರೆಗೂ 400ಕ್ಕೂ ಹೆಚ್ಚು ಚಿತ್ರಗಳಲ್ಲಿ ಅಭಿನಯಿಸಿದ್ದಾರೆ. ವೈವಿಧ್ಯಮಯ ಪಾತ್ರಗಳಲ್ಲಿ ಅಭಿನಯಿಸಿರುವ ಅವರಿಗೆ ಹಾಸ್ಯ ಪಾತ್ರಗಳು ಗೌರವ ತಂದುಕೊಟ್ಟಿವೆ' ಎಂದು ಕಸಾಪ ಪ್ರಕಟಣಾ ವಿಭಾಗದ ಸಂಚಾಲಕ ಎನ್.ಎಸ್.ಶ್ರೀಧರ ಮೂರ್ತಿ ತಿಳಿಸಿದ್ದಾರೆ.

ಸೌಜನ್ಯ ಕೊಲೆ ಪ್ರಕರಣ: ಹೈಕೋರ್ಟ್ ನೋಟಿಸ್

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ಸಿಬಿಐಗೆ ನೋಟಿಸ್ ಜಾರಿಗೊಳಿಸಲು ಆದೇಶ
- ಏಕಸದಸ್ಯ ನ್ಯಾಯಪೀಠದಿಂದ ನಡೆದ ವಿಚಾರಣೆ
- ಮರು ತನಿಖೆಗೆ ಅರ್ಜಿದಾರರ ಕೋರಿಕೆ

ಬೆಂಗಳೂರು: ದಕ್ಷಿಣ ಕನ್ನಡ ಜಿಲ್ಲೆ ಬೆಳ್ತಂಗಡಿ ತಾಲ್ಲೂಕಿನ ಧರ್ಮಸ್ಥಳದ ವಿದ್ಯಾರ್ಥಿನಿ ಸೌಜನ್ಯ ಮೇಲಿನ ಅತ್ಯಾಚಾರ ಹಾಗೂ ಕೊಲೆ ಆರೋಪ ಪ್ರಕರಣದ ಮರು ತನಿಖೆಗೆ ಆದೇಶಿಸುವಂತೆ ಕೋರಲಾದ ಅರ್ಜಿಗೆ ಸಂಬಂಧಿಸಿದಂತೆ ಸಿಬಿಐಗೆ ನೋಟಿಸ್ ಜಾರಿಗೊಳಿಸಲು ಹೈಕೋರ್ಟ್ ಆದೇಶಿಸಿದೆ.

ಈ ಸಂಬಂಧ ಮೃತ ಸೌಜನ್ಯ ತಂದೆಯೂ ಆದ ಧರ್ಮಸ್ಥಳ ಗ್ರಾಮದ ಪಾಂಗಾಳ ನಿವಾಸಿ ಚಂದಪ್ಪ ಗೌಡ ಸಲ್ಲಿಸಿರುವ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಕೆ.ನಟರಾಜನ್ ಅವರಿದ್ದ ಏಕಸದಸ್ಯ ನ್ಯಾಯಪೀಠ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಅರ್ಜಿದಾರರ ಪರ ವಕೀಲ ಎಂ.ಆರ್.ಬಾಲಕೃಷ್ಣ, 'ಪ್ರಕರಣದಿಂದ ಸಂತೋಷ್ ರಾವ್ ಅವರನ್ನು ಖುಲಾಸೆಗೊಳಿಸಿ ವಿಚಾರಣಾ ನ್ಯಾಯಾಲಯ ನೀಡಿರುವ ತೀರ್ಪು ಪ್ರಶ್ನಿಸಿ ಸಿಬಿಐ ಸಲ್ಲಿಸಿರುವ ಕ್ರಿಮಿನಲ್ ಮೇಲ್ಮನವಿ ವಿಭಾಗೀಯ ನ್ಯಾಯಪೀಠದ ಮುಂದೆ ವಿಚಾರಣೆಗೆ ಬಾಕಿಯಿದೆ. ಮೇಲ್ಮನವಿ ಜೊತೆಗೆ ಈ ಅರ್ಜಿಯನ್ನೂ ವಿಚಾರಣೆಗೆ ನಿಗದಿಪಡಿಸಬೇಕು' ಎಂದು ನ್ಯಾಯಪೀಠಕ್ಕೆ ಮನವಿ ಮಾಡಿದರು.

ಇದನ್ನು ಪರಿಗಣಿಸಿದ ನ್ಯಾಯಪೀಠ, ರೋಸ್ಟರ್ ಅನುಸಾರ ಸೂಕ್ತ ವಿಭಾಗೀಯ ನ್ಯಾಯಪೀಠದ ಮುಂದೆ ಈ ಅರ್ಜಿಯನ್ನು ವಿಚಾರಣೆಗೆ ನಿಗದಿಪಡಿಸಲು ಮುಖ್ಯ ನ್ಯಾಯಮೂರ್ತಿಗಳಿಂದ ಅನುಮತಿ ಪಡೆಯುವಂತೆ ರಿಜಿಸ್ಟ್ರಿಗೆ ಸೂಚಿಸಿತು.

ಪ್ರತಿವಾದಿಗಳಾದ ರಾಜ್ಯ ಗೃಹ ಇಲಾಖೆ ಕಾರ್ಯದರ್ಶಿ, ರಾಜ್ಯ ಪೊಲೀಸ್ ಮಹಾ ನಿರ್ದೇಶಕರು, ಸಿಐಡಿ ಎಡಿಜಿಪಿ, ಅಪರಾಧ ಮತ್ತು ತಾಂತ್ರಿಕ ಸೇವಗಳ ವಿಭಾಗದ ಎಡಿಜಿಪಿ, ದಕ್ಷಿಣ ಕನ್ನಡ ಪೊಲೀಸ್ ವರಿಷ್ಠಾಧಿಕಾರಿ, ಸಿಐಡಿ ಉಪ ಪೊಲೀಸ್ ವರಿಷ್ಠಾಧಿಕಾರಿ, ಬೆಳ್ತಂಗಡಿ ಪೊಲೀಸ್ ಠಾಣಾಧಿಕಾರಿ ಮತ್ತು ಸಿಬಿಐಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿತು. ಪ್ರಕರಣದಲ್ಲಿ ಆರೋಪದಿಂದ ಖುಲಾಸೆಯಾಗಿರುವ ಸಂತೋಷ್ ರಾವ್ ಅವರನ್ನು ಅರ್ಜಿಯಲ್ಲಿ ಹತ್ತನೇ ಪ್ರತಿವಾದಿಯನ್ನಾಗಿ ಸೇರ್ಪಡೆ ಮಾಡಲಾಗಿದೆ.

'ಆರೋಪಿ ಸಂತೋಷ್ ರಾವ್ ಅವರನ್ನು ಖುಲಾಸೆಗೊಳಿಸಿ ಸೆಷನ್ಸ್ ನ್ಯಾಯಾಲಯ 2023ರ ಜೂನ್ 16ರಂದು ಆದೇಶಿಸಿದೆ. ಈ ಪ್ರಕರಣದಲ್ಲಿ ನ್ಯಾಯೋಚಿತವಾದ ತನಿಖೆ ನಡೆದಿಲ್ಲ. ಹೀಗಾಗಿ, ಮರು ತನಿಖೆ ನಡೆಸಲು ಆದೇಶಿಸಬೇಕು' ಎಂದು ಅರ್ಜಿದಾರರು ಕೋರಿದ್ದಾರೆ.

ಪ್ರಕರಣವೇನು?: ಉಜಿರೆಯ ಎಸ್‌ಡಿಎಂ ಕಾಲೇಜು ವಿದ್ಯಾರ್ಥಿನಿಯಾಗಿದ್ದ ಸೌಜನ್ಯ 2012ರ ಅಕ್ಟೋಬರ್ 9ರಂದು ಸಂಜೆ ಕಾಲೇಜಿನಿಂದ ಮನೆಗೆ ತೆರಳುವ ವೇಳೆ ನಾಪತ್ತೆಯಾಗಿದ್ದರು. ಮರುದಿನ ರಾತ್ರಿ ಧರ್ಮಸ್ಥಳದ ಮಣ್ಣಸಂಕ ಬಳಿ ಸೌಜನ್ಯ ಶವ ಪತ್ತೆಯಾಗಿತ್ತು. ಬೆಳ್ತಂಗಡಿ ಪೊಲೀಸ್ ಠಾಣೆಯಲ್ಲಿ ಅತ್ಯಾಚಾರ ಮತ್ತು ಕೊಲೆ ಪ್ರಕರಣ ದಾಖಲಾಗಿತ್ತು.

ಜಯಂತಿಯಲ್ಲಿ ಸಚಿವ ಶಿವರಾಜ ತಂಗಡಗಿ

ಸರ್ವಜ್ಞ ಸಮಾಧಿ ಅಭಿವೃದ್ಧಿಗೆ ಕ್ರಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಹಾವೇರಿ ಜಿಲ್ಲೆಯ ಹಿರೇಕೆರೂರಿನಲ್ಲಿ ಸರ್ವಜ್ಞನ ಸಮಾಧಿಯ ಸ್ಥಳವನ್ನು ಕೂಡಲಸಂಗಮ ಮಾದರಿಯಲ್ಲಿ ಅಭಿವೃದ್ಧಿ ಮಾಡಲಾಗುವುದು' ಎಂದು ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ ಎಸ್. ತಂಗಡಗಿ ತಿಳಿಸಿದರು.

ನಗರದಲ್ಲಿ ಮಂಗಳವಾರ ನಡೆದ 'ಸರ್ವಜ್ಞ ಜಯಂತಿ' ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

'ಯಾರೂ ಮನವಿ ಮಾಡದೇ ಇದ್ದರೂ ಸರ್ವಜ್ಞರ ಬಗ್ಗೆ ನಾವು ಸ್ವಯಂ ಕಾಳಜಿ ವಹಿಸಿ ಕೆಲಸ ಮಾಡುತ್ತಿದ್ದೇವೆ. ಮುಖ್ಯಮಂತ್ರಿಯವರಿಂದಲೇ ಶಂಕುಸ್ಥಾಪನೆ ಮಾಡಿಸಿ ಅಭಿವೃದ್ಧಿ ಪಡಿಸುತ್ತೇವೆ' ಎಂದು ಹೇಳಿದರು.

'ಸರ್ವಜ್ಞ ಯಾವ ಜಾತಿ, ಸಮುದಾಯಗಳಿಗೆ ಸೇರಿದವರಲ್ಲ. ಎಲ್ಲರಿಗೂ ಸೇರಿದವರು. 12ನೇ ಶತಮಾನದಲ್ಲಿ ಬಸವಣ್ಣ ಜಾತಿ ತೊಡೆದು ಹಾಕಲು ಹೋರಾಟ ಮಾಡಿದ್ದರು. 16ನೇ ಶತಮಾನದಲ್ಲಿ ಅದೇ ಹಾದಿಯಲ್ಲಿ ಸಾಗಿದವರು ಸರ್ವಜ್ಞ' ಎಂದು ಬಣ್ಣಿಸಿದರು.



ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮಂಗಳವಾರ ಆಯೋಜಿಸಿದ್ದ ಸರ್ವಜ್ಞ ಜಯಂತಿಯನ್ನು ಸಚಿವ ಶಿವರಾಜ ಎಸ್‌.ತಂಗಡಗಿ ಪುಷ್ಪಾರ್ಚನೆ ಮಾಡುವ ಮೂಲಕ ಉದ್ಘಾಟಿಸಿದರು. ಇಲಾಖೆಯ ನಿರ್ದೇಶಕಿ ಧರಣಿದೇವಿ ಮಾಲಗತ್ತಿ, ಕಾರ್ಯದರ್ಶಿ ಎನ್‌. ಮಂಜುಳಾ ಉಪಸ್ಥಿತರಿದ್ದರು —ಪ್ರಜಾವಾಣಿ ಚಿತ್ರ

'ಹಿಂದಿನ ಸರ್ಕಾರ ಯಾವುದೇ ಅಭಿವೃದ್ಧಿ ಕಾರ್ಯಗಳನ್ನು ಮಾಡಿಲ್ಲ. ಜೀವಮಾನದ ಸಾಧನೆ ಪ್ರಶಸ್ತಿಯನ್ನು ಮೂರು ವರ್ಷ ಕೊಟ್ಟಿರಲಿಲ್ಲ. ನಾವು ಈ ಬಾರಿ ಪ್ರಶಸ್ತಿ ಪ್ರದಾನ ಮಾಡಿದೆವು. ಇದು ನಮ್ಮ ಬದ್ಧತೆ' ಎಂದು ಹೇಳಿದರು.

ಶಿಕ್ಷಕಿ ವಾಣಿ ಎನ್. ಶೆಟ್ಟಿ ಉಪನ್ಯಾಸ ನೀಡಿದರು. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಕಾರ್ಯದರ್ಶಿ ಎನ್.ಮಂಜುಳಾ, ನಿರ್ದೇಶಕಿ ಧರಣಿ ದೇವಿ ಮಾಲಗತ್ತಿ, ಜಂಟಿ ನಿರ್ದೇಶಕರಾದ ಬಲವಂತರಾವ್ ಪಾಟೀಲ , ಬನಶಂಕರಿ ಅಂಗಡಿ ಉಪಸ್ಥಿತರಿದ್ದರು.

ಬೇಸರ: 'ಸಿದ್ದರಾಮಯ್ಯ ಹಿಂದಿನ ಬಾರಿ ಮುಖ್ಯಮಂತ್ರಿಯಾಗಿದ್ದಾಗ ಸರ್ವಜ್ಞನ ಸಮಾಧಿ ಅಭಿವೃದ್ಧಿಗೆ ಬಜೆಟ್‌ನಲ್ಲಿ ₹ 10 ಕೋಟಿ ಘೋಷಿಸಿದ್ದರು. ಆದರೆ, ಒಂದು ರೂಪಾಯಿ ಖರ್ಚೂ ಮಾಡಿಲ್ಲ' ಎಂದು ಸಭೆಯಲ್ಲಿದ್ದವರೊಬ್ಬರು ಸಚಿವರ ಮುಂದೆಯೇ ಬೇಸರ ವ್ಯಕ್ತಪಡಿಸಿದರು.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in



ಸುಭಾಷಿತ

ಒಂದು ಮಗುವಿಗೆ ಸ್ವಲ್ಪಮಟ್ಟಿಗೆ ಪ್ರೀತಿಯನ್ನು ತೋರಿಸಿ ನೋಡಿ, ಅದಕ್ಕೆ ಪ್ರತಿಯಾಗಿ ಮಹತ್ತಾದುದನ್ನು ಪಡೆಯುತ್ತೀರಿ.

-ಜಾನ್ ರಸ್ಕಿನ್

ರೈತರ ಬೇಡಿಕೆಗಳನ್ನು ಸರ್ಕಾರ ಸಹಾನುಭೂತಿಯಿಂದ ಪರಿಶೀಲಿಸಲಿ

ಮೂರು ವರ್ಷಗಳ ಬಳಿಕ ರೈತರು ಪುನಃ ಪ್ರತಿಭಟನೆ ಆರಂಭಿಸಿದ್ದಾರೆ. ರೈತ ಸಂಘಟನೆಗಳ ಮುಖಂಡರು ಮತ್ತು ಸರ್ಕಾರದ ನಡುವೆ ನಡೆದ ನಾಲ್ಕು ಸುತ್ತಿನ ಮಾತುಕತೆಗಳು ವಿಫಲವಾಗಿದ್ದರಿಂದ 'ದಿಲ್ಲಿ ಚಲೋ' ಎಂಬ ಘೋಷಣೆಯೊಂದಿಗೆ ರೈತರು ದೆಹಲಿಯತ್ತ ಹೊರಟಿದ್ದಾರೆ. ಮಾತುಕತೆ ನಡೆಸಿದ ರೈತ ಸಂಘಟನೆಗಳ ನಾಯಕರು ಮತ್ತು ಕೇಂದ್ರದ ಸಚಿವರಿಗೆ ಪ್ರಮುಖ ಬೇಡಿಕೆಗಳನ್ನು ಈಡೇರಿಸುವುದಕ್ಕೆ ಸಂಬಂಧಿಸಿ ಒಮ್ಮತಕ್ಕೆ ಬರಲು ಸಾಧ್ಯವಾಗಿಲ್ಲ. ಎಲ್ಲ ಬೆಳೆಗಳಿಗೆ ಕನಿಷ್ಠ ಬೆಂಬಲ ಬೆಲೆಯ (ಎಂಎಸ್‌ಪಿ) ಖಾತರಿಗೆ ಕಾಯ್ದೆ ರೂಪಿಸಬೇಕು, ಸ್ವಾಮಿನಾಥನ್ ಆಯೋಗದ ಶಿಫಾರಸುಗಳನ್ನು ಜಾರಿಗೆ ತರಬೇಕು, ರೈತರು ಮತ್ತು ಕೃಷಿ ಕಾರ್ಮಿಕರಿಗೆ ಪಿಂಚಣಿ ನೀಡಬೇಕು, ಕೃಷಿ ಸಾಲ ಮನ್ನಾ ಮಾಡಬೇಕು, ಪ್ರತಿಭಟನೆ ನಡೆಸಿದ ರೈತರ ಮೇಲೆ ಹಾಕಲಾಗಿರುವ ಪ್ರಕರಣಗಳನ್ನು ರದ್ದು ಮಾಡಬೇಕು, ಲಖೀಂಪುರ ಖೀರಿಯಲ್ಲಿ 2021ರಲ್ಲಿ ನಡೆದ ಹಿಂಸಾಚಾರದ ಸಂತ್ರಸ್ತರಿಗೆ ನ್ಯಾಯ ಒದಗಿಸಬೇಕು ಎಂಬುವು ರೈತರ ಪ್ರಮುಖ ಬೇಡಿಕೆಗಳಾಗಿವೆ. ಸರ್ಕಾರವು ಭರವಸೆ ಕೊಟ್ಟಿದ್ದರೂ ಈ ಬೇಡಿಕೆಗಳು ಈಡೇರಿಲ್ಲ ಎಂದು ರೈತರು ಆಕ್ರೋಶಗೊಂಡಿದ್ದಾರೆ. ಲೋಕಸಭೆ ಚುನಾವಣೆಯು ಸನಿಹದಲ್ಲಿರುವ ಈ ಹೊತ್ತಿನಲ್ಲಿ ಸರ್ಕಾರವು ತಮ್ಮ ಬೇಡಿಕೆಗಳನ್ನು ಕಡೆಗಣಿಸದು ಎಂಬ ವಿಶ್ವಾಸದಲ್ಲಿ ರೈತರು ಒತ್ತಡ ಹೇರಲು ನಿರ್ಧರಿಸಿದ್ದಾರೆ.



ರೈತರು ಬೆಳೆದ ಉತ್ಪನ್ನಗಳಿಗೆ ಸಮರ್ಪಕವಾದ ಪ್ರತಿಫಲ ಸಿಗುವಂತೆ ನೋಡಿಕೊಳ್ಳುವುದು ಸರ್ಕಾರದ ಹೊಣೆಗಾರಿಕೆ

ಮೂರು ವರ್ಷಗಳ ಹಿಂದೆ ಮಾಡಿದಂತೆಯೇ ಈಗಲೂ ಪ್ರತಿಭಟನೆಯನ್ನು ಹತ್ತಿಕ್ಕಲು ಸರ್ಕಾರ ಮುಂದಾಗಿದೆ. ರಾಷ್ಟ್ರ ರಾಜಧಾನಿಯಲ್ಲಿ ಅಪರಾಧ ಪ್ರಕ್ರಿಯಾ ಸಂಹಿತೆಯ 144ನೇ ಸೆಕ್ಷನ್ ಅಡಿಯಲ್ಲಿ ನಿರ್ಬಂಧಗಳನ್ನು ದೆಹಲಿ ಪೊಲೀಸರು ಹೇರಿದ್ದಾರೆ. ಬ್ಯಾರಿಕೇಡ್‌ಗಳನ್ನು ಇರಿಸಿ ದೆಹಲಿಯನ್ನು ಕೋಟೆಯಂತೆ ಭದ್ರಪಡಿಸಲಾಗಿದೆ. ಗಡಿ ಭಾಗದ ರಸ್ತೆಗಳಲ್ಲಿ ಮೊಳೆಗಳನ್ನು ಹೊಡೆಯಲಾಗಿದೆ. ಅರೆಸೇನಾ ಪಡೆಯ ಹತ್ತಾರು ತುಕಡಿಗಳು ಮತ್ತು ಪೊಲೀಸರನ್ನು ನಿಯೋಜಿಸಿ ರೈತರು ದೆಹಲಿ ಪ್ರವೇಶಿಸುವುದನ್ನು ತಡೆಯಲು ಸಿದ್ಧತೆ ಮಾಡಿಕೊಳ್ಳಲಾಗಿದೆ. ಹರಿಯಾಣ ಮತ್ತು ರಾಷ್ಟ್ರ ರಾಜಧಾನಿ ಪ್ರದೇಶದ ಹಲವು ರಸ್ತೆಗಳಲ್ಲಿ ಸಂಚಾರವನ್ನು ನಿರ್ಬಂಧಿಸಲಾಗಿದೆ. ಸರ್ಕಾರದ ರೀತಿಯಲ್ಲಿಯೇ ರೈತರು ಕೂಡ ಪ್ರತಿಭಟನೆ ನಡೆಸಿಯೇ ಸಿದ್ಧ ಎಂದು ಪಣ ತೊಟ್ಟಿದ್ದಾರೆ. 200ಕ್ಕೂ ಹೆಚ್ಚು ಸಂಘಟನೆಗಳು ಒಟ್ಟಾಗಿ ರೈತರನ್ನು ದೆಹಲಿಯತ್ತ ಕರೆತರುತ್ತಿವೆ. 2021-22ರಲ್ಲಿ ರೈತರು ಒಂದು ವರ್ಷವಿಡೀ ನಡೆಸಿದ ಪ್ರತಿಭಟನೆಯು ಐತಿಹಾಸಿಕ. ಕೃಷಿ ಕ್ಷೇತ್ರಕ್ಕೆ ಸಂಬಂಧಿಸಿದ, ವಿವಾದಾತ್ಮಕವಾಗಿದ್ದ ಮೂರು ಕಾಯ್ದೆಗಳನ್ನು ಈ ಪ್ರತಿಭಟನೆಯ ಪರಿಣಾಮವಾಗಿ ಸರ್ಕಾರ ಹಿಂದಕ್ಕೆ ಪಡೆಯಬೇಕಾಯಿತು. ಇದು ರೈತರಿಗೆ ದೊರೆತ ಭಾಗಶಃ ಗೆಲುವು. ಈಗಿನ ಪ್ರತಿಭಟನೆಯು ಮೂರು ವರ್ಷಗಳ ಹಿಂದಿನ ಪ್ರತಿಭಟನೆಯ ಮುಂದುವರಿದ ಭಾಗ ಎಂದು ರೈತರು ಪರಿಗಣಿಸಿದ್ದಾರೆ. ಆಗ ಈಡೇರದ ಬೇಡಿಕೆಗಳು ಈಗ ಈಡೇರಬಹುದು ಎಂಬ ವಿಶ್ವಾಸ ಅವರಲ್ಲಿದೆ.

ಶಾಂತಿಯುತವಾಗಿ ಪ್ರತಿಭಟಿಸುವ ಹಕ್ಕು ರೈತರಿಗೆ ಇದೆ. ಅಂತಹ ಪ್ರತಿಭಟನೆಯನ್ನು ಸರ್ಕಾರವು ಬಲವಂತವಾಗಿ ಹತ್ತಿಕ್ಕಲು ಪ್ರಯತ್ನಿಸುವುದು ಸರಿಯಲ್ಲ. ಉತ್ತಮ ಬೆಲೆ ಮತ್ತು ಸಮರ್ಪಕ ನೀತಿಗಳು ಬೇಕು ಎಂದು ಜಗತ್ತಿನ ಇತರ ಭಾಗಗಳಲ್ಲಿ ಕೂಡ ರೈತರು ಪ್ರತಿಭಟನೆ ನಡೆಸುತ್ತಿದ್ದಾರೆ. ಯುರೋಪ್ ಖಂಡದ ಹೆಚ್ಚಿನ ದೇಶಗಳಲ್ಲಿ ರೈತರ ಚಳವಳಿಗಳು ನಡೆಯುತ್ತಿವೆ. ಅವರಿಗೆ ಆ ಹಕ್ಕು ಇದೆ. ಅಲ್ಲಿನ ಸರ್ಕಾರಗಳು ಈ ಪ್ರತಿಭಟನೆಯನ್ನು ದಮನಿಸಲು ಪ್ರಯತ್ನಿಸುತ್ತಿಲ್ಲ. ಸರ್ಕಾರ ಮತ್ತು ರೈತರ ನಡುವೆ ಮಾತುಕತೆಗಳು ನಿರಂತರವಾಗಿ ನಡೆಯಬೇಕು; ರೈತರ ದೂರುಗಳು ಮತ್ತು ಬೇಡಿಕೆಗಳನ್ನು ಸಕಾರಾತ್ಮಕವಾಗಿಯೇ ಕಂಡು, ಪರಿಹರಿಸಬೇಕು. ಕನಿಷ್ಠ ಬೆಂಬಲ ಬೆಲೆಯನ್ನು ಖಾತರಿಪಡಿಸಲು ಕಾಯ್ದೆ ರೂಪಿಸಬೇಕು ಮತ್ತು ಸ್ವಾಮಿನಾಥನ್ ಆಯೋಗದ ಎಲ್ಲ ಶಿಫಾರಸುಗಳನ್ನು ಜಾರಿ ಮಾಡಬೇಕು ಎಂಬುದರ ಕುರಿತು ಭಿನ್ನಾಭಿಪ್ರಾಯಗಳು ಇವೆ. ಆದರೆ, ರೈತರು ಬೆಳೆದ ಉತ್ಪನ್ನಗಳಿಗೆ ಸಮರ್ಪಕವಾದ ಪ್ರತಿಫಲ ಸಿಗುವಂತೆ ನೋಡಿಕೊಳ್ಳುವುದು ಸರ್ಕಾರದ ಹೊಣೆಗಾರಿಕೆ. ಸರ್ಕಾರವು ಈ ಹೊಣೆಯನ್ನು ನಿರ್ವಹಿಸಿದರೆ ಬೇಸಾಯವು ಲಾಭದಾಯಕವಾದ ವೃತ್ತಿ ಆಗುವುದರಲ್ಲಿ ಅನುಮಾನ ಇಲ್ಲ.

ದಿನದ ಟ್ವೀಟ್

ಎಲ್ಲ ರಾಜ್ಯಗಳೂ ಅನುಸರಿಸಲಿ



ಮಧ್ಯಾಹ್ನದ ಬಿಸಿಯೂಟದ ಭಾಗವಾಗಿ ಮಕ್ಕಳಿಗೆ ಮೊಟ್ಟೆ ಕೊಡುತ್ತಿರುವ ರಾಜ್ಯಗಳ ಪಟ್ಟಿಗೆ ಅಸ್ಸಾಂ ಸಹ ಸೇರಿದ್ದು ಒಳ್ಳೆಯ ಬೆಳವಣಿಗೆ. ಈ ಸಂಬಂಧ ಕರ್ನಾಟಕ ಮತ್ತು ತಮಿಳುನಾಡಿನಲ್ಲಿ ಆಚರಣೆಯಲ್ಲಿ ಇರುವುದನ್ನು ಅನುಸರಿಸಲು ಎಲ್ಲ ರಾಜ್ಯಗಳೂ ಮುಂದಾಗುವುದಕ್ಕೆ ಇದು ಸರಿಯಾದ ಸಮಯ.

ಅನುಷಾ ರವಿ ಸೂದ್, ಪತ್ರಕರ್ತೆ

ಕಿಡಿನುಡಿ



ನ್ಯಾಯಾಂಗ ಮತ್ತು ಪೊಲೀಸ್ ವ್ಯವಸ್ಥೆಯಲ್ಲಿನ ಸುಧಾರಣೆಗಳು 2024- 29ರ ಅವಧಿಯ ಸರ್ಕಾರದ ಆದ್ಯತೆ ಆಗಬೇಕು. ನ್ಯಾಯಾಂಗದ ಬಗ್ಗೆ ಜನ ನಂಬಿಕೆ ಹೊಂದುವಂತೆ ಮಾಡಬೇಕಾದರೆ ಪ್ರಕರಣಗಳನ್ನು ಕಾಲಮಿತಿಯಲ್ಲಿ ಇತ್ಯರ್ಥಪಡಿಸುವುದು ಅತ್ಯವಶ್ಯ...

ರಮೇಶ್ ಆರ್.ಬಿ., ಚೆಸ್ ತರಬೇತುದಾರ

ಕಿಡಿನುಡಿ



ರೈತರು ನಮ್ಮ ನಾಗರಿಕರು. ಅಶ್ರುವಾಯು, ಜಲಫಿರಂಗಿ, ಬ್ಯಾರಿಕೇಡ್‌ಗಳು ಈ ಎಲ್ಲವೂ ಯಾಕಾಗಿ...? ಅವರು ಬೇಸಾಯ ಮಾಡುವುದನ್ನು ನಿಲ್ಲಿಸಿದರೆ ನಾವು ಏನು ಮಾಡಬಲ್ಲೆವು? ಜೈ ಕಿಸಾನ್- ಜೈ ಹಿಂದ್ #FarmerProtests

ರೇಣುಕಾ ಚೌದರಿ, ಕಾಂಗ್ರೆಸ್ ನಾಯಕಿ

25 ವರ್ಷಗಳ ಹಿಂದೆ

ಭಾನುವಾರ, 21-2-1999

• ಪಾಕ್ ನೆಲದಲ್ಲಿ ವಾಜಪೇಯಿಗೆ ಅಭೂತಪೂರ್ವ ಸ್ವಾಗತ

ವಾಘ (ಲಾಹೋರ್ ಗಡಿ), ಫೆ. 20 (ಪಿಟಿಐ, ಯುಎನ್‌ಐ)- ಭಾರತ- ಪಾಕಿಸ್ತಾನ ನಡುವಿನ ಸ್ನೇಹ- ಬಾಂಧವ್ಯ ಬೆಳೆಸುವ ಮತ್ತು ಹಳೆಯ ಸಮಸ್ಯೆಗಳ ಇತ್ಯರ್ಥದತ್ತ ಅತ್ಯಂತ ಮಹತ್ವದ ಹೆಜ್ಜೆ ಎಂದು ಬಣ್ಣಿಸಲಾದ, ಭಾರತದ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಅವರ ಎರಡು ದಿನಗಳ ಐತಿಹಾಸಿಕ ಭೇಟಿ ಇಂದು ಆರಂಭವಾಗಿದ್ದು, ಅವರು ಪಯಣಿಸಿದ ವಿಶೇಷ ಬಸ್ಸು ಸಂಜೆ 4 ಗಂಟೆ 8 ನಿಮಿಷಕ್ಕೆ ಪಾಕಿಸ್ತಾನದ ನೆಲವನ್ನು ಸ್ಪರ್ಶಿಸಿತು.

ಬಸ್ಸು ಪಾಕ್ ಗಡಿಯ ಕಬ್ಬಿಣದ ಗೇಟನ್ನು ದಾಟಿ ಪಾಕಿಸ್ತಾನದ ನೆಲ ತಲುಪುವುದನ್ನು ದೇಶ- ವಿದೇಶಗಳ ಟಿ.ವಿ.ಗಳು ಸೆರೆ ಹಿಡಿದು, ನೇರ ಪ್ರಸಾರ ಮಾಡಿದವು.

ವಾಜಪೇಯಿ ಅವರು ಬಸ್ಸಿನಿಂದ ಕೆಳಗಿಳಿದದ್ದೇ ಕಪ್ಪು ಶೇರ್ವಾನಿಯಲ್ಲಿದ್ದ ನೆರೆಯ ದೇಶದ ಪ್ರಧಾನಿ ನವಾಜ್ ಷರೀಫ್ ಅವರು ಅತ್ಯಂತ ಆತ್ಮೀಯವಾಗಿ ಆಲಿಂಗಿಸಿಕೊಂಡು ಅವರನ್ನು ಸ್ವಾಗತಿಸಿದರು. ನಂತರ ಉಭಯ ದೇಶಗಳ ಪ್ರಧಾನಿಗಳು ನಸುನಗುತ್ತ ಟಿ.ವಿ. ಕ್ಯಾಮೆರಾಗಳಿಗೆ ದೃಶ್ಯ ಸೆರೆಹಿಡಿಯಲು ಅವಕಾಶ ನೀಡಿದರು.

ಪ್ರಧಾನಿ ವಾಜಪೇಯಿ ಅವರು ಪಂಜಾಬ್ ಮುಖ್ಯಮಂತ್ರಿ ಪ್ರಕಾಶ್ ಸಿಂಗ್ ಬಾದಲ್, ಜಸ್ವಂತ್ ಸಿಂಗ್, ಚಿತ್ರನಟ ದೇವಾನಂದ್, ಶತ್ರುಘ್ನ ಸಿನ್ಹಾ, ಗಾಯಕ ಮಹೇಂದ್ರ ಕಪೂರ್, ಕ್ರಿಕೆಟ್ ಆಟಗಾರ ಕಪಿಲ್ ದೇವ್, ನೃತ್ಯಗಾರ್ತಿ- ಮಲ್ಲಿಕಾ ಸಾರಾಭಾಯಿ, ಪತ್ರಕರ್ತ ಅರುಣ್ ಶೌರಿ ಮುಂತಾದವರೊಡನೆ ಬಸ್ಸಿನಿಂದ ಇಳಿದದ್ದೇ ಸಾಂಪ್ರದಾಯಿಕ ನೃತ್ಯ ಮತ್ತು ಗಾಯನದ ಮೂಲಕ ಅವರಿಗೆ ಅಭೂತಪೂರ್ವ ಸ್ವಾಗತ ಕೋರಲಾಯಿತು.

ಪಾಕಿಸ್ತಾನದ ಸೇನೆಯಿಂದ ಪ್ರಧಾನಿ ವಾಜಪೇಯಿ ಅವರಿಗೆ ಗೌರವ ರಕ್ಷೆ ನೀಡಲಾಯಿತು.

ನಂತರ ತಂಪು ಪಾನೀಯವನ್ನು ವಿತರಿಸಲಾಯಿತು.

• ಕೆಪಿಸಿಸಿಗೆ ಎಸ್.ಎಂ. ಕೃಷ್ಣ ಅಧ್ಯಕ್ಷ

ನವದೆಹಲಿ, ಫೆ. 20- ಕಾಂಗ್ರೆಸ್‌ನ ಹಿರಿಯ ನಾಯಕ ಸೋಮನಹಳ್ಳಿ ಮಲ್ಲಯ್ಯ ಕೃಷ್ಣ ಅವರ ಸಾರಥ್ಯದಲ್ಲಿ ಮುಂಬರುವ ವಿಧಾನಸಭೆ ಚುನಾವಣೆಗೆ ಸಜ್ಜಾಗಲು ಕಾಂಗ್ರೆಸ್ ಹೈಕಮಾಂಡ್ ಇಂದು ಅವರನ್ನು ಕೆಪಿಸಿಸಿ ಅಧ್ಯಕ್ಷರನ್ನಾಗಿ ನೇಮಕ ಮಾಡುವ ಮೂಲಕ ಕರ್ನಾಟಕದಲ್ಲಿನ ಚುನಾವಣೆ ಚಟುವಟಿಕೆಗೆ ಹೊಸ ಚಾಲನೆ ನೀಡಿತು.

ಕೆಪಿಸಿಸಿಯ ನೂತನ ಅಧ್ಯಕ್ಷರ ನೇಮಕದ ನಂತರ ರಾಜ್ಯಸಭೆ ಸದಸ್ಯ ಬಿ.ಜನಾರ್ದನ ಪೂಜಾರಿ ಅವರ ಅಧ್ಯಕ್ಷತೆಯಲ್ಲಿ 32 ಮಂದಿ ಸದಸ್ಯರ ಪ್ರಚಾರ ಸಮಿತಿಯನ್ನು ಪ್ರಕಟಿಸಲಾಯಿತು.

ಕರ್ನಾಟಕದಲ್ಲಿನ ಕಾಂಗ್ರೆಸ್ ಉಸ್ತುವಾರಿ ನೋಡಿಕೊಳ್ಳುವ ಪ್ರಧಾನ ಕಾರ್ಯದರ್ಶಿ ಗುಲಾಂ ನಬಿ ಆಜಾದ್ ಅವರು ಎಐಸಿಸಿ ಕಾರ್ಯಾಲಯದಲ್ಲಿ ತುರ್ತಾಗಿ ಕರೆದ ಪತ್ರಿಕಾಗೋಷ್ಠಿಯಲ್ಲಿ ಕೃಷ್ಣ ಅವರ ನೇಮಕವನ್ನು ಪ್ರಕಟಿಸಿದರು.

ಅದೇ ವೇಳೆ ಅವರು ಕೆಪಿಸಿಸಿ ಅಧ್ಯಕ್ಷ ಸ್ಥಾನಕ್ಕೆ ಧರ್ಮಸಿಂಗ್ ಅವರು ನೀಡಿರುವ ರಾಜೀನಾಮೆಯನ್ನು ಪ್ರಕಟಿಸಿದರು.

ನಮ್ಮ ಮಾತೃಭಾಷೆಯು ನಮ್ಮ ಜೀವನ ಎಂಬ ಸತ್ಯವನ್ನು ನಾವು ನಿರ್ಲಕ್ಷಿಸುವಂತಿಲ್ಲ

ನಮ್ಮ ಭಾಷೆ, ನಮ್ಮ ಅರಿವು



ವಿಶ್ಲೇಷಣೆ

ಡಾ. ಕೆ.ಎಸ್.ಪವಿತ್ರ

ಟಿ.ವಿ. ವಾಹಿನಿಯೊಂದರ ಸಂದರ್ಶನ ಮುಗಿಸಿ ಹೊರಬಂದಾಗ ವೀಕ್ಷಕರೊಬ್ಬರು ಹೇಳಿದ ಮಾತು 'ಮೇಡಂ, ನಿಮ್ಮ ಸಂದರ್ಶನ ನೋಡಿ ಕನ್ನಡ ಮೀಡಿಯಂ ಪಾಠ ಕೇಳಿದ ಹಾಗೆ ಆಯ್ತು. ಈಗ ಪೂರ್ತಿಯಾಗಿ ಕನ್ನಡ ಮಾತಾಡುವವರು ಸಿಕ್ತಾರಾ ಅಂತ ಹುಡುಕೋ ಕಾಲ'. ಹೆಮ್ಮೆ, ಸಂತಸ ಎನಿಸುವ ಬದಲು ಖೇದ, ಅಚ್ಚರಿಯಾಯಿತು. ನಮ್ಮ ಮಾತೃಭಾಷೆಯನ್ನೇ 'ಪೂರ್ತಿಯಾಗಿ' ಮಾತನಾಡಲಾಗದ ಸ್ಥಿತಿ ಬಂದಿದೆ ಎಂಬ ನೋವು.

ವೃತ್ತಿಜೀವನದಲ್ಲಿ ಮೊನ್ನೆ ಹಳ್ಳಿಯ ಹೆಣ್ಣುಮಗಳೊಬ್ಬಳು ಬಂದು ಹೇಳಿದ್ದು 'ವಾಮಿಟ್ಟಾಗ್ತಿದೆ ಡಾಕ್ಟ್ರೇ'. ನಾನು ಅದೆಷ್ಟು ಬಾರಿ ವಾಂತಿಯ ವಿವರ ಕೇಳಿದಾಗ್ಯೂ ಆಕೆ ಮಾತ್ರ ಮಾತಾಡಿದ್ದು ತನ್ನ 'ವಾಮಿಟ್ಟ'ನ ಬಗೆಗೇ. ಇಂಗ್ಲಿಷ್ ಪದ ಉಪಯೋಗಿಸದೆ, ಅಚ್ಚ ಕನ್ನಡದಲ್ಲಿ ಮಾತನಾಡಿದೆವೆಂದರೆ ಜನ 'ಅರ್ಥವಾಗುತ್ತಿಲ್ಲ' ಎನ್ನುವಷ್ಟು, ನಮ್ಮ ಮಕ್ಕಳು ಕಣ್ಣರಳಿಸಿ 'ಅರ್ಥವಾಗ್ತಿಲ್ಲ, ಸರಿಯಾಗಿ ಹೇಳು' ಎನ್ನುವಷ್ಟು ನಮ್ಮನ್ನು 'ಜಾಗತಿಕ ಭಾಷೆ'ಯಾದ ಇಂಗ್ಲಿಷ್ ಆವರಿಸಿದೆ!

ಬಾಂಗ್ಲಾದೇಶವು ಬಂಗಾಲಿ ಭಾಷೆಯೇ ತನ್ನ ರಾಷ್ಟ್ರಭಾಷೆ ಆಗಿರಬೇಕು ಎಂದು 'ಏಕುಶೆ ಫೆಬ್ರುವರಿ' ಯಂದು (ಫೆ. 21) ಹಟ ಹಿಡಿದು ಭಾಷಾ ಆಂದೋಲನ ನಡೆಸಿದ್ದು, ಹಲವರು ಪ್ರಾಣ ತೆತ್ತಿದ್ದು, ಪಾಕಿಸ್ತಾನವು ವಿಭಜನೆಯಾಗಿ ಬಾಂಗ್ಲಾದೇಶ ಆಗಲು ಇದು ಪ್ರಮುಖ ಕಾರಣವಾದದ್ದು ಇಂದು ಇತಿಹಾಸ. ಆ ಇತಿಹಾಸದ ತುಣುಕೇ ಈಗ ಯುನೆಸ್ಕೊ ಪ್ರತಿವರ್ಷ ಆಚರಿಸುತ್ತಿರುವ ಫೆಬ್ರುವರಿ 21ರ 'ಅಂತರರಾಷ್ಟ್ರೀಯ ಮಾತೃಭಾಷಾ ದಿನ'. 2000ನೇ ಇಸವಿಯಿಂದ ಪ್ರತಿವರ್ಷ ನಡೆಯುತ್ತಿರುವ ಮಾತೃಭಾಷಾ ದಿನ ಸಾಂಸ್ಕೃತಿಕ- ಭಾಷಾ ವೈವಿಧ್ಯವನ್ನು ಉಳಿಸಲು ಶ್ರಮಿಸುತ್ತಿದೆ. ಮತ್ತೆ ಮತ್ತೆ ನಮ್ಮನ್ನು ಎಚ್ಚರಿಸುತ್ತಿದೆ. ಬಹುಭಾಷಾ ಶಿಕ್ಷಣ ಎಂಬುದು ತಲೆಮಾರಿನಿಂದ ತಲೆಮಾರಿಗೆ ನಡೆಯುವ ಕಲಿಕೆಯಲ್ಲಿ ಮುಖ್ಯ ಆಧಾರಸ್ತಂಭ ಎಂಬುದು ಈ ಬಾರಿಯ ಧ್ಯೇಯ.

ಅಜ್ಜ- ಅಜ್ಜಿ ಹಾಗೂ ಇತರರಿಂದ ಮಕ್ಕಳು ಅನೌಪಚಾರಿಕವಾಗಿ ಕಲಿಯುವ ವಿವಿಧ ವಿಷಯಗಳ ಜ್ಞಾನವು ಮಾತೃಭಾಷೆಯ ಮೂಲಕ ಪೀಳಿಗೆಯಿಂದ ಪೀಳಿಗೆಗೆ ಸಂಸ್ಕೃತಿಯನ್ನು ದಾಟಿಸುತ್ತದೆ, ಬೆಳೆಸುತ್ತದೆ ಮತ್ತು ಉಳಿಸುತ್ತದೆ ಎನ್ನುವುದು ಇದರ ಸಾರಾಂಶ.

ಭಾಷೆಗಳು ಸತ್ತು ಹೋಗುತ್ತಿವೆ! ಬಹು ವೇಗವಾಗಿ! ಪ್ರತಿ 14 ದಿನಗಳಿಗೊಂದು ಭಾಷೆ ಜಗತ್ತಿನಲ್ಲಿ ನಶಿಸಿ ಹೋಗುತ್ತಿದೆ. ಕೈತೋಟಕ್ಕೆ ನನ್ನ ಅಮ್ಮ ಮತ್ತು ಮಗನೊಂದಿಗೆ ಕಾಲಿಟ್ಟೆ ಎಂದರೆ, ಅಮ್ಮ ಅಲ್ಲಿರುವ ಹತ್ತು ಹಲವು ಗಿಡ, ಹೂವುಗಳ ಹೆಸರು ಹೇಳಬಲ್ಲರು. ನಾನು ಕೆಲವನ್ನು ಗುರುತಿಸಬಲ್ಲೆ. ನನ್ನ ಮಗನಿಗೆ ಗೊತ್ತಿರುವ ಹೆಸರುಗಳು ಬಲು ಕಡಿಮೆ. ನನ್ನಮ್ಮನಿಗೆ ಗಿಡಗಳ ಹೆಸರಷ್ಟೇ ಅಲ್ಲ, ಅವುಗಳ ಉಪಯೋಗ, ಔಷಧಿಯಾಗಿ ಅವುಗಳ ಬಳಕೆ, ಯಾವುದನ್ನು ತಿನ್ನುವಂತಿಲ್ಲ ಎಲ್ಲವೂ ಗೊತ್ತು. ನನಗೆ, ನನ್ನ ಮಗನಿಗೆ ಪುಸ್ತಕದ ಜ್ಞಾನ ಮಾತ್ರ ಗೊತ್ತು! ಆ ಪುಸ್ತಕದ ಜ್ಞಾನದಿಂದ ನನಗೆ ಗೊತ್ತಿರುವ ಕಿಂಚಿತ್ ಅನ್ನು 'ಜಗತ್ತು' ಎಂದು ನಾವಂದುಕೊಂಡಿರುವ ಜನಕ್ಕೆ ತಿಳಿಸಲು ಇಂದಿನ ಜಾಗತಿಕ ಭಾಷೆ 'ಇಂಗ್ಲಿಷ್' ಬೇಕು! ಆದರೆ ಇದು ನಮ್ಮ ಗ್ರಹಿಕೆ ಮಾತ್ರ, ಅರ್ಧ ಸತ್ಯ ಮಾತ್ರ. ಅದನ್ನೇ ಸತ್ಯವೆಂದು ನಾವು ನಂಬಿ ಇತರ ಭಾಷೆಗಳನ್ನು, ಇಂಗ್ಲಿಷ್ ಗೊತ್ತಿದ್ದರೂ ತಮ್ಮ ಮಾತೃಭಾಷೆಯನ್ನು ಅಭಿಮಾನದಿಂದ ಮಾತನಾಡುವವರಲ್ಲಿ ಇರುವ ಅಗಾಧ ಜ್ಞಾನವನ್ನು ಮೂಲೆಗೆ ಸರಿಸುತ್ತಿದ್ದೇವೆ.

ತನ್ನ ಮಾತೃಭಾಷೆಯನ್ನು ಬಹುವಾಗಿ ಗೌರವಿಸುವ ಜಪಾನ್‌ನಲ್ಲಿ ಪ್ರತಿ ವಿಶ್ವವಿದ್ಯಾಲಯದಲ್ಲಿಯೂ ಭಾಷಾಂತರಕ್ಕೆಂದೇ ಪ್ರತ್ಯೇಕ ವಿಭಾಗವಿದೆ. ವಿಜ್ಞಾನದಲ್ಲಿ ಯಾವ ನಿಯತಕಾಲಿಕವಾದರೂ ಸರಿಯೇ, ಅದು ಹೊರಬಂದ ಕೆಲವೇ ದಿನಗಳಲ್ಲಿ ಅದರ ಜಪಾನಿ ಅವತರಣಿಕೆ ವಿಜ್ಞಾನಿಗಳಿಗೆ ಲಭ್ಯ. ಅಂದರೆ, ನಮಗೆ ಜ್ಞಾನ ಬೇಕೆಂದರೆ ನಾವು ನಮ್ಮ ಮಾತೃಭಾಷೆಯನ್ನು ಬಿಡಬೇಕು, ಇಂಗ್ಲಿಷ್ ರೂಢಿಸಿಕೊಳ್ಳಬೇಕು ಎನ್ನುವುದು ನಿಜವಲ್ಲ. ಹಾಗೆ ನೋಡಿದರೆ, ತಿಳಿವನ್ನು, ಮಾಹಿತಿಯನ್ನು ಪಡೆಯುವಲ್ಲಿ ಭಾಷೆ ಒಂದು ಮಾಧ್ಯಮ ಮಾತ್ರ. ಆದರೆ ಮಾತೃಭಾಷೆಯನ್ನು ಕಲಿಯುವುದು, ಮಾತನಾಡುವುದು ನಮ್ಮ ಅಸ್ತಿತ್ವಕ್ಕೆ ಸಂಬಂಧಿಸಿದ್ದು. ಒಂದು ಭಾಷೆ ನಶಿಸುವಾಗ ಅದು ಒಂದು ಸಂಸ್ಕೃತಿಯನ್ನೂ ತನ್ನೊಡನೆ ಒಯ್ಯುತ್ತದೆ. ಒಂದಿಡೀ ಜ್ಞಾನಕೋಶ ಇಲ್ಲವಾಗುತ್ತದೆ!

ಮಾತೃಭಾಷೆಯನ್ನು ಜನ ತಮ್ಮ ದಿನನಿತ್ಯದ ಭಾಷೆಯಾಗಿ ಆರಿಸಿಕೊಳ್ಳದಿರುವುದಕ್ಕೆ ಹಲವು ಸಂಕೀರ್ಣ ಅಂಶಗಳು ಕಾರಣವಾಗುತ್ತವೆ. ಜಾಗತಿಕ ಭಾಷೆಯಾಗಿ ಇಂಗ್ಲಿಷ್ ರೂಪುಗೊಂಡಿರುವುದರ ಹಿಂದಿನ ಅಂಶಗಳೂ ಇದಕ್ಕೆ ಸಂಬಂಧಿಸಿದವೇ ಆಗಿವೆ. ಇಂಗ್ಲಿಷ್ ಭಾಷೆ ಅಂದಾಕ್ಷಣ ಅದು ನಮ್ಮಲ್ಲಿ ಮೂಡಿಸುವ ಕಲ್ಪನೆಗಳೆಂದರೆ, ಅದು ಸುಲಭ, ಹೆಚ್ಚು ಅವಕಾಶಗಳು ಲಭ್ಯ, ಸಾಮಾಜಿಕ ಗುರುತಿಸುವಿಕೆ ಸಾಧ್ಯ, ಒಳ್ಳೆಯ ಉದ್ಯೋಗ... ಚೀನಾದಲ್ಲಿ 'ಗಾಓಕೋ' ಎಂಬ ಪರೀಕ್ಷೆಯನ್ನು 8 ಕೋಟಿ ಪ್ರೌಢಶಾಲಾ ವಿದ್ಯಾರ್ಥಿಗಳು ಬರೆಯುತ್ತಾರೆ. ಇದನ್ನು ತೇರ್ಗಡೆಯಾಗಲು ವಿದ್ಯಾರ್ಥಿಯೊಬ್ಬಳು ದಿನಕ್ಕೆ 12 ಗಂಟೆಗಳ ಕಾಲ ಓದಬೇಕು. ಅದರಲ್ಲಿ ಶೇಕಡ 25ರಷ್ಟು ಅಂಕ ಇಂಗ್ಲಿಷ್ ಭಾಷೆಯ ಪಾಲು. ಅಂದರೆ ಇಂಗ್ಲಿಷ್ ಕಲಿಯಲು ಕಷ್ಟಪಟ್ಟಷ್ಟು, ಚೀನೀ ಭಾಷೆಯನ್ನು ಉಳಿಸಿಕೊಳ್ಳಲು ಅವರು ಕಿಂಚಿತ್ ಗಮನ ನೀಡುವುದೂ ಕಷ್ಟ ಎನ್ನುತ್ತವೆ ಅಧ್ಯಯನಗಳು.




ಹಾಗಿದ್ದರೆ ಇಂಗ್ಲಿಷ್‌ನ ಮೇಲೇ ಎಲ್ಲ ದೂಷಣೆಯನ್ನೂ ಹೊರಿಸಬೇಕೇ? ಜಗತ್ತಿನ ಎರಡನೇ ಭಾಷೆಯಾಗಿ ಇಂಗ್ಲಿಷ್ ಮೆರೆಯಲಿ. ಆದರೆ ನಮ್ಮ ಮಾತೃಭಾಷೆ ನಮ್ಮ ಜೀವನ ಎಂಬ ಸತ್ಯವನ್ನು ನಾವು ನಿರ್ಲಕ್ಷಿಸುವಂತಿಲ್ಲ. ಅಮೆರಿಕ, ಇಂಗ್ಲೆಂಡ್ ದೇಶಗಳು ನಮ್ಮ ಮೇಲೆ ಇಂಗ್ಲಿಷ್ ಅನ್ನು ಹೇರುತ್ತವೆ ಎನ್ನುವುದಕ್ಕಿಂತ, ಜಗತ್ತು ಎಳೆದು ಅದನ್ನು ತನ್ನ ತಲೆಯ ಮೇಲೆ ಹೊತ್ತುಕೊಳ್ಳುತ್ತಿದೆ ಎನ್ನುವುದೇ ಸರಿ.

ಜಗತ್ತಿಗೆ ಹಲವು ಸಾರ್ವತ್ರಿಕ ಭಾಷೆಗಳಿವೆ. ವಿಜ್ಞಾನದ ಭಾಷೆಯಾಗಿ ಗಣಿತವಿದೆ. ಹಲವು ಸಂಕೇತಗಳಿವೆ; ಭಾವನೆಗಳಿಗೆ ಶಬ್ದ ನೀಡುವ ಸಂಗೀತವೆಂಬುದೂ ವಿಶ್ವಭಾಷೆಯೇ. ಗಣಿತ-ವಿಜ್ಞಾನ-ಸಂಗೀತವನ್ನು ಉಳಿಸಿಕೊಂಡು, ಮುಂದುವರಿಸಿಕೊಂಡು ಬಂದರೂ ಶತಶತಮಾನಗಳ ಕಾಲ ಭಾಷೆಗಳ ವೈವಿಧ್ಯ ಉಳಿದುಕೊಂಡೇ ಬಂದಿತ್ತಷ್ಟೆ. ಅಂದಮೇಲೆ ಇಂಗ್ಲಿಷ್ ಬರಲೆಂದು, ಬರಬೇಕೆಂದು ಅಥವಾ ಬಂದೀತೆಂದು ನಾವು ಮಾತೃಭಾಷೆಯನ್ನು ದೂರ ಸರಿಸಬೇಕಿಲ್ಲ. ಮಾತೃಭಾಷಾ ಪರಿಣತಿ ಇತರ ಭಾಷೆಗಳಲ್ಲಿ ಪರಿಣತಿಯನ್ನು ಸುಲಭ, ಸುಗಮವಾಗಿಸುತ್ತದೆ ಎಂಬುದು ಅಧ್ಯಯನಗಳಿಂದ ನಿರೂಪಿತವಾದ ಸತ್ಯ. ಅಷ್ಟೇಅಲ್ಲ, ಇತರ ಭಾಷೆಗಳಲ್ಲಿ ಸೃಜನಶೀಲ ಅಭಿವ್ಯಕ್ತಿಯನ್ನೂ ಅದು ಸಾಧ್ಯವಾಗಿಸುತ್ತದೆ ಎಂಬುದಕ್ಕೆ ನಮ್ಮೆದುರೇ ನಿದರ್ಶನಗಳಿವೆ. ಕನ್ನಡದಲ್ಲಂತೂ ಮರಾಠಿ ಮಾತೃಭಾಷೆಯಾಗಿದ್ದ ಬೇಂದ್ರೆ, ತಮಿಳು ಮನೆಮಾತಾಗಿದ್ದ ಮಾಸ್ತಿ, ಕೊಂಕಣಿ ಮನೆಮಾತಾಗಿದ್ದ ಗಿರೀಶ ಕಾರ್ನಾಡರು ಕನ್ನಡದಲ್ಲಿ ಜ್ಞಾನಪೀಠ ಪ್ರಶಸ್ತಿ ಪಡೆದದ್ದನ್ನು ನೋಡಿದ್ದೇವೆ.

ಒಂದು ದೇಶವನ್ನು ಕೊಲ್ಲಬೇಕೆಂದರೆ, ಅದರ ಭಾಷೆಯನ್ನು ಕೊಲ್ಲಬೇಕಂತೆ, ಅದರ ಜನರನ್ನಲ್ಲ! ತಮ್ಮ ಭಾಷೆಯನ್ನು ಅತಿಯಾಗಿ ಪ್ರೀತಿಸುವ, ಅದನ್ನು ಸಂರಕ್ಷಿಸಲು ದೊಡ್ಡ ಮೊತ್ತದ ಹಣ ವ್ಯಯಿಸುವ ಜರ್ಮನಿ, ಫ್ರಾನ್ಸ್ ಮತ್ತು ಜಪಾನ್ ಸಮಾಜಗಳಿಗೆ ಇದರ ಅರಿವಿದೆ. ಹಾಗಾಗಿಯೇ ಅವರು ಮೇಲೆ ಮೇಲೆ ಹತ್ತುವಾಗ, ವಿಶ್ವವಿದ್ಯಾಲಯದ ಮೆಟ್ಟಿಲು ಹತ್ತುವಾಗ ತಮ್ಮ ಭಾಷೆಯನ್ನೂ ಜತನದಿಂದ ಒಯ್ಯುತ್ತಾರೆ, ಉಳಿಸುತ್ತಾರೆ. ನಮ್ಮದೇ ಪಕ್ಕದ ರಾಜ್ಯಗಳಾದ ತಮಿಳುನಾಡು, ಕೇರಳವೂ ಈ ವಿಷಯದಲ್ಲಿ ಮಾತೃಭಾಷಾ ಪ್ರೀತಿ ಹೊಂದಿರುವಂತಹವೇ. ಎಷ್ಟೇ ಒಳ್ಳೆಯ ಇಂಗ್ಲಿಷ್ ಬರುತ್ತಿರಲಿ, ಎಂತಹ ಅಂತರರಾಷ್ಟ್ರೀಯ ಸಮ್ಮೇಳನವೇ ಆಗಿರಲಿ, ಮತ್ತೊಬ್ಬ ಮಲಯಾಳಿ ಎದುರು ಸಿಕ್ಕರೆ ಮಲಯಾಳಂ ಮಾತು ಅಲ್ಲಿ ಕೇಳದೇ ಇರುವುದಿಲ್ಲ.

ದೈನಂದಿನ ಜೀವನದಲ್ಲಿ ಕನ್ನಡವನ್ನು ಬಳಸುವ ಸುಲಲಿತ ಮಾರ್ಗವನ್ನು ನಾವು ಆರಿಸಿಕೊಳ್ಳಬೇಕಾಗಿದೆ. ಮಕ್ಕಳೊಡನೆ ಮಾತನಾಡುವಾಗ ಕನ್ನಡವನ್ನು ಮಾತನಾಡುವ ಅಭ್ಯಾಸ ನಮಗೆ ಬೇಕೇ ಬೇಕು. ವೇದಿಕೆಯ ಮೇಲೆ ಭಾಷಣ ಮಾಡುವಾಗ ಯಾರಾದರೊಬ್ಬರು ಆಯ್ಕೆಯಿಂದಲೇ ಕನ್ನಡದಲ್ಲಿ ಭಾಷಣ ಮಾಡಬಹುದು. ಸರಾಗವಾಗಿ ಇಂಗ್ಲಿಷ್ ಬರುತ್ತಿದ್ದೂ ಕನ್ನಡದಲ್ಲಿ ಮಾತನಾಡಲು ಸಾಧ್ಯವಿದೆ ಎಂಬುದನ್ನು ಸಹಜ ಸಂಗತಿ ಎಂದು ಒಪ್ಪಿಕೊಳ್ಳಬೇಕಾಗಿದೆ. ಕಷ್ಟಪಟ್ಟು ಇಂಗ್ಲಿಷ್ ಕಲಿಯುವ ಮಕ್ಕಳು, ಅದರೊಂದಿಗೆ ಮಾತೃಭಾಷೆಯಲ್ಲಿ ಪರಿಣತಿ ಹೊಂದಿರುವುದು ತಮಗೆ ಮುಂದೆ ಅನಂತ ಸಾಧ್ಯತೆ, ಅವಕಾಶಗಳನ್ನು ತೆರೆಯುತ್ತದೆ ಎಂದು ಮನವರಿಕೆ ಮಾಡಿಕೊಳ್ಳಬೇಕಾಗಿದೆ.

ಚುರುಮುರಿ



ಮಂಡ್ಯ ಯಾರು ಕಂಡ್ಯಾ?

• ಗುರು ಪಿ.ಎಸ್.

'ನಾ... ಬೆಂಕಿಯಂತೆ...'
'ನಾ... ಗಾಳಿಯಂತೆ...'
'ಈ... ಜೋಡಿ ಮುಂದೆ,
ವೈರಿ ಉಳಿಯುವನೆ'
'ಸೂರ್ಯ ಬಾನಿಂದ ಓಡಿಬಂದಂತೆ
ನೀನು ಬಂದಾಗ ನನಗಾಯ್ತು'
'ಮಿಂಚು ಮೇಲಿಂದ ಜಾರಿ ಬಂದಂತೆ
ನಿನ್ನ ಕಂಡಾಗ ನನಗಾಯ್ತು...'
ಮಿಂಚಿನಂತೆಯೇ ಡೆಲ್ಲಿಯಿಂದ
ಬೆಂಗಳೂರಿಗೆ ಬಂದಿಳಿದರು 'ಬ್ರದರ್ಸ್'.

'ಏನ್ರಣ್ಣ ಇದು, ಯಾವತ್ತೂ ಇಲ್ಲದ ಜೋಶ್ ಈಗ ಬಂದ್ಬಿಟ್ಟಿದೆ. ಅಣ್ಣಾವ್ರ ಹಾಡು ಬೇರೆ ಹೇಳ್ಕೊಂಡು ಬರ್ತಿದೀರ' ಕೇಳ್ದ ವಿಜಿ.

'ನಮ್ಮ ಪಕ್ಷಗಳು ಬೇರೆ ಬೇರೆ ಆಗಿರಬಹುದು. ಆದರೆ, ನಾವೀಗ ಬ್ರದರ್ಸ್ ಫ್ರಮ್ ಅನದರ್ ಮದರ್' ನಕ್ಕರು 'ದೋಸ್ತಿಗಳು'.

'ಓಹ್, ಎಲೆಕ್ಷನ್ ತಯಾರಿ ಜೋರಾಗಿದೆ ಅನ್ಸುತ್ತೆ ಹಾಗಾದ್ರೆ' ಎಂದು ವಿಜಿ ಹೇಳುತ್ತಿದ್ದಂತೆ, 'ಈ... ಜೋಡಿ ಮುಂದೆ ವೈರಿ ಉಳಿಯುವನೆ...' ಒಟ್ಟಿಗೇ ಮತ್ತೆ ಹಾಡಿದರು ಬ್ರದರ್ಸ್.

'ಅದ್ಸರಿ, ಮಂಡ್ಯದಲ್ಲಿ ಯಾರ್ ಹೆಸರು ಫೈನಲ್ ಆಯ್ತು ಬ್ರದರ್ಸ್' ನಿಂತ ನೆಲವೇ ಕುಸಿಯುವ ಪ್ರಶ್ನೆ ಕೇಳ್ದ ವಿಜಿ.

'ಮತ್ತಿನ್ಯಾರು ನಮ್ಮ ಪಾರ್ಟಿ ಕ್ಯಾಂಡಿಡೇಟೇ ನಿಲ್ಲೋದು' ದೃಢವಾಗಿ ಹೇಳಿದ ಬಿಗ್ ಬ್ರದರ್.

'ಇಲ್ಲ ಇಲ್ಲ, ಮೊದಲಿಂದ್ಲೂ ಮಂಡ್ಯ ನಮ್ಮದೇ ಬೆಲ್ಟ್. ನಮ್ ಪಾರ್ಟಿಯವರೇ ನಿಲ್ತಾರೆ' ಫಟ್ ಅಂತ ಹೇಳಿದ ಚಿಕ್ಕ ಬ್ರದರ್.

'ಸುಮಕ್ಕ ನಿಲ್ಲೋದೇ ಕನ್ಫರ್ಮ್ ಅಂತ ಸುದ್ದಿ' ಬೆಂಕಿ ಹಚ್ಚಿದ ವಿಜಿ.

'ಕಮಲ ಅಂದ್ರೆ ಹೂವು, ಸುಮ ಅಂದ್ರೂ ಹೂವೇ ಅಂತ ಗೊತ್ತಿಲ್ವ ನಿಂಗೆ, ಅದೆಲ್ಲ ಆಗಲ್ಲ ಸುಮ್ನಿರಪ್ಪ ನೀನು' ಚಿಕ್ಕ ಬ್ರದರ್‌ಗೆ ಸಿಟ್ಟು ಬಂತು.

ಕೆ.ಎಸ್.ನರಸಿಂಹಸ್ವಾಮಿಯವರ ಕ್ಷಮೆ ಕೋರುತ್ತಾ, ಅವರ ಹಾಡನ್ನು ಸ್ವಲ್ಪ ಬದಲಿಸಿ ಹೇಳುತ್ತಾ ಹೋದ ವಿಜಿ, 'ಬೆಂಕಿಯು ನಿನ್ನದೇ, ಗಾಳಿಯು ನಿನ್ನದೇ... ಆರದಿರಲಿ ಬೆಳಕೂ...'

ಸಂಗತ

ಸಾಮಾನ್ಯ ಜ್ಞಾನಕ್ಕೆ ಕಾನೂನಿನ ಹಂಗೇಕೆ?

ನಮ್ಮ ನಡವಳಿಕೆಗಳಿಂದ ಬೇರೆಯವರಿಗೆ ತೊಂದರೆ ಆಗಬಾರದೆಂಬ ಅರಿವು ಪ್ರತಿಯೊಬ್ಬರಲ್ಲಿಯೂ ಇರಬೇಕು

• ಪ.ರಾಮಕೃಷ್ಣ ಶಾಸ್ತ್ರಿ

ಪೆಟ್ರೋಲ್ ಬಂಕ್ ಬಳಿ ನಿಂತಿದ್ದೆ. ಇಂಧನ ಪೂರಣಕ್ಕೆ ಬಂದು ನಿಂತ ಕಾರಿನಿಂದ ಅದರ ಒಡೆಯನ ಸಿರಿವಂತಿಕೆಗೆ ಒಪ್ಪುವ ನಾಯಿಯೂ ಕೆಳಗಿಳಿಯಿತು. ಪೆಟ್ರೋಲ್ ಬಂಕಿನ ಆವರಣದಲ್ಲೇ ಶೌಚ ಮುಗಿಸಿ ಮತ್ತೆ ಕಾರಿನ ಒಳಗೆ ಹೋಯಿತು. ಕಾರು ಅಲ್ಲಿಂದ ಹೊರಟುಹೋದ ಬಳಿಕ ಇದು ಬಂಕಿನ ಕೆಲಸಗಾರರ ಗಮನಕ್ಕೆ ಬಂತು. ಕಾರಿನ ಒಡೆಯ ಮರಳಿ ಬರುವಂತೆ ಮಾಡಿ ಆತನಿಂದಲೇ ಸ್ವಚ್ಛಗೊಳಿಸಬೇಕು ಎಂಬ ಯೋಚನೆ ಅವರಿಗೆ ಬಂತು. ಆದರೆ ಆ ವ್ಯಕ್ತಿಯನ್ನು ಪತ್ತೆ ಮಾಡಲು ಯಾವ ಆಧಾರವೂ ಅವರ ಬಳಿ ಇರಲಿಲ್ಲ. ಅಷ್ಟರಲ್ಲಿ ಇನ್ನೊಂದು ಐಷಾರಾಮಿ ಕಾರು ಬಂದು ಶೌಚದ ಮೇಲೆಯೇ ಸಾಗಿ, ಆ ಪ್ರದೇಶವಿಡೀ ಅದನ್ನು ಹರಡಿಬಿಟ್ಟಿತು.

ನಾಯಿಯನ್ನು ಜೊತೆಗೇ ಕರೆದೊಯ್ಯುವುದು ಅವರ ವೈಯಕ್ತಿಕ ವಿಷಯವಾಗಿದ್ದರೂ ಬೇರೆಯವರಿಗೆ ಅದರಿಂದ ಆಗುವ ತೊಂದರೆ, ಮುಜುಗರ ಎಷ್ಟು ಎಂಬ ಬಗ್ಗೆ ಯೋಚಿಸಬೇಡವೆ? ಬೆಂಗಳೂರಿನಂತಹ ಮಹಾನಗರಗಳಲ್ಲಿ ಬೆಳಗಿನ ಜಾವ ಜಾಗಿಂಗ್ ಹೆಸರಿನಲ್ಲಿ ಬರುವ ಅನೇಕರ ಜೊತೆಗೆ ಅವರು ಸಾಕಿದ ನಾಯಿಗಳೂ ಇರುತ್ತವೆ. ರಸ್ತೆಯ ಇಕ್ಕೆಲಗಳಲ್ಲೂ ದೇಹಬಾಧೆ ತೀರಿಸಿಕೊಳ್ಳುವ ಈ ನಾಯಿಗಳು ಬೆಳಗಾಗುವ ಮೊದಲು ತಮ್ಮ ಮನೆಯನ್ನು ಸೇರಿಕೊಳ್ಳುತ್ತವೆ. ಇವುಗಳಿಂದ ರಸ್ತೆಯ ನೈರ್ಮಲ್ಯ ಕೆಡುತ್ತಿರುವುದನ್ನು ನಾಯಿಯ ಒಡೆಯರು ಗಮನಕ್ಕೆ ತಂದುಕೊಳ್ಳದಿರುವುದೇ ವಿಪರ್ಯಾಸ.


ಸಾರ್ವಜನಿಕ ಶೌಚಾಲಯಗಳಂತೂ ಸಾಮಾನ್ಯ ಜ್ಞಾನದ ಕೊರತೆಗೆ ಅತ್ಯುತ್ತಮ ನಿದರ್ಶನ. ಒಳಗೆ ಹೋದ ವ್ಯಕ್ತಿ ಅಲ್ಲಿ ಸರಿಯಾಗಿ ನೀರು ಹಾಕಿ ಬಂದಿರುವುದಿಲ್ಲ. ಮುಂದಿನ ವ್ಯಕ್ತಿಗೆ ಒಳಗೆ ಕಾಲಿಡಲೂ ಸಾಧ್ಯವಾಗದಷ್ಟು ದುರ್ಗಂಧ. ನಾವು ವ್ಯವಸ್ಥೆಯನ್ನು ಬಳಸಿಕೊಳ್ಳಬೇಕು, ಇನ್ನೊಬ್ಬರಿಗೂ ಅದು ಬಳಕೆಗೆ ಅರ್ಹವಾಗಿರಬೇಕು ಎಂಬುದು ಮಾನವೀಯ ಪ್ರಜ್ಞೆಯಿರುವ ಯಾರಿಗೇ ಆಗಲಿ ತಿಳಿದಿರಬೇಕು ತಾನೆ?

ಪ್ರವಾಸಿ ತಾಣಗಳಿಗೆ ತೆರಳುವವರು ಹೊಣೆಗಾರಿಕೆಯನ್ನು ಮೂಲೆಗುಂಪು ಮಾಡುತ್ತಾರೆ. ನೀರಿನ ಬಾಟಲು, ತಿಂಡಿಗಳ ಪ್ಯಾಕೆಟ್‌ಗಳನ್ನು ಅಲ್ಲಿಗೆ ಕೊಡುಗೆಯಾಗಿ ನೀಡುತ್ತಾರೆ. ಪರಿಸರದ ಸೌಂದರ್ಯವನ್ನು ಹೆಚ್ಚಿಸುವ ಅವಕಾಶ ಎಲ್ಲರಿಗೂ ಇದೆ. ಆದರೆ ಸಂದರ್ಶಿಸುವ ತಾಣವನ್ನು ಹದಗೆಡಿಸುವ ಮೂಲಕ, ಮುಂದೆ ಅಲ್ಲಿಗೆ ಬರುವವರಿಗೆ ಅಸಹನೀಯ ವಾತಾವರಣ ಸೃಷ್ಟಿಸುವುದರ ಜೊತೆಗೆ ಅವರು ಕೂಡ ಇದೇ ರೀತಿ ಮಾಡಿ ಹೋಗುವುದಕ್ಕೆ ಮಾದರಿಯಾಗುವುದು ಸರಿಯಾದ ನಡೆಯಲ್ಲ.

ಸಾರ್ವಜನಿಕ ಗ್ರಂಥಾಲಯಗಳಲ್ಲಿ ಪತ್ರಿಕೆಗಳನ್ನು ಓದುವವರು ನಂತರ ಅದನ್ನು ಅಚ್ಚುಕಟ್ಟಾಗಿ ಜೋಡಿಸಿಡುವುದಿಲ್ಲ. ಅಡ್ಡಾದಿಡ್ಡಿಯಾಗಿ ಎಸೆಯುತ್ತಾರೆ. ದೈನಿಕಗಳ ಜೊತೆಗಿರುವ ಪುರವಣಿಗಳು ಎಲ್ಲೆಲ್ಲೋ ಇರುತ್ತವೆ. ಸಿನಿಮಾ ಪತ್ರಿಕೆಗಳ ಪುಟಗಳನ್ನು ಹರಿದು ತೆಗೆದುಕೊಂಡು ಹೋಗುತ್ತಾರೆ. ನಿಯತಕಾಲಿಕಗಳ ಒಳಗೆ ಮನಬಂದಂತೆ ಬರೆಯುತ್ತಾರೆ. ನಮ್ಮ ನಂತರ ಬರುವವರಿಗಾಗಿ ವ್ಯವಸ್ಥೆಯನ್ನು ಉಳಿಸದೆ ಹಾಳು ಮಾಡಿ ಹೋಗುವುದು ಪ್ರಜ್ಞಾವಂತಿಕೆಯ ಲಕ್ಷಣವಲ್ಲ ಎಂಬುದನ್ನು ತಿಳಿಯುವುದಿಲ್ಲ.

ಬಾಳೆಹಣ್ಣು ತಿಂದು ಸಿಪ್ಪೆಯನ್ನು ರಸ್ತೆ, ಪಾದಚಾರಿ ಮಾರ್ಗಗಳಲ್ಲಿ ಎಸೆಯುವುದು ಪಾದಚಾರಿಗಳ ಪಾಲಿಗೆ ಮಾರಕವೇ ಆಗಬಹುದು. ಪ್ಲಾಸ್ಟಿಕ್ ಎಂಬುದು ಪರಿಸರಕ್ಕೆ ಮಾರಕ ಎಂಬುದನ್ನು ಒಂದಿಷ್ಟು ಜನರಾದರೂ ತಿಳಿದುಕೊಂಡಿದ್ದರೆ, ರಸ್ತೆಯ ಇಬ್ಬದಿಗಳಲ್ಲೂ ಅಷ್ಟೊಂದು ಪ್ಲಾಸ್ಟಿಕ್ ಪರಿಕರಗಳು ಬೀಳುವುದು ಸಾಧ್ಯವೇ ಇರಲಿಲ್ಲ. ಅಮೆರಿಕದಲ್ಲಿ ಪುಟ್ಟ ಮಗುವಿಗೆ ಚಾಕೊಲೇಟ್ ಕೊಟ್ಟರೆ ಮೊದಲು ಅದರ ರಕ್ಷಾಕವಚವನ್ನು ತೆಗೆದುಕೊಂಡು ಹೋಗಿ ಕಸದ ಬುಟ್ಟಿಗೆ ಎಸೆದು ಬರುತ್ತದೆ ಎಂಬ ಪ್ರವಾಸಿ ಅನುಭವವನ್ನು ರೋಚಕವಾಗಿ ಹೇಳುವವರು, ಭಾರತದ ಹಿರಿಯರಿಗೆ ಇದನ್ನೊಂದು ಪಾಠವಾಗಿ ಬೋಧಿಸುವುದು ವಿಹಿತ ಎನಿಸುತ್ತದೆ.

ಸರ್ಕಾರಿ ಬಸ್ಸುಗಳಲ್ಲಿ ಮೊಬೈಲಿನ ಶಬ್ದ ಇತರರಿಗೆ ಕೇಳಿಸಬಾರದೆಂಬ ನಿಯಮವಿರುವ ಫಲಕ ತೂಗಾಡುತ್ತದೆ. ಆದರೆ ಓದು, ಬರಹ ಬಲ್ಲಂಥವರೇ ಈ ಫಲಕದ ಬಗೆಗೆ ಏನೂ ತಲೆಕೆಡಿಸಿಕೊಳ್ಳದೆ ಮೊಬೈಲ್‌ನಲ್ಲಿ ತಮಗೆ ಬೇಕಾದ ಕಾರ್ಯಕ್ರಮವನ್ನು ಜೋರಾಗಿ ಕೇಳಿಸಿಕೊಳ್ಳುತ್ತಾ ಆತ್ಮಾನಂದವನ್ನು ಅನುಭವಿಸುತ್ತಾರೆ. ವಾಹನ ಚಾಲಕರು ಮೊಬೈಲನ್ನು ಕಿವಿಗಾನಿಸಿಕೊಂಡು ವಾಹನ ಚಾಲನೆ ಮಾಡಬಾರದು ಎಂಬಂತಹ ನಿಯಮಗಳನ್ನು ತಿಳಿದುಕೊಳ್ಳುವ ಗೋಜಿಗೆ ಹೋಗಿದ್ದರೆ ಅದೆಷ್ಟೋ ಅಪಘಾತಗಳನ್ನು ತಪ್ಪಿಸಬಹುದಿತ್ತು.



ನಿಯಮಗಳು ಇರುವುದು ಉಲ್ಲಂಘಿಸುವುದಕ್ಕಾಗಿ ಅಲ್ಲ. ನಾವೂ ಬದುಕಿ, ಬೇರೆಯವರಿಗೂ ಬದುಕಲು ಇರುವ ಅವಕಾಶವನ್ನು ಕಳೆಯಬಾರದು ಎಂದು ಭಾವಿಸುವ ಸಾಮಾನ್ಯ ಜ್ಞಾನ ಪ್ರತಿಯೊಬ್ಬರಲ್ಲೂ ಇದ್ದರೆ ಎಷ್ಟು ಚೆನ್ನ ಅಲ್ಲವೆ? ಕಾನೂನಿನ ಕಡ್ಡಾಯ ಜಾರಿಯಿಂದ ಮಾತ್ರ ನಾವು ಪ್ರಜ್ಞಾವಂತರಾಗಬೇಕು ಎಂಬ ವಾತಾವರಣ ನಮ್ಮಲ್ಲಿ ಸೃಷ್ಟಿಯಾಗಿದೆ.

ಒಂದೆರಡು ದಶಕಗಳ ಹಿಂದಿನ ಮಾತು. ಸಾರ್ವಜನಿಕ ಸ್ಥಳವಿರಲಿ, ಬಸ್ಸಿನೊಳಗೆ ಪ್ರಯಾಣಿಸುತ್ತಿರಲಿ, ಧೂಮಪಾನ ಮಾಡುವ ಅಭ್ಯಾಸ ಸಾರ್ವತ್ರಿಕವಾಗಿತ್ತು. ಬಸ್ ಚಾಲಕನೂ ಇದಕ್ಕೆ ಹೊರತಾಗಿರಲಿಲ್ಲ. ಆದರೆ ಈಗ ಇದೊಂದು ಹವ್ಯಾಸವು ಕಾನೂನಿನ ಕಠಿಣ ಕ್ರಮ ಮತ್ತು ದಂಡ ವಿಧಿಯಿಂದಾಗಿ ಮುಕ್ತವಾಗಿದೆ.

ನಾವು ಓದಿದವರಾಗಿಯೂ ಇಂತಹ ತಪ್ಪುಗಳನ್ನು ಮಾಡಿ ಬೇರೆಯವರಿಗೆ ತೊಂದರೆ ಕೊಡಬಾರದೆಂಬ ಪ್ರಜ್ಞೆ ಕಾನೂನಿಗಿಂತಲೂ ನಮ್ಮೊಳಗೇ ಒಡಮೂಡುವುದು ಒಳ್ಳೆಯದಲ್ಲವೇ?!

ವಾಚಕರ ವಾಣಿ

ಕಾಲದ ಅಗತ್ಯಕ್ಕೆ ತಕ್ಕ ಬದಲಾವಣೆ

'ಜ್ಞಾನ ದೇಗುಲವಿದು ಕೈ ಮುಗಿದು ಒಳಗೆ ಬಾ' ಎಂದು ಕುವೆಂಪು ಅವರು ನೇರವಾಗಿ ಹೇಳಿಲ್ಲ. 'ಪಕ್ಷಿಕಾಶಿ' ಕವನ ಸಂಕಲನದಲ್ಲಿನ 'ಪಕ್ಷಿಕಾಶಿ' ಕವಿತೆಯಲ್ಲಿ ಅವರು ಹೇಳಿದ ಮಾತು ಹೀಗಿದೆ: 'ಪ್ರಾಣಪಕ್ಷಿಕುಲಮಿಹುದು ರಕ್ಷೆಯಲಿ... ಮೆಯ್ಯ ತೊಳೆದು ಬಾ, ಕಯ್ಯ ಮುಗಿದು ಬಾ...' ಹೀಗೆ ಪಕ್ಷಿಕಾಶಿಯನ್ನು ಕುರಿತು ಅವರು ಎಚ್ಚರಿಕೆಯ ಮಾತು ಹೇಳಿದ್ದಾರೆ. ಇದು ಕಾವ್ಯದ ಓದುಗನಿಗೂ ಕುರಿತ ಮಾತು ಎಂಬುದು ಧ್ವನಿಗೆ ಸಂಬಂಧಿಸಿದ ವಿಚಾರ.

ಹಾಗೆಯೇ ಸೋಮನಾಥ ದೇವಾಲಯವನ್ನು ಕುರಿತು 'ಬಾಗಿಲೊಳು ಕೈ ಮುಗಿದು ಒಳಗೆ ಬಾ ಯಾತ್ರಿಕನೆ, ಶಿಲೆಯಲ್ಲವೀ ಗುಡಿಯು ಕಲೆಯ ಬಲೆಯು' ಎಂದು ಹೇಳಿದ್ದಾರೆ. ಆದರೆ ಈ ಉಕ್ತಿಗಳನ್ನು ಅನುಕರಿಸಿ ಹಲವು ಛಾಯಾ ಉಕ್ತಿಗಳು ಕುವೆಂಪು ಅವರ ಹೆಸರಿನಲ್ಲಿ ಬಂದಿವೆ. ಅದೇನೇ ಇರಲಿ, ಈಗ ರಾಜ್ಯದ ಬಹುತೇಕ ವಸತಿ ಶಾಲೆಗಳಲ್ಲಿ 'ಜ್ಞಾನ ದೇಗುಲವಿದು ಕೈ ಮುಗಿದು ಒಳಗೆ ಬಾ' ಎನ್ನುವ ಫಲಕವನ್ನು 'ಜ್ಞಾನ ದೇಗುಲವಿದು, ಧೈರ್ಯವಾಗಿ ಪ್ರಶ್ನಿಸಿ' ಎಂದು ಬದಲಾಯಿಸಿದ್ದನ್ನು ಈ ಕಾಲದ ಅಗತ್ಯವೆಂದು ಭಾವಿಸುವುದು ಸರಿ ಇದೆ. ಇದು ವಿಜ್ಞಾನ, ತಂತ್ರಜ್ಞಾನದ ಯುಗ. ಪ್ರಶ್ನೋತ್ತರದ ಮುಖೇನ ಸತ್ಯವನ್ನು ತಿಳಿಯಬೇಕು. ಸುಳ್ಳುಗಳನ್ನು ಸತ್ಯವೆಂದು ನಂಬಿಸುತ್ತಿರುವವರ ನಡುವೆ ಈ ಬದಲಾದ ವಾಕ್ಯ ಸಂದೇಶ ಇಂದಿನ ತುರ್ತು.

ಎಸ್.ಜಿ.ಸಿದ್ಧರಾಮಯ್ಯ, ಬೆಂಗಳೂರು

ಮಂಗನ ಕಾಯಿಲೆಗೆ ಉಪದೇಶದ ಉರಿಮದ್ದು

ಚಿಕ್ಕಮಗಳೂರು, ಶಿವಮೊಗ್ಗ, ಉತ್ತರ ಕನ್ನಡ ಜಿಲ್ಲೆಗಳಲ್ಲಿ ಮಂಗನ ಕಾಯಿಲೆಯ ಪ್ರಕರಣಗಳು ಮತ್ತೆ ಹೆಚ್ಚುತ್ತಿವೆ. ಗ್ರಾಮೀಣ ಶ್ರಮಿಕರಿಗೆ ಮಾತ್ರ ಬರುವ ಪೀಡೆ ಇದಾಗಿದೆ ಎಂತಲೋ ಏನೊ, ಇದಕ್ಕೊಂದು ಉತ್ತಮ ಲಸಿಕೆಯನ್ನು ಕೊಡಲು ಸರ್ಕಾರವಾಗಲೀ ಔಷಧ ಕಂಪನಿಗಳಾಗಲೀ ಆಸಕ್ತಿ ತೋರುತ್ತಿಲ್ಲ. ಗಾಯಕ್ಕೆ ಉಪ್ಪು ಸವರಿದಂತೆ ಅರಣ್ಯ ಇಲಾಖೆಯ ಪ್ರಭೃತಿಗಳು 'ಕಾಡಿಗೆ ಹೋಗಬೇಡಿ' ಎಂದು ಜನರಿಗೆ ಉಪದೇಶ ಮಾಡುತ್ತಿದ್ದಾರೆ. ಅಲ್ಲಾ ಸ್ವಾಮೀ, ಕಾಡಿನಲ್ಲೇ ನಾವು ವಾಸ ಇರೋದು! ಮನೆಯಲ್ಲೇ ಮುದುಡಿ ಕೂತರೂ ಅರಣ್ಯ ಇಲಾಖೆಯ ಕೃಪೆಯಿಂದಾಗಿ ಮಂಗ, ಹಂದಿ, ಕಾಡುಕೋಣಗಳು ತೋಟಕ್ಕೆ, ಹಿತ್ತಿಲಿಗೆ, ಮನೆಯೊಳಕ್ಕೇ ಬರುತ್ತಿವೆ. ರೋಸಿ ಹೋಗಿದ್ದಾರೆ ಜನ. ಇನ್ನೇನು, ಜ್ವರಪೀಡಿತ ಮಂಗಗಳಿಂದ ಬಚಾವಾಗಲೆಂದು ನಾವು ಮನೆ- ಮಾರು ಬಿಟ್ಟು (ಅಥವಾ ಮಾರಿಬಿಟ್ಟು) ಬೆಂಗಳೂರಿನ ಅರಣ್ಯ ಭವನಕ್ಕೆ ಬರಬೇಕೆ?

ವನ್ಯಜೀವಿಗಳಿಗೆ ಆಹಾರವೇ ಸಿಗದಂತೆ ಎಲ್ಲಿ ನೋಡಿದಲ್ಲಿ ನೀಲಗಿರಿ, ಅಕೇಶಿಯಾ ನೆಡುತೋಪು ಬೆಳೆಸಿ, ಮಲೆನಾಡಿನ ಮಕ್ಕಳಿಗೆ ಹಣ್ಣು, ತರಕಾರಿ ಕೂಡ ಸಿಗದಂತೆ ಮಾಡಿದ ಈ ಇಲಾಖೆ ಇಂಥ ನಿಷ್ಪ್ರಯೋಜಕ ಉಪದೇಶ ಕೊಡುವುದನ್ನು ಮೊದಲು ನಿಲ್ಲಿಸಲಿ.

ಶರತ್ ಕಲ್ಕೋಡ್, ಆಗುಂಬೆ, **ನಾಗೇಶ ಹೆಗಡೆ,** ಕೆಂಗೇರಿ

ಗಟ್ಟಿ ಸಮಗ್ರ ಸಾಹಿತ್ಯ ಪ್ರಕಟಗೊಳ್ಳಲಿ

ಸೋಮವಾರ ನಿಧನರಾದ ಕೆ.ಟಿ.ಗಟ್ಟಿ ಅವರು ಕರ್ನಾಟಕ ಕಂಡ ಅತ್ಯುತ್ತಮ ವೈಚಾರಿಕ ಸಾಹಿತಿ. ಅವರ ಕಾದಂಬರಿಗಳಲ್ಲಿ ಬರುವ ಪಾತ್ರಗಳು ಓದುಗರನ್ನು ಚಿಂತನೆಗೆ ಹಚ್ಚುತ್ತವೆ. ಕನ್ನಡ ಪುಸ್ತಕ ಪ್ರಾಧಿಕಾರವು ಅವರ ಸಮಗ್ರ ಸಾಹಿತ್ಯವನ್ನು ಪ್ರಕಟಿಸಿ ಕನ್ನಡಿಗರಿಗೆ ಸಿಗುವಂತೆ ಮಾಡಲಿ.

ಹ.ಪಾ.ರಮೇಶ್, ಬೆಂಗಳೂರು

ಪ್ರಜಾಪ್ರಭುತ್ವದ ಮೌಲ್ಯ ಎತ್ತಿ ಹಿಡಿದ ತೀರ್ಪು

ಚಂಡೀಗಢದಲ್ಲಿ ಇತ್ತೀಚೆಗೆ ನಡೆದಿದ್ದ ಮೇಯರ್ ಚುನಾವಣಾ ಪ್ರಹಸನಕ್ಕೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್ ನೀಡಿರುವ ತೀರ್ಪು ಚರಿತ್ರಾರ್ಹ. ಪ್ರಜಾಪ್ರಭುತ್ವದ ಮೌಲ್ಯಗಳನ್ನು ಎತ್ತಿ ಹಿಡಿಯುವ ಮೂಲಕ ಜನರಿಗೆ ನ್ಯಾಯ ವ್ಯವಸ್ಥೆಯಲ್ಲಿ ಇರುವ ವಿಶ್ವಾಸವನ್ನು ಇಮ್ಮಡಿಗೊಳಿಸಿದ್ದಕ್ಕೆ ನ್ಯಾಯಾಲಯಕ್ಕೆ ಮನಃಪೂರ್ವಕ ಗೌರವಭರಿತ ನಮಸ್ಕಾರ.

ಶಾಂತಕುಮಾರ್, ಸರ್ಜಾಪುರ

ರೈತರಿಗೆ ವಿದ್ಯುತ್: ವ್ಯತ್ಯಯ ಸಲ್ಲ

ರೈತರಿಗೆ 3 ಫೇಸ್ ವಿದ್ಯುತ್ತನ್ನು ಏಳು ತಾಸು ಕೊಡುವ ಬದಲಾಗಿ ಆರು ತಾಸು ಸರಬರಾಜು ಮಾಡಲಾಗುತ್ತಿದೆ, ಅದೂ ಲೋ ವೋಲ್ಟೇಜ್‌ನಲ್ಲಿ! ಇದು ಹೀಗೇ ಮುಂದುವರಿದರೆ, ರೈತರ ಸಂಕಷ್ಟ ಮೇರೆ ಮೀರುವ ಕಾಲ ದೂರವಿಲ್ಲ. ಜನಜೀವನಕ್ಕೂ ನೀರಿಲ್ಲ, ನಾವು ಬೆಳೆದ ಪೈರಿಗೂ ನೀರಿಲ್ಲ. ಸರ್ಕಾರ ಈ ದಿಸೆಯಲ್ಲಿ ಜೀವ ಉಳಿಸುವ ಪ್ರಕ್ರಿಯೆಗೆ ಈ ಕ್ಷಣ ಮುಂದಾಗಬೇಕು. ನಮ್ಮದಷ್ಟೇ ಜೀವವಲ್ಲ, ನಾವು ನೆಟ್ಟ ಗಿಡ ಮರ ಬೆಳೆಯದ್ದೂ ಜೀವವೇ.

ರೈತನಿಗೆ ಒದಗಿಸುವ ವಿದ್ಯುತ್ ಸರಬರಾಜಿನಲ್ಲಿ ಎಂದೂ ವ್ಯತ್ಯಯ ಆಗಬಾರದು. ಈ ಕೂಡಲೇ ಸರ್ಕಾರ ರೈತರಿಗೆ ಅಗತ್ಯ ವಿದ್ಯುತ್ ಪೂರೈಸಲು ಕ್ರಮ ತೆಗೆದುಕೊಳ್ಳಬೇಕು. ಈ ಬೇಡಿಕೆ ಬಹುಜನರ ಪರವಾಗಿಯಷ್ಟೇ, ಯಾವ ಮತಧರ್ಮದ್ದೂ ಅಲ್ಲ. ಅದನ್ನು ಆಡಳಿತಾರೂಢರು ಬೇಗ ಮನಗಾಣಲಿ.

ವಿಜಯಕಾಂತ ಪಾಟೀಲ, ಹಾನಗಲ್

ಕನ್ನಡ ವಿಶ್ವವಿದ್ಯಾಲಯ: ಆರ್ಥಿಕ ಸಂಕಷ್ಟ ತಪ್ಪಲಿ

ಇತ್ತೀಚಿನ ದಿನಗಳಲ್ಲಿ ಸರ್ಕಾರಿ ವಿಶ್ವವಿದ್ಯಾಲಯಗಳ ನಿರ್ವಹಣೆಯು ಸರ್ಕಾರಕ್ಕೆ ದೊಡ್ಡ ಸವಾಲಾಗಿ ಪರಿಣಮಿಸಿದೆ. ಸಂಶೋಧನೆಯನ್ನೇ ಪ್ರಮುಖ ಗುರಿಯನ್ನಾಗಿಸಿಕೊಂಡಿರುವ ಕನ್ನಡ ವಿಶ್ವವಿದ್ಯಾಲಯದ ಆರ್ಥಿಕ ದುಃಸ್ಥಿತಿಯನ್ನು ನೋಡಿದರೆ ನಿಜಕ್ಕೂ ಬೇಸರವಾಗುತ್ತದೆ. ಈಗ್ಗೆ ಒಂದು ವರ್ಷದಿಂದ ವಿದ್ಯುತ್ ಬಿಲ್ ಪಾವತಿಗೆ ವಿಶ್ವವಿದ್ಯಾಲಯ ಪರಿತಪಿಸುತ್ತಿರುವುದು ಆಶ್ಚರ್ಯ ಉಂಟುಮಾಡುತ್ತದೆ. ಕನ್ನಡ ವಿಶ್ವವಿದ್ಯಾಲಯಕ್ಕೆ ಇತರ ವಿಶ್ವವಿದ್ಯಾಲಯಗಳಂತೆ ಯಾವುದೇ ಸಂಯೋಜಿತ ಕಾಲೇಜುಗಳು ಇಲ್ಲದಿರುವುದು ಕೂಡ ಆರ್ಥಿಕ ದುಃಸ್ಥಿತಿಗೆ ಪ್ರಮುಖ ಕಾರಣ ಎಂದರೆ ತಪ್ಪಾಗಲಾರದು. ಕನ್ನಡ ವಿಶ್ವವಿದ್ಯಾಲಯದ ಈ ಬಗೆಯ ಸಮಸ್ಯೆಗಳಿಗೆ ಸರ್ಕಾರ ಸ್ಪಂದಿಸಿ, ವಿಶ್ವವಿದ್ಯಾಲಯದ ಅಸ್ಮಿತೆಯನ್ನು ಕಾಪಾಡಬೇಕಿದೆ.

ತಿಮ್ಮೇಶ ಮುಸ್ಟೂರು, ಜಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಕನಿಷ್ಠ ಬೆಂಬಲ ಬೆಲೆ ವೈಜ್ಞಾನಿಕವಾಗಿ ಏಕಿರಬೇಕು?

ಕೃಷಿ ಉತ್ಪನ್ನಗಳಿಗೆ ಸಮರ್ಪಕ ಕನಿಷ್ಠ ಬೆಂಬಲ ಬೆಲೆಯನ್ನು (ಎಂಎಸ್‌ಪಿ) ನಿಗದಿ ಮಾಡಬೇಕು ಮತ್ತು ಎಂಎಸ್‌ಪಿಗೆ ಕಾನೂನಿನ ಖಾತರಿ ಒದಗಿಸಬೇಕು ಎಂದು ಒತ್ತಾಯಿಸಿ ಉತ್ತರ ಭಾರತದ ರೈತರು ದೆಹಲಿ ಚಲೋ ಚಳವಳಿ ನಡೆಸುತ್ತಿದ್ದಾರೆ. ಸರ್ಕಾರ, ಐದು ವರ್ಷಗಳ ಎಂಎಸ್‌ಪಿ ಖಾತರಿ ನೀಡಲಾಗುವುದು ಎಂದು ಹೇಳಿದರೂ ರೈತರು ಅದನ್ನು ತಿರಸ್ಕರಿಸಿದ್ದಾರೆ. ಸ್ವಾಮಿನಾಥನ್ ಆಯೋಗದ ವರದಿಯ ಶಿಫಾರಸಿನ ಆಧಾರದಲ್ಲೇ ಎಂಎಸ್‌ಪಿ ನೀಡುತ್ತಿದ್ದೇವೆ ಎಂದು ಸರ್ಕಾರ ಹೇಳುತ್ತಿದೆ. ಆದರೆ ಆ ಶಿಫಾರಸುಗಳನ್ನು ಸರ್ಕಾರ ಪೂರ್ಣ ಪ್ರಮಾಣದಲ್ಲಿ ಅನುಸರಿಸುತ್ತಿಲ್ಲ ಮತ್ತು ಎಂಎಸ್‌ಪಿ ಲೆಕ್ಕಾಚಾರದಲ್ಲೇ ಹಲವು ಸಮಸ್ಯೆಗಳು ಇವೆ ಎಂಬುದು ತಜ್ಞರ ಅಭಿಪ್ರಾಯ. ಎಂಎಸ್‌ಪಿಗೆ ಸಂಬಂಧಿಸಿ ಸರ್ಕಾರದ ವರದಿಗಳೂ ಇದೇ ಮಾತನ್ನು ಪುಷ್ಟೀಕರಿಸುತ್ತವೆ ಮತ್ತು ಎಂಎಸ್‌ಪಿ ಲೆಕ್ಕಾಚಾರದಲ್ಲಿ ಎಲ್ಲವೂ ಸರಿ ಇಲ್ಲ ಎಂಬುದನ್ನೇ ಹೇಳುತ್ತವೆ

ಪ್ರಜಾವಾಣಿ ವಾರ್ತೆ

ಕೃಷಿ ಉತ್ಪನ್ನಗಳನ್ನು ಐದು ವರ್ಷಗಳವರೆಗೆ ಎಂಎಸ್‌ಪಿ ಅಡಿ ಖರೀದಿಸಲು ಒಪ್ಪಂದ ಮಾಡಿಕೊಳ್ಳಲಾಗುತ್ತದೆ. ಹೀಗಾಗಿ ರೈತರು ಪ್ರತಿಭಟನೆಯನ್ನು ಕೈಬಿಡಬೇಕು ಎಂದು ಕೇಂದ್ರ ಸರ್ಕಾರವು ಸೋಮವಾರವಷ್ಟೇ ಹೇಳಿತ್ತು. ಆದರೆ ಸರ್ಕಾರದ ಆ ಭರವಸೆಯನ್ನು ಪ್ರತಿಭಟನೆನಿರತ ರೈತರು ಸಾರಾಸಗಟಾಗಿ ತಿರಸ್ಕರಿಸಿದ್ದಾರೆ. ಸ್ವಾಮಿನಾಥನ್ ಆಯೋಗದ ವರದಿಯ ಶಿಫಾರಸಿನಂತೆ ಎಂಎಸ್‌ಪಿ ನೀಡಬೇಕು ಮತ್ತು ಎಂಎಸ್‌ಪಿಗೆ ಕಾನೂನಿನ ಖಾತರಿ ಒದಗಿಸಬೇಕು ಎಂಬ ಬೇಡಿಕೆಯಿಂದ ಹಿಂದೆ ಸರಿಯುವುದಿಲ್ಲ ಎಂದು ಘೋಷಿಸಿದ್ದಾರೆ. ಜತೆಗೆ ಪ್ರತಿಭಟನೆಯನ್ನು ಮುಂದುವರಿಸುವುದಾಗಿಯೂ ಹೇಳಿದ್ದಾರೆ.

ಕೇಂದ್ರ ಸರ್ಕಾರವು ಕೆಲವು ಪ್ರಮುಖ ದವಸ-ಧಾನ್ಯಗಳಿಗೆ ಮತ್ತು ಎಣ್ಣೆಕಾಳುಗಳಿಗೆ ಎಂಎಸ್‌ಪಿಯನ್ನು ಘೋಷಿಸುತ್ತದೆ. ಅದರ ಅಡಿ ಕೆಲ ಪ್ರಮಾಣದ ಕೃಷಿ ಉತ್ಪನ್ನಗಳ ಖರೀದಿಯನ್ನೂ ಮಾಡುತ್ತದೆ. ಆದರೆ ಈ ಎಂಎಸ್‌ಪಿ ವೈಜ್ಞಾನಿಕವಾಗಿ ಇಲ್ಲ ಎಂಬುದು ರೈತರ ಆರೋಪ. ಯಾವುದೇ ಕೃಷಿ ಉತ್ಪನ್ನದ ಉತ್ಪಾದನೆಗೆ ತಗಲುವ ವೆಚ್ಚಕ್ಕಿಂತ ಕಡಿಮೆ ಮೊತ್ತದ ಎಂಎಸ್‌ಪಿಯನ್ನು ಸರ್ಕಾರ ನಿಗದಿ ಮಾಡುತ್ತಿದೆ. ಇದರಿಂದ ನಮಗೆ ನಷ್ಟವಾಗುತ್ತದೆ ಎಂಬುದು ರೈತರ ಆರೋಪ. ಈ ಆರೋಪ ಬಹಳ ಹಿಂದಿನಿಂದಲೂ ಇದೆ.

ರೈತರ ಸ್ಥಿತಿ ಸುಧಾರಣೆಗೆ ಎಂದು ಕೇಂದ್ರದ ಯುಪಿಎ ಸರ್ಕಾರವು ಎಂ.ಎಸ್. ಸ್ವಾಮಿನಾಥನ್ ಅವರ ಅಧ್ಯಕ್ಷತೆಯಲ್ಲಿ ರಾಷ್ಟ್ರೀಯ ಕೃಷಿ ಆಯೋಗವನ್ನು ರಚಿಸಿತ್ತು. ಆ ಆಯೋಗವು ಒಟ್ಟು ಐದು ವರದಿಗಳನ್ನು ಸರ್ಕಾರಕ್ಕೆ ಸಲ್ಲಿಸಿತ್ತು. ಆ ವರದಿಗಳಲ್ಲಿ ಇದ್ದ ಪ್ರಮುಖ ಅಂಶಗಳಲ್ಲಿ ಎಂಎಸ್‌ಪಿ ಸಹ ಒಂದು. ಸರ್ಕಾರ ಒದಗಿಸುತ್ತಿರುವ ಎಂಎಸ್‌ಪಿಯಿಂದ ರೈತರಿಗೆ ನಷ್ಟವೇ ಆಗುತ್ತಿದೆ ಎಂಬುದನ್ನು ಆ ವರದಿಗಳಲ್ಲಿ ವಿವರಿಸಲಾಗಿತ್ತು. ಜತೆಗೆ ರೈತರಿಗೆ ಅನ್ಯಾಯವಾಗದಂತೆ ಎಂಎಸ್‌ಪಿಯನ್ನು ಹೇಗೆ ನಿಗದಿ ಮಾಡಬೇಕು ಎಂಬುದನ್ನೂ ಆಯೋಗವು ತನ್ನ ವರದಿಯಲ್ಲಿ ಕೂಲಂಕಷವಾಗಿ ವಿವರಿಸಿತ್ತು.

ಎಂಎಸ್‌ಪಿಯನ್ನು ಉತ್ಪಾದನಾ ವೆಚ್ಚದ ಆಧಾರದಲ್ಲಿ ನಿಗದಿ ಮಾಡಲಾಗುತ್ತಿತ್ತು. ಸರ್ಕಾರವು ಹೇಳುತ್ತಿರುವ ಉತ್ಪಾದನಾ ವೆಚ್ಚವು ಉಳುಮೆ, ಬಿತ್ತನೆ, ಬೀಜ ಖರೀದಿ, ಗೊಬ್ಬರ ಖರೀದಿಯ ವೆಚ್ಚವನ್ನಷ್ಟೇ ಒಳಗೊಳ್ಳುತ್ತಿತ್ತು (ಸ್ವಾಮಿನಾಥನ್ ವರದಿಯಲ್ಲಿ ಇದನ್ನು ಎ2 ಎಂದು ಕರೆಯಲಾಗಿದೆ). ಸರ್ಕಾರವು ಅದರ ಆಧಾರದಲ್ಲೇ ಎಂಎಸ್‌ಪಿ ನಿಗದಿ ಮಾಡುತ್ತಿತ್ತು. ಇದು ವೈಜ್ಞಾನಿಕ ಅಲ್ಲ. ರೈತರು ಮತ್ತು ಅವರ ಕುಟುಂಬದ ಸದಸ್ಯರು ಹೊಲಗಳಲ್ಲಿ ದುಡಿಯುವುದನ್ನೂ ಉತ್ಪಾದನಾ ವೆಚ್ಚದಲ್ಲಿ ಸೇರಿಸಬೇಕು. ಹೊಲಕ್ಕೆ ಭೋಗ್ಯ ಅಥವಾ ವೆಚ್ಚವನ್ನು ನಿಗದಿ ಮಾಡಿ, ಅದನ್ನೂ ಉತ್ಪಾದನಾ ವೆಚ್ಚಕ್ಕೆ ಸೇರಿಸಬೇಕು. ಆ ಎಲ್ಲಾ ವೆಚ್ಚಗಳನ್ನು ಒಳಗೊಂಡ ಸಮಗ್ರ ಉತ್ಪಾದನಾ ವೆಚ್ಚವನ್ನು ನಿಗದಿ ಮಾಡಬೇಕು



(ಇದನ್ನು ಸಿ2 ಎಂದು ಕರೆಯಲಾಗಿದೆ). ಈ ಉತ್ಪಾದನಾ ವೆಚ್ಚದ ಮೇಲೆ, ಶೇ 50ರಷ್ಟು ಹೆಚ್ಚುವರಿ ಮೊತ್ತವನ್ನು ಸೇರಿಸಿ ಎಂಎಸ್‌ಪಿ ನಿಗದಿ ಮಾಡಬೇಕು ಎಂದು ಸ್ವಾಮಿನಾಥನ್ ಆಯೋಗವು ಹೇಳಿತ್ತು.

ಕೇಂದ್ರ ಸರ್ಕಾರವು ಸ್ವಾಮಿನಾಥನ್ ವರದಿಯ ಆಧಾರದಲ್ಲೇ ಎಂಎಸ್‌ಪಿ ನೀಡುತ್ತಿದ್ದೇವೆ ಎಂದು ಹೇಳುತ್ತಿದೆ. ಆದರೆ ಅದು ನೀಡುತ್ತಿರುವುದು ಎ2 ಮತ್ತು ಕುಟುಂಬದ ಕೂಲಿ ವೆಚ್ಚವನ್ನು ಒಳಗೊಂಡ ಉತ್ಪಾದನಾ ವೆಚ್ಚ ಮತ್ತು ಅದರ ಮೇಲೆ ಶೇ 50ರಷ್ಟು ಹೆಚ್ಚುವರಿ ಮೊತ್ತವನ್ನು ಮಾತ್ರ. ಸ್ವಾಮಿನಾಥನ್ ಆಯೋಗವು ಶಿಫಾರಸು ಮಾಡಿದ್ದಂತೆ ಸಮಗ್ರ ವೆಚ್ಚವನ್ನು ಆಧರಿಸಿದ ಎಂಎಸ್‌ಪಿ ಇದಲ್ಲ. ಕೇಂದ್ರ ಸರ್ಕಾರವು ನೀಡುತ್ತಿರುವ ಎಂಎಸ್‌ಪಿಯಿಂದ ರೈತರಿಗೆ ಹೇಗೆ ನಷ್ಟವಾಗುತ್ತಿದೆ ಎಂಬುದನ್ನು ಕರ್ನಾಟಕ ಕೃಷಿ ಬೆಲೆ ಆಯೋಗವು 2018ರಲ್ಲಿ ಸಿದ್ದಪಡಿಸಿದ್ದ ವರದಿಯಲ್ಲಿ ವ್ಯವಸ್ಥಿತವಾಗಿ ವಿವರಿಸಲಾಗಿದೆ. ಅಲ್ಲದೆ, ಕೇಂದ್ರ ಸರ್ಕಾರವು ಎಂಎಸ್‌ಪಿ ನಿಗದಿಯಲ್ಲಿ ಸ್ವಾಮಿನಾಥನ್ ಆಯೋಗದ ಶಿಫಾರಸುಗಳನ್ನು ಹೇಗೆ ಕಡೆಗಣಿಸುತ್ತಿದೆ ಎಂಬುದನ್ನೂ ವಿವರಿಸಲಾಗಿದೆ.

ದೇಶದ ಪ್ರತಿ ರಾಜ್ಯದಲ್ಲೂ ಒಂದೇ ಬೆಳೆಯ (ಉದಾಹರಣೆಗೆ ಭತ್ತ) ಉತ್ಪಾದನಾ ವೆಚ್ಚದಲ್ಲಿ ಭಾರಿ ವ್ಯತ್ಯಾಸ ಇರುತ್ತದೆ. ನೀರಾವರಿ ಸೌಲಭ್ಯ ಇರುವ ಕಾರಣಕ್ಕೆ ಪಂಜಾಬ್‌ನಲ್ಲಿ ಒಂದು ಕ್ವಿಂಟಾಲ್ ಭತ್ತವನ್ನು ಬೆಳೆಯಲು ಕಡಿಮೆ ಖರ್ಚಾಗುತ್ತದೆ. ಆದರೆ ಅಷ್ಟೇ ಭತ್ತವನ್ನು ಕರ್ನಾಟಕದಲ್ಲಿ ಬೆಳೆಯಲು ತಗಲುವ ವೆಚ್ಚ ಇನ್ನೂ ಹೆಚ್ಚಾಗುತ್ತದೆ. ಕೇಂದ್ರ ಸರ್ಕಾರವು ಪಂಜಾಬ್‌ನಲ್ಲಿನ ವೆಚ್ಚವನ್ನು ಪರಿಗಣಿಸಿ ಎಂಎಸ್‌ಪಿ ನಿಗದಿ ಮಾಡಿದರೆ, ಕರ್ನಾಟಕದ ರೈತರಿಗೆ ನಷ್ಟವಾಗುತ್ತದೆ. ಹೀಗಾಗಿ ಎಲ್ಲಾ ರಾಜ್ಯಗಳಿಗೂ ಉತ್ಪಾದನಾ ವೆಚ್ಚವನ್ನು ಪ್ರತ್ಯೇಕವಾಗಿ ನಿಗದಿ ಮಾಡಬೇಕು ಮತ್ತು ಅದರ ಆಧಾರದಲ್ಲಿ ಸಮಗ್ರ ಉತ್ಪಾದನಾ ವೆಚ್ಚವನ್ನು (ಸಿ2) ಲೆಕ್ಕ ಹಾಕಬೇಕು. ಅನಂತರ ಶೇ 50ರಷ್ಟು ಹೆಚ್ಚುವರಿ ಮೊತ್ತವನ್ನು ಸೇರಿಸಿ ಎಂಎಸ್‌ಪಿ ನಿಗದಿ ಮಾಡಬೇಕು ಎಂದು ಸ್ವಾಮಿನಾಥನ್ ಆಯೋಗವು ತನ್ನ ಐದೂ ವರದಿಗಳಲ್ಲಿ ಪದೇ-ಪದೇ ಹೇಳಿದೆ. ಆದರೆ ಕೇಂದ್ರ ಸರ್ಕಾರವು ದೇಶದಾದ್ಯಂತ ಏಕಪ್ರಕಾರದ ಎಂಎಸ್‌ಪಿಯನ್ನೇ ಘೋಷಿಸುತ್ತದೆ. 'ಕೇಂದ್ರ ಸರ್ಕಾರದ ಎಂಎಸ್‌ಪಿಯಿಂದ ರೈತರಿಗೆ ನಷ್ಟವಾಗಲು ಇದೂ ಒಂದು ಕಾರಣ' ಎನ್ನುತ್ತಾರೆ ತಜ್ಞರು.

ಆಧಾರ: ಎಂ.ಎಸ್.ಸ್ವಾಮಿನಾಥನ್ ಅಧ್ಯಕ್ಷತೆಯ ರಾಷ್ಟ್ರೀಯ ಕೃಷಿ ಆಯೋಗದ ಐದು ವರದಿಗಳು, ಕರ್ನಾಟಕ ಕೃಷಿ ಬೆಲೆ ಆಯೋಗದ ವರದಿಗಳು, ಪಿಟಿಐ

'ರೈತರ ಬೇಡಿಕೆ ನ್ಯಾಯಯುತ'

ಸ್ವಾಮಿನಾಥನ್ ಆಯೋಗದ ವರದಿಯ ಪ್ರಕಾರ ಎಂಎಸ್‌ಪಿ ನೀಡಿದರೆ ಗ್ರಾಹಕರಿಗೆ ಹೊರೆಯಾಗುತ್ತದೆ ಎಂಬ ತಪ್ಪು ಅಭಿಪ್ರಾಯವನ್ನು ಜನರಲ್ಲಿ ಬಿತ್ತಲಾಗುತ್ತಿದೆ. ಆದರೆ, ಅದು ನಿಜವಲ್ಲ. ಆ ಶಿಫಾರಸಿನಂತೆ ಎಂಎಸ್‌ಪಿ ನಿಗದಿ ಮಾಡಿದರೂ, ಪ್ರತಿ ಕೃಷಿ ಉತ್ಪನ್ನಕ್ಕೆ ಗ್ರಾಹಕರು ಈಗ ನೀಡುತ್ತಿರುವ ಬೆಲೆಗಿಂತ ಆ ಎಂಎಸ್‌ಪಿ ಹೆಚ್ಚೇನೂ ಆಗುವುದಿಲ್ಲ. ದಲ್ಲಾಳಿಗಳ ಮತ್ತು ವ್ಯಾಪಾರಿಗಳ ಲಾಭದ ಪ್ರಮಾಣ ಕಡಿಮೆಯಾಗುತ್ತದೆ ಅಷ್ಟೆ. ಈ ಕಾರಣದಿಂದಲೇ ಸ್ವಾಮಿನಾಥನ್ ಆಯೋಗದ ಶಿಫಾರಸು ಜಾರಿಗೆ ಬರದಂತೆ ನೋಡಿಕೊಳ್ಳಲಾಗುತ್ತಿದೆ. ಇದರಿಂದ ರೈತರಿಗೆ ನಷ್ಟವಾಗುತ್ತಿದೆ.

ಕೇಂದ್ರ ಸರ್ಕಾರವೂ ಇದೇ ರೀತಿ ಮಾತನಾಡುತ್ತಿದೆ. 'ಈ ಶಿಫಾರಸಿನಂತೆ ಎಂಎಸ್‌ಪಿ ನಿಗದಿ ಮಾಡಿದರೆ ಮಾರುಕಟ್ಟೆ ಹಾದಿತಪ್ಪುತ್ತದೆ' ಎಂದು ಕೇಂದ್ರ ಸರ್ಕಾರ ಸುಪ್ರೀಂ ಕೋರ್ಟ್‌ಗೆ ಪ್ರಮಾಣಪತ್ರ ಸಲ್ಲಿಸಿದೆ. ಆದರೆ ಅದರಲ್ಲೂ ಹುರುಳಿಲ್ಲ. ರಾಜಕೀಯ ಹಿತಾಸಕ್ತಿಗಾಗಿ ಸರ್ಕಾರ ಹೀಗೆ ಮಾಡುತ್ತಿದೆ. ಏಕೆಂದರೆ ವರ್ತಕರ ಸಂಘಗಳಲ್ಲಿ ರಾಜಕಾರಣಿಗಳೇ ಇದ್ದಾರೆ. ಇದು ಜಾರಿಗೆ ಬಂದರೆ ಅವರಿಗೆ ನಷ್ಟವಾಗುತ್ತದೆ.

ಸ್ವಾಮಿನಾಥನ್ ಆಯೋಗದ ಶಿಫಾರಸಿನಂತೆ ಎಂಎಸ್‌ಪಿ ನಿಗದಿ ಮಾಡಿ ಮತ್ತು ಎಂಎಸ್‌ಪಿಗೆ ಕಾನೂನಿನ ಖಾತರಿ ನೀಡಿ ಎಂದು ರೈತರು ಇಡುತ್ತಿರುವ ಬೇಡಿಕೆ ನ್ಯಾಯಯುತವಾಗಿದೆ. ಏಕೆಂದರೆ ಈಗ ಎಂಎಸ್‌ಪಿಯನ್ನು ಸರ್ಕಾರ ಘೋಷಿಸುತ್ತದೆ ಅಷ್ಟೆ. ಸರ್ಕಾರ ಖರೀದಿಸಿದ್ದನ್ನು ಬಿಟ್ಟರೆ, ಎಂಎಸ್‌ಪಿಗಿಂತ ಕಡಿಮೆ ಬೆಲೆಗೇ ವರ್ತಕರು ಖರೀದಿಸುತ್ತಾರೆ. ಇದರಿಂದ ಎಲ್ಲಾ ರೈತರಿಗೆ ಎಂಎಸ್‌ಪಿ ದೊರೆಯುತ್ತಿಲ್ಲ. ಎಂಎಸ್‌ಪಿಗೆ ಕಾನೂನಿನ ಖಾತರಿ ನೀಡಿದರೆ ಸರ್ಕಾರ, ವರ್ತಕರು, ಜನರು, ಖಾಸಗಿ ಕಂಪನಿಗಳು ಸಹ ಎಂಎಸ್‌ಪಿ ದರದಲ್ಲೇ ಕೃಷಿ ಉತ್ಪನ್ನಗಳನ್ನು ಖರೀದಿಸಬೇಕಾಗುತ್ತದೆ. ಎಂಎಸ್‌ಪಿಗೆ ಕಾನೂನಿನ ಖಾತರಿ ದೊರೆಯುವುದರಿಂದ ರೈತರಿಗೆ ಆದಾಯದ ಖಾತರಿಯೂ ದೊರೆಯುತ್ತದೆ ಮತ್ತು ನಷ್ಟ ಇಲ್ಲವಾಗುತ್ತದೆ.

ಟಿ.ಎನ್.ಪ್ರಕಾಶ್ ಕಮ್ಮರಡಿ, ಕರ್ನಾಟಕ ಕೃಷಿ ಬೆಲೆ ಆಯೋಗದ ಮಾಜಿ ಅಧ್ಯಕ್ಷ

ಎಂಎಸ್‌ಪಿ ಲೆಕ್ಕಾಚಾರ

ಕೇಂದ್ರ ಈಗ ನೀಡುತ್ತಿರುವ ಎಂಎಸ್‌ಪಿ

ಎ2 + ಎಫ್‌ಎಲ್: ಇದು ಉಳುಮೆ, ಬಿತ್ತನೆ, ಬೀಜ ಖರೀದಿ, ಗೊಬ್ಬರ ಖರೀದಿಯ ವೆಚ್ಚವನ್ನು (ಎ2) ಒಳಗೊಂಡಿದೆ. ಮತ್ತು ಕೂಲಿ ವೆಚ್ಚವನ್ನು (ಎಫ್‌ಎಲ್) ಒಳಗೊಂಡಿದೆ. ಈ ವೆಚ್ಚದ ಮೇಲೆ ಶೇ 50ರಷ್ಟು ಹೆಚ್ಚುವರಿ ಮೊತ್ತವನ್ನು ಒಳಗೊಂಡ ಎಂಎಸ್‌ಪಿಯನ್ನು ಸರ್ಕಾರ ಘೋಷಿಸುತ್ತಿದೆ. ಉದಾಹರಣೆಗೆ: 2023-24ನೇ ಸಾಲಿನ ಭತ್ತಕ್ಕೆ ಕೇಂದ್ರ ಸರ್ಕಾರವು ₹2,183/ಕ್ವಿಂಟಲ್ ಎಂಎಸ್‌ಪಿಯನ್ನು ಘೋಷಿಸಿದೆ. ಅದರಲ್ಲಿ,

₹1,454 ಎ2+ಎಫ್‌ಎಲ್‌ನ ಮೊತ್ತ

₹729 ಉತ್ಪಾದನಾ ವೆಚ್ಚದ ಮೇಲಿನ ಶೇ 50ರಷ್ಟು ಹೆಚ್ಚುವರಿ ಮೊತ್ತ

₹2,183 ಪ್ರತಿ ಕ್ವಿಂಟಲ್ ಭತ್ತಕ್ಕೆ ಕೇಂದ್ರ ಸರ್ಕಾರ ನಿಗದಿ ಮಾಡಿರುವ ಒಟ್ಟು ಎಂಎಸ್‌ಪಿ

ಸ್ವಾಮಿನಾಥನ್ ಆಯೋಗದ ವರದಿಯ ಲೆಕ್ಕಾಚಾರದಂತೆ ಎಂಎಸ್‌ಪಿ

ಸಿ2 + 50%; ಇದು ಉಳುಮೆ, ಬಿತ್ತನೆ, ಬೀಜ ಖರೀದಿ, ಗೊಬ್ಬರ ಖರೀದಿಯ ವೆಚ್ಚ, ರೈತ ಮತ್ತು ಆತನ ಕುಟುಂಬದ ಶ್ರಮದ ವೆಚ್ಚ, ಜಮೀನಿನ ಬಾಡಿಗೆ/ಭೋಗ್ಯದ ವೆಚ್ಚವನ್ನು ಒಳಗೊಂಡಿದೆ. ಜತೆಗೆ ಅದರ ಮೇಲೆ ಶೇ 50ರಷ್ಟು ಹೆಚ್ಚುವರಿ ಮೊತ್ತವನ್ನು ಸೇರಿಸಬೇಕು ಎಂದು ಶಿಫಾರಸು ಹೇಳುತ್ತದೆ. ಆ ಪ್ರಕಾರ,

₹1,911 ಸಿ2 ಸಮಗ್ರ ಉತ್ಪಾದನಾ ವೆಚ್ಚ

₹955 ಸಿ2 ಸಮಗ್ರ ಉತ್ಪಾದನಾ ವೆಚ್ಚದ ಮೇಲಿನ ಶೇ 50ರಷ್ಟು ಹೆಚ್ಚುವರಿ ಮೊತ್ತ

₹2,866 ಸಿ2 ಮತ್ತು ಶೇ 50ರಷ್ಟು ಹೆಚ್ಚುವರಿ ಮೊತ್ತವನ್ನು ಒಳಗೊಂಡರೆ ಸರ್ಕಾರವು ನೀಡಬೇಕಾದ ಎಂಎಸ್‌ಪಿ

ಕೇಂದ್ರ ಸರ್ಕಾರದ ಎಂಎಸ್‌ಪಿಯಿಂದ ರೈತರಿಗಾಗುತ್ತಿರುವ ನಷ್ಟದ ಲೆಕ್ಕಾಚಾರ

ಬೆಳೆ	ಸಿ2 ಸಮಗ್ರ ವೆಚ್ಚ	ಸಿ2+ ಶೇ 50ರಷ್ಟು ಹೆಚ್ಚುವರಿ ಮೊತ್ತ	ಕೇಂದ್ರ ಸರ್ಕಾರ ನೀಡುತ್ತಿರುವ ಎಂಎಸ್‌ಪಿ (ಎ2+ಎಲ್+ ಶೇ 50ರಷ್ಟು ಹೆಚ್ಚುವರಿ ಮೊತ್ತ)	ಪ್ರತಿ ಕ್ವಿಂಟಲ್‌ಗೆ ರೈತರಿಗೆ ಆಗುತ್ತಿರುವ ನಷ್ಟ
ಭತ್ತ	₹1,911	₹2,866.50	₹2,183	₹683.50
ಜೋಳ	₹2,833	₹4,249.50	₹3,180	₹1,069.50
ತೊಗರಿ	₹5,993	₹8,989.50	₹7,000	₹1,989.50
ರಾಗಿ	₹3,328	₹4,992	₹3,846	₹1,146

* ರಾಜ್ಯವಾರು ಪ್ರತ್ಯೇಕವಾಗಿ ಸಿ2 ಸಮಗ್ರ ಉತ್ಪಾದನಾ ವೆಚ್ಚವನ್ನು ಲೆಕ್ಕಹಾಕಿದರೆ ನಷ್ಟದ ಮೊತ್ತ ಇನ್ನಷ್ಟು ಹೆಚ್ಚಾಗುತ್ತದೆ

'ರಂಗನಾಯಕ'ನಾಗಿ ಬಂದ ಜಗ್ಗೇಶ್

ನಿರ್ದೇಶಕ 'ಮಠ' ಗುರುಪ್ರಸಾದ್ ಮತ್ತು ನಟ ಜಗ್ಗೇಶ್ 15 ವರ್ಷಗಳ ನಂತರ ಮತ್ತೆ ಒಂದಾಗಿ ಬಂದಿದ್ದಾರೆ. ಇವರಿಬ್ಬರ ಜೋಡಿಯ 'ರಂಗನಾಯಕ' ಚಿತ್ರ ಮಾರ್ಚ್ 8ರಂದು ತೆರೆ ಕಾಣುತ್ತಿದೆ. ಚಿತ್ರದ 'ಎನ್ನ ಮನದರಸಿ' ಹಾಡು ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ.



ಜಗ್ಗೇಶ್, ಗುರುಪ್ರಸಾದ್

'ಈ ಸಿನಿಮಾ ಸಂಪೂರ್ಣವಾಗಿ ಗುರುಪ್ರಸಾದ್ ಅವರ ಪ್ರಸಾದ. ಗುರುಪ್ರಸಾದ್ ಜಗಮೊಂಡ, ಯಾರ ಮಾತನ್ನೂ ಕೇಳೋದಿಲ್ಲ. ಮದವೇರಿದ ಒಂಟಿ ಸಲಗದಂತೆ. ಅವರು ವರ್ಷಕ್ಕೊಂದು ಸಿನಿಮಾ ಮಾಡಬೇಕು' ಎಂದರು.

ಇದೇ ವೇಳೆ ಹುಲಿ ಉಗುರು ಪ್ರಕರಣದ ಕುರಿತು ಮಾತನಾಡಿ, 'ನಾನು ಹುಲಿ ತರ ಬದುಕಬೇಕು ಎಂದು ನನ್ನ ತಾಯಿ ಹುಲಿ ಉಗುರನ್ನು ಕೊಟ್ಟರು. ಆದರೆ ಯಾವನೋ ರಿಯಲ್ ಆಗಿ ಹುಲಿ ಉಗುರು ಹಾಕ್ಕೊಂಡು, ಯಾವುದೋ ಟಿವಿಯಲ್ಲಿ ತಗಲಾಕ್ಕೊಂಡ' ಎಂದು ಜಗ್ಗೇಶ್ ಖಾರವಾಗಿ ಪ್ರತಿಕ್ರಿಯಿಸಿದರು.

'ಪುಷ್ಪಕ ವಿಮಾನ' ಖ್ಯಾತಿಯ ನಿರ್ಮಾಪಕ ವಿಖ್ಯಾತ್ ಅವರು ಈ ಚಿತ್ರವನ್ನು ನಿರ್ಮಾಣ ಮಾಡಿದ್ದಾರೆ. ಜಗ್ಗೇಶ್ , ಚೈತ್ರ ಕೊಟ್ಟೂರು ಮುಖ್ಯ ಭೂಮಿಕೆಯಲ್ಲಿ ನಟಿಸಿರುವ ಈ ಚಿತ್ರಕ್ಕೆ ಅನೂಪ್ ಸೀಳಿನ್ ಸಂಗೀತ ನೀಡಿದ್ದಾರೆ.

'ಕರಾವಳಿ' ಪ್ರವೇಶಿಸಿದ ಪ್ರಜ್ವಲ್



ಪ್ರಜ್ವಲ್ ದೇವರಾಜ್

ಗುರುದತ್ ಗಾಣಿಗ ಆ್ಯಕ್ಷನ್ ಕಟ್ ಹೇಳಿರುವ ಪ್ರಜ್ವಲ್ ದೇವರಾಜ್ ನಟನೆಯ 40ನೇ ಸಿನಿಮಾ 'ಕರಾವಳಿ'ಯ ಮುಹೂರ್ತ ಮಂಗಳವಾರ(ಫೆ.20) ಬೆಂಗಳೂರಿನ ಬಸವನಗುಡಿ ದೇವಸ್ಥಾನದಲ್ಲಿ ನಡೆಯಿತು. ಸಿನಿಮಾದ ಚಿತ್ರೀಕರಣ ಮೂಡಬಿದಿರೆ, ಉಡುಪಿ ಸುತ್ತಮುತ್ತ ಫೆ.22ರಿಂದ ಆರಂಭವಾಗಲಿದೆ.

'ಕೋಣ ಎನ್ನುವುದು ನಮ್ಮ ಚಿತ್ರದ ಭಾಗ. ಒಂದು ಕಂಬಳದ ಹಿಂದೆ ಇರುವ ಶ್ರಮ ಊಹೆಗೆ ನಿಲುಕದ್ದು. ಅದರ ಹಿಂದೆ ಒಂದು ಜೀವನವಿದೆ. ಚಂದ್ರಶೇಖರ್ ಅವರು ಬರೆದಿರುವ ಕಥೆ ಇದಾಗಿದೆ. ಇದು ನಮ್ಮ ಮಣ್ಣಿನ ಸಿನಿಮಾ. 'ಕಾಂತಾರ' ಸಿನಿಮಾದ ಕಥೆಗೂ ನಮ್ಮ ಕಥೆಗೂ ಯಾವುದೇ ಸಂಬಂಧವಿಲ್ಲ. ಇಲ್ಲಿ ದೈವಾರಾಧನೆ ಅಂಶಗಳಿಲ್ಲ. ಜಾತ್ರೆ, ಕಂಬಳದ ಘಮಲಿದೆ. ಕಂಬಳದ ಕೋಣಗಳನ್ನು ಮನೆಯ ಸದಸ್ಯರಂತೆ ಸಾಕುತ್ತಾರೆ. ನಮ್ಮ ಕಥೆಯೂ ಅಂತಹದೇ ಸೂಕ್ಷ್ಮವನ್ನು ಹೇಳುತ್ತದೆ. ಕೃಷಿ ಚಟುವಟಿಕೆಯ ಜೊತೆಗೆ ಕಂಬಳದಲ್ಲಿ ಭಾಗವಹಿಸುವ ತಂಡಗಳಿವೆ. ಇನ್ನೊಂದು ಕಂಬಳಕ್ಕಾಗಿಯೇ ಕೋಣಗಳನ್ನು ಬೆಳೆಸುತ್ತಾರೆ. ಹೀಗೆ ಎರಡು ಕ್ಲಾಸ್‌ಗಳಿವೆ. ಕಂಬಳದ ಮೇಲಿನ ಆಸೆ, ಪ್ರೀತಿಗೋಸ್ಕರ ಭಾಗವಹಿಸುವಾತ, ವಾಣಿಜ್ಯ ಉದ್ದೇಶದಿಂದಲೇ ಭಾಗವಹಿಸುವವರ ವಿರುದ್ಧ ಗೆದ್ದಾಗ ಆಗುವ ಪರಿಣಾಮವೇನು ಎನ್ನುವ ಸೂಕ್ಷ್ಮ ವಿಚಾರವನ್ನು ಕಥೆ ಹೇಳುತ್ತದೆ. ಹೀಗಾಗಿ ಇದು ಮನುಷ್ಯ ಮತ್ತು ಪ್ರಾಣಿಗಳ ನಡುವಿನ ಸಂಘರ್ಷ' ಎಂದು ಕಥಾಹಂದರವನ್ನು ವಿವರಿಸಿದರು ಗುರುದತ್.

'ಚೀತಾ ಸಿನಿಮಾ ಚಿತ್ರೀಕರಣದ ಸಂದರ್ಭದಲ್ಲಿ ಕಾಲಿಗೆ ಸಣ್ಣ ಗಾಯವಾಗಿತ್ತು. ಸದ್ಯ ಇದರಿಂದ ಚೇತರಿಸಿಕೊಳ್ಳುತ್ತಿದ್ದೇನೆ. ಇಲ್ಲವಾದಲ್ಲಿ 'ಚೀತಾ' ಚಿತ್ರೀಕರಣ ಈಗಾಗಲೇ ಮುಗಿಯಬೇಕಿತ್ತು. ಸದ್ಯ 'ಕರಾವಳಿ' ಚಿತ್ರೀಕರಣದಲ್ಲಿ ಭಾಗವಹಿಸಲಿದ್ದು, ನಡುವೆ ಚೀತಾ ಪೂರ್ಣಗೊಳಿಸಲಿದ್ದೇನೆ. 'ಕರಾವಳಿ'ಗಾಗಿ ಆ ಭಾಗದ ಕನ್ನಡ ಭಾಷೆಯನ್ನು ಕಲಿಯುತ್ತಿದ್ದೇನೆ. 'ಧನಂಜಯ' ಎಂಬ ಪಾತ್ರದಲ್ಲಿ ನಾನು ಕಾಣಿಸಿಕೊಳ್ಳಲಿದ್ದು, ಕಂಬಳದ ಕೋಣಗಳ ಜೊತೆ ತರಬೇತಿ ಪಡೆಯಬೇಕಾಗಿದೆ. ಕಂಬಳದ ಕೋಣಗಳನ್ನು ಬೆಳೆಸುವ ಕುಟುಂಬದಿಂದ ಬಂದಾತ ಈತ. ಕೋಣಗಳ ಜೊತೆ 'ಧನಂಜಯ' ಬೆಳೆಯುತ್ತಾನೆ. 80 ದಿನಗಳ ಕಾಲ ಚಿತ್ರದ ಚಿತ್ರೀಕರಣ ನಡೆಯಲಿದೆ. ಈ ಸಿನಿಮಾ ಮುಂದಿನ ವರ್ಷ ಬಿಡುಗಡೆಯಾಗಲಿದೆ. ಈ ವರ್ಷ 'ಮಾಫಿಯಾ', 'ಗಣ' ಮತ್ತು 'ರಾಕ್ಷಸ' ಬಿಡುಗಡೆಯಾಗಲಿದೆ' ಎಂದರು ಪ್ರಜ್ವಲ್.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ **9606038256**

✗ ಫೆಬ್ರುವರಿ 14ರಂದು ಪ್ರಧಾನಿ ನರೇಂದ್ರ ಮೋದಿ ಅವರು ಯುಎಇಗೆ ಭೇಟಿ ನೀಡಿದ್ದರು. ಬೋಚಾಸನವಾಸಿ ಅಕ್ಷರ ಪುರುಷೋತ್ತಮ ಸ್ವಾಮಿನಾರಾಯಣ ಸಂಸ್ಥಾ (ಬಿಎಪಿಎಸ್) ದೇವಾಲಯವನ್ನು ಅಂದು ಪ್ರಧಾನಿ ಮೋದಿ ಅವರು ಉದ್ಘಾಟಿಸಿದರು. ಯುಎಇನಲ್ಲಿ ನಿರ್ಮಾಣವಾದ ಮೊದಲ ಹಿಂದೂ ದೇವಸ್ಥಾನ ಇದು ಎಂದು ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರವು ಹೇಳಿತು. ಮೊದಲು ಈ ಸಂದೇಶವನ್ನು ಕೇಂದ್ರ ಸಂಸ್ಕೃತಿ ಸಚಿವಾಲಯವು ಎಕ್ಸ್ ಖಾತೆಯಲ್ಲಿ ಬರೆದುಕೊಂಡಿತು. ನಂತರದಲ್ಲಿ ಕೇಂದ್ರ ಸರ್ಕಾರದ ಹಲವು ಸಚಿವರು (ಸ್ಮೃತಿ ಇರಾನಿ, ರಾಜ್ಯವರ್ಧನ್ ರಾಠೋಡ್ ಮುಂತಾದವರು) ಇದೇ ಮಾಹಿತಿಯನ್ನು ತಮ್ಮ ತಮ್ಮ ಖಾತೆಗಳ ಮೂಲಕ ಹಂಚಿಕೊಂಡರು. ಭಾರತದ ಹಲವು ಮಾಧ್ಯಮ ಸಂಸ್ಥೆಗಳೂ (ಪಿಟಿಐ, ಹಿಂದೂಸ್ಥಾನ್ ಟೈಮ್ಸ್, ಇಂಡಿಯನ್ ಎಕ್ಸ್‌ಪ್ರೆಸ್, ಮಿಂಟ್, ಮಿರರ್ ನೌ ಮುಂತಾದವು) ಇದೇ ಮಾಹಿತಿಯನ್ನು ಹಂಚಿಕೊಂಡವು. 'MyGov' ವೇದಿಕೆಯಲ್ಲಿಯೂ ಈ ಮಾಹಿತಿಯನ್ನು ಹಂಚಿಕೊಳ್ಳಲಾಯಿತು. ಆದರೆ, ಇದು ಸುಳ್ಳು ಸುದ್ದಿ.

✓ ಬಿಎಪಿಎಸ್ ದೇವಾಲಯಕ್ಕೂ ಮುನ್ನ ಯುಎಇನಲ್ಲಿ ಹಲವು ಹಿಂದೂ ದೇವಾಲಯಗಳು ನಿರ್ಮಾಣವಾಗಿದ್ದವು. 1958ರಲ್ಲಿಯೇ ಯುಎಇನಲ್ಲಿ ಕೃಷ್ಣ ದೇವಾಲಯ ನಿರ್ಮಾಣವಾಗಿತ್ತು. ಶೇಕ್ ರಶೀದ್ ಬಿನ್ ಸಯೀದ್ ಅಲ್ ಮಖ್ತೂಮ್ (HH Sheikh Rashid Bin Saeed Al Maktoum) ಎಂಬುವರು ಮಸೀದಿ ಪಕ್ಕದಲ್ಲಿ ಕೃಷ್ಣ ಮಂದಿರ ನಿರ್ಮಾಣ ಮಾಡಲು ಭೂಮಿ ನೀಡಿದ್ದರು. 1997ರಲ್ಲಿ ಈ ದೇವಾಲಯವನ್ನು ನವೀಕರಿಸಲಾಗಿತ್ತು. ಯುಎಇನ ವಿದೇಶಾಂಗ ವ್ಯವಹಾರಗಳ ಸಚಿವಾಲಯದ ವೆಬ್‌ಸೈಟ್‌ನಲ್ಲಿಯೂ ಕೃಷ್ಣ ದೇವಾಲಯದ ವಿವರಗಳಿವೆ. ಬಿಎಪಿಎಸ್ ದೇವಾಲಯದವರಿಗೆ ಮೇಲ್ ಮಾಡಿ ಕೇಳಲಾಯಿತು. ಅವರು ಸಹ ಇದು ಯುಎಇನಲ್ಲಿ ನಿರ್ಮಾಣವಾದ ಮೊದಲ ದೇವಸ್ಥಾನವಲ್ಲ ಎಂದು ಉತ್ತರಿಸಿದ್ದಾರೆ. ಆದ್ದರಿಂದ, ಯುಎಇನಲ್ಲಿ ಬಿಎಪಿಎಸ್ ದೇವಾಲಯವು ಮೊದಲು ನಿರ್ಮಾಣಗೊಂಡ ಹಿಂದೂ ದೇವಾಲಯವಲ್ಲ ಎಂದು ಬೂಮ್‌ಲೈವ್ ಫ್ಯಾಕ್ಟ್‌ಚೆಕ್ ಪ್ರಕಟಿಸಿದೆ.

ಗುಂಡಣ್ಣ



ಕಣ್ಣೀರು ಕರಗುವ ಮುನ್ನ

ನುಡಿ ಬೆಳಗು





ಕಲೀಮ್ ಉಲ್ಲಾ, ಕನ್ನಡ ಉಪನ್ಯಾಸಕ

ಆ ಹುಡುಗ ಓಡಿಸುತ್ತಿದ್ದ ಬೈಕಿನ ಹಿಂದೆ ದಢೂತಿ ಗೆಳೆಯನೊಬ್ಬ ಕೂತಿದ್ದ. ಗಾಡಿ ಓಡಿಸುತ್ತಿದ್ದವನು ಸಣಕಲ. ಒಮ್ಮೆಗೆ ಸಿಗ್ನಲ್‌ನಲ್ಲಿ ಗಕ್ಕನೆ ನಿಂತ ಕಾರಿಗೆ ಹಿಂದಿನಿಂದ ಬಂದ ಬೈಕು ಗುದ್ದಿತು. ಇಬ್ಬರೂ ಗೆಣೆಕಾರರು ಹಾರಿ ಬಿದ್ದರು. ಮೊದಲು ಬಿದ್ದ ಸಣಕಲನ ಮೇಲೆ ದಢೂತಿ ಹುಡುಗನ ಭಾರದ ದೇಹ ಅಪ್ಪಳಿಸಿತ್ತು. ದಢೂತಿ ಗೆಳೆಯನಿಗೆ ಸದ್ಯ ಏನೂ ಆಗಲಿಲ್ಲ. ಆದರೆ ಮೊದಲು ಬಿದ್ದ ಸಣಕಲನ ಬೆನ್ನ ಹುರಿ ತುಂಡಾಯಿತು. ಆಸ್ಪತ್ರೆ, ಶಸ್ತ್ರಚಿಕಿತ್ಸೆ, ಹಲವಾರು ವೈದ್ಯರ ತಪಾಸಣೆ, ನಿರಂತರ ಆರೈಕೆಗಳ ನಂತರವೂ ಸುಂದರ ಸಣಕಲ ಚೇತರಿಸಿಕೊಳ್ಳಲಿಲ್ಲ. ದೇಹದ ಸ್ವಾಧೀನ ಶಾಶ್ವತವಾಗಿ ಕಳೆದುಕೊಂಡ. ಆ ನೋವಿನಲ್ಲೂ ಸಣಕಲ ಹುಡುಗ ತನ್ನ ಅಪ್ಪನಿಗೆ 'ನನ್ನ ಗೆಳೆಯನ ತಪ್ಪಿಲ್ಲ. ಅವನಿಗೆ ಏನೂ ತೊಂದರೆ ಆಗಕೂಡದು. ಅವನ ಜೀವನ ಹಾಳಾಗಬಾರದು. ಯಾರೂ ಅವನಿಗೆ ಬಯ್ಯಬಾರದು. ಗಾಡಿ ಓಡಿಸುತ್ತಿದ್ದ ನಾನೇ ಎಲ್ಲಕ್ಕೂ ಜವಾಬುದಾರ' ಎಂದ.

ಈ ಮಾತು ಕೇಳಿ ಅವ್ವ ಅಪ್ಪ ಬಿಕ್ಕಿ ಬಿಕ್ಕಿ ಅತ್ತರು. ತನಗೆ ತೊಂದರೆಯಾದರೂ ಸರಿ. ಗೆಳೆಯನಿಗೆ ಕಿಂಚಿತ್ತೂ ಬಾಧೆಯಾಗಬಾರದು ಎಂಬ ಆ ಹುಡುಗನ ಮನಸ್ಸು ಅದೆಷ್ಟು ವಿಶಾಲ. ಬೆಳೆದ ಮಗನನ್ನು ತಾಯಿ ತಂದೆ ಮತ್ತೆ ಎಳೆ ಮಗುವಿನಂತೆ ಸಾಕುವ ದುಃಸ್ಥಿತಿ ಊಹೆಗೂ ಮೀರಿದ್ದು. ದಿನದಿನವೂ ಕತ್ತಲಾಗಿ ಬಾಧಿಸುತ್ತವೆ. ಯಾರ ಸಾಂತ್ವನಗಳು ಎದೆಯ ಭಾರವನ್ನು ಕರಗಿಸುವುದಿಲ್ಲ. ಗೆಳೆಯರ, ನೆಂಟರ, ಪರಿಚಿತರ ಸಮಾಧಾನಗಳು ವಾರ ತಿಂಗಳಿಗೆ ಮುಗಿಯುತ್ತವೆ. ಧೃತಿಗೆಡದೆ ಜೀವನವನ್ನು ಯಥಾವತ್ತೆಂದು ಸ್ವೀಕರಿಸಲು ಗಟ್ಟಿ ಮನಸ್ಸು ಬೇಕು. ಕಣ್ಣೀರು ಸಿಡಿದು ಚಲಿಸುವುದನ್ನು ನಿಲ್ಲಿಸಬೇಕು.

ನನಗೆ ಸಿಕ್ಕ ಆ ಹುಡುಗನ ತಂದೆ ತಮ್ಮ ಮಗನ ವಿಷಯ ಹೇಳುತ್ತಾರೆಂದು ಭಾವಿಸಿದ್ದೆ. ಆದರೆ ಅವರು ಮತ್ತೊಂದು ರೀತಿ ಪರಿವರ್ತನೆಯಾಗಿದ್ದರು. ತಮ್ಮ ಮಗನಂತೆಯೇ ವ್ಯಥೆ ಪಡುವ ಅನೇಕ ಮಕ್ಕಳ ಕಥೆ ಹೇಳಿದರು. ಅವರ ಚಿತ್ರಗಳ ತೋರಿದರು. ಅನೇಕ ತಿಂಗಳು ಮಗನೊಟ್ಟಿಗೆ ಆಸ್ಪತ್ರೆಯಲ್ಲಿ ಕಳೆದ ಅವರ ಮಾತು, ಮನಸ್ಸು, ಚಿಂತನೆ ಎಲ್ಲವೂ ಬದಲಾಗಿತ್ತು. ತಮ್ಮ ಮಗನಂತೆಯೇ ಸ್ವಾಧೀನ ಕಳಕೊಂಡ ಬಡ ರೈತಾಪಿ ಹುಡುಗನೊಬ್ಬನ ವಿಡಿಯೋ ತೋರಿಸಿ ಇವನಿಗೆ ಸಹಾಯ ಮಾಡಿ ಎಂದು ದನಿ ಮೃದುಗೊಳಿಸಿದರು. ಆತನ ಚಿಕಿತ್ಸೆಗೆ ಈಗ ಹಣ ಹೊಂದಿಸುತ್ತಿದ್ದೇನೆ ಎಂದು ವಿಶ್ವಾಸ ತೋರಿದರು. ಅವರ ಬಗ್ಗೆ ಒಮ್ಮೆಲೇ ಗೌರವ ಉಕ್ಕಿ ಬಂತು.

'ಆಗಿ ಹೋಗಿದ್ದನ್ನು ನೆನೆದರೆ ಚಿಂತೆ. ಮುಂದೆ ಆಗುವ ಒಳಿತನ್ನು ನಂಬಿದರೆ ನೆಮ್ಮದಿ. ಇತರರ ದುಃಖಕ್ಕೆ ನೆರವಾದರೆ ಅದು ನನ್ನ ಮಗನಿಗೆ ಸಲ್ಲುವ ಆಶೀರ್ವಾದ. ಬದುಕು ಬಂದಂತೆ ಸ್ವೀಕರಿಸುವುದು ಜಾಣತನ. ಆಗುವುದನ್ನು ನಿಲ್ಲಿಸಲು, ಬದಲಾಯಿಸಲು ಸಾಧ್ಯವಿಲ್ಲ. ನಮ್ಮಂತೆಯೇ ಸಮಾನ ದುಃಖಿತರಾದವರಿಗೆ ನೆರವಾಗಿ, ಪ್ರೀತಿದೋರಿ, ಧೈರ್ಯತುಂಬಿ, ಮನುಷ್ಯತ್ವಕ್ಕೆ ಹಂಬಲಿಸುವುದೇ ನಿಜವಾದ ಜೀವನ' ಎಂದರು. ❖

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಬುಧವಾರ ಫೆಬ್ರುವರಿ 21, 2024

ಶ್ರೀ ಶೋಭಕೃತ್ ನಾಮ ಸಂವತ್ಸರ ಉತ್ತರಾಯಣ ಶಿಶಿರ ಋತು ತಿಥಿ: ಮಾಘ ಶುಕ್ಲ ದ್ವಾದಶಿ ಗಂ. 11-28 ನಕ್ಷತ್ರ: ಪುನರ್ವಸು ಗಂ. 14-18 ಯೋಗ: ಆಯುಷ್ಮಾನ್ ಗಂ. 11-51 ಕರಣ: ಬಾಲವ ಗಂ. 11-28, ಕುಂಭ ಮಾಸದ 08 ನೇ ದಿನ, ಮಳೆನಕ್ಷತ್ರ: ಶತಭಿಷ 1.
ರಾಹುಕಾಲ : ಮಧ್ಯಾಹ್ನ 12-00 - 01-30
ಸೂರ್ಯೋದಯ : 06-54 **ಸೂರ್ಯಾಸ್ತ :** 06-34
ಮುಸ್ಲಿಂ ದಿನಾಂಕ : 10 ಶಬನ್
ಅದೃಷ್ಟ ಸಂಖ್ಯೆ : 8, 6

ಮೇಷ: ವಾಹನ ವಹಿವಾಟುಗಳಲ್ಲಿ ಅನಿರೀಕ್ಷಿತ ನಷ್ಟವಾದರೂ ಅಸಲಿಗೆ ಯಾವ ರೀತಿಯ ತೊಂದರೆ ಉಂಟಾಗುವುದಿಲ್ಲ. ಮಕ್ಕಳ ಜೀವನದ ಕೆಲವು ವಿಚಾರದ ನಿರ್ಧಾರ ಮಾಡುವ ದಿನ ಇದಾಗಲಿದೆ. ಹೊರಗುತ್ತಿಗೆ ಕೆಲಸ ಲಾಭ ತರಲಿದೆ.

ವೃಷಭ: ಸಮಯೋಚಿತವಾದ ಬುದ್ಧಿಶಕ್ತಿಯು ಸಂಕಟಗಳನ್ನು ದೂರ ಮಾಡಲಿದೆ. ಸೇವಾ ಮನೋಭಾವವಿರುವ ವ್ಯಕ್ತಿಗಳು ಹೆಚ್ಚು ಪ್ರಶಂಸೆ ಪಡೆಯುವರು. ನೀಲಿ ಬಣ್ಣ ಶುಭದಾಯಕ.

ಮಿಥುನ: ಯಾವುದೇ ರೀತಿಯ ಬದಲಾವಣೆ ಮಾಡಲು ಈ ದಿನ ಸೂಕ್ತ ಕಾಲವಾಗಿರುತ್ತದೆ. ತೆಗೆದುಕೊಳ್ಳುವ ತೀರ್ಮಾನಗಳು ಸರಿಯಾಗಿಯೇ ಇರುವುದು. ಆರೋಗ್ಯದ ವಿಚಾರದಲ್ಲಿ ಹೆಚ್ಚಿನ ಗಮನವಿರಲಿ.

ಕರ್ಕಾಟಕ: ಹೋಟೆಲ್ ಉದ್ಯಮಿಗಳಿಗೆ ವ್ಯವಹಾರದಲ್ಲಿ ಲಾಭ ಮತ್ತು ಸ್ನೇಹಪರ ಸ್ವಭಾವದಿಂದ ಸುತ್ತಮುತ್ತಲಿನ ಸಮಾಜದಲ್ಲಿ ಗೌರವವು ಹೆಚ್ಚಲಿದೆ. ವಿದ್ಯಾರ್ಥಿವರ್ಗಕ್ಕೆ ತಮ್ಮ ಅಭ್ಯಾಸದಲ್ಲಿ ಸಾಧಿಸಲು ಹೆಚ್ಚಿನ ಅವಕಾಶ ಸಿಗಲಿದೆ.

ಸಿಂಹ: ಎಲ್ಲಾ ವಿಚಾರದಲ್ಲೂ ಸಾವಧಾನವಾಗಿ ಮುಂದುವರಿಯುವುದು ಉತ್ತಮ. ವಿದ್ಯಾರ್ಥಿ ವಲಯಕ್ಕೆ ಶೈಕ್ಷಣಿಕ ವಿಷಯಗಳಲ್ಲಿ ಅಪಾರ ಆಸಕ್ತಿ ಮೂಡಲಿದೆ. ವ್ಯಾಪಾರದಲ್ಲಿ ಬಹಳ ಪ್ರಗತಿ ಸಾಧಿಸುವಿರಿ.

ಕನ್ಯಾ: ಸತ್ಕಾರ ಸಮಾರಂಭಗಳಲ್ಲಿ ಭಾಗವಹಿಸುವಿರಿ . ಬಂಧು ಮಿತ್ರರು ಮನೆಗೆ ಬರಲಿದ್ದಾರೆ. ಕೆಲಸ ಬದಲಿಸುವ ಯೋಚನೆಯನ್ನು ಮಾಡುವವರಿಗೆ ಸಕಾಲ. ವ್ಯವಹಾರದಲ್ಲಿ ಸ್ವಲ್ಪ ನಿಗೂಢತೆ ಕಾಪಾಡಿಕೊಳ್ಳುವುದು ಒಳ್ಳೆಯದು.

ತುಲಾ: ಮನೆಯವರಲ್ಲಿ ತೋರಿದ ಹೆಚ್ಚಿನ ಪ್ರೀತಿ ಹಾಗೂ ಕಾಳಜಿಯಿಂದ ಮನೆಯ ವಾತಾವರಣ ಬಹಳ ಸಂತೋಷವಾಗಿರುವುದು. ಆಫೀಸಿನ ಕೆಲಸಗಳನ್ನು ಕೇಳಿ ತಿಳಿದುಕೊಳ್ಳುವುದು ಉತ್ತಮ.

ವೃಶ್ಚಿಕ: ಗೊಂದಲದಲ್ಲಿ ಸಿಕ್ಕಿರುವ ನಿಮಗೆ ದೃಢ ನಿರ್ಧಾರವನ್ನು ಕೈಗೊಂಡ ಫಲದಿಂದಾಗಿ ಒಳ್ಳೆಯ ಫಲಿತಾಂಶ ಪಡೆಯುವಿರಿ. ಹುಡುಕಾಟದಿಂದ ಜೀವನೋಪಾಯಕ್ಕೆ ಅನುಕೂಲವಾಗುವ ಮಾರ್ಗ ಗೋಚರವಾಗಲಿದೆ.

ಧನು: ಹರಿತ ಯಂತ್ರೋಪಕರಣಗಳ ಸಹಾಯದಿಂದ ಕೆಲಸ ಮಾಡುವ ವೇಳೆಯಲ್ಲಿ ಅಪಾಯ ಸಂಭವಿಸಬಹುದು. ಗಮನವಿಟ್ಟು ಕೆಲಸವನ್ನು ಮಾಡಿ. ಆಪ್ತರ ಹಾಗೂ ಪ್ರೀತಿಪಾತ್ರರಿಗಾಗಿ ಮೀಸಲಿಡಿ.

ಮಕರ: ತಾಯಿಯ ಆಯಸ್ಸಿನ ವೃದ್ಧಿಗೋಸ್ಕರ ಧಾರ್ಮಿಕ ಕಾರ್ಯವನ್ನು ಮಾಡಿ. ಅಧಿಕ ಒತ್ತಡದಿಂದ ದೇಹದಲ್ಲಿ ಅನಾರೋಗ್ಯ ಸಮಸ್ಯೆಗಳು ಎದುರಾಗಬಹುದು. ಸಮಸ್ಯೆ ಪರಿಹರಿಸಿಕೊಳ್ಳಲು ಅವಕಾಶ ಸಿಗುವುದು.

ಕುಂಭ: ಕೃಷಿಕರು ಮತ್ತು ಉದ್ಯಮಿಗಳು ಕಾರ್ಮಿಕರ ಬೇಡಿಕೆಗಳನ್ನು ಈಡೇರಿಸಿ ಅವರಲ್ಲಿನ ಸಾಮರಸ್ಯವನ್ನು ಕಾಪಾಡಿಕೊಳ್ಳುವುದು ಉತ್ತಮ. ವೈಜ್ಞಾನಿಕ ಸಂಶೋಧನೆಯಲ್ಲಿರುವವರಿಗೆ ಸಾಧಿಸಿದ ಸಂತೋಷ ಸಿಗಲಿದೆ.

ಮೀನ: ಕ್ಷುಲ್ಲಕ ಕಾರಣದಿಂದ ಉಂಟಾಗಿದ್ದ ಕುಟುಂಬದ ಕಲಹಗಳು ನಿವಾರಣೆಯಾಗಿ ಶಾಂತಿ ನೆಮ್ಮದಿ ಕಾಣಬಹುದು. ಪ್ರಾಪಂಚಿಕ ವಿಚಾರವನ್ನು ಬಿಟ್ಟು ಆಧ್ಯಾತ್ಮಿಕ ವಿಚಾರಗಳ ಕಡೆಗೆ ಮನ ಹರಿಯಲಿದೆ.

ಪದಬಂಧ 5598

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಮಲಯ ಪರ್ವತದಲ್ಲಿ ಹುಟ್ಟಿದುದು (4)
3.ನಗುವಿನಿಂದ ಕೂಡಿದ ವದನ (4)
5.ಕನ್ನಡಿಗ ಹಿಡಿದಿರುವ ಕ್ಯಾರೆಟ್ (3)
6.ಕೊನೆಗೆ ವಿಕ್ರಯಿಸು ಎಂದಾಗಲೇ ಈ ಅವ್ಯವಸ್ಥೆ! (4)
7.ಯತಿಗೆ ದೊರೆತಿರುವ ಸೋಡಿ (4)
9.ಈ ತರ ಏರ್ಪಾಟು ಕಾಣುತ್ತಿದೆ! (4)
11.ಸಂಭ್ರಮಕ್ಕಿಲ್ಲಿ ಗರ ಬಡಿದಿದೆಯಲ್ಲಾ? (4)
13.ಕೈಯನ್ನು ಕೊನೆಗಿರಿಸಿದ ಆಳು (3)
15.ಜರಿ ಸೀರೆಯಲ್ಲಿರುವ ಬೆಲೆಯುಳ್ಳ ಮಣಿ (4)
16.ಒಳ್ಳೆಯ ಅಭಿಪ್ರಾಯ (4)

ಮೇಲಿಂದ ಕೆಳಕ್ಕೆ
1.ನೇಯ್ಗೆ ಯಂತ್ರ ಇಲ್ಲಿದೆ (2)
2.ಲೋಕಕ್ಕೆಲ್ಲಾ ಪೂಜ್ಯನಾದವನು (4)
3.ಸುಮಾರು ಮೂರು ಮೈಲುಗಳ ಒಂದು ಅಳತೆ (4)
4.ಆಕಾಶದಲ್ಲಿ ಸಂಚರಿಸುವಂಥದ್ದು (2)
6.ಕೇಡಿನ ಬಾಧೆ ತಟ್ಟದಿರಲು ಧರಿಸುವ ಕಾಪು (3)
8.ತೀರದಲ್ಲಿ ಕವಿದ ಅಂಧಕಾರ (3)
10.ಈತ ಕೆಟ್ಟ ನಡತೆಯವನು (4)
11.ಸರಸ ಹಾಗೂ ವಿರಸ ಸಮನಾಗಿರುವಿಕೆ (4)
12.ಗಂಡು ಕೋಳಿಯಿದು (2)
14.ಮನದನ್ನೆ ಇರುವ ಗೃಹ (2)

1			2	■	3			4
	■	■	5			■	■	
■	■	■		■		■	■	■
6				■	7			8
	■	■	■	■	■	■	■	
9			10	■	11			
■	■	■		■		■	■	■
12	■	■	13			■	■	14
15				■	16			

5597ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
3.ನಿಷ್ಪಕ್ಷಪಾತ 4.ಆಮೋದ
5.ತತಿ 7.ವಿಧ
10.ಕರಿ 13.ಪುರ
15.ಮಾರುತ 16.ವಿಮಾನಯಾನ

ಮೇಲಿಂದ ಕೆಳಕ್ಕೆ:
1.ಅಕ್ಷರಸ್ಥ 2.ಸತತ3.ನಿದರ್ಶನ
4.ಆರಾಧಕ
6.ತವಿ 8.ಧನವಂತ
9.ಅನುಮಾನ 11.ರಿಪು
12.ಬಡನಡು 14.ರವಿಕೆ

ಸುಡೊಕು 5983

	7			5		2		8
5		4	1		8		3	
		3		7			5	4
	6			3		1		2
2		5			7			
	3			8		5		6
		8			6		2	3
3		2	7	4			6	5
	5			2		4		1

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5982 ಸುಡೊಕು


7	5	9	3	1	6	4	8	2
2	3	6	8	4	9	5	1	7
4	1	8	7	5	2	3	9	6
9	7	3	4	2	1	6	5	8
5	6	4	9	3	8	2	7	1
8	2	1	6	7	5	9	3	4
6	8	7	2	9	3	1	4	5
1	9	2	5	8	4	7	6	3
3	4	5	1	6	7	8	2	9

ಆರ್ಥಿಕತೆ ಚೇತರಿಕೆಗೆ ಬಡ್ಡಿದರ ಇಳಿಸಿದ ಚೀನಾ

ಬೀಜಿಂಗ್ (ಎಎಫ್‌ಪಿ): ದೇಶದ ಆರ್ಥಿಕತೆಗೆ ಚೇತರಿಕೆ ನೀಡುವ ನಿಟ್ಟಿನಲ್ಲಿ ಪೀಪಲ್ಸ್ ಬ್ಯಾಂಕ್ ಆಫ್ ಚೀನಾವು, ಮಂಗಳವಾರ ಸಾಲದ ಮೇಲಿನ ಬಡ್ಡಿದರವನ್ನು ಕಡಿತಗೊಳಿಸಿದೆ. ಐದು ವರ್ಷಗಳ ಅವಧಿಯ ಸಾಲದ ಬಡ್ಡಿದರವನ್ನು ಶೇ 4.20ರಿಂದ ಶೇ 3.95ಕ್ಕೆ ಇಳಿಸಲಾಗಿದೆ. ಒಂದು ವರ್ಷ ಅವಧಿಯ ಕಾರ್ಪೊರೇಟ್ ಸಾಲದ ಬಡ್ಡಿದರ ಶೇ 3.45ರಷ್ಟಿದ್ದು, ಯಥಾಸ್ಥಿತಿ ಕಾಯ್ದುಕೊಳ್ಳಲಾಗಿದೆ ಎಂದು ಬ್ಯಾಂಕ್ ತಿಳಿಸಿದೆ.

ದೇಶದ ವಸತಿ ವಲಯದ ಬೆಳವಣಿಗೆಯು ಇಳಿಮುಖವಾಗಿದೆ. ನಿರುದ್ಯೋಗ ಪ್ರಮಾಣವೂ ಹೆಚ್ಚುತ್ತಿದೆ. ಜಾಗತಿಕ ಆರ್ಥಿಕತೆಯ ಮಂದಗತಿ ಬೆಳವಣಿಗೆಯಿಂದಾಗಿ ಚೀನಿ ಉತ್ಪನ್ನಗಳಿಗೆ ಬೇಡಿಕೆ ಕಡಿಮೆಯಾಗುತ್ತಿದೆ. ಹಾಗಾಗಿ, ವಿಶ್ವದ ಎರಡನೇ ಅತಿದೊಡ್ಡ ಆರ್ಥಿಕತೆಯಾದ ಚೀನಾವು, ಬಡ್ಡಿದರ ಇಳಿಸುವ ನಿರ್ಧಾರ ಕೈಗೊಂಡಿದೆ ಎಂದು ಹೇಳಲಾಗಿದೆ.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	22,122
ಇಂದಿನ ಅಂತ್ಯ	22,196
▲	74
ದಿನದ ಗರಿಷ್ಠ	22,215

ವಿನಿಮಯ ದರ

$ ಡಾಲರ್	82.97
£ ಪೌಂಡ್	104.56
€ ಯೂರೊ	89.59
¥ ಯೆನ್ (100ಕ್ಕೆ)	55

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100ಕ್ಕೆ	₹600
12 ಕ್ಕೆ	₹80
ಮೈಸೂರು	
100ಕ್ಕೆ	₹600

ಖಾದ್ಯ ತೈಲ ಮುಂಬೈ (10 ಕೆಜಿಗೆ)

(ಆವರಣದಲ್ಲಿ ಹಿಂದಿನ ದಿನದ ದರ)

ಶೇಂಗಾ (ರಿಫೈನ್ಡ್)	₹1495 (1460)
ಸೋಯಾ (ರಿಫೈನ್ಡ್)	₹895 (890)
ಸೂರ್ಯಕಾಂತಿ (ರಿಫೈನ್ಡ್)	₹900 (905)
ಪಾಮೋಲಿನ್	₹858 (860)

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ) ₹321-452

ದ್ವಿತಳಿ (ಬಿ.ವಿ) ₹266-548

ಹಳೆ ನೋಂದಣಿ ರದ್ದು: ಹೊಸ ನೋಂದಣಿಗೆ 45 ದಿನ ಅವಕಾಶ

ಇಂದಿನಿಂದ ಕೊಬ್ಬರಿ ಖರೀದಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕನಿಷ್ಠ ಬೆಂಬಲ ಬೆಲೆಯಡಿ ಫೆ. 21ರಿಂದಲೇ ಉಂಡೆ ಕೊಬ್ಬರಿ ಖರೀದಿಸಲಾಗುತ್ತಿದೆ ಎಂದು ಕೃಷಿ ಮಾರುಕಟ್ಟೆ ಸಚಿವ ಶಿವಾನಂದ ಎಸ್. ಪಾಟೀಲ ಹೇಳಿದರು.

ವಿಧಾನ ಪರಿಷತ್‌ನಲ್ಲಿ ಮಂಗಳವಾರ ಜೆಡಿಎಸ್‌ನ ಬಿ.ಎಂ. ಫಾರೂಕ್, ಕೆ.ಎ. ತಿಪ್ಪೇಸ್ವಾಮಿ ಅವರ ಪ್ರಶ್ನೆಗೆ ಉತ್ತರಿಸಿದ ಅವರು, ಕೆಲ ಜಿಲ್ಲೆಗಳಲ್ಲಿ ವರ್ತಕರು ರೈತರ ಪಹಣಿ ಬಳಸಿಕೊಂಡು ನೋಂದಣಿ ಮಾಡಿಸಿದ್ದಾರೆ ಎಂಬ ದೂರುಗಳ ಹಿನ್ನೆಲೆಯಲ್ಲಿ ಇದುವರೆಗೆ ಆಗಿದ್ದ ನೋಂದಣಿಯನ್ನು ರದ್ದುಪಡಿಸಲಾಗಿದೆ. ಹೊಸದಾಗಿ ನೋಂದಣಿ ಮಾಡಲು 45 ದಿನಗಳ ಅವಕಾಶ ನೀಡಲಾಗಿದೆ. ನಿಗದಿತ ಎಲ್ಲ ಖರೀದಿ ಕೇಂದ್ರಗಳಲ್ಲೂ ಮೂರು ತಿಂಗಳವರೆಗೆ ಖರೀದಿ ಪ್ರಕ್ರಿಯೆ ನಡೆಯಲಿದೆ ಎಂದರು.

ಮುಖ್ಯಾಂಶಗಳು

- ವರ್ತಕರಿಗೆ ಅವಕಾಶ ಕಲ್ಪಿಸಿದ್ದ ಒಂಬತ್ತು ಅಧಿಕಾರಿಗಳ ಅಮಾನತು
- ಬಯೊಮೆಟ್ರಿಕ್‌ನಡಿ ರೈತರ ಹೆಸರು ನೋಂದಣಿ
- 65 ಸಾವಿರ ಟನ್ ಕೊಬ್ಬರಿ ಖರೀದಿಗೆ ಅನುಮತಿ

ತುಮಕೂರು, ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ಕರ್ನಾಟಕ ರಾಜ್ಯ ಕೃಷಿ ಮಾರಾಟ ಮಹಾಮಂಡಳ ಹಾಗೂ ಹಾಸನ, ಚಿಕ್ಕಮಗಳೂರು, ಚಿತ್ರದುರ್ಗ, ಮಂಡ್ಯ, ಮೈಸೂರು, ದಕ್ಷಿಣ ಕನ್ನಡ, ರಾಮನಗರ ಜಿಲ್ಲೆಗಳಿಗೆ ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾಮಂಡಳವನ್ನು ಖರೀದಿ ಸಂಸ್ಥೆಯಾಗಿ ನೇಮಕ ಮಾಡಲಾಗಿದೆ. ಆಧಾರ್ ಆಧಾರಿತ ಬಯೊಮೆಟ್ರಿಕ್ ಮೂಲಕ ನೋಂದಣಿ ಮಾಡಿಕೊಳ್ಳಲು ಸೂಚಿಸಲಾಗಿದೆ ಎಂದು ಹೇಳಿದರು.

ರೈತರ ಹೆಸರಲ್ಲಿ ನೋಂದಣಿ ಮಾಡಿಸಲು ವರ್ತಕರಿಗೆ ಅವಕಾಶ ನೀಡಿದ್ದ ಆರೋಪದ ಮೇಲೆ ಒಂಬತ್ತು ಅಧಿಕಾರಿಗಳನ್ನು ಅಮಾನತು ಮಾಡಲಾಗಿದೆ. ಅವರ ವಿರುದ್ಧ ಕ್ರಿಮಿನಲ್ ಮೊಕದ್ದಮೆ ದಾಖಲು ಮಾಡಲಾಗಿದೆ ಎಂದರು.

ಕೇಂದ್ರ ಸರ್ಕಾರ 65 ಸಾವಿರ ಟನ್ ಖರೀದಿಗೆ ಅನುಮತಿ ನೀಡಿದೆ. ಮಿಲ್ಲಿಂಗ್ ಕೊಬ್ಬರಿ ಖರೀದಿಗೆ ಕೇಂದ್ರದ ಅನುಮತಿ ದೊರೆತರೆ ರಾಜ್ಯ ಸರ್ಕಾರವೂ ಬೆಂಬಲ ಬೆಲೆ ನೀಡಲಿದೆ. ಉಂಡೆ ಕೊಬ್ಬರಿ ಮತ್ತು ಮಿಲ್ಲಿಂಗ್ ಕೊಬ್ಬರಿ ಧಾರಣೆಯಲ್ಲಿ ₹1 ಸಾವಿರ ವ್ಯತ್ಯಾಸವಾಗಬಹುದು ಎಂದು ವಿವರಿಸಿದರು.

ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ ಸಕಲೇಶಪುರ	
ಕೊಳೆ	1000-1100
ನಡುಗೋಲು	1250-1300
ರಾಶಿ	1350-1400
ರಾಶಿ ಉತ್ತಮ	1450-1500
ಹರಕಲು	2000-2100
ಹಸಿರು ಸಾಧಾರಣ	1300-1400
ಹಸಿರು ಉತ್ತಮ	1800-1850
ಹಸಿರು ಅತಿ ಉತ್ತಮ	2200-2300
ಕಾಳು ಮೆಣಸು	520
ಅಡಿಕೆ ಬಂಟ್ವಾಳ	
ಕೋಕ	18000-28500
ಹೊಸತು	28500-33500
ಹಳತು	33500-43000
ಕಾರ್ಕಳ	
ಹೊಸತು	25000-34000
ಹಳತು	30000-43500
ಪುತ್ತೂರು	
ಕೋಕ	11500-26000
ಹೊಸತು	26500-34000
ಸಾಗರ	
ಬಿಳಿಗೋಟು	23251-23380
ಚಾಲಿ	30561-31899
ಕೋಕ	24699-28199
ಕೆಂಪುಗೋಟು	26989-35819
ರಾಶಿ	38949-47439
ಸಿಪ್ಪೆಗೋಟು	11689-17266
ಶಿವಮೊಗ್ಗ	
ಬೆಟ್ಟೆ	35069-52599
ಗೊರಬಲು	11568-35006
ರಾಶಿ	26006-48099
ಸರಕು	51100-81696
ಸಿದ್ದಾಪುರ	
ಬಿಳಿಗೋಟು	26099-30649
ಚಾಲಿ	35309-36639
ಕೋಕ	26099-27299
ಹೊಸಚಾಲಿ	30569-33939
ಕೆಂಪುಗೋಟು	30199-37109
ರಾಶಿ	44219-47089
ತಟ್ಟಿಬೆಟ್ಟೆ	39009-46009
ಶಿರಸಿ	
ಬೆಟ್ಟೆ	38098-45599
ಬಿಳಿಗೋಟು	25699-31133
ಚಾಲಿ	35108-38722
ಕೆಂಪುಗೋಟು	25099-31133
ರಾಶಿ	43009-46961
ಯಲ್ಲಾಪುರ	
ಅಪಿ	57599-60989
ಬಿಳಿಗೋಟು	21069-30899
ಚಾಲಿ	31599-37555
ಕೋಕ	14099-28899
ಕೆಂಪುಗೋಟು	24099-34666
ರಾಶಿ	43096-54869
ತಟ್ಟಿಬೆಟ್ಟೆ	35999-42690

ಕಾಫಿ (50 ಕೆ.ಜಿ.ಗೆ ₹ ಗಳಲ್ಲಿ)

	ಮೂಡಿಗೆರೆ		ಹಾಸನ	
	ಮುದ್ದಮನೆ	ಪ್ಲಾಂಟರ್	[illegible]	ನ್ಯೂಯಾರ್ಕ್
ಎಪಿ	14,200	14,100	-	-
ಎಸಿ	7,952	7,700	-	-
ಆರ್‌ಪಿ	13,200	13,500	-	ಲಂಡನ್
ಆರ್‌ಸಿ	7,560	280 on OT	3,250 ಡಾಲರ್	

ಮುಂಬೈ ಧಾರಣೆ

ಶೇಂಗಾ

20-02-2024

ಜಾವಾ 70/80(ಹೊಸ)	11300-11400
ಜಾವಾ 80/90(ಹೊಸ)	10600-10700
ದಪ್ಪ ಮಧ್ಯಪ್ರದೇಶ(ಹೊಸ)	9700-9800
ದಪ್ಪ ಗುಜರಾತ್(ಹೊಸ)	10500-10600

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1505 (1470)
ಒಂದು ವಾರದ ಡೆಲಿವರಿ	1500 (1465)
ಸೋಯಾ ಕಚ್ಚಾ	857 (855)
ಪಾಮ್ ವಾರದ ಡೆಲಿವರಿ	856 (858)
ಸೂರ್ಯಕಾಂತಿ ಎಣ್ಣೆ ಕಚ್ಚಾ	840 (840)

ಚಿನ್ನ- ಬೆಳ್ಳಿ (ಮುಂಬೈ ಪೇಟೆ)

ಅಪರಂಜಿ ಚಿನ್ನ 10ಗ್ರಾಂ ₹61,850 (61,700)

ಬೆಳ್ಳಿ ಕೆ.ಜಿ ₹70,850 (71,250)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಈರುಳ್ಳಿ (ಕ್ವಿಂಟಲ್‌ಗೆ)

ದಪ್ಪ	₹2400-3000
ಮಧ್ಯಮ	₹1800-2400
ಸಣ್ಣ	₹1000-1800

ಪ್ರಶ್ನೋತ್ತರ



ಪ್ರಮೋದ ಶ್ರೀಕಾಂತ ದೈತೋಟ

ತೆರಿಗೆ ಮತ್ತು ವೈಯಕ್ತಿಕ ಹಣಕಾಸು ತಜ್ಞ

ಸಿ.ಪಿ. ರಾಮಶೇಷಪ್ಪ, ಮೈಸೂರು.

- **ಪ್ರಶ್ನೆ:** ಒಬ್ಬ ವ್ಯಕ್ತಿ ₹20 ಲಕ್ಷಕ್ಕಿಂತ ಅಧಿಕ ಮೊತ್ತವನ್ನು ಬ್ಯಾಂಕಿನಿಂದ ನಗದು ಮಾಡಿದರೆ ಶೇ 2ರ ದರದಲ್ಲಿ ಆದಾಯ ತೆರಿಗೆ ಕಡಿತ ಮಾಡುತ್ತಾರೆ. ಈ ಬಗ್ಗೆ ತೆರಿಗೆ ಇಲಾಖೆಯವರು ನಮ್ಮ ಖರ್ಚಿನ ವಿವರ ಕೇಳಬಹುದು ಹಾಗೂ ದಂಡ ವಿಧಿಸುವ ಸಾಧ್ಯತೆ ಇದೆ ಎಂದು ಕೇಳಿದ್ದೇನೆ. ಈಗ ನಾನು ಸಾಲ ಪಡೆದು ಮನೆ ಕಟ್ಟಲು ಆರಂಭಿಸಿದ್ದೇನೆ. ಈ ಹಣದಿಂದ ಮನೆ ಕಟ್ಟಲು ಕೂಲಿಗಾಗಿ ಪಾವತಿ, ಕಾಮಗಾರಿ ಸಾಮಗ್ರಿ, ನನ್ನ ತಾಯಿಯ ಆರೋಗ್ಯ ವೆಚ್ಚ, ಸರ್ಕಾರಿ ಕಚೇರಿಗಳಿಗೆ ಸಂಬಂಧಿಸಿದ ಪರವಾನಗಿ ವೆಚ್ಚ ಇತ್ಯಾದಿ ಪಾವತಿ ಮಾಡಬೇಕಾಗಿರುತ್ತದೆ. ಹೀಗೆ ಪಾವತಿಸುವ ನಗದು ಮೊತ್ತಕ್ಕೆ ಸಂಬಂಧಿಸಿ ಏನಾದರೂ ಸಮಸ್ಯೆ ಇದೆಯೇ.

ಉತ್ತರ: ಬ್ಯಾಂಕ್ ಖಾತೆಯಿಂದ ಹಣ ನಗದೀಕರಿಸುವಾಗ ಕೆಲವೆಲ್ಲ ಆದಾಯ ತೆರಿಗೆ ನಿಯಮಗಳ ಬಗ್ಗೆ ತಿಳಿದುಕೊಳ್ಳುವುದು ಅನಿವಾರ್ಯ. ಸಾಮಾನ್ಯವಾಗಿ ವಾರ್ಷಿಕ ₹1 ಕೋಟಿಗೂ ಅಧಿಕ ಮೊತ್ತವನ್ನು ನಗದೀಕರಿಸಿದಾಗ ತೆರಿಗೆ ಕಟಾಯಿಸಲಾಗುತ್ತದೆ. ಆದರೆ, ಯಾವುದೇ ವ್ಯಕ್ತಿ ಕಳೆದ ಮೂರು ವರ್ಷಗಳಲ್ಲಿ ಆದಾಯ ತೆರಿಗೆ ರಿಟರ್ನ್ಸ್ ಸಲ್ಲಿಸದಿದ್ದರೆ, ಈ ಮಿತಿಯನ್ನು ₹20 ಲಕ್ಷದಿಂದಲೇ ತೆರಿಗೆ ಕಟಾವಿಗೆ ಪರಿಗಣಿಸಲಾಗುತ್ತದೆ. ಅಂದರೆ ₹1 ಕೋಟಿಯೊಳಗಿನ ಮೊತ್ತಕ್ಕೆ ಶೇ 2ರ ದರದಲ್ಲಿ ತೆರಿಗೆ ಕಡಿತ ಮಾಡಲಾಗುತ್ತದೆ. ತೆರಿಗೆ ಕಡಿತದ ಜವಾಬ್ದಾರಿ, ಹಣ ಪಡೆಯುವ ಗ್ರಾಹಕರಿಗಿಂತ ಬ್ಯಾಂಕ್‌ಗಳಿಗೆ ಇದೆ. ಹೀಗಾಗಿ ಆದಾಯ ತೆರಿಗೆ ರಿಟರ್ನ್ಸ್ ಸಲ್ಲಿಸಿದ ವಿವರವನ್ನು ಬ್ಯಾಂಕಿಗೂ ಮಾಹಿತಿಗಾಗಿ ನೀಡಬೇಕು. ಒಂದು ವೇಳೆ ಇದು ಅಸಾಧ್ಯವಾದರೆ, ಕಟಾವಾದ ತೆರಿಗೆಯನ್ನು ಯಾವುದೇ ತೆರಿಗೆಗೊಳಪಡುವ ಆದಾಯವಿಲ್ಲದಿದ್ದರೆ ಸಂಪೂರ್ಣ ಹಿಂಪಡೆಯುವ ಅವಕಾಶ ಇದೆ. ಇದಕ್ಕಾಗಿ ಮುಂದಿನ ವರ್ಷಗಳಲ್ಲಿ ತೆರಿಗೆ ರಿಟರ್ನ್ಸ್ ಸಲ್ಲಿಸಿ.

ವ್ಯಾಪಾರ ಸಂಬಂಧಿ ನಗದು ವ್ಯವಹಾರಗಳಿಗಿದ್ದಂತೆ, ವೈಯಕ್ತಿಕ ವ್ಯವಹಾರಗಳಿಗೆ ಸಂಬಂಧಿಸಿ ಕೆಲವು ಸೀಮಿತ ನಿಯಮಗಳಿವೆ. ಆದರೆ, ಯಾವುದೇ ಮೊತ್ತ ಪಾವತಿಸುವುದಾದರೂ ಪ್ರತಿ ಸನ್ನಿವೇಶಕ್ಕೆ ಸಂಬಂಧಿಸಿ, ಪ್ರತಿ ದಿನ ಅಥವಾ ಪ್ರತಿ ಬಿಲ್ಲು ಸಂದಾಯವಾಗುವ ಸಂದರ್ಭದಲ್ಲಿ ₹2 ಲಕ್ಷಕ್ಕೂ ಮೀರಿದ ನಗದು ಮೊತ್ತ ಪಡೆಯುವಂತಿಲ್ಲ ಎಂಬುದು ಸೆಕ್ಷನ್ 269ಎಸ್‌ಟಿ ಹೇಳುತ್ತದೆ. ಇದು ವ್ಯವಹಾರದಲ್ಲಿರುವ, ಆದರೆ ನಮ್ಮಿಂದ ಹಣ ಪಡೆಯುವ ವ್ಯಕ್ತಿಗಳನ್ನು ಉದ್ದೇಶಿಸಿ ಈ ಕಾನೂನು ನಿರ್ಬಂಧ ಹೇರಲಾಗಿದ್ದರೂ, ಪಾವತಿಸುವವರಿಗೂ ಅದರ ಅರಿವು ಇರಬೇಕು. ಅದಕ್ಕೆ ಸಂಬಂಧಿತ ಸಮಾನ ಮೊತ್ತದ ದಂಡ, ಹಣ ಸ್ವೀಕರಿಸುವವರಿಗೆ ಹೇರುವ ಅವಕಾಶ ಕಾನೂನಿನಡಿ ಇದೆ.

ಸರೋಜವಲ್ಲಿ ಎಸ್., ಹಾಸನ.

- **ಪ್ರಶ್ನೆ:** ನಾನು ಶಿಕ್ಷಣ ಕ್ಷೇತ್ರದಲ್ಲಿದ್ದು ವೃತ್ತಿಯಲ್ಲಿ ಶಿಕ್ಷಕಿ. ಮನೆಯಲ್ಲಿ ಅನೇಕ ರೀತಿಯ ವೆಚ್ಚಗಳಿದ್ದು ಅದನ್ನು ಸಕಾಲದಲ್ಲಿ ನಿಭಾಯಿಸುವ ಬಗ್ಗೆ ತಿಳಿದುಕೊಳ್ಳುವ ಪ್ರಯತ್ನ ಮಾಡುತ್ತಿದ್ದೇನೆ. ಇದರಲ್ಲಿ ಮಕ್ಕಳ ಶಿಕ್ಷಣ ವೆಚ್ಚ, ಆರೋಗ್ಯ, ಇನ್ಶೂರೆನ್ಸ್, ಉಳಿತಾಯ, ಮ್ಯೂಚುವಲ್ ಫಂಡ್ ಹೂಡಿಕೆ, ತಿಂಗಳ ಖರ್ಚು, ವಾಹನ ಖರ್ಚು ಇತ್ಯಾದಿ ಇರುತ್ತದೆ. ಈ ಖರ್ಚುಗಳಲ್ಲದೆ, ಇನ್ನೂ ಅನೇಕ ಆಕಸ್ಮಿಕ ವೆಚ್ಚಗಳೂ ಕೆಲವೊಮ್ಮೆ ಬರುತ್ತವೆ. ಈ ಬಗ್ಗೆ ಲೆಕ್ಕ ಬರೆದಿಡುವ ಅಭ್ಯಾಸವನ್ನು ಕಳೆದ ಕೆಲವು ವರ್ಷಗಳಿಂದ ಮಾಡುತ್ತಿದ್ದೇನೆ. ಆದರೆ, ಈ ಬಗ್ಗೆ ಇನ್ನೂ ಸರಿಯಾದ ಮಾಹಿತಿ ಹೊಂದಿ ನಾನು ಮುಂದೆ ಉತ್ತಮ ಹೂಡಿಕೆ ಅಥವಾ ಆಸ್ತಿ ಖರೀದಿ ಇತ್ಯಾದಿ ಮಾಡಬಹುದೇ ಎಂಬ ಬಗ್ಗೆ ನಿರ್ಧಾರ ಕೈಗೊಳ್ಳಲು ಸಾಧ್ಯವಾಗುತ್ತಿಲ್ಲ. ಸಾಲ ಮಾಡಿದರೂ ಅದರ ಮರುಪಾವತಿಗೆ ಸಾಧ್ಯವೇ ಅಥವಾ ಎಷ್ಟು ವರ್ಷದ ಸಾಲ ಪಡೆದು ಭೂಮಿ- ಮನೆ ಇತ್ಯಾದಿ ಖರೀದಿಸಬಹುದು ಎನ್ನುವುದನ್ನು ಯೋಜನೆ ಮಾಡಲು ಸಾಧ್ಯವಾಗುತ್ತಿಲ್ಲ. ಈ ಬಗ್ಗೆ ಹೇಗೆ ನಿರ್ಧಾರ ಕೈಗೊಳ್ಳಲು ಸಾಧ್ಯ ಹಾಗೂ ಗೊಂದಲ ನಿವಾರಿಸಲು ನೆರವಾಗುವ ಮಾಹಿತಿ ನೀಡಿ.

ಉತ್ತರ: ನಿಮ್ಮ ಸಮಸ್ಯೆ ಬಹುತೇಕರಿಗಿರುವ ಸಮಸ್ಯೆಯಾಗಿದೆ. ಆರ್ಥಿಕ ವಿಚಾರಗಳಲ್ಲಿ ನಿರ್ಧಾರ ಕೈಗೊಳ್ಳುವುದು ಸಾಕಷ್ಟು ಆರ್ಥಿಕ ಸಂಪನ್ಮೂಲ ಇದ್ದಾಗ ಬಹಳ ಸುಲಭ. ಆದರೆ, ಮಧ್ಯಮ ವರ್ಗದ ಅಥವಾ ಅದಕ್ಕಿಂತ ಕಡಿಮೆ ಆದಾಯ ವರ್ಗದಲ್ಲಿ ನಾವಿದ್ದಾಗ, ಸಮರ್ಪಕ ಆರ್ಥಿಕ ಚೌಕಟ್ಟು ಹಾಕಿಕೊಂಡು ನಮ್ಮದೇ ಕಟ್ಟುಪಾಡುಗಳ ಪರಿಧಿಯಲ್ಲಿ ವ್ಯವಹರಿಸಬೇಕಾಗುತ್ತದೆ. ಇದಕ್ಕಾಗಿ ಒಂದಷ್ಟು ಮಾಹಿತಿಗಳನ್ನು ಕೆಳಗೆ ನೀಡಲಾಗಿದೆ.

1. ನೀವು ಈಗಾಗಲೇ ದಿನವಹಿ ವೆಚ್ಚ ದಾಖಲಿಸುತ್ತಿರುವುದರ ಬಗ್ಗೆ ತಿಳಿಸಿದ್ದೀರಿ. ಇದು ಉತ್ತಮ ವಿಚಾರ. ಈ ರೀತಿ ದಾಖಲಿಸಿದ ಮಾಹಿತಿಯನ್ನು ಪ್ರತ್ಯೇಕ ಖರ್ಚುಗಳಿಗೆ ಎಷ್ಟು ವೆಚ್ಚ ಮಾಡಲಾಗಿದೆ ಎನ್ನುವ ಬಗ್ಗೆಯೂ ಪ್ರತಿ ತಿಂಗಳ ಮಾಹಿತಿ ಹೊಂದಿ (ಉದಾ: ವಿದ್ಯುತ್, ಶಿಕ್ಷಣ, ವೈದ್ಯಕೀಯ, ಆಹಾರ ಸಾಮಗ್ರಿ ಇತ್ಯಾದಿ). ಇಲ್ಲದಿದ್ದರೆ ಇಂತಹ ಮಾಹಿತಿ ಕೇವಲ ನೆನಪಿಗಾಗಿ ಇರುವ ಮಾಹಿತಿಯಾಗುತ್ತದೆಯೆ ವಿನಾ ಆರ್ಥಿಕ ನಿರ್ಣಯಕ್ಕೆ ನೆರವಾಗದು. ಇಂದು ಅನೇಕ ಮೊಬೈಲ್ ಆ್ಯಪ್‌ಗಳು ಕೂಡ ಇವೆ. ಇವನ್ನು ಉತ್ತಮ ರೀತಿಯಲ್ಲಿ ಬಳಸಿಕೊಳ್ಳಿ.
2. ನೀವು ಖರ್ಚು ಮಾಡುವ ವಿಚಾರವನ್ನು ನಿಷ್ಠೆಯಿಂದ ಹೇಗೆ ಬರೆದಿಡುತ್ತೀರೋ, ಅಷ್ಟೇ ಮುಖ್ಯ ನಿಮ್ಮ ವಾರ್ಷಿಕ ಆರ್ಥಿಕ ಯೋಜನೆಯೂ ಆಗಿದೆ. ಇವನ್ನು ಮೊದಲ ಹಂತದಲ್ಲಿ ಉದ್ದೇಶಕ್ಕೆ ಅನುಗುಣವಾಗಿ ಬರೆದಿಟ್ಟುಕೊಳ್ಳಿ. ಅದಕ್ಕೆ ತಕ್ಕಂತೆ ಪ್ರಸ್ತುತ ನಿಮ್ಮ ಖರ್ಚು ಇದೆಯೇ ಎಂಬ ಬಗ್ಗೆ ಯೋಜನೆ ಮಾಡಿ. ಅಗತ್ಯವಿರುವ ಕಡೆ ನಿಯಂತ್ರಣವೂ ಅನಿವಾರ್ಯವಾದೀತು. ಈ ಬಗ್ಗೆ ಸಮಯೋಚಿತ ನಿರ್ಧಾರ ಕೈಗೊಳ್ಳಿ.
3. ಯಾವುದೇ ವೆಚ್ಚ ಮಾಡುವ ಮೊದಲು ವೆಚ್ಚ ವರ್ಗಗಳಾದ ಅತ್ಯಗತ್ಯ, ಅನಗತ್ಯ ಹಾಗೂ ಇವೆರಡರ ಮಧ್ಯೆ ಇರುವ ವೆಚ್ಚಗಳ ಬಗ್ಗೆ ಖಚಿತ ಅಭಿಪ್ರಾಯ ಹೊಂದಿಬೇಕಿದೆ. ತೀರಾ ಅನಿವಾರ್ಯವಲ್ಲದ ಹಾಗೂ ಅನಗತ್ಯ ವೆಚ್ಚ ನಿಯಂತ್ರಣದ ಪರಿಣಾಮವು ಮುಂದಿನ ಯೋಜನೆ ರೂಪಿಸಲು ಸಾಧ್ಯವಾಗಲಿದೆ.
4. ಮೇಲಿನ ನಿರ್ಣಯಗಳ ಆಧಾರದ ಮೇಲೆ ಉಳಿತಾಯವಾಗಬಹುದಾದ ಮೊತ್ತವನ್ನು ಅಲ್ಪಾವಧಿ, ಮಧ್ಯಮಾವಧಿ ಹಾಗೂ ದೀರ್ಘಾವಧಿ ಹೂಡಿಕೆಗೆ ನಿರ್ಣಯ ಮಾಡಿ. ದೊಡ್ಡ ಮೊತ್ತದ ಹೂಡಿಕೆಯಾದ ಭೂಮಿ ಖರೀದಿ, ಗೃಹ ನಿರ್ಮಾಣದಂತಹ ಯೋಜನೆಗೆ ಸಾಲದ ಅಗತ್ಯ ಇರುವುದರಿಂದ ನಿಮ್ಮ ಆದಾಯಕ್ಕೆ ಸರಿದೂಗಿ ಎಷ್ಟು ಉಳಿತಾಯಕ್ಕೆ ಹಣ ಲಭ್ಯವಿರುತ್ತದೆ ಎನ್ನುವುದರ ಆಧಾರದಲ್ಲಿ ಹೂಡಿಕೆ ಹಾಗೂ ಸಾಲದ ಮೊತ್ತ ನಿರ್ಧರಿಸಿ. ಆದಾಯಕ್ಕೆ ಸಂಬಂಧಿಸಿ ಸಿಗಬಹುದಾದ ಸಾಲದ ಮಾಹಿತಿಗಾಗಿ ಮೇಲಿನ ಅಂದಾಜು ಮಾಹಿತಿ ಬಗ್ಗೆಯೂ ನಿಮಗೆ ಅರಿವಿದ್ದರೆ ಉತ್ತಮ.

ಹಣಕಾಸು, ತೆರಿಗೆ ಸಮಸ್ಯೆಗೆ ಪರಿಹಾರ

ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ.
ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು–560001.
ಇ–ಮೇಲ್: businessdesk@prajavani.co.in



ನವದೆಹಲಿಯಲ್ಲಿ ಆರಂಭವಾಗಿರುವ ಮಿಸ್ ವರ್ಲ್ಡ್ ಸ್ಪರ್ಧೆಯಲ್ಲಿ ಪಾಲ್ಗೊಂಡಿರುವ ಸ್ಪರ್ಧಿಗಳು ಮಂಗಳವಾರ ತಾಲೀಮು ನಡೆಸಿದರು —ಪಿಟಿಐ ಚಿತ್ರ

ಆರ್ಥಿಕತೆ ಪ್ರಗತಿಗೆ ಹೊಸ ಹೂಡಿಕೆ ಸಹಕಾರಿ

ಮುಂಬೈ (ಪಿಟಿಐ): ಕಾರ್ಪೊರೇಟ್ ವಲಯದಲ್ಲಿನ ಹೊಸ ಬಂಡವಾಳ ಹೂಡಿಕೆಯು ದೇಶದ ಮುಂದಿನ ಹಂತದ ಆರ್ಥಿಕ ಬೆಳವಣಿಗೆಗೆ ನೆರವಾಗಲಿದೆ ಎಂದು ಮಂಗಳವಾರ ಬಿಡುಗಡೆಯಾಗಿರುವ ಭಾರತೀಯ ರಿಸರ್ವ್ ಬ್ಯಾಂಕ್‌ನ ಮಾಸಿಕ ವರದಿ ಹೇಳಿದೆ.

ಅಲ್ಲದೇ, ಹಣದುಬ್ಬರವನ್ನು ಶೇ 4ರ ಮಿತಿಯಲ್ಲಿ ಕಾಯ್ದುಕೊಳ್ಳುವುದು ದೇಶದ ಸುಸ್ಥಿರ ಆರ್ಥಿಕತೆ ಬೆಳವಣಿಗೆಯ ವಿಸ್ತರಣೆಗೆ ತಳಹದಿಯಾಗಲಿದೆ ಎಂದು 'ಭಾರತದ ಆರ್ಥಿಕತೆ' ಕುರಿತ ಲೇಖನದಲ್ಲಿ ಹೇಳಲಾಗಿದೆ. ಇತ್ತೀಚಿನ ತಿಂಗಳುಗಳಲ್ಲಿ ಎದುರಾದ ಆರ್ಥಿಕ ಅಪಾಯಗಳನ್ನು ಸಮತೋಲಿತವಾಗಿ ನಿಭಾಯಿಸಲಾಗಿದೆ. ಹಾಗಾಗಿ, ಪ್ರಸಕ್ತ ವರ್ಷದಲ್ಲಿ ಜಾಗತಿಕ ಆರ್ಥಿಕತೆಯು ನಿರೀಕ್ಷಿತ ಅಂದಾಜಿಗಿಂತಲೂ ಹೆಚ್ಚಿನ ಬೆಳವಣಿಗೆ ಕಾಣಲಿದೆ ಎಂದು ಹೇಳಿದೆ.

2023–24ನೇ ಹಣಕಾಸು ವರ್ಷದ ಮೊದಲಾರ್ಧದಲ್ಲಿ ದೇಶದ ಆರ್ಥಿಕತೆಯು ದಾಖಲಿಸಿದ್ದ ಬೆಳವಣಿಗೆಯು ದ್ವಿತೀಯಾರ್ಧದಲ್ಲೂ ಮುಂದುವರಿದಿದೆ. ಈ ವರ್ಷದಲ್ಲಿ ಖಾಸಗಿ ವಲಯದಲ್ಲಿನ ಹೂಡಿಕೆಯು ಸಕಾರಾತ್ಮಕವಾಗಿ ಇರಲಿದೆ ಎಂದು ಹೇಳಿದೆ.

2023ರ ಏಪ್ರಿಲ್‌ನಿಂದ ಡಿಸೆಂಬರ್‌ವರೆಗೆ ದೇಶದ ಪ್ರಮುಖ ಬ್ಯಾಂಕ್‌ಗಳು, ಹಣಕಾಸು ಸಂಸ್ಥೆಗಳು ₹2.4 ಲಕ್ಷ ಕೋಟಿ ಸಾಲ ನೀಡಿವೆ. 2022ನೇ ಸಾಲಿನ ಇದೇ ಅವಧಿಗೆ ಹೋಲಿಸಿದರೆ ಸಾಲ ನೀಡಿಕೆಯಲ್ಲಿ ಶೇ 23ರಷ್ಟು ಹೆಚ್ಚಳವಾಗಿದೆ ಎಂದು ವಿವರಿಸಿದೆ.

ಶೇ 4.5ರಷ್ಟು ಹಣದುಬ್ಬರ: 2024–25ನೇ ಹಣಕಾಸು ವರ್ಷದಲ್ಲಿ ದೇಶದ ಜಿಡಿಪಿ ಬೆಳವಣಿಗೆಯು ಶೇ 7ರಷ್ಟು ಪ್ರಗತಿ ಕಾಣಲಿದೆ ಎಂದು ಆರ್‌ಬಿಐ ಅಂದಾಜಿಸಿದೆ.

ಗ್ರಾಹಕ ಬೆಲೆ ಸೂಚ್ಯಂಕ ಆಧಾರಿತ (ಸಿಪಿಐ) ಚಿಲ್ಲರೆ ಹಣದುಬ್ಬರವು ನವೆಂಬರ್ ಮತ್ತು ಡಿಸೆಂಬರ್‌ನಲ್ಲಿ ಏರಿಕೆಯಾಗಿತ್ತು. ಪ್ರಸಕ್ತ ವರ್ಷದ ಜನವರಿಯಲ್ಲಿ ಇಳಿಕೆಯಾಗಿದೆ ಎಂದು ವರದಿಯಲ್ಲಿ ಪ್ರಸ್ತಾಪಿಸಲಾಗಿದೆ. 2024–25ನೇ ಹಣಕಾಸು ವರ್ಷದಲ್ಲಿ ಚಿಲ್ಲರೆ ಹಣದುಬ್ಬರವು ಶೇ 4.5ರಷ್ಟು ಇರಲಿದೆ ಎಂದು ಆರ್‌ಬಿಐ ಅಂದಾಜಿಸಿದೆ.

ವರ್ಲ್‌ಪೂಲ್‌ನಿಂದ 3 ಕೋಟಿ ಷೇರುಗಳ ಮಾರಾಟ

ನವದೆಹಲಿ (ಪಿಟಿಐ): ಮುಂಬೈ ಷೇರುಪೇಟೆ ಸೂಚ್ಯಂಕ (ಬಿಎಸ್‌ಇ) ಸೆನ್ಸೆಕ್ಸ್‌ನಲ್ಲಿದ್ದ ತನ್ನ ಒಡೆತನಕ್ಕೆ ಸೇರಿದ ₹4,089 ಕೋಟಿ ಮೌಲ್ಯದ 3.13 ಕೋಟಿಗೂ ಹೆಚ್ಚು ಷೇರುಗಳನ್ನು ಗೃಹೋಪಯೋಗಿ ಸಲಕರಣೆ ತಯಾರಿಸುವ ವರ್ಲ್‌ಪೂಲ್ ಇಂಡಿಯಾ ಮಂಗಳವಾರ ಮಾರಾಟ ಮಾಡಿದೆ.

ಪ್ರತಿ ಷೇರು ₹1,303.10ಕ್ಕೆ ಮಾರಾಟವಾಗಿದೆ. ನಿಧಿ ಸಂಗ್ರಹ ಮತ್ತು ಸಾಲ ಪ್ರಮಾಣ ತಗ್ಗಿಸಲು ಶೇ 24ರಷ್ಟು ಷೇರುಗಳನ್ನು ಮಾರಾಟ ಮಾಡಲಾಗುವುದು ಎಂದು ಕಳೆದ ನವೆಂಬರ್‌ನಲ್ಲಿ ವರ್ಲ್‌ಪೂಲ್ ಕಾರ್ಪೊರೇಷನ್ ಷೇರುಪೇಟೆಗೆ ತಿಳಿಸಿತ್ತು.

ಪೇಟಿಎಂ ಷೇರು ಮತ್ತೆ ಏರಿಕೆ: ಪೇಟಿಎಂನ ಮಾತೃಸಂಸ್ಥೆಯಾದ ಒನ್97 ಕಮ್ಯುನಿಕೇಷನ್ ಲಿಮಿಟೆಡ್‌ನ ಷೇರಿನ ಮೌಲ್ಯ ಶೇ 5ರಷ್ಟು ಏರಿಕೆ ಕಂಡಿವೆ.

ಸೆನ್ಸೆಕ್ಸ್ 349 ಅಂಶ ಏರಿಕೆಯಾಗಿ 73,057ರಲ್ಲಿ ಸ್ಥಿರಗೊಂಡಿತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ (ಎನ್‌ಎಸ್‌ಇ) ನಿಫ್ಟಿ 74 ಅಂಶ ಹೆಚ್ಚಾಗಿ, 22,196ಕ್ಕೆ ಕೊನೆಗೊಂಡಿತು.

ವಿಟಿಯು ವಿದ್ಯಾರ್ಥಿಗಳಿಗೆ ಕೃತಕ ಬುದ್ಧಿಮತ್ತೆ ತರಬೇತಿ

ನವದೆಹಲಿ (ಪಿಟಿಐ): ಕರ್ನಾಟಕದ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ (ವಿಟಿಯು) ವ್ಯಾಪ್ತಿಯ 1,100 ಎಂಜಿನಿಯರಿಂಗ್ ವಿದ್ಯಾರ್ಥಿಗಳಿಗೆ ಕೃತಕ ಬುದ್ಧಿಮತ್ತೆ ಸೇರಿದಂತೆ ಸಂವಹನ ಸಾಧನ ಮತ್ತು ಕ್ಲೌಡ್ ಸೇವೆ ಬಗ್ಗೆ ತರಬೇತಿ ನೀಡಲು ಸ್ಯಾಮ್ಸಂಗ್ ಸೆಮಿಕಂಡಕ್ಟರ್ ಇಂಡಿಯಾ ರೀಸರ್ಚ್ (ಎಸ್‌ಎಸ್‌ಐಆರ್) ಸಂಸ್ಥೆ ನಿರ್ಧರಿಸಿದೆ.

ವಿಶ್ವವಿದ್ಯಾಲಯದಲ್ಲಿ ಸಂಸ್ಥೆಯು ಆರಂಭಿಸಿರುವ ಸ್ಯಾಮ್ಸಂಗ್ ಇನೋವೇಷನ್ ಕ್ಯಾಂಪಸ್ ಕಾರ್ಯಕ್ರಮದಡಿ ಈ ತರಬೇತಿ ನೀಡಲಾಗುತ್ತದೆ. ಯುವಕರಿಗೆ ಉನ್ನತ ಕೌಶಲ ಜ್ಞಾನ ನೀಡಿ ಅವರನ್ನು ಉದ್ಯೋಗಕ್ಕೆ ಸಜ್ಜುಗೊಳಿಸುವುದೇ ಈ ಕಾರ್ಯಕ್ರಮದ ಉದ್ದೇಶವಾಗಿದೆ.

ಎಸ್‌ಎಸ್‌ಐಆರ್ ಹಾಗೂ ವಿಟಿಯು ನಡುವಿನ ಪ್ರಾಯೋಗಿಕ ಯೋಜನೆ ಇದಾಗಿದೆ. ಆಧುನಿಕ ತಂತ್ರಜ್ಞಾನದ ಬಗ್ಗೆ ವಿದ್ಯಾರ್ಥಿಗಳಲ್ಲಿ ಜ್ಞಾನ ಮತ್ತು ಕೌಶಲ ಬೆಳೆಸುವ ಮೂಲಕ ಕರ್ನಾಟಕದ ತಂತ್ರಜ್ಞಾನ ಕ್ಷೇತ್ರದ ಬೆಳವಣಿಗೆಗೆ ಕೊಡುಗೆ ನೀಡುವುದು ಇದರ ಗುರಿಯಾಗಿದೆ ಎಂದು ಸಂಸ್ಥೆ ತಿಳಿಸಿದೆ. ಸ್ಯಾಮ್ಸಂಗ್ ಕಂಪನಿಯ ನುರಿತ ಬೋಧಕರ ತಂಡವು ಬಿ.ಇ ಮತ್ತು ಬಿ.ಟೆಕ್ ಪದವಿ ವಿದ್ಯಾರ್ಥಿಗಳಿಗೆ ತರಬೇತಿ ನೀಡಲಿದೆ. ತಂತ್ರಜ್ಞಾನ, ಮೂಲ ತಂತ್ರಾಂಶ ಕೌಶಲ ಮತ್ತು ಕೈಗಾರಿಕೆಗಳಲ್ಲಿ ಕೆಲಸ ನಿರ್ವಹಿಸಲು ಅಗತ್ಯವಿರುವ ಕೌಶಲದ ಬಗ್ಗೆ ತರಬೇತಿ ನೀಡಲಾಗುತ್ತದೆ ಎಂದು ಹೇಳಿದೆ.

ಎನ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್-4	₹161.50
ಆರ್‌ಎಸ್‌ಎಸ್-5	₹156.50
ಗುಡ್ ಲಾಟ್	₹140

(ಪ್ರತಿ ಕೆ.ಜಿಗೆ)

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)

ಅರಸೀಕೆರೆ	₹7600-7600
ಬೆಂಗಳೂರು	₹13000-14000
ಪುತ್ತೂರು	₹5500-10200
ತಿಪಟೂರು	₹7500-9275

ಕದನ ವಿರಾಮ: ವಿಟೊ ಬಳಸಿ ನಿರ್ಣಯ ತಡೆದ ಅಮೆರಿಕ

ವಿಶ್ವಸಂಸ್ಥೆ, ಅಮೆರಿಕ (ರಾಯಿಟರ್ಸ್/ ಎಎಫ್‌ಪಿ): ಗಾಜಾದಲ್ಲಿ ತಕ್ಷಣವೇ ಕದನ ವಿರಾಮ ಘೋಷಣೆ ಮಾಡಬೇಕೆಂಬ ಆಗ್ರಹದ ಕುರಿತು ವಿಶ್ವಸಂಸ್ಥೆಯ ಭದ್ರತಾ ಮಂಡಳಿ ಸಭೆಯಲ್ಲಿ ಮಂಗಳವಾರ ಮತಕ್ಕೆ ಹಾಕಲಾಗಿದ್ದ ಕರಡು ನಿರ್ಣಯದ ಅನುಮೋದನೆಯನ್ನು ಅಮೆರಿಕ ತನ್ನ 'ವಿಟೊ' ಪರಮಾಧಿಕಾರ ಬಳಸಿ ತಡೆಹಿಡಿದಿದೆ.

ವಿಶ್ವಸಂಸ್ಥೆ ಭದ್ರತಾ ಮಂಡಳಿಯಲ್ಲಿ ಅಲ್ಜೀರಿಯಾ ಈ ನಿರ್ಣಯ ಮಂಡಿಸಿತ್ತು. 15 ಸದಸ್ಯರ ಭದ್ರತಾ ಮಂಡಳಿಯಲ್ಲಿ 13 ರಾಷ್ಟ್ರಗಳು ನಿರ್ಣಯವನ್ನು ಬೆಂಬಲಿಸಿದವು. ಇಂಗ್ಲೆಂಡ್ ಮತದಾನದಿಂದ ದೂರ ಉಳಿಯಿತು.

ಇಸ್ರೇಲ್–ಹಮಾಸ್ ಯುದ್ಧ ಆರಂಭವಾದ ಬಳಿಕ (ಅಕ್ಟೋಬರ್ 7) ಅಮೆರಿಕವು ವಿಟೊ ಬಳಸಿ ಕದನ ವಿರಾಮ ನಿರ್ಣಯವನ್ನು ತಡೆದಿರುವುದು ಇದು ಮೂರನೇ ಬಾರಿ. ಈ ಹಿಂದೆ ಯುಎಇ ಮಂಡಿಸಿದ್ದ ನಿರ್ಣಯವನ್ನು ತಡೆದಿತ್ತು.

ರಾಜಕುಮಾರ ವಿಲಿಯಂ ಕಳವಳ (ಲಂಡನ್ ವರದಿ): ಇಸ್ರೇಲ್–ಹಮಾಸ್ ಯುದ್ಧದಿಂದ ಅಪಾರ ಪ್ರಾಣ ಹಾನಿ ಸಂಭವಿಸಿರುವುದಕ್ಕೆ ರಾಜಕುಮಾರ ವಿಲಿಯಂ ಅವರು ತೀವ್ರ ಕಳವಳ ವ್ಯಕ್ತಪಡಿಸಿದ್ದಾರೆ.

ರಷ್ಯಾ ಮೇಲೆ ಇನ್ನಷ್ಟು ನಿರ್ಬಂಧ (ವಾಷಿಂಗ್ಟನ್ ವರದಿ): 'ರಷ್ಯಾದ ವಿಪಕ್ಷ ನಾಯಕ ಅಲೆಕ್ಸಿ ನವಾಲ್ನಿ ಅವರ ಸಾವಿಗೆ ವ್ಲಾಡಿಮಿರ್ ಪುಟಿನ್ ಆಡಳಿತವನ್ನು ಹೊಣೆಗಾರರನ್ನಾಗಿ ಮಾಡುತ್ತೇವೆ. ರಷ್ಯಾ ಮೇಲೆ ಇನ್ನಷ್ಟು ನಿರ್ಬಂಧ ಹೇರಲು ನಿರ್ಧರಿಸಲಾಗಿದ್ದು, ಶುಕ್ರವಾರ ವಿವರಗಳನ್ನು ನೀಡುತ್ತೇವೆ' ಎಂದು ಶ್ವೇತಭವನದ ವಕ್ತಾರರು ಹೇಳಿದ್ದಾರೆ.

ಈರುಳ್ಳಿ ರಫ್ತು ನಿಷೇಧ ಅಬಾಧಿತ

ನವದೆಹಲಿ (ಪಿಟಿಐ): ದೇಶೀಯ ಮಾರುಕಟ್ಟೆಯಲ್ಲಿ ಈರುಳ್ಳಿಯ ಲಭ್ಯತೆ ಹಾಗೂ ಧಾರಣೆಯ ಏರಿಳಿತದ ಮೇಲೆ ಸರ್ಕಾರವು ನಿಗಾ ಇಟ್ಟಿದೆ. ಹಾಗಾಗಿ, ಮಾರ್ಚ್ 31ರ ವರೆಗೂ ಈರುಳ್ಳಿ ಮೇಲೆ ವಿಧಿಸಿರುವ ರಫ್ತು ನಿಷೇಧ ಮುಂದುವರಿಯಲಿದೆ ಎಂದು ಕೇಂದ್ರ ಗ್ರಾಹಕ ವ್ಯವಹಾರ ಸಚಿವಾಲಯವು ಹೇಳಿದೆ.

'ಈರುಳ್ಳಿ ರಫ್ತಿನ ಮೇಲೆ ವಿಧಿಸಿರುವ ನಿರ್ಬಂಧವನ್ನು ಹಿಂಪಡೆದಿಲ್ಲ' ಎಂದು ಸಚಿವಾಲಯದ ಕಾರ್ಯದರ್ಶಿ ರೋಹಿತ್ ಕುಮಾರ್ ಸಿಂಗ್ ಅವರು, ಪಿಟಿಐ ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ. ಸ್ಥಳೀಯ ಮಾರುಕಟ್ಟೆಯಲ್ಲಿ ಗ್ರಾಹಕರಿಗೆ ನ್ಯಾಯಯುತ ಬೆಲೆಗೆ ಈರುಳ್ಳಿ ದೊರೆಯುವಂತೆ ಮಾಡುವುದೇ ಸರ್ಕಾರದ ಆದ್ಯತೆಯಾಗಿದೆ ಎಂದು ತಿಳಿಸಿದ್ದಾರೆ.

ಮರಾಠ ಮೀಸಲಾತಿ: ಮಹಾರಾಷ್ಟ್ರ ವಿಧಾನಸಭೆ, ವಿಧಾನ ಪರಿಷತ್ತಿನಲ್ಲಿ ಅಂಗೀಕಾರ

ಶೇ 10ರಷ್ಟು ಮೀಸಲು ಮಸೂದೆಗೆ 'ಅಸ್ತು'

ಮುಂಬೈ (ಪಿಟಿಐ): ಮರಾಠ ಸಮುದಾಯಕ್ಕೆ ಶಿಕ್ಷಣ ಮತ್ತು ಸರ್ಕಾರಿ ಉದ್ಯೋಗಗಳಲ್ಲಿ ಶೇ 10ರಷ್ಟು ಮೀಸಲಾತಿ ಒದಗಿಸುವ ಮಸೂದೆಯನ್ನು ಮಹಾರಾಷ್ಟ್ರ ವಿಧಾನಸಭೆ ಮತ್ತು ವಿಧಾನ ಪರಿಷತ್ತು ಮಂಗಳವಾರ ಸರ್ವಾನುಮತದಿಂದ ಅಂಗೀಕರಿಸಿದವು.

ಮರಾಠ ಮೀಸಲಾತಿ ಕುರಿತು ಮಂಗಳವಾರ ನಡೆದ ರಾಜ್ಯ ವಿಧಾನ ಮಂಡಲದ ಒಂದು ದಿನದ ವಿಶೇಷ ಅಧಿವೇಶನದಲ್ಲಿ ಮುಖ್ಯಮಂತ್ರಿ ಏಕನಾಥ ಶಿಂದೆ ಅವರು 'ಮಹಾರಾಷ್ಟ್ರ ರಾಜ್ಯದ ಸಾಮಾಜಿಕ ಮತ್ತು ಶೈಕ್ಷಣಿಕ ಹಿಂದುಳಿದ ಮಸೂದೆ 2024' ಅನ್ನು ವಿಧಾನಸಭೆಯಲ್ಲಿ ಮಂಡಿಸಿದರು. ಮಹಾರಾಷ್ಟ್ರದ ಒಟ್ಟು ಜನಸಂಖ್ಯೆಯಲ್ಲಿ ಶೇ 28ರಷ್ಟು ಮರಾಠ ಸಮುದಾಯಕ್ಕೆ ಸೇರಿದವರು ಎಂಬ ಮಾಹಿತಿಯನ್ನು ಈ ವೇಳೆ ನೀಡಲಾಯಿತು.

ಒಬಿಸಿ ಬಿಟ್ಟು ಪ್ರತ್ಯೇಕ ಮೀಸಲಾತಿ: ರಾಜ್ಯದಲ್ಲಿ ಈಗಾಗಲೇ ಹಲವು ಜಾತಿ ಮತ್ತು ಗುಂಪುಗಳು ಮೀಸಲು ವರ್ಗಗಳಲ್ಲಿದ್ದು, ಒಟ್ಟಾರೆ ಮೀಸಲಾತಿ ಪ್ರಮಾಣ ಶೇ 52ರಷ್ಟಿದೆ. ಹೀಗಾಗಿ ಮರಾಠ ಸಮುದಾಯವನ್ನೂ ಇತರ ಹಿಂದುಳಿದ ವರ್ಗಕ್ಕೆ (ಒಬಿಸಿ) ಸೇರಿಸುವುದು ಸಂಪೂರ್ಣ ಅಸಮಾನತೆಗೆ ಕಾರಣವಾಗುತ್ತದೆ ಎಂದು ಸರ್ಕಾರ ಹೇಳಿದೆ.

ಮರಾಠ ವರ್ಗದ ಹಿಂದುಳಿದಿರುವಿಕೆಯು ಹಿಂದುಳಿದ ವರ್ಗಗಳಿಗಿಂತ, ಅದರಲ್ಲೂ ಇತರ ಹಿಂದುಳಿದ ವರ್ಗಗಳಿಗಿಂತ (ಒಬಿಸಿ) ಭಿನ್ನ ಮತ್ತು ವ್ಯಾಪಕವಾಗಿದೆ ಎಂದು ಮಸೂದೆಯಲ್ಲಿ ಹೇಳಲಾಗಿದೆ. ಮೀಸಲಾತಿ ಜಾರಿಯಾದ 10 ವರ್ಷಗಳ ಬಳಿಕ ಈ ಕುರಿತು ಪರಿಶೀಲನೆ ನಡೆಸಬೇಕು ಎಂಬ ಅಂಶವನ್ನೂ ಅದರಲ್ಲಿ ಪ್ರಸ್ತಾಪಿಸಲಾಗಿದೆ.



ಮರಾಠ ಮೀಸಲಾತಿ ಮಸೂದೆಯು ಮಹಾರಾಷ್ಟ್ರ ವಿಧಾನಸಭೆಯಲ್ಲಿ ಅಂಗೀಕಾರವಾದ ಬಳಿಕ ಮುಂಬೈನಲ್ಲಿ ಜನರು ಸಂಭ್ರಮಿಸಿದರು – ಪಿಟಿಐ ಚಿತ್ರ

'ಮಹಾರಾಷ್ಟ್ರದಲ್ಲಿ ಅಸ್ತಿತ್ವದಲ್ಲಿ ಇರುವ ಒಬಿಸಿ ಕೋಟಾವನ್ನು ಮುಟ್ಟದೆ ಮರಾಠ ಸಮುದಾಯಕ್ಕೆ ಮೀಸಲಾತಿ ನೀಡಲು ನಾವು ಬಯಸಿದ್ದೇವೆ. ಈ ಸಮುದಾಯದವರು ಸುಮಾರು 40 ವರ್ಷಗಳಿಂದ ಮೀಸಲಾತಿ ಪ್ರಯೋಜನಕ್ಕಾಗಿ ಹೋರಾಟ ನಡೆಸುತ್ತಿದ್ದಾರೆ' ಎಂದು ಮುಖ್ಯಮಂತ್ರಿ ಹೇಳಿದರು.

ರಾಜ್ಯದಲ್ಲಿ ಪ್ರಸ್ತುತ ಮೀಸಲಾತಿ ಪ್ರಮಾಣ ಶೇ 52ರಷ್ಟಿದೆ. ಇದರಲ್ಲಿ ಪರಿಶಿಷ್ಟ ಜಾತಿಗಳು ಶೇ 13, ಪರಿಶಿಷ್ಟ ಪಂಗಡಗಳು ಶೇ 7, ಒಬಿಸಿ ಶೇ 19, ವಿಶೇಷ ಹಿಂದುಳಿದ ವರ್ಗಗಳಿಗೆ ಶೇ 2, ವಿಮುಕ್ತ ಜಾತಿಗೆ ಶೇ 3, ಅಲೆಮಾರಿ ಬುಡಕಟ್ಟು (ಬಿ) ಶೇ 2.5, ಅಲೆಮಾರಿ ಬುಡಕಟ್ಟು (ಸಿ) ಧಂಗರ್ ಶೇ 3.5 ಮತ್ತು ಅಲೆಮಾರಿ ಬುಡಕಟ್ಟು (ಡಿ) ವಂಜರಿ ಶೇ 2 ರಷ್ಟು ಮೀಸಲಾತಿ ಹೊಂದಿವೆ.

22 ರಾಜ್ಯಗಳಲ್ಲಿ ಶೇ 50 ಮೀರಿರುವ ಮೀಸಲಾತಿ: ದೇಶದ 22 ರಾಜ್ಯಗಳಲ್ಲಿ ಮೀಸಲಾತಿ ಪ್ರಮಾಣವು ಶೇ 50ರಷ್ಟು ಗಡಿಯನ್ನು ದಾಟಿದೆ ಎಂಬ ಅಂಶವನ್ನು ಮುಖ್ಯಮಂತ್ರಿ ಶಿಂದೆ ಅವರು ಮಸೂದೆ ಮಂಡನೆ ವೇಳೆ ಉಲ್ಲೇಖಿಸಿದರು. ಈ ಪೈಕಿ ತಮಿಳುನಾಡಿನಲ್ಲಿ ಶೇ 69, ಹರಿಯಾಣದಲ್ಲಿ ಶೇ 67, ರಾಜಸ್ಥಾನದಲ್ಲಿ ಶೇ 64, ಬಿಹಾರದಲ್ಲಿ ಶೇ 69, ಗುಜರಾತ್‌ನಲ್ಲಿ ಶೇ 59 ಹಾಗೂ ಪಶ್ಚಿಮ ಬಂಗಾಳದಲ್ಲಿ ಮೀಸಲಾತಿ ಪ್ರಮಾಣದ ಶೇ 55ರಷ್ಟಿದೆ ಎಂದು ಹೇಳಿದರು.

ರಾಜ್ಯದಲ್ಲಿ ಶೇ 28ರಷ್ಟು ಮರಾಠರು: ರಾಜ್ಯದ ಜನಸಂಖ್ಯೆಯಲ್ಲಿ ಮರಾಠ ಸಮುದಾಯಕ್ಕೆ ಸೇರಿದ ಶೇ 28ರಷ್ಟು ಜನರಿದ್ದಾರೆ. ಮರಾಠ ಸಮುದಾಯದವರಲ್ಲಿ ಶೇ 21.22ರಷ್ಟು ಕುಟುಂಬಗಳು ಬಡತನ ರೇಖೆಗಿಂತ (ಬಿಪಿಎಲ್) ಕೆಳಗಿದ್ದು, ಹಳದಿ ಪಡಿತರ ಚೀಟಿ ಹೊಂದಿವೆ. ಇದು ರಾಜ್ಯದ ಸರಾಸರಿ ಶೇ 17.4ಕ್ಕಿಂತ ಹೆಚ್ಚಾಗಿದೆ ಎಂಬ ಅಂಶವನ್ನು ಮಸೂದೆಯಲ್ಲಿ ಪ್ರಸ್ತಾಪಿಸಲಾಗಿದೆ.

> ಮರಾಠ ಮೀಸಲಾತಿ ಮಸೂದೆಯು ಈ ಹಿಂದೆ ತಂದಿದ್ದ ಶಾಸನವನ್ನೇ ಹೋಲುತ್ತದೆ. ಸುಪ್ರೀಂಕೋರ್ಟ್‌ನಲ್ಲಿ ಏನಾಗುತ್ತದೆ ಎಂಬುದನ್ನು ನೋಡಬೇಕಿದೆ
> **ಶರದ್ ಪವಾರ್,** ಎನ್‌ಸಿಪಿ ಸಂಸ್ಥಾಪಕ

'ಒಬಿಸಿಯಲ್ಲಿರಲಿ'

ಛತ್ರಪತಿ ಸಾಂಭಾಜಿನಗರ (ಪಿಟಿಐ): 'ಮಹಾರಾಷ್ಟ್ರ ಸರ್ಕಾರವು ಮರಾಠ ಸಮುದಾಯಕ್ಕೆ ಶೇ 10 ಅಥವಾ ಶೇ 20ರಷ್ಟು ಮೀಸಲಾತಿ ನೀಡಿದೆ ಎನ್ನುವುದು ಮುಖ್ಯವಲ್ಲ. ಆ ಮೀಸಲು ಇತರ ಹಿಂದುಳಿದ ವರ್ಗಗಳ (ಒಬಿಸಿ) ಅಡಿಯಲ್ಲಿ ಇರಬೇಕೇ ಹೊರತು ಪ್ರತ್ಯೇಕವಾಗಿ ಅಲ್ಲ' ಎಂದು ಮರಾಠ ಮೀಸಲಾತಿ ಹೋರಾಟಗಾರ ಮನೋಜ್ ಜರಾಂಗೆ ಹೇಳಿದರು.

ಜಲ್ನಾ ಜಿಲ್ಲೆಯ ಅಂತವಾಲಿ ಸಾರಥಿ ಗ್ರಾಮದಲ್ಲಿ ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಸರ್ಕಾರ ನಮಗೆ ಬೇಡವಾದದ್ದನ್ನು ನೀಡುತ್ತಿದೆ. ನಮಗೆ ಒಬಿಸಿ ಅಡಿಯಲ್ಲಿ ಮೀಸಲಾತಿ ಬೇಕು. ಪ್ರತ್ಯೇಕ ಮೀಸಲಾತಿ ಅಲ್ಲ' ಎಂದರು.

'ಮೀಸಲಾತಿ ಪ್ರಮಾಣವು ಶೇ 50ರಷ್ಟನ್ನು ಮೀರುವಂತಿಲ್ಲ. ಹೀಗಿರುವಾಗ ಒಬಿಸಿಯಿಂದ ಪ್ರತ್ಯೇಕ ಮೀಸಲಾತಿ ಕಲ್ಪಿಸುವುದು ಕಾನೂನು ಅಡೆ–ತಡೆಗಳಿಗೆ ಅವಕಾಶ ಮಾಡಿಕೊಟ್ಟಂತೆ ಆಗುತ್ತದೆ' ಎಂದು ಹೇಳಿದರು.

'ಕುಣಬಿ ಮರಾಠ ರಕ್ತ ಸಂಬಂಧಿಗಳ ಕುರಿತು ಸರ್ಕಾರ ತನ್ನ ಕರಡು ಅಧಿಸೂಚನೆಯನ್ನು ಕಾನೂನಾಗಿ ಪರಿವರ್ತಿಸುತ್ತದೆಯಾ ಎಂಬುದನ್ನು ಕಾದು ನೋಡುತ್ತಿದ್ದೇನೆ. ಬಳಿಕ ತನ್ನ ಆಂದೋಲನ ಹಾದಿಯನ್ನು ನಿರ್ಧರಿಸುತ್ತೇನೆ' ಎಂದರು.

ಸಂದೇಶ್‌ಖಾಲಿ ಪರಿಸ್ಥಿತಿ ಭೀಕರ: ಸುವೇಂದು

ಸಂದೇಶ್‌ಖಾಲಿ (ಪಶ್ಚಿಮ ಬಂಗಾಳ) (ಪಿಟಿಐ): ಹಿಂಸಾಚಾರಪೀಡಿತ ಪಶ್ಚಿಮ ಬಂಗಾಳದ ಉತ್ತರ 24 ಪರಗಣ ಜಿಲ್ಲೆಯ ಸಂದೇಶ್‌ಖಾಲಿಯ ಪರಿಸ್ಥಿತಿ ಅತ್ಯಂತ ಭೀಕರವಾಗಿದೆ ಮತ್ತು ಅರಾಜಕತೆಗೆ ಸ್ಪಷ್ಟ ನಿದರ್ಶನವಾಗಿದೆ ಎಂದು ಬಿಜೆಪಿ ನಾಯಕ, ವಿಧಾನಸಭೆ ವಿರೋಧ ಪಕ್ಷದ ನಾಯಕ ಸುವೇಂದು ಅಧಿಕಾರಿ ಮಂಗಳವಾರ ಹೇಳಿದ್ದಾರೆ.

ಕೋಲ್ಕತ್ತ ಹೈಕೋರ್ಟ್‌ನಿಂದ ಅನುಮತಿ ಪಡೆದ ನಂತರ ಮಂಗಳವಾರ ಮಧ್ಯಾಹ್ನ ಸಂದೇಶ್‌ಖಾಲಿಗೆ ಬಿಜೆಪಿ ಶಾಸಕ ಶಂಕರ್ ಘೋಷ್ ಅವರೊಂದಿಗೆ ಭೇಟಿ ನೀಡಿ, ಮಹಿಳೆಯರು ಸೇರಿದಂತೆ ಸ್ಥಳೀಯರೊಂದಿಗೆ ಮಾತನಾಡಿದರು.

ತಲೆಮರೆಸಿಕೊಂಡಿರುವ ಶಹಜಹಾನ್ ಶೇಖ್ ಸೇರಿದಂತೆ ಸ್ಥಳೀಯ ಟಿಎಂಸಿ ಮುಖಂಡರಿಂದ ತಮಗಾಗಿರುವ ಅನುಭವಗಳನ್ನು ಜನರು ಬಿಜೆಪಿ ನಾಯಕರೊಂದಿಗೆ ಹಂಚಿಕೊಂಡರು.

'ಸ್ಥಳೀಯರ ಅನುಭವಗಳು ಭಯಾನಕವಾಗಿವೆ. ಅವರ ಭೂಮಿ ಕಬಳಿಸಲಾಗಿದೆ. ಮಹಿಳೆಯರ ಶೋಷಣೆ ಮಾಡಲಾಗಿದೆ. ಎಲ್ಲವೂ ಪೊಲೀಸ್ ಮತ್ತು ಆಡಳಿತದ ನೆರವಿನಿಂದಲೇ ನಡೆದಿದೆ. ಇಲ್ಲಿ ಅರಾಜಕತೆ ಉಂಟಾಗಿದೆ ಎಂಬುದಕ್ಕೆ ಈ ಪ್ರದೇಶ ಸ್ಪಷ್ಟ ನಿದರ್ಶನವಾಗಿದೆ' ಎಂದು ಸುವೇಂದು ಹೇಳಿದರು.

ಇದು ವಾತಾವರಣ ಕೆಡಿಸುವ ಪ್ರಯತ್ನ: ಸುವೇಂದು ಅಧಿಕಾರಿ ಮತ್ತು ಶಾಸಕ ಶಂಕರ್ ಘೋಷ್ ಸಂದೇಶ್‌ಖಾಲಿಗೆ ಭೇಟಿ ನೀಡಿರುವುದಕ್ಕೆ ಪ್ರತಿಕ್ರಿಯಿಸಿದ ಟಿಎಂಸಿ, 'ಇದು ವಾತಾವರಣ ಹಾಳು ಮಾಡುವ ಪ್ರಯತ್ನ' ಎಂದು ಹೇಳಿದೆ.

'ಈ ಪ್ರದೇಶದಿಂದ ಕೆಲವು ದೂರುಗಳು ಬಂದಿರುವುದು ನಿಜ. ಸರ್ಕಾರವು ಅವುಗಳನ್ನು ಪರಿಹರಿಸಲು ಪ್ರಯತ್ನಿಸುತ್ತಿದೆ. ಆದರೆ ಬಿಜೆಪಿ ಸಮಸ್ಯೆಗೆ ಕೋಮು ಬಣ್ಣ ಹಚ್ಚಿ ವಾತಾವರಣ ಕೆಡಿಸಲು ಪ್ರಯತ್ನಿಸುತ್ತಿದೆ' ಎಂದು ಟಿಎಂಸಿ ವಕ್ತಾರ ಕುನಾಲ್ ಘೋಷ್ ಪ್ರತಿಕ್ರಿಯಿಸಿದರು.

'ಖಾಲಿಸ್ತಾನಿ' ಕೂಗಿಗೆ ತಿರುಗೇಟು

ಕೋಲ್ಕತ್ತ (ಪಿಟಿಐ): ಸಂದೇಶ್‌ಖಾಲಿಗೆ ಬಿಜೆಪಿ ನಾಯಕ ಸುವೇಂದು ಅಧಿಕಾರಿ ಭೇಟಿ ನೀಡುವುದನ್ನು ತಡೆಯಲು ಧಮಾಖಾಲಿಯಲ್ಲಿ ನಿಯೋಜಿತರಾಗಿದ್ದ ಸಿಖ್ ಐಪಿಎಸ್ ಅಧಿಕಾರಿಯೊಬ್ಬರನ್ನು ಗುರಿಯಾಗಿಸಿಕೊಂಡು, ಬಿಜೆಪಿ ಕಾರ್ಯಕರ್ತರ ಗುಂಪಿನ ಕೆಲವರು 'ಖಾಲಿಸ್ತಾನಿ' ಎಂದು ಘೋಷಣೆ ಕೂಗಿದರು.

ಐಪಿಎಸ್ ಅಧಿಕಾರಿ ಜಸ್‌ಪ್ರೀತ್ ಸಿಂಗ್ ಧಮಾಖಾಲಿಯಲ್ಲಿ ಕರ್ತವ್ಯನಿರತರಾಗಿದ್ದರು. ಸುವೇಂದು ಅವರನ್ನು ತಡೆಯಲು ಬ್ಯಾರಿಕೇಡ್‌ಗಳನ್ನು ಹಾಕಿದ್ದರು. ಆಗ ಬಿಜೆಪಿ ಬೆಂಬಲಿಗರ ಗುಂಪು ಹೀಗೆ ಕೂಗಿದೆ.

'ನಾನು ಪಗಡಿ ಧರಿಸಿರುವ ಕಾರಣಕ್ಕೆ ನನ್ನನ್ನು ಖಾಲಿಸ್ತಾನಿ ಎಂದು ಕರೆಯುತ್ತಿದ್ದೀರಾ? ನೀವು ಕಲಿತದ್ದು ಇದೇನಾ? ಪೊಲೀಸ್ ಒಬ್ಬ ಪಗಡಿ ಧರಿಸಿ, ಪ್ರಾಮಾಣಿಕವಾಗಿ ಕರ್ತವ್ಯ ನಿರ್ವಹಿಸಿದರೆ ಅವನು ನಿಮಗೆ ಖಾಲಿಸ್ತಾನಿಯಾಗುತ್ತಾನೆಯೇ? ನಾಚಿಕೆಯಾಗಬೇಕು' ಎಂದು ಬಿಜೆಪಿ ಬೆಂಬಲಿಗರಿಗೆ ಅಧಿಕಾರಿ ತಿರುಗೇಟು ನೀಡಿರುವ ದೃಶ್ಯದ ವಿಡಿಯೊ ತುಣುಕನ್ನು ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ 'ಎಕ್ಸ್'ನಲ್ಲಿ ಹಂಚಿಕೊಂಡಿದ್ದಾರೆ.

ಬಂಧನ: ಸಂಪಾದಕರ ಕೂಟ ಆತಂಕ

ನವದೆಹಲಿ/ಕೋಲ್ಕತ್ತ (ಪಿಟಿಐ): ಪಶ್ಚಿಮ ಬಂಗಾಳ ಪೊಲೀಸರು ಸುದ್ದಿವಾಹಿನಿಯೊಂದರ ಪತ್ರಕರ್ತನನ್ನು ಬಂಧಿಸಿರುವುದು ಆತಂಕಕಾರಿ ಎಂದು ಭಾರತೀಯ ಸಂಪಾದಕರ ಕೂಟವು ಮಂಗಳವಾರ ಪ್ರತಿಕ್ರಿಯಿಸಿದೆ.

'ರಿಪಬ್ಲಿಕ್ ಬಾಂಗ್ಲಾ' ವಾಹಿನಿಯ ಪತ್ರಕರ್ತ ಸಂತು ಪಾನ್ ಅವರನ್ನು ಸೋಮವಾರ ತಡರಾತ್ರಿ ಬಂಧಿಸಲಾಯಿತು. ನೇರ ವರದಿ ಮಾಡುತ್ತಿದ್ದ ಪಾನ್ ಅವರನ್ನು ಪೊಲೀಸರು ಎಳೆದುಕೊಂಡು ಹೋದರು. ಇದು ಕಳವಳಕಾರಿ' ಎಂದು ಗಿಲ್ಡ್ ಹೇಳಿದೆ.

'ತಾನು ಸರಿಯಾಗಿ ಬಟ್ಟೆ ಧರಿಸದೇ ಇದ್ದಾಗ ತನ್ನ ಮನೆಗೆ ನುಗ್ಗಿ ವಿಡಿಯೊ ಸೆರೆಹಿಡಿಯಲು ಪ್ರಾರಂಭಿಸಿದರು ಎಂದು ಪತ್ರಕರ್ತನ ವಿರುದ್ಧ ಮಹಿಳೆಯೊಬ್ಬರು ನೀಡಿದ ದೂರಿನ ಆಧಾರದಲ್ಲಿ ಅವರನ್ನು ಬಂಧಿಸಿದ್ದೇವೆ' ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಬೃಂದಾ ಕಾರಟ್‌ಗೆ ಅನುಮತಿ

ಕೋಲ್ಕತ್ತ (ಪಿಟಿಐ): ಸಂದೇಶ್‌ಖಾಲಿಗೆ ಭೇಟಿ ನೀಡಲು ಸಿಪಿಎಂ ಹಿರಿಯ ನಾಯಕಿ ಬೃಂದಾ ಕಾರಟ್ ಅವರಿಗೆ ಮಂಗಳವಾರ ಅನುಮತಿ ನೀಡಲಾಯಿತು.

ಎಸ್‌ಪಿಯಿಂದ ಕಾಂಗ್ರೆಸ್‌ಗೆ ಅಂತಿಮ ಅವಕಾಶ

ಪ್ರಜಾವಾಣಿ ವಾರ್ತೆ

ಲಖನೌ: ಲೋಕಸಭಾ ಚುನಾವಣೆಯಲ್ಲಿ 17 ಸ್ಥಾನಗಳಲ್ಲಿ ಸ್ಪರ್ಧಿಸಲು ಕಾಂಗ್ರೆಸ್ ಒಪ್ಪದಿದ್ದರೆ ಮೈತ್ರಿಯಿಂದ ಹೊರನಡೆಯುವುದಾಗಿ ಸಮಾಜವಾದಿ ಪಕ್ಷವು (ಎಸ್‌ಪಿ) ಬೆದರಿಕೆ ಒಡ್ಡಿದೆ. ಇದರಿಂದಾಗಿ ಎರಡು ಪಕ್ಷಗಳ ನಡುವಿನ ಸೀಟು ಹಂಚಿಕೆ ಮಾತುಕತೆಗೆ ಬಿಕ್ಕಟ್ಟು ಎದುರಾಗಿದೆ.

17 ಸ್ಥಾನಗಳ ಪ್ರಸ್ತಾವ ಸಂಬಂಧ ಕಾಂಗ್ರೆಸ್ ಇನ್ನೂ ಪ್ರತಿಕ್ರಿಯೆ ನೀಡಿಲ್ಲ. ಮೈತ್ರಿಯ ಮುಂದುವರಿಕೆಯು ಆ ಪಕ್ಷದ ಸಮ್ಮತಿಯನ್ನು ಅವಲಂಬಿಸಿದೆ ಎಂದು ಸಮಾಜವಾದಿ ಪಕ್ಷದ ಮೂಲಗಳು ಮಂಗಳವಾರ ತಿಳಿಸಿವೆ.

'ನಾವು ನಮ್ಮ ಕೊನೆಯ ಪ್ರಸ್ತಾವವನ್ನು ಕಾಂಗ್ರೆಸ್ ಮುಂದಿಟ್ಟಿದ್ದೇವೆ. ಲೋಕಸಭಾ ಚುನಾವಣೆಯಲ್ಲಿ ನಮ್ಮ ಜತೆ ಮೈತ್ರಿ ಬೇಕೇ ಬೇಡವೇ ಎಂಬುದನ್ನು ನಿರ್ಧರಿಸುವುದು ಅವರಿಗೆ ಬಿಟ್ಟ ವಿಚಾರ. ನಾವು ಏಕಾಂಗಿಯಾಗಿ ಚುನಾವಣೆ ಎದುರಿಸಲು ಸಿದ್ಧರಿದ್ದೇವೆ' ಎಂದು ಎಸ್‌ಪಿ ಮುಖಂಡರೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದರು.

ಕಾಂಗ್ರೆಸ್ ಜತೆಗಿನ ಸೀಟು ಹಂಚಿಕೆ ಮಾತುಕತೆ ಫಲಪ್ರದ ಆಗುವವರೆಗೂ 'ಭಾರತ್ ಜೋಡೋ ನ್ಯಾಯ ಯಾತ್ರೆ'ಯಲ್ಲಿ ಪಾಲ್ಗೊಳ್ಳುವುದಿಲ್ಲ ಎಂದು ಎಸ್‌ಪಿ ಅಧ್ಯಕ್ಷ ಅಖಿಲೇಶ್ ಯಾದವ್ ಸೋಮವಾರ ಹೇಳಿದ್ದರು. ಅದರಂತೆ ಅವರು ಸೋಮವಾರ ಮತ್ತು ಮಂಗಳವಾರ 'ನ್ಯಾಯ ಯಾತ್ರೆ'ಯಲ್ಲಿ ಪಾಲ್ಗೊಂಡಿರಲಿಲ್ಲ.

ಉತ್ತರ ಪ್ರದೇಶದಿಂದ ಲೋಕಸಭೆಗೆ ಸ್ಪರ್ಧಿಸಲಿರುವ 31 ಅಭ್ಯರ್ಥಿಗಳನ್ನು ಹೆಸರನ್ನು ಎಸ್‌ಪಿ ಈವರೆಗೆ ಘೋಷಿಸಿದೆ.

ಆದಾಗ್ಯೂ, ಸೀಟು ಹಂಚಿಕೆ ಮತುಕತೆ ಇನ್ನೂ ನಡೆಯುತ್ತಿದ್ದು, ಮೈತ್ರಿಗೆ ಯಾವುದೇ ಭಂಗವಿಲ್ಲ ಎಂದು ಉತ್ತರ ಪ್ರದೇಶದ ಕಾಂಗ್ರೆಸ್ ಮೂಲಗಳು ತಿಳಿಸಿವೆ.

3ನೇ ಪಟ್ಟಿ ಬಿಡುಗಡೆ ಮಾಡಿದ ಎಸ್‌ಪಿ

ಲಖನೌ (ಪಿಟಿಐ): ಲೋಕಸಭೆಗೆ ಸ್ಪರ್ಧಿಸಲಿರುವ ಅಭ್ಯರ್ಥಿಗಳ ಮೂರನೇ ಪಟ್ಟಿಯನ್ನು ಎಸ್‌ಪಿ ಮಂಗಳವಾರ ಬಿಡುಗಡೆ ಮಾಡಿದ್ದು, ಐವರ ಹೆಸರುಗಳನ್ನು ಘೋಷಿಸಿದೆ.

ಪಕ್ಷದ ಮುಖ್ಯಸ್ಥ ಅಖಿಲೇಶ್ ಯಾದವ್ ಚಿಕ್ಕಪ್ಪ ಶಿವಪಾಲ್ ಸಿಂಗ್ ಯಾದವ್ ಅವರನ್ನು ಬದೌನ್ ಕ್ಷೇತ್ರದಿಂದ ಕಣಕ್ಕಿಳಿಸಲಾಗುತ್ತಿದೆ. ಸುರೇಂದ್ರ ಸಿಂಗ್ ಪಟೇಲ್ (ವಾರಾಣಸಿ ಲೋಕಸಭಾ ಕ್ಷೇತ್ರ), ಇಕ್ರಾ ಹುಸೇನ್ (ಕೈರಾನಾ), ಪ್ರವೀಣ ಸಿಂಗ್ ಅರೋನ್ (ಬರೇಲಿ) ಹಾಗೂ ಅಜೇಂದ್ರ ಸಿಂಗ್ ರಜಪೂತ್ (ಹಮೀರ್‌ಪುರ) ಅವರಿಗೆ ಟಿಕೆಟ್ ನೀಡಲಾಗಿದೆ.

ಪರಿಷತ್ ಸ್ಥಾನಕ್ಕೆ ಮೌರ್ಯ ರಾಜೀನಾಮೆ

ಲಖನೌ (ಪಿಟಿಐ): ಸಮಾಜವಾದಿ ಪಕ್ಷದ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿಯಾಗಿದ್ದ ಸ್ವಾಮಿ ಪ್ರಸಾದ್ ಮೌರ್ಯ ಅವರು ಪಕ್ಷದ ಪ್ರಾಥಮಿಕ ಸದಸ್ಯತ್ವ ಮತ್ತು ಉತ್ತರ ಪ್ರದೇಶ ವಿಧಾನಪರಿಷತ್ ಸದಸ್ಯತ್ವಕ್ಕೆ ರಾಜೀನಾಮೆ ನೀಡಿದ್ದಾರೆ.

'ಪಕ್ಷ ತಾರತಮ್ಯ ಮಾಡುತ್ತಿದೆ. ತಾವು ನೀಡಿದ್ದ ಹೇಳಿಕೆಗಳಿಂದ ವಿವಾದ ಆದಾಗ ನನ್ನನ್ನು ಸಮರ್ಥಿಸಿಕೊಂಡಿಲ್ಲ' ಎಂದು ಆರೋಪಿಸಿ ವಾರದ ಹಿಂದಷ್ಟೇ ಅವರು ಪ್ರಧಾನ ಕಾರ್ಯದರ್ಶಿ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರು.

ಗುರುವಾರ ನವದೆಹಲಿಯಲ್ಲಿ ಬೆಂಬಲಿಗರ ಜೊತೆ ಚರ್ಚಿಸಲಿದ್ದು, ಬಳಿಕ ಮುಂದಿನ ನಡೆ ಕುರಿತು ತೀರ್ಮಾನಿಸಲಿದ್ದಾರೆ. ಪಕ್ಷದ ಮುಖ್ಯಸ್ಥ ಅಖಿಲೇಶ್ ಯಾದವ್ ಅವರಿಗೆ ಸಲ್ಲಿಸಿರುವ ರಾಜೀನಾಮೆ ಪತ್ರವನ್ನು 'ಎಕ್ಸ್'ನಲ್ಲೂ ಹಂಚಿಕೊಂಡಿದ್ದಾರೆ.

ಪಿಡಿಪಿ ಜತೆ ಇಲ್ಲ: ಮುಜಾಫರ್

ಪ್ರಜಾವಾಣಿ ವಾರ್ತೆ

ಶ್ರೀನಗರ: ಪಿಡಿಪಿ ಸ್ಥಾಪಕ ಸದಸ್ಯರೂ ಆದ ಮಾಜಿ ಉಪ ಮುಖ್ಯಮಂತ್ರಿ ಮುಜಾಫರ್ ಹುಸೇನ್ ಬೇಗ್ ಅವರು ಮಂಗಳವಾರ ಜಮ್ಮುವಿನಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರ ರ‍್ಯಾಲಿಯಲ್ಲಿ ಪಾಲ್ಗೊಂಡರು.

ಇದೇ ವೇಳೆ ಸುದ್ದಿಗಾರರ ಜತೆ ಮಾತನಾಡಿದ ಬೇಗ್, 'ನಾನು ಪಿಡಿಪಿ ಜತೆ ಇಲ್ಲ. ಅವರು ನನ್ನನ್ನು ಸೇರಲು ಕೇಳಿದರೆ, ವೈಯಕ್ತಿಕ ಹಿತಾಸಕ್ತಿಗಿಂತ ರಾಷ್ಟ್ರೀಯ ಹಿತಾಸಕ್ತಿ ಬಗ್ಗೆ ಚಿಂತಿಸುವಂತೆ ಅವರಿಗೆ ಹೇಳುತ್ತೇನೆ' ಎಂದರು.

2020ರ ನವೆಂಬರ್‌ನಲ್ಲಿ ಪಕ್ಷದಿಂದ ಹೊರ ನಡೆದಿದ್ದ ಅವರು ತನ್ನ ಪತ್ನಿಯೊಂದಿಗೆ ಜನವರಿ 7ರಂದು ಪಿಡಿಪಿ ಮರು ಸೇರ್ಪಡೆಯಾಗಿದ್ದರು.

ಫಿಕ್ಸಿಂಗ್ ಆರೋಪ: ಎಐಎಫ್‌ಎಫ್ ತನಿಖೆ ಶುರು

ನವದೆಹಲಿ (ಪಿಟಿಐ): ದೆಹಲಿ ಪ್ರೀಮಿಯರ್ ಲೀಗ್‌ನಲ್ಲಿ ಬೆಟ್ಟಿಂಗ್ ಮತ್ತು ಮ್ಯಾಚ್ ಫಿಕ್ಸಿಂಗ್ ಆರೋಪಗಳು ಕೇಳಿಬಂದ ಹಿನ್ನೆಲೆಯಲ್ಲಿ ಅಖಿಲ ಭಾರತ ಫುಟ್‌ಬಾಲ್ ಫೆಡರೇಷನ್ (ಎಐಎಫ್‌ಎಫ್) ಮಂಗಳವಾರ ದೇಶದ ವಿವಿಧ ನಗರಗಳಲ್ಲಿ ತನಿಖೆ ಪ್ರಾರಂಭಿಸಿದೆ.

ದೆಹಲಿ ಲೀಗ್‌ನಲ್ಲಿ ಸೋಮವಾರ ಅಹಬಾಬ್ ಎಫ್‌ಸಿ– ರೇಂಜರ್ಸ್ ಎಫ್‌ಸಿ ನಡುವೆ ಪಂದ್ಯದಲ್ಲಿ ಅಹಬಾಬ್ ಗೆದ್ದ ರೀತಿ ಸಂಶಯ ಮೂಡಿಸಿತ್ತು. 4-0 ರಿಂದ ಮುನ್ನಡೆಯಲ್ಲಿದ್ದ ಅಹಬಾಬ್ ಎಫ್‌ಸಿ, ಕೊನೆಗಳಿಗೆಯಲ್ಲಿ ಎರಡು ಸೆಲ್ಫ್ (ಉಡುಗೊರೆ) ಗೋಲುಗಳನ್ನು ಕೊಟ್ಟ ರೀತಿ ಬೆಟ್ಟಿಂಗ್ ಮತ್ತು ಮ್ಯಾಚ್ ಫಿಕ್ಸಿಂಗ್ ಅನುಮಾನಗಳಿಗೆ ಪುಷ್ಠಿ ನೀಡಿದೆ. ಪಂದ್ಯವನ್ನು ಅಹಬಾಬ್ ಎಫ್‌ಸಿ 4–2ರಿಂದ ಗೆದ್ದುಕೊಂಡಿತ್ತು.

ಎರಡು ಗೋಲುಗಳ ವಿಡಿಯೊ ದೃಶ್ಯಾವಳಿಗಳು ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದ್ದು, ಪಂದ್ಯದ ವಿವರಗಳನ್ನು ಪಡೆಯಲು ಎಐಎಫ್‌ಎಫ್ ಮಂಗಳವಾರ ಫುಟ್‌ಬಾಲ್ ದೆಹಲಿ ಮುಖ್ಯಸ್ಥ ಅನುಜ್ ಗುಪ್ತಾ ಅವರನ್ನು ಕರೆಸಿಕೊಂಡು ಮಾಹಿತಿ ಪಡೆದು ನೋಟಿಸ್ ನೀಡಿದೆ.

ಬೆಟ್ಟಿಂಗ್ ಸಿಂಡಿಕೇಟ್‌ಅನ್ನು ಬುಡಸಮೇತ ನಿರ್ಮೂಲನ ಮಾಡುವ ನಿಟ್ಟಿನಲ್ಲಿ ತನಿಖೆಗೆ ಭ್ರಷ್ಟಾಚಾರ ನಿಗ್ರಹ ದಳವನ್ನು (ಎಸಿಬಿ) ಸಂಪರ್ಕಿಸುವುದಾಗಿ ಎಐಎಫ್‌ಎಫ್ ಅಧ್ಯಕ್ಷ ಕಲ್ಯಾಣ್ ಚೌಬೆ ಹೇಳಿದ್ದಾರೆ.

'ನಮ್ಮ ತನಿಖೆ ದೆಹಲಿಗೆ ಮಾತ್ರ ಸೀಮಿತಗೊಂಡಿಲ್ಲ. ಇತರ ನಗರಗಳಲ್ಲೂ ಇಂಥ ಪಿಡುಗು ಇದೆ ಎಂಬುದನ್ನು ನಂಬಲು ಕಾರಣವಾಗುವ ಸಾಕ್ಷ್ಯಗಳು ನಮ್ಮ ಬಳಿಯಿವೆ. ತನಿಖೆಗಾಗಿ ವ್ಯಾಪಕ ಜಾಲವನ್ನು ರೂಪಿಸುತ್ತಿದ್ದೇವೆ' ಎಂದು ಚೌಬೆ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಚೆಸ್: ಭಾರತ ಮೂಲದ ಪೋರನ ವಿಶ್ವದಾಖಲೆ

ಸಿಂಗಪುರ (ಪಿಟಿಐ): ಭಾರತ ಮೂಲದ ಕೇವಲ ಎಂಟು ವರ್ಷದ ಬಾಲಕ, ಸ್ವಿಜರ್ಲೆಂಡ್‌ನಲ್ಲಿ ನಡೆಯುತ್ತಿರುವ ಬರ್ಗ್‌ಡೋರ್ಫರ್ ಸ್ಟಾಡ್‌ಥೇಯಸ್ ಓಪನ್ ಟೂರ್ನಿಯಲ್ಲಿ ಪೋಲೆಂಡ್‌ನ ಗ್ರ್ಯಾಂಡ್‌ಮಾಸ್ಟರ್ ಜೆಸೆಕ್ ಸ್ಟೊಪಾ ಅವರನ್ನು ಸೋಲಿಸಿ ದಾಖಲೆ ಸ್ಥಾಪಿಸಿದ್ದಾರೆ.

'ಶಾಸ್ತ್ರೀಯ ಮಾದರಿಯ ಚೆಸ್'ನಲ್ಲಿ ಗ್ರ್ಯಾಡ್ ಮಾಸ್ಟರ್ ಒಬ್ಬರನ್ನು ಸೋಲಿಸಿದ ಅತಿ ಕಿರಿಯ ಆಟಗಾರನೆಂಬ ಹಿರಿಮೆ ಸಿಂಗಪುರವನ್ನು ಪ್ರತಿನಿಧಿಸುತ್ತಿರುವ ಅಶ್ವಥ್ ಕೌಶಿಕ್ ಅವರದಾಯಿತು ಎಂದು 'ಚಾನೆಲ್ ನ್ಯೂಸ್ ಏಷ್ಯಾ' ತಿಳಿಸಿದೆ.

ಈ ಹಿಂದಿನ ದಾಖಲೆ ಸರ್ಬಿಯಾದ ಲಿಯೊನಿದ್ ಇವಾನೊವಿಕ್ ಹೆಸರಿನಲ್ಲಿತ್ತು. ಕೆಲ ತಿಂಗಳ ಹಿಂದಷ್ಟೇ ಅವರು ಬಲ್ಗೇರಿಯಾದ ಗ್ರ್ಯಾಂಡ್‌ಮಾಸ್ಟರ್ ಮಿಲ್ಕೊ ಪೊಪ್ಚೆವ್ ಅವರನ್ನು ಬೆಲ್‌ಗ್ರೇಡ್ ಓಪನ್ ಟೂರ್ನಿಯ ಪಂದ್ಯದಲ್ಲಿ ಸೋಲಿಸಿದ್ದರು. ಲಿಯೊನಿದ್ ಅವರು ಅಶ್ವಥ್ ಅವರಿಗಿಂತ ಕೆಲವು ತಿಂಗಳು ದೊಡ್ಡವರು. ಭಾರತೀಯ ಪೌರತ್ವ ಹೊಂದಿರುವ ಅಶ್ವಥ್ ಕುಟುಂಬ 2017ರಲ್ಲಿ ಸಿಂಗಪುರಕ್ಕೆ ಹೋಗಿ ನೆಲೆಸಿತ್ತು.



ಅಶ್ವಥ್ ಕೌಶಿಕ್

ಪ್ರಸಕ್ತ ಅಶ್ವಥ್ ಫಿಡೆ ಕ್ರಮಾಂಕ ಪಟ್ಟಿಯಲ್ಲಿ 37,338ನೇ ಸ್ಥಾನದಲ್ಲಿದ್ದಾರೆ. 2022ರಲ್ಲಿ ಅವರು ಮೊದಲ ಬಾರಿ ಸುದ್ದಿಯಾಗಿದ್ದರು. ಆ ವರ್ಷ ಅವರು ಪೂರ್ವ ಏಷ್ಯಾ ಯುವ ಚಾಂಪಿಯನ್‌ಷಿಪ್‌ನಲ್ಲಿ ಮೂರೂ ಮಾದರಿಯಲ್ಲಿ (ಕ್ಲಾಸಿಕ್, ರ‍್ಯಾಪಿಡ್ ಮತ್ತು ಬ್ಲಿಟ್ಜ್) ಚಾಂಪಿಯನ್ ಕಿರೀಟ ಧರಿಸಿದ್ದರು.

ಸಿಂಗಪುರ ಚೆಸ್ ಫೆಡರೇಷನ್ ಸಿಇಒ ಕೆವಿನ್ ಗ್ಲೊ ಅವರು ಅಶ್ವಥ್ ಸಾಧನೆಯನ್ನು ಕೊಂಡಾಡಿದ್ದು 'ಎಕ್ಸ್'ನಲ್ಲಿ ಅಭಿನಂದಿಸಿದ್ದಾರೆ.

ಗುಲ್ವೀರ್ ಅನರ್ಹ: ತಪ್ಪಿದ ಚಿನ್ನ

ಟೆಹರಾನ್ (ಪಿಟಿಐ): ಭಾರತದ ಗುಲ್ವೀರ್ ಸಿಂಗ್ ಅವರು ಏಷ್ಯನ್ ಒಳಾಂಗಣ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್‌ನಲ್ಲಿ 'ಲೇನ್ ಉಲ್ಲಂಘನೆ'ಗಾಗಿ ಅನರ್ಹಗೊಂಡಿದ್ದು, ಅವರು ಪುರುಷರ 3,000 ಮೀಟರ್ ಓಟದಲ್ಲಿ ಗೆದ್ದಿದ್ದ ಚಿನ್ನದ ಪದಕವನ್ನು ಕಳೆದುಕೊಂಡರು.

ಸೋಮವಾರ ತಡರಾತ್ರಿ ನಡೆದ ಸ್ಪರ್ಧೆಯಲ್ಲಿ ಗುಲ್ವೀರ್ ಸಿಂಗ್ 8ನಿ.07.48 ಸೆ.ಗಳಲ್ಲಿ ಓಟ ಪೂರೈಸಿ ಅಗ್ರಸ್ಥಾನ ಪಡೆದಿದ್ದರು. ನಂತರ ಅವರನ್ನು ಲೇನ್ ಉಲ್ಲಂಘನೆಗಾಗಿ ಅನರ್ಹಗೊಳಿಸಲಾಯಿತು. ಅಥ್ಲೆಟಿಕ್ಸ್ ಫೆಡರೇಶನ್ ಆಫ್ ಇಂಡಿಯಾ (ಎಎಫ್‌ಐ) ತಡರಾತ್ರಿ ಮಾಡಿದ ಮನವಿಯನ್ನು ಸಹ ತಿರಸ್ಕರಿಸಲಾಯಿತು.

'ಗುಲ್ವೀರ್ ಸಿಂಗ್ ಅವರು ಲೇನ್ ಉಲ್ಲಂಘನೆ ಮಾಡಿದ್ದಾರೆ ಎಂದು ಅನರ್ಹಗೊಳಿಸಲಾಗಿದೆ. ಇದರ ವಿರುದ್ಧ ಎಎಫ್‌ಐ ಸಲ್ಲಿಸಿದ್ದ ಪ್ರತಿಭಟನೆಯನ್ನು ತಿರಸ್ಕರಿಸಲಾಗಿದೆ' ಎಂದು ತಂಡದ ಜೊತೆಯಿರುವ ತರಬೇತುದಾರರೊಬ್ಬರು ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ.

ಎರಡನೇ ಸ್ಥಾನ ಪಡೆದಿದ್ದ ಕಿರ್ಗಿಸ್ತಾನದ ಕೆನೆಶ್‌ಬೆಕೊವ್ ನೂರ್‌ಸುಲ್ತಾನ್ (8:08.85 ಸೆ.) ಅವರಿಗೆ ಚಿನ್ನದ ಪದಕ ನೀಡಲಾಯಿತು. ಮೂರನೇ ಸ್ಥಾನ ಪಡೆದಿದ್ದ ಇರಾನ್‌ನ ಜಲಿಲ್ ನಸೇರಿ (8:09.39) ರಜತ ಪದಕ ಹಾಗೂ ನಾಲ್ಕನೆಯವರಾಗಿ ಸ್ಪರ್ಧೆ ಪೂರೈಸಿದ ಕಜಕಸ್ತಾನದ ಫ್ರೋಲೋವ್‌ಸ್ಕಿ (8:17.17) ಅವರಿಗೆ ಕಂಚಿನ ಪದಕ ನೀಡಲಾಯಿತು.




ಗುಲ್ವೀರ್ ಸಿಂಗ್

ಭಾರತವು ಮೂರು ಚಿನ್ನ ಮತ್ತು ಒಂದು ಬೆಳ್ಳಿಯೊಂದಿಗೆ ತನ್ನ ಅಭಿಯಾನವನ್ನು ಕೊನೆಗೊಳಿಸಿತು.

ಗುಲ್ವೀರ್ ಚಿನ್ನ ಕಳೆದುಕೊಳ್ಳುವುದರೊಂದಿಗೆ ಭಾರತ ಈ ಚಾಂಪಿಯನ್‌ಷಿಪ್‌ನಲ್ಲಿ ಗೆದ್ದ ಚಿನ್ನಗಳ ಸಂಖ್ಯೆ ಮೂರಕ್ಕೆ ಇಳಿದಿದೆ.

ಖೇಲೊ ಇಂಡಿಯಾ: ಜೈನ್ ವಿವಿ ಮೇಲುಗೈ

ಬೆಂಗಳೂರು: ಇಲ್ಲಿನ ಜೈನ್ ವಿಶ್ವವಿದ್ಯಾಲಯ ತಂಡ ಖೇಲೊ ಇಂಡಿಯಾ ಯೂನಿವರ್ಸಿಟಿ ಗೇಮ್ಸ್‌ನ ನಾಲ್ಕು ಚಿನ್ನ, ಒಂದು ಬೆಳ್ಳಿ ಮತ್ತು ಎರಡು ಕಂಚಿನ ಪದಕಗಳನ್ನು ಗೆದ್ದುಕೊಂಡು ಮೊದಲ ಎರಡು ದಿನ ಮೇಲುಗೈ ಸಾಧಿಸಿತು.



ಶುಭಂತ್

ಪುರುಷರ 200 ಮೀಟರ್ ಬಟರ್‌ಫ್ಲೈ ಈಜು ಸ್ಪರ್ಧೆಯಲ್ಲಿ ಶುಭ್ರಾಂತ್ ಪಾತ್ರಾ ಚಿನ್ನ ಗೆದ್ದರು, ಚಂಡೀಗಢ ವಿಶ್ವವಿದ್ಯಾಲಯದ ಹರ್ಷ ಸರೋಹಾ ಅವರಿಗಿಂತ ಅರ್ಧ ಸೆಕೆಂಡು ಮುಂದಿದ್ದರು. ನಂತರ ಅವರು ತಮ್ಮ ತಂಡ 4x100 ಮೀಟರ್ ಫ್ರೀಸ್ಟೈಲ್ ಸ್ಪರ್ಧೆಯಲ್ಲಿ ಪ್ರಾಬಲ್ಯ ಸಾಧಿಸಲು ಸಹಾಯ ಮಾಡಿದರು.

ಪುರುಷರ ಬ್ಯಾಸ್ಕೆಟ್‌ಬಾಲ್ ಸ್ಪರ್ಧೆಯಲ್ಲಿ ಜೈನ್ ವಿಶ್ವವಿದ್ಯಾಲಯ ಸೆಮಿಫೈನಲ್ ಪ್ರವೇಶಿಸಿದೆ.

ಮಹಿಳೆಯರ ತಂಡವು ಫೈನಲ್‌ನಲ್ಲಿ ಮದ್ರಾಸ್ ವಿಶ್ವವಿದ್ಯಾಲಯವನ್ನು ಎದುರಿಸಲಿದೆ.


1990ರ ವಿಶ್ವಕಪ್ ಫೈನಲ್‌ನ ಏಕೈಕ ಗೋಲಿನ ರೂವಾರಿ

ಜರ್ಮನಿ ಫುಟ್‌ಬಾಲ್ ತಾರೆ ಬ್ರೀಮ್ ನಿಧನ

ಬರ್ಲಿನ್ (ಎಎಫ್‌ಪಿ): ಇಟಲಿಯಲ್ಲಿ ನಡೆದ 1990ರ ವಿಶ್ವಕಪ್ ಫೈನಲ್‌ನಲ್ಲಿ ಪಶ್ಚಿಮ ಜರ್ಮನಿ ಪರ 'ಪೆನಾಲ್ಟಿ' ಮೂಲಕ ನಿರ್ಣಾಯಕ ಗೋಲು ಗಳಿಸಿದ್ದ ಆ್ಯಂಡ್ರಿಯಾಸ್ ಬ್ರೀಮ್ (63) ಮಂಗಳವಾರ ನಿಧನರಾದರು ಎಂದು ಬಯರ್ನ್ ಮ್ಯೂನಿಕ್ ಕ್ಲಬ್ ತಿಳಿಸಿದೆ.

ಲೆಫ್ಟ್ ಬ್ಯಾಕ್ ಆಗಿ ಆಡುತ್ತಿದ್ದ ಬ್ರೀಮ್ ಎರಡು ವರ್ಷ (1986–88) ಬಯರ್ನ್ ಕ್ಲಬ್‌ಗೆ ಆಡಿದ್ದರು. 1987ರಲ್ಲಿ ಈ ಕ್ಲಬ್ ಬುಂಡೆಸ್‌ಲೀಗಾ (ಜರ್ಮನಿಯ ಕ್ಲಬ್ ಚಾಂಪಿಯನ್‌ಷಿಪ್) ಗೆದ್ದುಕೊಂಡಿತ್ತು.

ಬಯರ್ನ್ ಜೊತೆಗೆ ಅವರು ಯುರೋಪ್‌ನ ಕೈಸರ್ಸ್‌ಲಾಟರ್ನ್, ಇಂಟರ್ ಮಿಲಾನ್, ಸಾರ್‌ಬ್ರುಕೆನ್ ಮತ್ತು ರಿಯಲ್ ಜಾರ್ಗೊಝಾ ಕ್ಲಬ್‌ಗಳಿಗೆ ಆಡಿದ್ದಾರೆ. ಬ್ರೀಮ್ ಅವರು ಪಶ್ಚಿಮ ಜರ್ಮನಿ (ಮತ್ತು ನಂತರ ಜರ್ಮನಿ) ಪರ 86 ಪಂದ್ಯಗಳಲ್ಲಿ ಆಡಿದ್ದಾರೆ. ಆದರೆ ರೋಮ್‌ನಲ್ಲಿ ನಡೆದ 1990ರ ವಿಶ್ವಕಪ್ ಫೈನಲ್‌ನ 85ನೇ ನಿಮಿಷ 'ಪೆನಾಲ್ಟಿ'ಯಲ್ಲಿ ಗಳಿಸಿದ ಗೋಲು ಅವರಿಗೆ ಜಗದ್ವಿಖ್ಯಾತಿ ತಂದುಕೊಟ್ಟಿತ್ತು. ಈ ಗೋಲು ನಿರ್ಣಾಯಕವಾಗಿ ಪಶ್ಚಿಮ ಜರ್ಮನಿ 1–0 ಯಿಂದ ಡೀಗೊ ಮರಡೊನಾ ನೇತೃತ್ವದ ಅರ್ಜೆಂಟೀನಾ ತಂಡವನ್ನು ಸೋಲಿಸಿತ್ತು. ಇದರೊಂದಿಗೆ 1986ರ ಮೆಕ್ಸಿಕೊ ವಿಶ್ವಕಪ್ ಫೈನಲ್‌ನಲ್ಲಿ ಅನುಭವಿಸಿದ 3–2 ಅಂತರದ ಸೋಲಿಗೆ ಜರ್ಮನಿ ಮುಯ್ಯಿ ತೀರಿಸಿಕೊಂಡಿತ್ತು. ಪೆನಾಲ್ಟಿ ಯತ್ನವನ್ನು ನಾಯಕ ಲೋಥರ್ ಮಥಾಯಸ್ ಬದಲಿಗೆ ಬ್ರೀಮ್ ತೆಗೆದುಕೊಂಡಿದ್ದರು.



ಆ್ಯಂಡ್ರಿಯಾಸ್ ಬ್ರೀಮ್ –ಎಎಫ್‌ಪಿ ಚಿತ್ರ

'ಏರ್‌ಪೋರ್ಟ್, ಶಾಪಿಂಗ್... ಹೀಗೆ ನಾನೆಲ್ಲೇ ಹೋದರೂ ಜನರು ಅದರ ಬಗ್ಗೆ ಕೇಳುತ್ತಿದ್ದರು' ಎಂದು ಈ ಹಿಂದೆ ಬ್ರೀಮ್ ಸುದ್ದಿಸಂಸ್ಥೆಗೆ ತಿಳಿಸಿದ್ದರು.

ಜರ್ಮನಿಯ ಇನ್ನೊಬ್ಬ ಮಹಾನ್ ಆಟಗಾರ ಫ್ರಾಂಝ್ ಬೆಕೆನ್‌ಬಾರ್ ಕಳೆದ ತಿಂಗಳು ಮೃತಪಟ್ಟಿದ್ದರು.

'ಆ್ಯಂಡಿ ನಮ್ಮ ವಿಶ್ವಕಪ್ ಹೀರೊ. ಆದರೆ, ನನಗೆ ಅವರು ಅದಕ್ಕಿಂತ ಹೆಚ್ಚು– ಅವರು ನನ್ನ ಆಪ್ತ ಮಿತ್ರ ಮತ್ತು ಜೊತೆಗಾರ' ಎಂದು ಇನ್ನೊಬ್ಬ ತಾರೆ ರೂಡಿ ವಾಲರ್ ಶೋಕ ಸೂಚಿಸಿದರು.

ಮಾರ್ಚ್ 22ರಿಂದ ಐಪಿಎಲ್ ಟೂರ್ನಿ

ಚುನಾವಣೆ ಇದ್ದರೂ ಎಲ್ಲಾ ಪಂದ್ಯಗಳು ಭಾರತದಲ್ಲೇ: ಲೀಗ್ ಚೇರ್ಮನ್ ಅರುಣ್ ಧುಮಾಲ್

ನವದೆಹಲಿ (ಪಿಟಿಐ): ಬಹು ನಿರೀಕ್ಷಿತ ಇಂಡಿಯನ್ ಪ್ರೀಮಿಯರ್ ಲೀಗ್ ಮಾರ್ಚ್ 22 ರಂದು ಆರಂಭವಾಗಲಿದೆ. ಅದೇ ಸಮಯದಲ್ಲಿ ಸಾರ್ವತ್ರಿಕ ಚುನಾವಣೆ ಎದುರಾದರೂ ಎಲ್ಲ ಪಂದ್ಯಗಳು ದೇಶದಲ್ಲೇ ನಡೆಯಲಿವೆ ಎಂದು ಲೀಗ್‌ನ ಚೇರ್ಮನ್ ಅರುಣ್ ಧುಮಾಲ್ ಮಂಗಳವಾರ ತಿಳಿಸಿದ್ದಾರೆ.

ಲೋಕಸಭಾ ಚುನಾವಣೆ ಏಪ್ರಿಲ್ ಅಥವಾ ಮೇ ತಿಂಗಳ ಆರಂಭದಲ್ಲಿ ನಡೆಯುವ ಸಾಧ್ಯತೆಯಿದೆ. ಈ ಕಾರಣ ದಿಂದಲೇ ಐಪಿಎಲ್ 17ನೇ ಆವೃತ್ತಿಯ ವೇಳಾಪಟ್ಟಿ ಇನ್ನೂ ಬಿಡುಗಡೆಯಾಗಿಲ್ಲ.

ಆರಂಭದಲ್ಲಿ ಮೊದಲ 15 ದಿನಗಳ ವೇಳಾಪಟ್ಟಿಯನ್ನು ಮಾತ್ರ ಪ್ರಕಟಿಸಲಾಗುವುದು. ಉಳಿದ ಪಂದ್ಯಗಳ ವೇಳಾಪಟ್ಟಿಯನ್ನು ಚುನಾವಣೆ ಘೋಷಣೆಯಾದ ನಂತರ ಬಿಡುಗಡೆ ಮಾಡಲಾಗುವುದು ಎಂದು ಧುಮಾಲ್ ಪಿಟಿಐಗೆ ತಿಳಿಸಿದ್ದಾರೆ.

ಲೋಕಸಭಾ ಚುನಾವಣೆಯ ದಿನಾಂಕಗಳನ್ನು ಮಾರ್ಚ್ ಮೊದಲ ವಾರದಲ್ಲಿ ಪ್ರಕಟಿಸುವ ನಿರೀಕ್ಷೆಯಿದೆ.

‘ಮಾರ್ಚ್ 22ರಂದು ಐಪಿಎಲ್‌ಗೆ


ಅರುಣ್ ಧುಮಾಲ್

ಚಾಲನೆ ನೀಡಲು ಎದುರುನೋಡುತ್ತಿದ್ದೇವೆ. ಮೊದಲ 15 ದಿನಗಳ ವೇಳಾಪಟ್ಟಿ ಬಿಡುಗಡೆ ಮಾಡುತ್ತೇವೆ. ಇಡೀ ಟೂರ್ನಿ ಭಾರತದಲ್ಲೇ ನಡೆಯ ಲಿದೆ’ ಎಂದು ಧುಮಾಲ್ ತಿಳಿಸಿದರು.

ಐಪಿಎಲ್ ಒಮ್ಮೆ ಮಾತ್ರ– 2009ರಲ್ಲಿ ಪೂರ್ಣಪ್ರಮಾಣದಲ್ಲಿ ದಕ್ಷಿಣ ಆಫ್ರಿಕಾದಲ್ಲಿ ನಡೆದಿತ್ತು. 2014ರ ಆವೃತ್ತಿಯ ಕೆಲವು ಪಂದ್ಯಗಳು ಲೋಕಸಭಾ ಚುನಾವಣೆಯ ಕಾರಣ ಯುನೈಟೆಡ್ ಅರಬ್ ಎಮಿರೇಟ್ಸ್‌ನಲ್ಲಿ ನಡೆದಿದ್ದವು. ಆದರೆ 2019ರಲ್ಲಿ ಸಾರ್ವತ್ರಿಕ ಚುನಾವಣೆ ಹೊರತಾಗಿಯೂ ಐಪಿಎಲ್ ಅಬಾಧಿತವಾಗಿ ನಡೆದಿತ್ತು.

ಶ್ರೀಮಂತ ಟೂರ್ನಿ ಐಪಿಎಲ್, ಬೆನ್ನಹಿಂದೆಯೇ ಟಿ20 ವಿಶ್ವಕಪ್ ನಿಗದಿಯಾಗಿರುವ ಕಾರಣ, ಐಪಿಎಲ್ ಫೈನಲ್ ಮೇ 26ರಂದು ನಡೆಯುವ ಸಾಧ್ಯತೆಯಿದೆ. ಭಾರತ ಐಸಿಸಿ ಟಿ20 ವಿಶ್ವಕಪ್‌ನ ಮೊದಲ ಪಂದ್ಯವನ್ನು ಐರ್ಲೆಂಡ್ ವಿರುದ್ಧ ಜೂನ್ 5ರಂದು ನ್ಯೂಯಾರ್ಕ್‌ನಲ್ಲಿ ಆಡಲಿದೆ. ಈ ಬಾರಿಯ ವಿಶ್ವಕಪ್ ಜೂನ್ 1 ರಂದು ಅಮೆರಿಕ ಮತ್ತು ಕೆನಡಾ ನಡುವಣ ಪಂದ್ಯದೊಡನೆ ಆರಂಭವಾಗಲಿದೆ.

ಸಂಪ್ರದಾಯದಂತೆ ಐಪಿಎಲ್‌ನ ಮೊದಲ ಪಂದ್ಯ ಹಿಂದಿನ ವರ್ಷದ ಫೈನಲ್‌ನಲ್ಲಿ ಮುಖಾಮುಖಿಯಾದವರ ನಡುವೆ ನಡೆಯಲಿದೆ. ಕಳೆದ ವರ್ಷ ಚೆನ್ನೈ ಸೂಪರ್ ಕಿಂಗ್ಸ್ ಫೈನಲ್‌ನಲ್ಲಿ ಗುಜರಾತ್ ಟೈಟನ್ಸ್ ತಂಡವನ್ನು ಸೋಲಿಸಿತ್ತು. ಐಪಿಎಲ್‌ಗೆ ಆಟಗಾರರ ಖರೀದಿ ಪ್ರಕ್ರಿಯೆ ಕಳೆದ ಡಿಸೆಂಬರ್‌ನಲ್ಲಿ ನಡೆದಿತ್ತು. ಆಸ್ಟ್ರೇಲಿಯಾದ ವೇಗದ ಬೌಲರ್ ಮಿಚೆಲ್ ಸ್ಟಾರ್ಕ್, ಲೀಗ್‌ನ ಇತಿಹಾಸದಲ್ಲೇ ಅತಿ ಹೆಚ್ಚಿನ ಮೊತ್ತಕ್ಕೆ (₹24.75 ಕೋಟಿ) ಕೋಲ್ಕತ್ತ ನೈಟ್ ರೈಡರ್ಸ್ ಪಾಲಾಗಿದ್ದರು.

ಪುನರಾಗಮನಕ್ಕೆ ರಿಷಭ್ ಪಂತ್ ಸಿದ್ಧತೆ

ನವದೆಹಲಿ (ಪಿಟಿಐ): ಭಾರತ ತಂಡದ ಎಡಗೈ ಆಟಗಾರ ರಿಷಭ್ ಪಂತ್ ಅವರ ಬಹುನಿರೀಕ್ಷಿತ ಐಪಿಎಲ್ ಪುನರಾಗಮನ ಸನ್ನಿಹಿತವಾಗಿದೆ. ಬೆಂಗಳೂರಿನ ಆಲೂರಿನಲ್ಲಿ ತಮ್ಮ ಫ್ರಾಂಚೈಸಿ ಡೆಲ್ಲಿ ಕ್ಯಾಪಿಟಲ್ಸ್, ನಡೆಸಿದ ಅಭ್ಯಾಸ ಪಂದ್ಯದಲ್ಲಿ ಅವರು ಪಾಲ್ಗೊಂಡಿದ್ದಾರೆ.



2022ರ ಡಿಸೆಂಬರ್‌ನಲ್ಲಿ ಅವರು ಕಾರು ಚಲಾಯಿಸುತ್ತಿದ್ದ ಸಂದರ್ಭದಲ್ಲಿ ಡೆಹ್ರಾಡೂನ್ ಬಳಿ ಸಂಭವಿಸಿದ ಭೀಕರ ಅಪಘಾತದಲ್ಲಿ ತೀವ್ರವಾಗಿ ಗಾಯಗೊಂಡಿದ್ದರು. ಚೇತರಿಸಿಕೊಂಡ ನಂತರ ನ್ಯಾಷನಲ್ ಕ್ರಿಕೆಟ್ ಅಕಾಡೆಮಿಯಲ್ಲಿ ಪುನಶ್ಚೇತನ ಶಿಬಿರದಲ್ಲಿ ಭಾಗಿಯಾದ್ದಾರೆ. ಮ್ಯಾಚ್ ಫಿಟ್ನೆಸ್ ಪಡೆಯಲು ಕಠಿಣ ಶ್ರಮ ಹಾಕುತ್ತಿದ್ದಾರೆ. ‘ಅವರ ಚಲನಶೀಲತೆಯ ವಿಶ್ಲೇಷಣೆ ತಿಳಿಯುವ ಭಾಗವಾಗಿ ಪಂದ್ಯ ಆಡಿಸಲಾಗಿದೆ. ಅವರು ಕೆಲಸಮಯದಿಂದ ನೆಟ್ ಪ್ರಾಕ್ಟೀಸ್ ಮಾಡುತ್ತಿದ್ದಾರೆ’ ಎಂದು ಎನ್‌ಸಿಎ ಮೂಲವೊಂದು ತಿಳಿಸಿದೆ.

ಪಂತ್ ಈ ಬಾರಿಯ ಐಪಿಎಲ್‌ನಲ್ಲಿ ಆಡುವ ವಿಶ್ವಾಸವಿದೆ ಎಂದು ಡೆಲ್ಲಿ ಕ್ಯಾಪಿಟಲ್ಸ್ ಕೋಚ್ ರಿಕಿ ಪಾಂಟಿಂಗ್ ಈ ಹಿಂದೆ ತಿಳಿಸಿದ್ದರು. ಆದರೆ, ಅವರು ಸದ್ಯ ವಿಕೆಟ್ ಕೀಪಿಂಗ್ ಮಾಡುವ ಸಾಧ್ಯತೆಯಿಲ್ಲ ಎಂಬ ಸುಳಿವನ್ನೂ ನೀಡಿದ್ದರು.

ನಾಲ್ಕನೇ ಟೆಸ್ಟ್: ಮುಕೇಶ್ ಕುಮಾರ್‌ಗೆ ಮತ್ತೆ ಅವಕಾಶ

ಬೂಮ್ರಾಗೆ ವಿಶ್ರಾಂತಿ, ರಾಹುಲ್ ಅಲಭ್ಯ

ರಾಜಕೋಟ್ (ಪಿಟಿಐ): ನಿರೀಕ್ಷೆಯಂತೆ ವೇಗದ ಬೌಲರ್ ಜಸ್‌ಪ್ರೀತ್ ಬೂಮ್ರಾ ಅವರಿಗೆ ಇಂಗ್ಲೆಂಡ್ ವಿರುದ್ಧ ಶುಕ್ರವಾರ ಆರಂಭವಾಗುವ ನಾಲ್ಕನೇ ಟೆಸ್ಟ್ ಆಡುವ ಭಾರತ ತಂಡದಿಂದ ವಿಶ್ರಾಂತಿ ನೀಡಲಾಗಿದೆ. ಸಂಪೂರ್ಣ ಗುಣಮುಖರಾಗದ ಕಾರಣ ಬ್ಯಾಟರ್ ಕೆ.ಎಲ್. ರಾಹುಲ್ ಅವರು ರಾಂಚಿ ಟೆಸ್ಟ್‌ಗೂ ಅಲಭ್ಯರಾಗಿದ್ದಾರೆ.

ಮಂಗಳವಾರ ತಂಡವನ್ನು ಪ್ರಕಟಿಸಲಾಗಿದೆ. ಕಾರ್ಯಭಾರ ನಿರ್ವಹಣೆ ಭಾಗವಾಗಿ ಬೂಮ್ರಾ ಅವರಿಗೆ ವಿಶ್ರಾಂತಿ ನೀಡಲಾಗಿದೆ. ಅವರು ಮೂರು ಟೆಸ್ಟ್ ಪಂದ್ಯಗಳಿಂದ 17 ವಿಕೆಟ್‌ಗಳನ್ನು ಪಡೆದಿದ್ದು, ಭಾರತದ ಪರ ಯಶಸ್ವಿ ಬೌಲರ್ ಆಗಿದ್ದಾರೆ. ಮೂರು ಟೆಸ್ಟ್‌ಗಳಲ್ಲಿ ಅವರು 80.5 ಓವರುಗಳನ್ನು ಮಾಡಿದ್ದರಿಂದ ಅವರಿಗೆ ವಿಶ್ರಾಂತಿ ನಿರೀಕ್ಷಿತವೇ ಆಗಿತ್ತು.

ಕೆ.ಎಲ್.ರಾಹುಲ್ ಅವರು ಬಲ ತೊಡೆಯ ನೋವಿನ ಕಾರಣಕ್ಕೆ ಕಳೆದ ಎರಡು ಟೆಸ್ಟ್ ಪಂದ್ಯಗಳಲ್ಲೂ ಆಡಿರಲಿಲ್ಲ.

‘ಇಂಗ್ಲೆಂಡ್ ವಿರುದ್ಧ ರಾಂಚಿಯಲ್ಲಿ ನಡೆಯಲಿರುವ ನಾಲ್ಕನೇ ಟೆಸ್ಟ್ ಪಂದ್ಯಕ್ಕೆ ಬೂಮ್ರಾ ಅವರಿಗೆ ವಿಶ್ರಾಂತಿ ನೀಡಲಾಗಿದೆ. ಸರಣಿಯ ಅವಧಿ ಮತ್ತು ಇತ್ತೀಚಿನ ದಿನಗಳಲ್ಲಿ ಆಡಿರುವ ಪಂದ್ಯಗಳನ್ನು ಗಮನದಲ್ಲಿಟ್ಟುಕೊಂಡು ಈ ನಿರ್ಧಾರಕ್ಕೆ ಬರಲಾಗಿದೆ’ ಎಂದು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ ಹೇಳಿಕೆಯಲ್ಲಿ ತಿಳಿಸಿದೆ.

ಧರ್ಮಶಾಲಾದಲ್ಲಿ ಮಾರ್ಚ್ 7ರಿಂದ ನಡೆಯಲಿರುವ ಐದನೇ ಟೆಸ್ಟ್‌ಗೆ ರಾಹುಲ್ ಅವರ ಲಭ್ಯತೆ ಅವರ ಫಿಟ್ನೆಸ್ ಅನ್ನು ಅವಲಂಬಿಸಿದೆ ಎಂದೂ ಹೇಳಿಕೆಯಲ್ಲಿ ತಿಳಿಸಲಾಗಿದೆ.

ಕಳೆದ ಪಂದ್ಯಕ್ಕೆ ತಂಡದಿಂದ ಹೊರಬಿದ್ದಿದ್ದ ವೇಗದ ಬೌಲರ್ ಮುಕೇಶ್ ಕುಮಾರ್ ಅವರನ್ನು ನಾಲ್ಕನೇ ಟೆಸ್ಟ್‌ಗೆ ಸೇರ್ಪಡೆ ಮಾಡಲಾಗಿದೆ. ಭಾರತ ಐದು ಪಂದ್ಯಗಳ ಸರಣಿಯಲ್ಲಿ ಈಗಾಗಲೇ 2–1 ಮುನ್ನಡೆ ಸಾಧಿಸಿದೆ.


ಮುಕೇಶ್ ಕುಮಾರ್

ನಾಲ್ಕನೇ ಟೆಸ್ಟ್‌ಗೆ ತಂಡ ಹೀಗಿದೆ: ರೋಹಿತ್ ಶರ್ಮಾ (ನಾಯಕ), ಯಶಸ್ವಿ ಜೈಸ್ವಾಲ್, ಶುಭಮನ್ ಗಿಲ್, ರಜತ್ ಪಾಟೀದಾರ್, ಸರ್ಫರಾಜ್ ಖಾನ್, ಧ್ರುವ ಜುರೇಲ್ (ವಿಕೆಟ್ ಕೀಪರ್), ಕೆ.ಎಸ್. ಭರತ್ (ವಿಕೆಟ್ ಕೀಪರ್), ದೇವದತ್ತ ಪಡಿಕ್ಕಲ್, ರವಿಚಂದ್ರನ್ ಅಶ್ವಿನ್, ರವೀಂದ್ರ ಜಡೇಜ, ಅಕ್ಷರ್ ಪಟೇಲ್, ವಾಷಿಂಗ್ಟನ್ ಸುಂದರ್, ಕುಲದೀಪ್ ಯಾದವ್, ಮೊಹಮ್ಮದ್ ಸಿರಾಜ್, ಮುಕೇಶ್ ಕುಮಾರ್, ಆಕಾಶ್ ದೀಪ್.

ಮುಂಬಾ- ಟೈಟನ್ಸ್ ಪಂದ್ಯ ಟೈ

ಪಂಚಕುಲಾ: ನಾಯಕ ಪವನ್ ಕುಮಾರ್ ಸೆಹ್ರಾವತ್ ಅವರ ಸೂಪರ್ ರೈಡ್‌ನಿಂದ ತೆಲುಗು ಟೈಟನ್ಸ್ ತಂಡ ಪ್ರೊ ಕಬಡ್ಡಿ ಲೀಗ್ 10ನೇ ಆವೃತ್ತಿಯ ಪಂದ್ಯದಲ್ಲಿ ಯು ಮುಂಬಾ ವಿರುದ್ಧ ರೋಚಕ ಟೈ ಸಾಧಿಸಿ ಅಭಿಯಾನ ಕೊನೆಗೊಳಿಸಿತು.

ತಾವೂ ದೇವಿಲಾಲ್ ಕ್ರೀಡಾಂಗಣದಲ್ಲಿ ಮಂಗಳವಾರ ನಡೆದ ಪಂದ್ಯದಲ್ಲಿ ಉಭಯ ತಂಡಗಳು ಕೊನೆಯ ಲೀಗ್ ಪಂದ್ಯದಲ್ಲಿ 45–45ರಿಂದ ಸಮಬಲ ಸಾಧಿಸಿದವು. ಮುಂಬಾ ಒಟ್ಟಾರೆ 46 ಅಂಕಗಳೊಂದಿಗೆ ಲೀಗ್ ಹಂತ ಮುಗಿಸಿದರೆ, ಟೈಟನ್ಸ್ 21 ಅಂಕಗ ಳೊಂದಿಗೆ ಅಭಿಯಾನ ಕೊನೆಗೊಳಿಸಿತು.

ಮುಂಬಾ ಪರ ಅಮಿರ್ ಮೊಹಮದ್ ‘ಸೂಪರ್ ಟೆನ್’ ಸಾಧನೆ ಮಾಡಿದರು. ಅವರಿಗೆ ಸಹ ಆಟಗಾರ ಗುಮನ್ ಸಿಂಗ್ (8 ಅಂಕ) ಬೆಂಬಲ ನೀಡಿದರು. ಟೈಟನ್ಸ್ ಪರ ಏಕಾಂಗಿ ಹೋರಾಟ ನಡೆಸಿದ ಪವನ್ ಕುಮಾರ್ (14 ಅಂಕ) ಅವರಿಗೆ ತಂಡವನ್ನು ಗೆಲ್ಲಿಸಲು ಸಾಧ್ಯವಾಗಲಿಲ್ಲ.

ಪಂದ್ಯದ ಆರಂಭದಲ್ಲಿ ಎರಡು ತಂಡಗಳು ಉತ್ತಮ ಪ್ರದರ್ಶನ ನೀಡಿದವು. ಪವನ್ ಅವರ ದಾಳಿಯ ಜತೆಗೆ ಸಂಘಟಿತ ಪ್ರದರ್ಶನ ನೀಡಿದ ತೆಲುಗು ಟೈಟನ್ಸ್ 12ನೇ ನಿಮಿಷದಲ್ಲಿ ಮುಂಬಾ ತಂಡವನ್ನು ಆಲೌಟ್ ಮಾಡಿ ಒತ್ತಡ ಹೇರಿತು. ಗುಮನ್ ಸಿಂಗ್ ಅವರ ಆಕರ್ಷಕ ರೇಡ್‌ನಿಂದ ಮುಂಬಾ ವಿರಾಮದ ವೇಳೆ 19-19 ರಿಂದ ಸಮಬಲ ಸಾಧಿಸಿತು.

ದ್ವಿತೀಯಾರ್ಧದಲ್ಲಿ 29–21 ರಿಂದ ಮುನ್ನಡೆಯಲ್ಲಿದ್ದ ಮುಂಬಾ, ಟೈಟನ್ಸ್ ಮೇಲೆ ಒತ್ತಡ ಹೇರಲು ಪ್ರಯತ್ನಿಸಿತು. ಆದರೆ, ಆಮಿರ್ ಮೊಹಮ್ಮದ್ ಅವರ ಅತ್ಯುತ್ತಮ ರೇಡಿಂಗ್ ಹಾಗೂ ಹೊಂದಾಣಿಕೆ ಆಟದಿಂದ 36ನೇ ನಿಮಿಷ 39-35ರಲ್ಲಿ ಟೈಟನ್ಸ್ ವಿರುದ್ಧ ಮೇಲುಗೈ ಸಾಧಿಸಿತು. ಸೋಲು ತಪ್ಪಿಸಲು ಟೈಟನ್ಸ್ ಕೊನೆಯವರೆಗೂ ಹೋರಾಟ ನಡೆಸಿತು. ಪವನ್ ಈ ಟೂರ್ನಿಯಲ್ಲಿ 200 ರೈಡಿಂಗ್ ಪಾಯಿಂಟ್ಸ್ ಕಲೆ ಹಾಕಿದರು.

ಕೊಹ್ಲಿ ದಂಪತಿಗೆ ಗಂಡು ಮಗು

ನವದೆಹಲಿ (ಪಿಟಿಐ): ಭಾರತ ಕ್ರಿಕೆಟ್ ತಂಡದ ಸ್ಟಾರ್ ಬ್ಯಾಟರ್ ವಿರಾಟ್ ಕೊಹ್ಲಿ ಅವರ ಪತ್ನಿ ಅನುಷ್ಕಾ ಶರ್ಮಾ ಅವರು ಫೆಬ್ರುವರಿ 15ರಂದು ಗಂಡು ಮಗುವಿಗೆ ಜನ್ಮ ನೀಡಿದ್ದಾರೆ.

‘ಫೆ. 15ರಂದು ಗಂಡು ಮಗು ಜನಿಸಿದೆ. ವಮಿಕಾ (ಮೊದಲ ಮಗು) ಳ ಸಹೋದರ ‘ಅಕಾಯ್’ನನ್ನು ಈ ಜಗತ್ತಿಗೆ ಸ್ವಾಗತಿಸಿದ್ದೇವೆ ಎಂದು ತಿಳಿಸಲು ಹರ್ಷಿಸುತ್ತೇವೆ’ ಎಂದು ದಂಪತಿ ಇನ್ಸ್ಟಾಗ್ರಾಮ್ ಪೋಸ್ಟ್‌ನಲ್ಲಿ ತಿಳಿಸಿದ್ದಾರೆ.

‘ಅಪಾರ ಸಂತಸವಾಗಿದೆ. ನಮ್ಮ ಹೃದಯಗಳು ಪ್ರೀತಿಯಿಂದ ತುಂಬಿವೆ. ದಯವಿಟ್ಟು ಈ ಸಂದರ್ಭದಲ್ಲಿ ನಮ್ಮ ಖಾಸಗಿತನವನ್ನು ಗೌರವಿಸಬೇಕು’ ಎಂದು ಅವರು ಮನವಿ ಮಾಡಿದ್ದಾರೆ.


ವಿರಾಟ್ ಕೊಹ್ಲಿ ಮತ್ತು ಅನುಷ್ಕಾ ಶರ್ಮಾ ದಂಪತಿ

‘ವೈಯಕ್ತಿಕ ಕಾರಣ’ ನೀಡಿ ವಿರಾಟ್ ಕೊಹ್ಲಿ ಅವರು ಇಂಗ್ಲೆಂಡ್ ವಿರುದ್ಧ ನಡೆಯುತ್ತಿರುವ ಟೆಸ್ಟ್ ಸರಣಿಯಿಂದ ಹೊರಗುಳಿದಿದ್ದರು.

ಹಾಕಿ: ಭಾರತಕ್ಕೆ ಇಂದು ಡಚ್ ಸವಾಲು

ರೂರ್ಕೆಲಾ (ಪಿಟಿಐ): ಭಾರತ ಪುರುಷರ ಹಾಕಿ ತಂಡವು ಎಫ್‌ಐಎಚ್ ಪ್ರೊ ಲೀಗ್ ಟೂರ್ನಿಯಲ್ಲಿ ಬುಧವಾರ ಹಾಲಿ ಚಾಂಪಿಯನ್ ಹಾಗೂ ವಿಶ್ವದ ಅಗ್ರಮಾನ್ಯ ನೆದರ್ಲೆಂಡ್ಸ್ ತಂಡವನ್ನು ಎದುರಿಸಲಿದೆ.

ಭುವನೇಶ್ವರ ಲೆಗ್‌ನಲ್ಲಿ ಭಾರತದ ಆಟಗಾರರು ನೆದರ್ಲೆಂಡ್ಸ್ ವಿರುದ್ಧ ಶೂಟೌಟ್‌ನಲ್ಲಿ 4–2 ಗೋಲುಗಳಿಂದ (ನಿಗದಿ ಅವಧಿಯ ಆಟದಲ್ಲಿ 2–2) ಜಯ ಸಾಧಿಸಿದ್ದರು. ಹರ್ಮನ್‌ಪ್ರೀತ್ ಸಿಂಗ್ ನೇತೃತ್ವದ ತಂಡವು ಇಲ್ಲೂ ಡಚ್ ತಂಡದ ವಿರುದ್ಧ ಪ್ರಾಬಲ್ಯ ಮೆರೆಯುವ ವಿಶ್ವಾಸದಲ್ಲಿದೆ. ಇನ್ನೊಂದೆಡೆ ನೆದರ್ಲೆಂಡ್ಸ್ ತಂಡವು ಆ ಸೋಲಿಗೆ ಮುಯ್ಯಿ ತೀರಿಸಿಕೊಳ್ಳುವ ತವಕದಲ್ಲಿದೆ.

ಭಾರತ ತಂಡ ಸೋಮವಾರ ನಡೆದ ಪಂದ್ಯದಲ್ಲಿ ಸ್ಪೇನ್ ತಂಡವನ್ನು ಶೂಟೌಟ್‌ನಲ್ಲಿ 8–7 ಗೋಲುಗಳಿಂದ (ನಿಗದಿ ಅವಧಿಯ ಆಟದಲ್ಲಿ 2–2) ಸೋಲಿಸಿ ಆತ್ಮವಿಶ್ವಾಸವನ್ನು ವೃದ್ಧಿಸಿಕೊಂಡಿದೆ. ಅದೇ ದಿನ ನಡೆದ ಮತ್ತೊಂದು ಪಂದ್ಯದಲ್ಲಿ ಡಚ್ ತಂಡ 2–1 ರಿಂದ ಐರ್ಲೆಂಡ್ ವಿರುದ್ಧ ಗೆಲುವು ಸಾಧಿಸಿತ್ತು.

ವಿಶ್ವ ಟೇಬಲ್ ಟೆನಿಸ್ ಟೀಮ್ ಚಾಂಪಿಯನ್‌ಷಿಪ್

ನಾಕೌಟ್‌ಗೆ ಭಾರತ ತಂಡಗಳ ಲಗ್ಗೆ

ಬೂಸಾನ್ (ಪಿಟಿಐ): ಭಾರತ ಪುರುಷರ ಮತ್ತು ಮಹಿಳಾ ತಂಡಗಳು, ವಿಶ್ವ ಟೇಬಲ್ ಟೆನಿಸ್ ಟೀಮ್ ಚಾಂಪಿಯನ್‌ಷಿಪ್‌ನಲ್ಲಿ ತಮ್ಮ ಗುಂಪಿನ ಪಂದ್ಯಗಳನ್ನು ವಿಭಿನ್ನ ಶೈಲಿಯಲ್ಲಿ ಗೆದ್ದು ಮಂಗಳವಾರ ನಾಕೌಟ್ ಹಂತಕ್ಕೆ ಮುನ್ನಡೆದವು.

ಮಹಿಳಾ ತಂಡ ಆರಂಭಿಕ ಹಿನ್ನಡೆಯಿಂದ ಪುಟಿದೆದ್ದು 3–2 ರಿಂದ ಸ್ಪೇನ್ ತಂಡವನ್ನು ಸೋಲಿಸಿದರೆ, ಪುರುಷರ ತಂಡ ಹೆಚ್ಚಿನ ಪ್ರಯಾಸವಿಲ್ಲದೇ 3–0ಯಿಂದ ನ್ಯೂಜಿಲೆಂಡ್ ಮೇಲೆ ಜಯಗಳಿಸಿತು. ನಾಲ್ಕು ಪಂದ್ಯಗಳಲ್ಲಿ ಮೂರು ಗೆದ್ದ ಭಾರತ ಮಹಿಳಾ ತಂಡ ಗುಂಪು ಒಂದರಲ್ಲಿ ಚೀನಾ ನಂತರ ಎರಡನೇ ಸ್ಥಾನ ಪಡೆಯಿತು. ಭಾರತ, ಚೀನಾಕ್ಕೆ ಸ್ವಲ್ಪದರಲ್ಲೇ ಸೋತಿತ್ತು.

ಶ್ರೀಜಾ ಅಕುಲಾ ಮತ್ತು ಮಣಿಕಾ ಬಾತ್ರಾ ಮೊದಲ ಎರಡು ಸಿಂಗಲ್ಸ್‌ನಲ್ಲಿ ಸೋತರೂ, ಭಾರತ ತಂಡ ಕೊನೆಗೂ ಉಳಿದ ಮೂರು ಪಂದ್ಯಗಳನ್ನು ಗೆದ್ದು ಸ್ಪೇನ್ ತಂಡವನ್ನು ಹಿಮ್ಮೆಟ್ಟಿಸಿತು.

ಮೊದಲ ಸಿಂಗಲ್ಸ್‌ನಲ್ಲಿ ಶ್ರೀಜಾ 9-11, 11-9, 11-13, 4-11 ರಿಂದ ಮಾರಿಯಾ ಶಿಯಾವೊ ಅವರಿಗೆ ಸೋತರು. ಸೋಫಿಯಾ-ಕ್ಸುವಾನ್ ಜಾಂಗ್ 13-11, 6-11, 8-11, 11-9, 11-7 ರಿಂದ ಭಾರತದ ಅಗ್ರ ರ‍್ಯಾಂಕಿನ ಆಟಗಾರ್ತಿ ಮಣಿಕಾ ವಿರುದ್ಧ ಗೆದ್ದು ಸ್ಪೇನ್‌ಗೆ 2–0 ಮುನ್ನಡೆ ಒದಗಿಸಿದರು.


ಭಾರತದ ಹರ್ಮೀತ್ ದೇಸಾಯಿ

ಆದರೆ ಐಹಿಕಾ ಮುಖರ್ಜಿ ಮೂರನೇ ಸಿಂಗಲ್ಸ್‌ನಲ್ಲಿ 11–8, 11–13, 11–9, 9–11, 11–4ರಿಂದ ಎಲ್ವಿರಾ ರಾಡ್ ಮೇಲೆ ಗೆದ್ದು ಭಾರತದ ಹೋರಾಟಕ್ಕೆ ಜೀವತುಂಬಿದರು. ಮಣಿಕಾ ನಂತರ 11–9, 11–2, 11–4 ರಿಂದ ಮರಿಯಾ ಅವರಿಗೆ ಸೋಲುಣಿಸಿ ಪಂದ್ಯವನ್ನು 2–2 ಸಮಗೊಳಿಸಿದರು. ನಿರ್ಣಾಯಕ ಸಿಂಗಲ್ಸ್‌ನಲ್ಲಿ ಶ್ರೀಜಾ 11–6, 11–13, 11–6, 11–3 ರಿಂದ ಸೋಫಿಯಾ ಕ್ಸುವಾನ್ ಮೇಲೆ ಜಯಗಳಿಸಿದ್ದರಿಂದ ಭಾರತದ ಪಾಳೆಯದಲ್ಲಿ ಸಂಭ್ರಮ ಮೂಡಿತು.

ಪುರುಷರ ವಿಭಾಗದಲ್ಲಿ, ಹಾಲಿ ರಾಷ್ಟ್ರೀಯ ಚಾಂಪಿಯನ್ ಹರ್ಮೀತ್ ದೇಸಾಯಿ 11–5, 11–1, 11–6ರಲ್ಲಿ ನ್ಯೂಜಿಲೆಂಡ್‌ನ ಚೊಯ್ ತಿಮೋತಿ ಅವರನ್ನು ಸೋಲಿಸಿದರು. ಜಿ.ಸತ್ಯನ್ ಕೂಡ 11–3, 11–7, 11–6ರಲ್ಲಿ ಆಲ್ಫ್ರೆಡ್ ಪೆನಾ ಡೆಲಾ ಅವರನ್ನು ಸೋಲಿಸಲು ಕಷ್ಟಪಡಲಿಲ್ಲ.

ಮಾನುಷ್ ಶಾ ಹಿನ್ನಡೆಯಿಂದ ಚೇತರಿಸಿ ಮ್ಯಾಕ್ಸ್‌ವೆಲ್ ಹೆಂಡರ್ಸನ್ ಅವರನ್ನು 10–12, 6–11, 11–4, 11–8 ರಿಂದ ಸೋಲಿಸಿ, ಭಾರತದ ಗೆಲುವನ್ನು ಪೂರ್ಣಗೊಳಿಸಿದರು.

ಕಣದಲ್ಲಿದ್ದ 40 ತಂಡಗಳ ಪೈಕಿ ಭಾರತದ ತಂಡಗಳೂ ಸೇರಿ 24 ತಂಡಗಳು ನಾಕೌಟ್‌ಗೆ ಅರ್ಹತೆ ಪಡೆದವು. ಕ್ವಾರ್ಟರ್‌ಫೈನಲ್ ತಲುಪಿದರೂ, ಭಾರತ ತಂಡ ಪ್ಯಾರಿಸ್ ಒಲಿಂಪಿಕ್ಸ್‌ಗೆ ಅರ್ಹತೆ ಗಳಿಸುತ್ತದೆ. ಇದಕ್ಕಾಗಿ 32ರ ಮತ್ತು16ರ ಸುತ್ತಿನ ಪಂದ್ಯಗಳನ್ನು ಭಾರತದ ತಂಡಗಳು ಗೆಲ್ಲಬೇಕಾಗುತ್ತದೆ.